ಹುಬ್ಬಳ್ಳಿ
ಬುಧವಾರ, 1 ಏಪ್ರಿಲ್ 2026
ಸಂಪುಟ 16, ಸಂಚಿಕೆ 7, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಕೇರಳ ಬಿಜೆಪಿ ಪ್ರಣಾಳಿಕೆ ಬಿಡುಗಡೆ | 02
ಇನ್‌ಫ್ಲುಯೆನ್ಸರ್ಸ್‌ ಮೇಲೆ ಹದ್ದಿನ ಕಣ್ಣು | 02
ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ಪ್ರಪಂಚವು ಭಗವದಾನಂದ ಮತ್ತು ವಿಷಯ ಸುಖವೆಂಬ ಹಾಲು ನೀರುಗಳ ಬೆರಕೆ. ಹಂಸದಂತೆ ನೀರನ್ನು ತ್ಯಜಿಸಿ ಹಾಲನ್ನು ಮಾತ್ರ ಸೇವಿಸಬೇಕು.
▲ಶ್ರೀ ರಾಮಕೃಷ್ಣ ಪರಮಹಂಸ

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು

• ಪುಟ 6

ಕಿರುಸುದ್ದಿ

ಜೈಶ್ ಮುಖ್ಯಸ್ಥ ಮಸೂದ್ ಅಜರ್ ಸಹೋದರ ಹತ್ಯೆ

• **ಹೊಸದಿಲ್ಲಿ:** ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಂಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾನೆ.

• ಪುಟ 2

ಕಾಲ್ತುಳಿತ: 9 ಭಕ್ತರ ಸಾವು

• ಪುಟ 2

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

• ಪುಟ 2

ಪರಮಾಣುನಗರ ಇಸ್ಫಾಹಾನ್ ಮೇಲೆ ಅಮೆರಿಕ ಬಾಂಬ್ ದಾಳಿ

ಟ್ಯಾಂಕರ್ ನಾಶಗೈದ ಇರಾನ್ | 2ನೇ ತಿಂಗಳಿಗೆ ಕಾಲಿಟ್ಟ ಯುದ್ಧ

ಮತ್ತೆ ಯುದ್ಧೋನ್ಮಾದ

• **ದುಬೈ:** ಇರಾನ್‌ನ ಪ್ರಮುಖ ಪರಮಾಣು ಕೇಂದ್ರವಿರುವ ಇಸ್ಫಾಹಾನ್ ನಗರದ ಮೇಲೆ ಮಂಗಳವಾರ ಅಮೆರಿಕ ದಾಳಿ ನಡೆಸಿದ್ದು, ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿಯಲ್ಲಿ ಕುವೈತ್‌ನ ತೈಲ ಟ್ಯಾಂಕರ್ ಮೇಲೆ ದಾಳಿ ಮಾಡಿದೆ.

ಅಮೆರಿಕದ ಪಡೆಗಳು ಇಸ್ಫಾಹಾನ್‌ನಲ್ಲಿರುವ ಮದ್ದುಗುಂಡು ಡಿಪೋವನ್ನು 2,000 ಪೌಂಡ್ (ಸುಮಾರು 907-ಕಿಲೋಗ್ರಾಂ) ಬಂಕರ್ ಬಸ್ಟರ್ ಬಾಂಬ್‌ಗಳೊಂದಿಗೆ ಸ್ಫೋಟಿಸಿವೆ ಎಂದು ಅಮೆರಿಕ ಹೇಳಿಕೊಂಡಿದ್ದು, ವಿಡಿಯೋವೊಂದನ್ನು ಸಹ ಬಿಡುಗಡೆ ಮಾಡಿದೆ. ದಾಳಿ ನಡೆಸಲು ಹೆಚ್ಚಿನ ಪ್ರಮಾಣದ ಪೆನೆಟ್ರೇಟರ್ ಮದ್ದುಗುಂಡುಗಳನ್ನು ಬಳಸಲಾಗಿದೆ ಎಂದು ಅಧಿಕಾರಿ ಹೇಳಿದರು. ಯುದ್ಧವು ಎರಡನೇ ತಿಂಗಳಿಗೆ ಕಾಲಿಡುತ್ತಿದ್ದಂತೆ, ಪಾಕಿಸ್ತಾನ, ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಟರ್ಕಿ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸುತ್ತಿರುವಾಗ, ಈ ದಾಳಿಯು ಭಯ ಹೆಚ್ಚಿಸಿದೆ.



ತೀವ್ರಗೊಂಡ ಸಂಘರ್ಷ: ಅಮೆರಿಕ ಮತ್ತು ಇಸ್ರೇಲ್ ಮೊದಲ ದಾಳಿ ನಡೆಸಿದ ಒಂದು ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ಯುದ್ಧದಿಂದಾಗಿ ಇಲ್ಲಿಯವರೆಗೆ 3,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಜಾಗತಿಕ ತೈಲ ಹಾಗೂ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಮಂಗಳವಾರ ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಪ್ರತಿ ಗ್ಯಾಲನ್‌ಗೆ 4 ಡಾಲರ್ ದಾಟಿದೆ. ➡ಪುಟ 9

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ಹಾರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಸಾಧಿಸಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗಿದೆ.



ಫೆ.28ರಿಂದ ಬ್ರೆಂಟ್ ಕ್ರೂಡ್ ತೈಲದ ಬೆಲೆ ಶೇ.45ರಷ್ಟು ಹೆಚ್ಚಾಗಿದ್ದು, ಮಂಗಳವಾರ ಪ್ರತಿ ಬ್ಯಾರೆಲ್‌ಗೆ 106 ಡಾಲರ್ ತಲುಪಿದೆ. ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಎಚ್ಚರಿಸಿದ್ದಾರೆ.



ಯುದ್ಧ ವೆಚ್ಚ ಭರಿಸಲು ಗಲ್ಫ್‌ಗೆ ಟ್ರಂಪ್ ಮನವಿ ಸಾಧ್ಯತೆ

ಇರಾನ್ ಯುದ್ಧದ ವೆಚ್ಚ ಭರಿಸಲು 200 ಶತಕೋಟಿ ಡಾಲರ್ ನೀಡಲು ಅಮೆರಿಕ ಅಧ್ಯಕ್ಷ ಟ್ರಂಪ್ ಗಲ್ಫ್ ರಾಷ್ಟ್ರಗಳಿಗೆ ಮನವಿ ಮಾಡುವ ಸಾಧ್ಯತೆಯಿದೆ. ಸೋಮವಾರ ಶ್ವೇತಭವನದ ವಕ್ತಾರೆ ಕ್ಯಾರೊಲಿನ್ ಲೀವಿಟ್ ತಾವು ಅಧ್ಯಕ್ಷರಿಗೆ ಇಂತಹದ್ದೊಂದು ಸಲಹೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಇರಾಕ್‌ನಿಂದ ಕುವೈತ್‌ಗೆ ವಿಮೋಚನೆ ನೀಡಿದ್ದಾಗ 34 ರಾಷ್ಟ್ರಗಳ ಒಕ್ಕೂಟವನ್ನು ಅಮೆರಿಕವೇ ನೇತೃತ್ವ ವಹಿಸಿತ್ತು. ಅಂದಿನ ಯುದ್ಧ ವೆಚ್ಚ 54 ಶತಕೋಟಿ ಡಾಲರ್‌ನಲ್ಲಿ ಬಹುತೇಕ ಹಣವನ್ನು ಯುಎಇ ಭರಿಸಿತ್ತು.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಕತಾರ್, ಕುವೈತ್, ಬಹ್ರೈನ್, ಯುಎಇ, ಸೌದಿ ಅರೇಬಿಯಾ, ಇರಾಕ್, ಜೋರ್ಡನ್, ಸಿರಿಯಾ ಮೊದಲಾದ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳಲ್ಲಿ 57,000 ಸೈನಿಕರನ್ನು ನಿಯೋಜನೆ ಮಾಡಿಕೊಂಡಿದೆ. ➡ಪುಟ 9

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?



• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿ ಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ. • ವಿವರ ಪುಟ 2

ಇಂಧನ ಬೇಕಿದ್ದರೆ ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಎಚ್ಚರಿಕೆ ನೀಡಿದ್ದಾರೆ. • ವಿವರ ಪುಟ 2

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್ ದಾಳಿ ಬೆದರಿಕೆ

• ಪುಟ 2

ತೆರಿಗೆ ಪಾವತಿಸದ ವಿಧಾನಸೌಧ, ವಿಕಾಸಸೌಧ

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

• **ಬೆಂಗಳೂರು:** ಸಾಮಾನ್ಯ ಜನರ ಸಣ್ಣಪುಟ್ಟ ಆಸ್ತಿ ತೆರಿಗೆ ಬಾಕಿ ಇದೆ ಎಂದು ಆಸ್ತಿ ಹರಾಜು ಹಾಕಲು ಮುಂದಾಗುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ನಗರಪಾಲಿಕೆ ಅಧಿಕಾರಿಗಳು, ನೂರಾರು ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿರುವ ವಿಧಾನಸೌಧ, ವಿಕಾಸಸೌಧದಂತಹ ಸರ್ಕಾರಿ ಕಟ್ಟಡಗಳ ವಿರುದ್ಧ ಕ್ರಮ ಜರುಗಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಬಿಜೆಪಿ ನಾಯಕ ಎನ್. ಆರ್. ರಮೇಶ್ ಪ್ರಶ್ನಿಸಿದ್ದಾರೆ.



ಜಿಬಿಎ ಕೇಂದ್ರ ಕಚೇರಿಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಟ್ಟಗಳ ದಾಖಲೆ ಬಿಡುಗಡೆ ಮಾಡಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದ ಪ್ರಮುಖ ಸರ್ಕಾರಿ ಕಟ್ಟಡಗಳು ಮತ್ತು ಇಲಾಖೆಗಳು ಬರೋಬ್ಬರಿ 472.66 ಕೋಟಿ ಮೊತ್ತದ ಸೇವಾ ತೆರಿಗೆಯನ್ನು (ಸರ್ವಿಸ್ ಟ್ಯಾಕ್ಸ್) ಬಾಕಿ ಉಳಿಸಿಕೊಂಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಲಾಗಿದೆ. ರಾಜ್ಯದ ಆಡಳಿತ ಶಕ್ತಿ ಕೇಂದ್ರಗಳಾದ ವಿಧಾನಸೌಧ ಮತ್ತು ವಿಕಾಸಸೌಧಗಳೇ ಪಾಲಿಕೆಗೆ ಕೋಟ್ಯಂತರ ರೂಪಾಯಿ ಬಾಕಿ ಇಟ್ಟಿವೆ.

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಕುಮಾರಕೃಪಾ ಅತಿಥಿಗೃಹ ಮತ್ತು ರಾಜಭವನಗಳಿಂದ ಮಾತ್ರವೇ ಪಾಲಿಕೆಗಳಿಗೆ ಒಟ್ಟು 14.94 ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿದೆ. ➡ಪುಟ 9

ಬೃಹತ್ ಬಾಕಿ ವಸೂಲಿ ಮಾಡಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದ್ದು, ಸಾಮಾನ್ಯ ಜನರಂತೆ ಸರ್ಕಾರಿ ಕಟ್ಟಡಗಳಿಗೂ ಒಂದೇ ಕಾನೂನು ಅನ್ವಯವಾಗಲಿ. 473 ಕೋಟಿ ಬಾಕಿ ಉಳಿಸಿಕೊಂಡಿರುವ ಇಲಾಖೆಗಳಿಗೆ ನೋಟಿಸ್ ನೀಡಿ, ತಕ್ಷಣವೇ ಕಟ್ಟಡಗಳನ್ನು ಜಪ್ತಿ ಮಾಡುವ ಧೈರ್ಯ ತೋರಲಿ. ➡ಪುಟ 9

ದಾಖಲೆ ಬಿಡುಗಡೆ ಮಾಡಿದ ಬಿಜೆಪಿ ನಾಯಕ ರಮೇಶ್



ಪ್ರಮುಖ ಕಟ್ಟಡಗಳ ಬಾಕಿ ವಿವರ	
ವಿಕಾಸಸೌಧ	4.24 ಕೋಟಿ
ಬಹುಮಹಡಿ ಕಟ್ಟಡ	3.38 ಕೋಟಿ
ಕುಮಾರಕೃಪಾ ಅತಿಥಿಗೃಹ	3.01 ಕೋಟಿ
ವಿಧಾನಸೌಧ	2.15 ಕೋಟಿ
ರಾಜಭವನ	1.89 ಕೋಟಿ
ವಿಧಾನಸೌಧ ಕ್ಯಾಂಟೀನ್	7.40 ಲಕ್ಷ
ವಿಕಾಸಸೌಧದ ಕ್ಯಾಂಟೀನ್	17.65 ಲಕ್ಷ

ರೂ.ಗಳಲ್ಲಿ

"ಜನಸಾಮಾನ್ಯರ ಮೇಲೆ ಪ್ರತಾಪ ತೋರಿಸುವುದನ್ನು ಬಿಟ್ಟು ಮೊದಲು ಸರ್ಕಾರದಿಂದ ಬರಬೇಕಾದ ಬೃಹತ್ ಬಾಕಿಯನ್ನು ಜಿಬಿಎ ವಸೂಲಿ ಮಾಡಲಿ.
■ ಎನ್.ಆರ್.ರಮೇಶ್, ಬಿಜೆಪಿ ನಾಯಕ

ಅಹಿಂಸಾ ತತ್ವ ಮರುಸ್ಥಾಪನೆ ಅತಿ ಅವಶ್ಯ



ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ ಲೋಕಾರ್ಪಣೆ ಮಾಡಿದ ನಮೋ

• **ಗಾಂಧಿನಗರ:** ಜಗತ್ತು ಅಸ್ಥಿರತೆ ಮತ್ತು ಅರಾಜಕತೆಯಲ್ಲಿ ತೊಳಲಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಶಾಂತಿ, ಅಹಿಂಸಾ ತತ್ವ ಮರುಸ್ಥಾಪನೆ ತೀರಾ ಅಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಗುಜರಾತಿನಲ್ಲಿ ಮೈದಳೆದಿರುವ ನೂತನ ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ, ಪ್ರಸಕ್ತ ಹಿಂಸಾತ್ಮಕ ಜಾಗತಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಶಾಂತಿ-ಅಹಿಂಸೆಗಳ ಅನಿವಾರ್ಯತೆಯ ಬಲಿಷ್ಠ ಸಂದೇಶ ಸಾರಿದೆ. ಈ ಸಂದೇಶವಿಂದು ಮಹತ್ವಪೂರ್ಣ ಕೂಡ ಎಂದು ಮೋದಿ ಹೇಳಿದರು. ಈಗಿನ ಜಾಗತಿಕ ಸನ್ನಿವೇಶ ಉಲ್ಲೇಖಿಸಿ, ಮ್ಯೂಸಿಯಂನ ದಂತಕಥೆ, ಸಂದೇಶಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಮಹತ್ವಪೂರ್ಣವಾದದ್ದು. ➡ಪುಟ 9

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

• **ಬೆಂಗಳೂರು:** ದೇಶದ ಉದ್ದಗಲಕ್ಕೆ ಹಿಂದಿ ಭಾಷೆ ಇಲ್ಲದಿದ್ದರೆ ಬೇರೆ ಭಾಷೆಯಲ್ಲಿ ಮಾತಾಡಲು ಬರುವುದಿಲ್ಲ. ಹಿಂದಿ ಮಾತಾಡುವುದು, ಕಲಿಯುವುದು ತಪ್ಪು ಅಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.



ರಾಜ್ಯ ಸರ್ಕಾರದ ತೀರ್ಮಾನಕ್ಕೆ ಮಾಜಿ ಸಿಎಂ ಬೇಸರ

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಣದಲ್ಲಿ ಹಿಂದಿ ಭಾಷೆ ಕಡ್ಡಾಯವಲ್ಲ ಎಂಬ ಸರ್ಕಾರದ ತೀರ್ಮಾನವನ್ನು ಖಂಡಿಸಿದರು. ಕೆಲವರು ಹಿಂದಿ ಭಾಷೆಯ ಬಗ್ಗೆ ತಮ್ಮದೇ ಆದ ಮಾತು ಗಳನ್ನಾಡುತ್ತಾರೆ. ಇದು ಕನ್ನಡಕ್ಕೆ ಮಾಡುವ ದ್ರೋಹ ಅಲ್ಲ. ನಾನು ಅತ್ಯಂತ ವಿನಯದಿಂದ ಕನ್ನಡಿಗರಲ್ಲಿ ವಿನಂತಿ ಮಾಡುತ್ತೇನೆ. ಹಿಂದಿ ಭಾಷೆ ಕಲಿಯುವುದರಿಂದ ಕನ್ನಡ ಭಾಷೆಗೆ ಆಘಾತ ಆಗುವುದಿಲ್ಲ, ಆದ್ದರಿಂದ ದಯವಿಟ್ಟು ಈ ಬಗ್ಗೆ ಗೊಂದಲ ಉಂಟುಮಾಡಬಾರದು ಎಂದು ಹೇಳಿದರು. ➡ಪುಟ 9

ಕಿರುಸುದ್ದಿ

ಉಪನ್ಯಾಸ ಇಂದು

◆ **ಹುಬ್ಬಳ್ಳಿ:** ಲೋಕಹಿತ ಟ್ರಸ್ಟ್ ಹಾಗೂ ಸಾಮರಸ್ಯ ವೇದಿಕೆ ಸಹಯೋಗದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ ಏ. 1 ರಂದು ಸಂಜೆ 6.30 ಕ್ಕೆ ಗೋಕುಲ ರಸ್ತೆ ಕೇಶವ ಕುಂಜದಲ್ಲಿ ಹಮ್ಮಿಕೊಳ್ಳಲಾಗಿದೆ. ಉಪನ್ಯಾಸಕ್ಕೆ ವೇದಪೀಠ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಮೀರಾಚಾರ್ಯ ಕಂಠಪಲ್ಲಿ ಚಾಲನೆ ನೀಡುವರು. ವಕ್ತಾರರಾಗಿ ರಾಣಿ ಚೆನ್ನಮ್ಮ ವಿವಿ ಸಹ ಪ್ರಾಧ್ಯಾಪಕ ಡಾ. ಗಜಾನನ ನಾಯಕ್, ಅಧ್ಯಕ್ಷತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಧಾರವಾಡ ವಿಭಾಗ ಸಂಘಚಾಲಕ ಗೋವಿಂದಪ್ಪ ಗೌಡಪ್ಪಗೌಳ ವಹಿಸುವರು.

ಪ್ರಶಸ್ತಿ ಪ್ರದಾನ ಇಂದು

◆ **ಹುಬ್ಬಳ್ಳಿ:** ಅಖಿಲ ಕರ್ನಾಟಕ ಬಸವ ಬಳಗದ ವತಿಯಿಂದ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಅಂಗವಾಗಿ ಶಿವಕುಮಾರ ಪ್ರಶಸ್ತಿ ಪ್ರದಾನ ಸಮಾರಂಭ ಏ. 1 ರಂದು ಸಂಜೆ 5 ಗಂಟೆಗೆ ಮೂರು ಸಾವಿರ ಮಠದ ಶಾಲಾ ಆವರಣದ ಡಾ. ಮೂಜಗಂ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾರಂಭ ಅಧ್ಯಕ್ಷತೆ ಮಾಜಿ ಶಾಸಕ ಅಶೋಕ ಕಾಟವೆ, ಲೆಕ್ಕಪರಿಶೋಧಕ ಚನ್ನವೀರ ಮುಂಗರವಾಡಿ ಚಾಲನೆ ನೀಡುವರು. ಅತಿಥಿಗಳಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸಾಹುಕಾರ, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಕೆಎಲ್ಇ ಸಂಸ್ಥೆ ನಿರ್ದೇಶಕ ಮಂಜುನಾಥ ಮುನವಳ್ಳಿ, ಪತ್ರಕರ್ತ ಬಂಡು ಕುಲಕರ್ಣಿ, ಎಂಜಿನಿಯರ್ ಡಾ. ಎಂ.ಆರ್. ಪಾಟೀಲ, ಕೆಎಂಸಿಆರ್ಐನ ವೈದ್ಯಕೀಯ ಅಧೀಕ್ಷಕ ಈಶ್ವರ ಹಸಬಿ, ಕೆಎಂಸಿಆರ್ಐನ ಕನ್ನಡ ಸಂಘದ ಅಧ್ಯಕ್ಷ ಡಾ. ಶ್ಯಾಮಸುಂದರ, ಸಮಾಜ ಸೇವಕ ಶ್ರೀಗಂಧ ಶೇಟ್ ಸೇರಿದಂತೆ ಅನೇಕರು ಭಾಗವಹಿಸುವರು.

ಇಂದಿನಿಂದ ಗ್ರಾಮದೇವಿ ಜಾತ್ರೆ

◆ **ಕಲಘಟಗಿ:** ತಾಲೂಕಿನ ಕೂಡಲಗಿ ಗ್ರಾಮದಲ್ಲಿ ಏ.1 ರಿಂದ 12 ರವರೆಗೆ ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವವು ಜರುಗಲಿದೆ. ಜಾತ್ರಾ ಮಹೋತ್ಸವದ ಪ್ರಯುಕ್ತ ಏ.1ರಂದು ಬುಧವಾರ ಅಂಕಿ ಹಾಕುವದು, 2 ರಂದು ಗ್ರಾಮದ ಎಲ್ಲಾ ಕ್ಷೇತ್ರ ದೇವತೆಗಳ ಪೂಜಾ ಹಾಗೂ ಶಾಂತಿ ಕಾರ್ಯಕ್ರಮ, 3 ರಂದು ಶ್ರೀ ಗ್ರಾಮದೇವಿಯ ಪ್ರಾಣ ಪ್ರತಿಷ್ಠಾಪಣೆ ಹಾಗೂ ಹೋಮ ಹವನ, 4 ರಂದು ಹೊನ್ನಾಟ, 5 ರಂದು ಹೊನ್ನಾಟ, ಮಲ್ಲಕಂಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, 6 ರಂದು ಗ್ರಾಮದೇವಿಯ ಮಹಾರಥೋತ್ಸವ, 7 ರಂದು ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 8 ರಂದು ಧರ್ಮಸಭೆ, 9 ರಂದು ಶ್ರೀ ವಿಠ್ಠಲ ರುಕ್ಮಿಣಿ ಸಪ್ತಾಹ, 10 ರಂದು ರಸಮಂಜರಿ, 11 ರಂದು ಗ್ರಾಮದೇವಿ ಸೀಮೆಗೆ ಹೋಗುವುದು, 12 ರಂದು ಗ್ರಾಮದೇವಿ ಪುನಃ ಪ್ರತಿಷ್ಠಾಪನೆ ಜರುಗುವುದು ಎಂದು ಕೂಡಲಗಿ ಗ್ರಾಮದೇವಿ ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಹಾವೀರ ಜಯಂತಿ ಆಚರಣೆ



◆ **ಕುಂದಗೋಳ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಸೋಮವಾರ ಭಗವಾನ್ ಮಹಾವೀರ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತಿಭಾವದಿಂದ ಜಯಂತಿ ಆಚರಿಸಲಾಯಿತು. ಈ ವೇಳೆ ತಹಶೀಲ್ದಾರ್ ರಾಜು ಮಾವರಕ ಮಾತನಾಡಿ, ಭಗವಾನ್ ಮಹಾವೀರರ ಅಹಿಂಸಾ ತತ್ವ ಮತ್ತು ಮಾನವೀಯ ಮೌಲ್ಯಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿವೆ. ಅವರ ಸಂದೇಶಗಳು ಸಮಾನತೆ, ಶಾಂತಿ ಹಾಗೂ ಸತ್ಯನಿಷ್ಠ ಬದುಕಿಗೆ ಪ್ರೇರಣೆಯಾಗಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬಸವರಾಜ ಯೋಗಪ್ಪನವರ, ಧರಳಿಂದ್ರಪ್ಪ ಒಣಕುದರಿ, ಶಾಂತಪ್ಪ ದೊಡ್ಮನಿ ಅಧಿಕಾರಿಗಳಾದ ಡಾ.ಎಚ್.ಸಿ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಜಾತ್ರೆ ನಾಳೆ

◆ **ಧಾರವಾಡ:** ನಗರದ ಮಂಗಳವಾರಪೇಟೆಯ ಮುದಿ ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿ ಉತ್ಸವ ಹಾಗೂ ರಥೋತ್ಸವ ಏ.2ರಂದು ಸಂಜೆ 4ಕ್ಕೆ ಜರುಗಲಿದೆ ಎಂದು ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ ಕಾರ್ಯದರ್ಶಿ ರವಿ ಯಲಿಗಾರ ಮಾಹಿತಿ ನೀಡಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುದಿ ಮಾರುತಿ ದೇವಸ್ಥಾನ ಧಾರವಾಡದ ಪುರಾತನ ಮತ್ತು ಪ್ರಪ್ರಥಮ ಮಾರುತಿ ದೇವಸ್ಥಾನ. 11ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟಿದೆ. ಗರ್ಭಗುಡಿಯು ಸಂಪೂರ್ಣ ಕಲ್ಲಿನಿಂದ ಕಟ್ಟಲಾಗಿದೆ ಎಂದರು. ದೇವಸ್ಥಾನದ ಕುರಿತು ಮಂತ್ರಾಲಯ ರಾಯರ ಮಠದ ವತಿಯಿಂದ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಇತಿಹಾಸ ವಿಭಾಗದಿಂದ ಅಧ್ಯಯನ ಮಾಡಿ ಒಂದು ವರದಿ ಕೂಡ ಕೊಟ್ಟಿದ್ದಾರೆ. ಹಿಂದೂ ಧರ್ಮದ ಜಾಗೃತಿ ಸಾಂಸ್ಕೃತಿಕ ಕೈಂಕರ್ಯಗಳು ನಡೆಯುತ್ತಿವೆ ಎಂದರು. ಏ.3ಕ್ಕೆ ದೇವಸ್ಥಾನದಲ್ಲಿ ಸತ್ಯನಾರಾಯಣ ಪೂಜಾ ಹಾಗೂ ರೂ.10 ಸಾವಿರ ಜನರಿಗೆ ಅನ್ನ ಸಂತರ್ಪಣೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವೀರಣ್ಣ ಪತ್ತಾರ, ನಾಗವೇಣಿ ಕಾನಕುಬ್ಜ, ಹನುಮಂತ ಕಿತ್ತೂರ, ಹನುಮಂತ ಕಾನಕುಬ್ಜ ಇದ್ದರು.



ನವಲಗುಂದ : ತಾಲೂಕಿನ ಕರ್ಲವಾಡ ಗ್ರಾಮದ ವೇದಮೂರ್ತಿ ಡಾ. ಸಿದ್ಧವೀರಸ್ವಾಮಿ ಗುರುಸಿದ್ಧಯ್ಯ ಹಿರೇಮಠ ಇವರಿಗೆ ಆಧ್ಯಾತ್ಮಿಕ, ವೇದ, ಸಂಸ್ಕೃತ, ಜ್ಯೋತಿಷ್ಯ ವಿಷಯಕ್ಕೆ ಅನುಗುಣವಾಗಿ ತಮಿಳುನಾಡು ರಾಜ್ಯದ ಹಾನನರಿಯಂ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ದೊರೆತ ಹಿನ್ನಲೆಯಲ್ಲಿ ಪಟ್ಟಣದ ಗಣ್ಯರಾದ ರಾಯನಗೌಡ ಪಾಟೀಲ, ನಾಗಪ್ಪ ಸಂಗಟಿ, ಮಂಜುನಾಥ ಸುಬೇದಾರ, ಮಹಾದೇವಪ್ಪ ಸಂಗಟಿ, ಸಿದ್ಧಲಿಂಗಯ್ಯ ಲೋಕಾಪುರಮಠ, ಮದ್ನರೂ ಇವರಗಳು ವೇದಮೂರ್ತಿ ಡಾ. ಸಿದ್ಧವೀರಸ್ವಾಮಿ ಅವರನ್ನ ಸನ್ಮಾನಿಸಿ ಗೌರವಿಸಿದರು.

ಇಂದಿನಿಂದ ಮಾರುತಿ ದೇವಸ್ಥಾನದ ಜಾತ್ರೆ

◆ **ಧಾರವಾಡ:** ಗುಲಗಂಜಿಕೊಪ್ಪ ಮಾರುತಿ ದೇವಸ್ಥಾನದ ಪ್ರಥಮ ಜಾತ್ರಾ ಮಹೋತ್ಸವ ಏ.1 ಮತ್ತು ಏ.2ರಂದು ಹಮ್ಮಿಕೊಂಡಿದೆ ಎಂದು ಮಾರುತಿ ದೇವಸ್ಥಾನದ ಟ್ರಸ್ಟ್ ಸದಸ್ಯ ಭಿಮಪ್ಪ ಧೂಳಪ್ಪನವರ ಹೇಳಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏ.1ರ ಸಂಜೆ 4ಕ್ಕೆ ಚಕ್ಕಡಿಯಲ್ಲಿ ಹನುಮಂತ ದೇವರ ಭಾವಚಿತ್ರ ಸಕಲ ವಾದ್ಯಮೇಳದೊಂದಿಗೆ ಮೆರವಣಿಗೆ ನಡೆಯಲಿದೆ. ಅಮ್ಮಿನಭಾವಿ ಅಭಿನವ ಶಾಂತಲಿಂಗ ಶಿವಾಚಾರ್ಯರು ಸಾನಿಧ್ಯ ವಹಿಸಲಿದ್ದು, ಡಾ.ಎಸ್.ಆರ್.ರಾಮನಗೌಡರ, ಬಸವರಾಜ ಕೊರವರ, ರಮೇಶ ತಳಗೇರಿ, ಬಸವರಾಜ ಕಂಟನಳ್ಳಿ, ಅಶೋಕ ಗಿರಿಯಪ್ಪನವರ ಪಾಲ್ಗೊಳ್ಳುವರು. ಅನ್ನ ಪ್ರಸಾದ, ಭಜನಾ ಸೇವೆ ನಡೆಯಲಿದೆ. ಏ.2ರ ಬೆಳಗ್ಗೆ 4.30ಕ್ಕೆ ಹನುಮಂತ, ಕಲ್ಮೇಶ್ವರ ದೇವರಿಗೆ ಮಹಾಭಿಷೇಕ, ವಿಶೇಷ ಅಲಂಕಾರ ಸೇವೆ ಜರುಗಲಿದೆ. ಉಡಿ ತುಂಬುವುದು, ಬಾಲಹನುಮನ ತೊಟಿಲೋತ್ಸವ, ಮಹಾಮಂಗಳಾರತಿ ನಡೆಯುವುದು.ಬೆಳಗ್ಗೆ 9ಕ್ಕೆ ನಂದಿಕೋಲು, ನೊಗ, ರಥದ ಹಗ್ಗ ತರುವ ಧಾರ್ಮಿಕ ಕೈಂಕರ್ಯ ನೆರವೇರಲಿವೆ. ಸಂಜೆ 4ಕ್ಕೆ ಮಹಾರಥೋತ್ಸವ ಜರುಗುವುದು. ಮುರಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಹೆಬ್ಬಳ್ಳಿ ದತ್ತಾವಧೂತ ಮಹಾರಾಜರು ಸಾನಿಧ್ಯ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ವಿನಯ ಕುಲಕರ್ಣಿ, ಮಾಜಿ ಶಾಸಕ ಅಮೃತ ದೇಸಾಯಿ, ಮುಖಂಡರಾದ ಈರೇಶ ಅಂಚಟಗೇರಿ, ತವನಪ್ಪ ಅಷ್ಟಗಿ, ಪ್ರದೀಪ ಪಾಟೀಲ ಭಾಗವಹಿಸಲಿದ್ದಾರೆ ಎಂದರು. ರಾತ್ರಿ 7ಕ್ಕೆ ಗ್ರಾಮ ದೇವಿಯರ ಪಲ್ಲಕ್ಕಿ ಉತ್ಸವ, ಸವಾಲ-ಜವಾಬ್ ಭಜನಾ ಕಾರ್ಯಕ್ರಮ, ಏ.3ರ ಸಂಜೆ 5ಕ್ಕೆ ಕಡುಬಿನ ಕಾಳಗ, ರಾತ್ರಿ 9.30ಕ್ಕೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಿರೀಶ ಯಾದವಾಡ, ಗಂಗಾಸಾಹೇಬ ದೇಸಾಯಿ, ಶಿವಾನಂದ ಗಿರಿಯಪ್ಪನವರ, ಶೇಖಯ್ಯಾ ಹಿರೇಮಠ, ಬಸಪ್ಪ ಕುಸುಗಲ್ಲ, ನಿಂಗಪ್ಪ ಗೋಲಣ್ಣವರ, ಪ್ರಕಾಶ ತುರಮರಿ ಇದ್ದರು.



ಹುಬ್ಬಳ್ಳಿ: ರಾಜಾಜಿನಗರದಲ್ಲಿ ಶ್ರೀ ರಾಮನವಮಿ ಅಂಗವಾಗಿ ಹಮ್ಮಿಕೊಂಡಿದ್ದ ಬೃಹತ್ ಶೋಭಾಯಾತ್ರೆಗೆ ಸಮಾಜ ಸೇವಕ ಡಾ. ರಮೇಶ ಮಹಾದೇವಪ್ಪನವರ ಚಾಲನೆ ನೀಡಿದರು.

ಕಸಾಪ 18ನೇ ಜಿಲ್ಲಾ ಸಮ್ಮೇಳನ | ಚಿಂತಕ ಡಾ.ಸಿದ್ದನಗೌಡ ಅಭಿಮತ

ಕನ್ನಡ ಭಾಷೆಯಲ್ಲ, ಬದುಕಿನ ಸಂಸ್ಕೃತಿ

◆ **ಧಾರವಾಡ:** 'ಕನ್ನಡ ಭಾಷೆಯಲ್ಲ, ಬದುಕಿನ ಸಂಸ್ಕೃತಿ'. ಹೀಗಾಗಿ ಕನ್ನಡಿಗರ ಬದುಕು ಸುಂದರವಾದರೆ, ಭಾಷೆ ಹಾಗೂ ಸಂಸ್ಕೃತಿ ಸುಂದರಗೊಳ್ಳಿದೆ ಎಂದು ನಾಡಿನ ಚಿಂತಕ ಡಾ.ಸಿದ್ದನಗೌಡ ಪಾಟೀಲ ಹೇಳಿದರು.

ನಗರದ ಕವಿಸಂನ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆದ ಕಸಾಪ 18ನೇ ಜಿಲ್ಲಾ ಸಮ್ಮೇಳನದಲ್ಲಿ ಮಂಗಳವಾರ ಕನ್ನಡವನೆ ಗೋಷ್ಠಿಯಲ್ಲಿ 'ಕನ್ನಡ ಭಾಷೆ ಮತ್ತು ಬದುಕಿನ' ಬಗ್ಗೆ ಅವರು ಮಾತನಾಡಿದರು.

ಕನ್ನಡ ಅನ್ನ ನೀಡುವ ಭಾಷೆಯಾಗಲು ಮೊದಲು ನಾವು ಕನ್ನಡಿಗರಾಗಿ ಬದುಕುವುದು ಕಲಿಯಬೇಕು. ಪರಭಾಷೆ ವ್ಯಾಮೋಹದ ಮಧ್ಯೆ ಸ್ವಭಾಷೆಯ ಸೊಗಡು ಮರೆಯದಂತೆ ಯುವಕರಿಗೆ ಎಚ್ಚರಿಕೆಯೂ ನೀಡಿದರು.

ತುಳು ಭಾಷೆಗೆ ಲಿಪಿ ಇಲ್ಲವಾದರೂ, ಈ ಭಾಷೆ ಶ್ರೀಮಂತಗೊಳ್ಳುವ ಜೊತೆ ತುಳುನಾಡು ಪ್ರತ್ಯೇಕತೆ ಬೇಡಿಕೆ ಇದೆ. ಈ ಭಾಷಿಕರಿಗೆ ಇರುವ ಅಭಿಮಾನ ಕನ್ನಡಿಗರಿಗೆ ಇಲ್ಲದೇ ಹೋಯಿತೇ? ಎಂದು ಬೇಸರಿಸಿದರು.

ಹಿಂದಿನ 'ಚಲೇಜಾವ್' ಚಳುವಳಿ ಈಗ ದೇಶದಲ್ಲಿ 'ಚಲೇಆವೋ' ಚಳುವಳಿಯಾಗಿ ಮಾರ್ಪಟ್ಟಿದೆ. ಇದರಿಂದ ಕನ್ನಡಿಗರ ಬದುಕು ಶ್ರೀಮಂತಗೊಳ್ಳುವುದೇ ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ಹೇಳಿದರು.

ಕನ್ನಡವನ್ನು ವೇದಿಕೆ ಭಾಷೆಯಾಗಿ ಮಾಡದೆ, ಮನೆಯ ಭಾಷೆಯನ್ನಾಗಿ ಮಾಡೋಣ. ಬದುಕಿನ ಪ್ರತಿಯೊಂದು ಹಂತಲ್ಲೂ ಕನ್ನಡತ ಮೈಗೂಡಿಸಿಕೊಂಡಾಗ ಮಾತ್ರ ಭಾಷೆ ಉಳಿಯಲು ಸಾಧ್ಯವಿದೆ ಎಂದರು.

ಕನ್ನಡಿಗರ ಬದುಕು ಶ್ರೀಮಂತಗೊಳ್ಳದೆ, ಭಾಷಾ ಶ್ರೀಮಂತಿಕೆ ಅಸಾಧ್ಯ. ಹೀಗಾಗಿ ಆಳ್ವಿಕೆ ಮಾಡುವ ಸರ್ಕಾರಗಳು ಕನ್ನಡಿಗರ ಬದುಕಿನ ಶ್ರೀಮಂತಿಕೆಗಾಗಿ ಕ್ರಮ ಕೈಗೊಳ್ಳಬೇಕಿದೆ ಎಂದು ಸಲಹೆ ನೀಡಿದರು.



ಸಮ್ಮೇಳನದ ನಿರ್ಣಯಗಳು

ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆದ ಧಾರವಾಡ ಜಿಲ್ಲಾ 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಒಟ್ಟು ಎರಡು ನಿರ್ಣಯಗಳು ಮಂಡಿಸಲಾಯಿತು.

- ಕರ್ನಾಟಕ ಸರ್ಕಾರ ಕೆಪಿಎಸ್ಇ ಶಾಲೆ ಹಾಗೂ ಮ್ಯಾಗ್ನೆಟ್ ಶಾಲಾ ಯೋಜನೆ ಕೈಬಿಡುವ ನಿರ್ಣಯ ಮಂಡಿಸಿದೆ.
- ಸರೋಜಿನಿ ಮಹಿಷಿ ವರದಿ ಯಥಾವತ್ತಾಗಿ ಅನುಷ್ಠಾನಗೊಳಿಸಲು ಮತ್ತೊಂದು ನಿರ್ಣಯ ಕೈಗೊಂಡಿತು.
- ಕನ್ನಡ ಮತ್ತು ಸಂಸ್ಕೃತಿ ವರ್ಧನೆಗೆ ಮುಕ್ತ ಅನುದಾನ ನೀಡುವ ನಿರ್ಣಯ ಕೂಡ ಮಂಡಿಸಲಾಗಿದೆ.

ಭಾಷೆಗೂ ಸಾವಿದೆ. ಭಾಷೆ ಸತ್ತರೆ ಒಂದು ಸಂಸ್ಕೃತಿ ಮತ್ತು ಜನಾಂಗವೂ ಸತ್ತಂತೆ. ಈ ಕಾರಣಕ್ಕೆ ಕನ್ನಡ ಭಾಷೆ, ಸಂಸ್ಕೃತಿ, ಶಾಲೆಗಳ ಉಳಿಯಲಿವೆ. ಈ ನಿಟ್ಟಿನಲ್ಲಿ ಗಂಭೀರ ಚರ್ಚೆ ನಡೆಯಲಿ ಎಂದರು.

'ಮಕ್ಕಳ ಸಾಹಿತ್ಯ-ಪತ್ರಿಕೆಗಳು' ವಿಷಯ ಮಂಡಿಸಿದ ಶಂಕರ ಹಲಗತ್ತಿ, ಮಕ್ಕಳ ಸಾಹಿತ್ಯ ಪ್ರೋತ್ಸಾಹಕ್ಕೆ ಪ್ರತ್ಯೇಕ ಅಕ್ಯಾಡೆಮಿ ತೆರೆದಿದ್ದು, ಅದು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡದ ಬಗ್ಗೆ ಬೇಸರಿಸಿದರು.

ಮನೆಯಲ್ಲಿ ಪೋಷಕರು ದಿನಕ್ಕೊಂದು ಕಥೆ ಹೇಳುವ ಮೂಲಕ ಮಕ್ಕಳಿಗೆ ಭಾಷೆಯ ಸೊಗಡನ್ನು ಪರಿಚಯಿಸಬೇಕು. ಮಕ್ಕಳಿಗಾಗಿ ಮೀಸಲಾದ ಪತ್ರಿಕೆಗಳನ್ನು ಓದಿಸುವ ಅಭ್ಯಾಸ ಮಾಡಿಸಲು ಹೇಳಿದರು.

ದಿನಪತ್ರಿಕೆಗಳಲ್ಲಿ 'ಮಕ್ಕಳ ಪುಟ' ಕೇವಲ ಒಂದು ಅಂಕಣವಾಗಿ ಉಳಿಯದೆ, ಮಕ್ಕಳ ಸೃಜನಶೀಲ ಬರವಣಿಗೆಗೆ ಅವಕಾಶ ನೀಡಿ, ಕನ್ನಡದ ಪ್ರಮುಖ ಪತ್ರಿಕೆಗಳು ಮಕ್ಕಳ ಪ್ರತಿಭೆ ಪ್ರೋತ್ಸಾಹಿಸಲಿ ಎಂದರು.

ವಿಶ್ರಾಂತ ಶಿಕ್ಷಣಾಧಿಕಾರಿ ಶಿವಶಂಕರ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಹೇಮಾ ಪಟ್ಟಣಶೆಟ್ಟಿ, ಡಾ.ಲಿಂಗರಾಜ ಅಂಗಡಿ, ಡಾ.ಧನವಂತ ಹಾಜವಗೋಳ ಇತರರು ಇದ್ದರು.

ಭಾಷಾಂತರ ಎರಡು ಸಂಸ್ಕೃತಿಗಳ ಸೇತುವೆ

◆ **ಧಾರವಾಡ:** ಭಾಷಾಂತರ ಭಾಷೆಗಳ ಪದಗಳ ಜೋಡಿಸುವ ಯಾಂತ್ರಿಕ ಪ್ರಕ್ರಿಯ ಅಲ್ಲ, ಅದು ಎರಡು ವಿಭಿನ್ನ ಸಂಸ್ಕೃತಿಗಳ ಸೇತುವೆ. ಮೂಲ ಆಶಯಕ್ಕೆ ಧಕ್ಕೆ ಬರಂದತೆ ಅನುವಾದಿಸುವುದು ಬಹುದೊಡ್ಡ ಸವಾಲು ಎಂದು ಪ್ರಾಧ್ಯಾಪಕಿ ಡಾ.ನಾಗರತ್ನಾ ಪರಾಂಡೆ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಂಗಳವಾರ ನಡೆದ ಕಸಾಪ 18ನೇ ಜಿಲ್ಲಾ ಸಮ್ಮೇಳನದ ಸಮಕಾಲೀನ ಸಾಹಿತ್ಯ ಚಿಂತನೆ ಗೋಷ್ಠಿಯಲ್ಲಿ 'ಭಾಷಾಂತರದ ಮೂಲಕ ಎದುರಿಸುತ್ತಿರುವ ಸಮಸ್ಯೆಗಳು' ಕುರಿತು ವಿಷಯ ಮಂಡನೆ ಮಾಡಿದರು.

ವಿಜ್ಞಾನ, ತಂತ್ರಜ್ಞಾನ ಮತ್ತು ಕಾನೂನು ವಿಷಯಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಸೂಕ್ತ ಪಾರಿಭಾಷಿಕ ಶಬ್ದಗಳ ಕೊರತೆ ಎದುರಾಗುತ್ತಿದ್ದು, ನಾವು ಸರಳೀಕರಣದ ಹೆಸರಿನಲ್ಲಿ ಭಾಷೆಯ ಗಾಂಭೀರ್ಯ ಕೆಡಿಸಬಾರದು ಎಂದರು. ಡಾ.ಪರಾಂಡೆ, ಡಾ.ಸುಧಾ ಕೌಜಗೇರಿ, ಡಾ.ರೇಖಾ ಜೋಗುಳ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಗುರುನಾಥ ಬಡಿಗೇರ ಅಧ್ಯಕ್ಷತೆ ವಹಿಸಿದ್ದರು. ಡಾ.ಲಿಂಗರಾಜ ಅಂಗಡಿ, ಡಾ.ಎಸ್.ಬಿ.ಗಾಡಿ ಇದ್ದರು. ವಿದ್ಯಾ ವಂಟಮುರಿ ಸ್ವಾಗತಿಸಿ, ಸಂಧ್ಯಾ ದೀಕ್ಷಿತ ನಿರೂಪಿಸಿ, ಆರ್.ಎಂ.ಗೋಗೇರಿ ವಂದಿಸಿದರು.

ಮಹಿಳಾ ಸಾಹಿತ್ಯ ಪ್ರಶ್ನಿಸುವ ಅಸ್ತ್ರ

◆ **ಧಾರವಾಡ:** ಕನ್ನಡದ ಮಹಿಳಾ ಕಾದಂಬರಿ ಪ್ರಪಂಚವು ಕೇವಲ ಕೌಟುಂಬಿಕ ಚಿತ್ರಣಕ್ಕೆ ಸೀಮಿತವಾಗಿಲ್ಲ, ಅದು ಶತಮಾನಗಳಿಂದ ನಡೆದುಬಂದ ಲಿಂಗ ಅಸಮಾನತೆಯನ್ನು ಪ್ರಶ್ನಿಸುವ ಶಕ್ತಿಯುತ ಅಸ್ತ್ರವಾಗಿದೆ ಎಂದು ಚಿಂತಕಿ ಡಾ. ಕೆ.ಆರ್.ಸಿದ್ದಗಂಗಮ್ಮ ಹೇಳಿದರು. 'ಮಹಿಳಾ ಕಾದಂಬರಿ: ಲಿಂಗಸಮಾನತೆ' ಕುರಿತು ಮಾತನಾಡಿ, ಅಡುಗೆ ಮನೆಯ ನಾಲ್ಕು ಗೋಡೆಗಳ ಮಧ್ಯೆ ಹತ್ತಿಕ್ಕಲ್ಪಟ್ಟಿದ್ದ ಹೆಣ್ಣಿನ ದನಿ, ಇಂದು ಅಕ್ಷರ ರೂಪ ಪಡೆದುಕೊಂಡು ಜಗತ್ತಿನ ಗಮನ ಸೆಳೆಯುತ್ತಿದೆ. ಇದು ಕೇವಲ ಸಾಹಿತ್ಯವಲ್ಲ, ಇದೊಂದು ಸಾಮಾಜಿಕ ಚಳವಳಿ ಎಂದು ಬಣ್ಣಿಸಿದರು. ಕವಿವಿ ನಿವೃತ್ತ ಪ್ರಾಧ್ಯಾಪಕಿ ಡಾ.ಶಾಲಿನಿ ರಘುನಾಥ ಅಧ್ಯಕ್ಷತೆ ವಹಿಸಿದ್ದರು. ರಮೇಶ ಸೊಲ್ಲಾರಗೊಪ್ಪ, ಪ್ರಭುಲಿಂಗ ರಂಗಾಪೂರ, ವಿನಾಯಕ ಭಟ್, ಡಾ.ರವಿಕುಮಾರ, ಡಾ.ಲಿಂಗರಾಜ ಅಂಗಡಿ ಇದ್ದರು.



ಸ್ವಯಂ ಗಣತಿಗೆ ನಾಗರಿಕರಿಗೆ ಅವಕಾಶ

◆ **ಹುಬ್ಬಳ್ಳಿ:** ರಾಷ್ಟ್ರೀಯ ಜನಗಣತಿ-2027 ಪ್ರಕ್ರಿಯೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಏ. 1 ರಿಂದ ಆರಂಭವಾಗಲಿದ್ದು, ಏ.15 ರ ವರೆಗೆ ನಾಗರಿಕರಿಗೆ ವೆಬ್‌ಪೋರ್ಟ್‌ನಲ್ಲಿ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಾರ್ವಜನಿಕರು ಸ್ವಯಂ ಗಣತಿಗೆ ಒತ್ತು ನೀಡಬೇಕು. ಮನೆಯ ಯಾವುದೇ ಒಬ್ಬ ಸದಸ್ಯ ವೆಬ್‌ಪೋರ್ಟಲ್‌ನಲ್ಲಿ ಲಾಗಿನ್ ಆಗಿ 33 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಸ್ವಯಂ-ಗಣತಿ ಮಾಡಿ, ಮನೆಯ ವಿವರಗಳನ್ನು ಒದಗಿಸಬಹುದು ಎಂದರು.

ಧಾರವಾಡದ ಜೆಎಸ್ಎಸ್ ಕಾಲೇಜು, ಹುಬ್ಬಳ್ಳಿಯ ಮಹಿಳಾ ಪಾಲಿಟೆಕ್ನಿಕ್ ಕಾಲೇಜು, ಐಬಿಎಂಆರ್ ಕಾಲೇಜಿನಲ್ಲಿ ಗಣತಿದಾರರಿಗೆ ಏ.3, 4 ಮತ್ತು5 ರಂದು ತರಬೇತಿ ಹಮ್ಮಿಕೊಳ್ಳಲಾಗಿದೆ. 2043 ಗಣತಿದಾರರನ್ನು ನೇಮಕ ಮಾಡಲಾಗಿದ್ದು, ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು, ಲೋಕೋಪಯೋಗಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿ ವಿವಿಧ ಇಲಾಖೆಗಳ ಸಿಬ್ಬಂದಿಯನ್ನು ಒಳಗೊಂಡಿದ್ದಾರೆ. ಆರು ಬ್ಲಾಕ್‌ಗೆ ಒಬ್ಬರಂತೆ 375 ಸೂಪರ್‌ವೈಸರ್‌ಗಳನ್ನು ನೇಮಕ ಮಾಡಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಇಬ್ಬರು ಮಾಸ್ಟರ್ ಟ್ರೇನರ್‌ಗಳಿದ್ದಾರೆ. ಗಣತಿದಾರರಿಗೆ ತರಬೇತಿ ನೀಡಲು 30 ಜನ ಮಾಸ್ಟರ್ ಟ್ರೇನರ್‌ಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

https://se.census.gov.in ವೆಬ್ ಸೈಟ್‌ನಲ್ಲಿ ಅಥವಾ ಸಾರ್ವಜನಿಕರು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಗಣತಿ ಪ್ರಕ್ರಿಯಲ್ಲಿ ಭಾಗವಹಿಸಬಹುದು. ಮೊಬೈಲ್ ಸಂಖ್ಯೆ ಹಾಗೂ ಒಟಿಪಿ ಬಳಸಿ ಲಾಗಿನ್ ಆಗಬೇಕು. ಬಳಿಕ ನಕ್ಷೆಯಲ್ಲಿ ತಮ್ಮ ಮನೆಯನ್ನು ಗುರುತಿಸಿ, ಕುಟುಂಬದ ವಿವರಗಳನ್ನು ಸಲ್ಲಿಸುವ ಮೂಲಕ ಸುಲಭವಾಗಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು. ಅರ್ಜಿ ಸಲ್ಲಿಸಿದ ನಂತರ ದೊರೆಯುವ 'ಎಸ್ಇ ರೆಫರೆನ್ಸ್ ಐಡಿ' ಸುರಕ್ಷಿತವಾಗಿ ಕಾಯ್ದಿಟ್ಟುಕೊಳ್ಳುವುದು ಕಡ್ಡಾಯ. ಒಂದು ವೇಳೆ ಸ್ವಯಂ ಗಣತಿ ಮಾಡದಿದ್ದರೆ, ಗಣತಿದಾರರೇ ಖುದ್ದಾಗಿ ಮನೆಗೆ ಬಂದು ಮಾಹಿತಿ ಸಂಗ್ರಹಿಸಲಿದ್ದಾರೆ. ಸಾರ್ವಜನಿಕರ ಪ್ರತಿಯೊಂದು ಮಾಹಿತಿ ಗೋಪ್ಯವಾಗಿರುತ್ತದೆ ಎಂದರು. ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ) ವಿಜಯಕುಮಾರ್ ಆರ್., ಉಪ ಆಯುಕ್ತೆ (ಆಡಳಿತ) ಅನುರಾಧ ವಸ್ತ್ರದ, ಮುಖ್ಯ ಲೆಕ್ಕಾಧಿಕಾರಿ ಶಂಕರಾನಂದ ಬನಶಂಕರಿ ಇದ್ದರು.

ಏ. 16 ರಿಂದ 2ನೇ ಹಂತ ಗಣತಿ

ಜನಗಣತಿಯ ಎರಡನೇ ಹಂತ ಏ.16ರಿಂದ ಮೇ 15ರವರೆಗೆ ನಡೆಯಲಿದ್ದು, ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಗಣತಿ ದಾರರು ಮನೆಗೆ ಭೇಟಿ ನೀಡಿದಾಗ, ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ-ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕು ಎಂದು ಪಾಲಿಕೆ ಆಯುಕ್ತ ಡಾ. ರುದ್ರೇಶಘಾಳಿ ತಿಳಿಸಿದರು.

ಬಿಕ್ಕಟ್ಟಿಗೆ ಸಿಲುಕಿದ ಕನ್ನಡ ಸಾಹಿತ್ಯ: ಡಾ.ವಿನಯಾ ಒಕ್ಕುಂದ

◆ **ಧಾರವಾಡ:** ನಮ್ಮ ಕನ್ನಡದ ಗರ್ಭಕೋಶದ ಮೇಲೆ ಸರ್ವಾಧಿಕಾರದ ಬಾವುಟಗಳು ರಾರಾಜಿಸುತ್ತಿವೆ. ಇದರಿಂದ ಇಂದು ಕನ್ನಡ ಸಾಹಿತ್ಯ ಬಿಕ್ಕಟ್ಟಿಗೆ ಸಿಲುಕಿದೆ. ನಮ್ಮನ್ನು ನಾವು ಮಾರಿಕೊಳ್ಳುವ ಸಂದಿಗ್ಧ ಪರಿಸ್ಥಿತಿ ಬಂದಿದೆ ಎಂದು ಸಾಹಿತಿ ಡಾ. ವಿನಯಾ ಒಕ್ಕುಂದ ವಿಷಾದಿಸಿದರು.

ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಭವನದಲ್ಲಿ ಎರಡು ದಿನಗಳು ನಡೆದ ಧಾರವಾಡ ಜಿಲ್ಲಾ 18ನೇ ಸಾಹಿತ್ಯ ಸಮ್ಮೇಳನದಲ್ಲಿ ಸಮಾರೋಪ ಸಮಾರಂಭದಲ್ಲಿ ಮಂಗಳವಾರ ಸಮಾರೋಪದಲ್ಲಿ ಮಾತನಾಡಿ, ಒಂದೊಮ್ಮೆ ಪ್ರತಿರೋಧ ಒಡ್ಡುತ್ತಿದ್ದ ಕನ್ನಡ ಸಾಹಿತ್ಯ ಇಂದು ಮೌನವಾಗಿದೆ. ವ್ಯವಸ್ಥೆ ಮತ್ತು ಜನರ ನಡುವಿನ ಮಧ್ಯವರ್ತಿಯಾಗಿ ಇರಬೇಕಾದ ಸಾಹಿತ್ಯ, ಇಂದು ಅಸತ್ಯ, ಅಪ್ರಾಮಾಣಿಕವಾಗಿ ಬದಲಾಗಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂದು ಎಚ್ಚರಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಹೇಮಾ ಪಟ್ಟಣಶೆಟ್ಟಿ ಮಾತನಾಡಿ, ಕನ್ನಡ ಸಾಹಿತ್ಯವು ಅಕ್ಷರಗಳ ವಿಲಾಸವಾಗಬಾರದು, ಅದು ಸಮಾಜದ ಕಟ್ಟಕಡೆಯ ಮನುಷ್ಯನ ದನಿ ಆಗಬೇಕು. ಮನುಷ್ಯತ್ವ ಎಚ್ಚರಿಸುವ ಮತ್ತು ಪ್ರೀತಿಯನ್ನು ಬಿತ್ತುವ ಕನ್ನಡಿಯಾಗಲಿ ಎಂದರು.



ಸಮಾಜದಲ್ಲಿ ಹೆಚ್ಚಿರುವ ಅಸಹಿಷ್ಣುತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಸಾಹಿತ್ಯ ಸಮಾಜವನ್ನು ಒಡೆಯುವ ಕೆಲಸ ಮಾಡಬಾರದು, ಬದಲಾಗಿ ಮನುಷ್ಯ ಮನಸ್ಸುಗಳನ್ನು ಜೋಡಿಸುವ ಸೇತುವೆ ಆಗಲಿದೆ. ಸೌಹಾರ್ದತೆ ನಮ್ಮ ಪರಂಪರೆಯ ಜೀವಾಳ ಎಂದರು.

ಕರ್ನಾಟಕ ಬಾಲವಿಕಾಸ ಅಕ್ಯಾಡೆಮಿ ಅಧ್ಯಕ್ಷ ಆಡವೀಶ ಇಟಗಿ ಮಾತನಾಡಿದರು. ಸಭಾಪತಿ ಬಸವರಾಜ ಹೊರಟ್ಟಿ ಸಮ್ಮೇಳನದ ಕುರಿತು ಕಳುಹಿಸಿದ ಶುಭ ಕಾಮನೆ ಪತ್ರವನ್ನು ಡಾ.ಶಶಿಧರ ಸಾಲಿ ವಾಚಿಸಿದರು. ಸಮಾರೋಪದಲ್ಲಿ ನಾಟಕಕಾರ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ, ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಡಾ.ವೀಣಾ ಬಿರಾದಾರ, ವಕೀಲರಾದ ಶರಣು ಅಂಗಡಿ, ಸವಿತಾ ಅಮರಶೆಟ್ಟಿ, ಡಾ. ಎಸ್.ಎಸ್.ದೊಡಮನಿ, ಪ್ರಮೀಳಾ ಜಕ್ಕಣ್ಣವರ, ಪದಾಧಿಕಾರಿಗಳು ಇದ್ದರು.

ಕೋನರಡ್ಡಿಯಿಂದ ರೈತರ, ಜನಪರ ಕೆಲಸ: ರೇವಣ್ಣ

◆ **ನವಲಗುಂದ:** ರಾಜ್ಯದಲ್ಲಿ ರೈತರ ಪರ, ಜನಪರ ಕೆಲಸ ಮಾಡುತ್ತಿರುವ ಹೋರಾಟಗಾರ, ಜನಸೇವೆ ಮಾಡುತ್ತಿರುವ ನವಲಗುಂದ ಶಾಸಕ ಎನ್.ಹೆಚ್. ಕೋನರಡ್ಡಿ ಒಳ್ಳೆಯ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಗ್ಯಾರೆಂಟಿ ಸಮಿತಿ ರಾಜ್ಯಾಧ್ಯಕ್ಷ, ಮಾಜಿ ಸಚಿವ ಹೆಚ್.ಎಂ. ರೇವಣ್ಣ ಹೇಳಿದರು.

ಮಂಗಳವಾರ ನವಲಗುಂದ ನಗರದ ಪ್ರವಾಸಿ ಮಂದಿರದಲ್ಲಿ ಮಾತನಾಡಿ, ಪ್ರತಿ ಮಂಗಳವಾರ ಜನರ ಸಮಸ್ಯೆ ಆಲಿಸಲು ಜನತಾದರ್ಶನ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿ ಇತ್ತೀಚೆಗೆ ಅಣ್ಣಿಗೇರಿಯ ಪಂಪನ ಹೆಸರಿನಲ್ಲಿ ಪಂಪ ಪ್ರತಿಷ್ಠಾನ ಆದೇಶ ಹೊರಡಿಸಿದ್ದು ಇತಿಹಾಸವಾಗಿದೆ. ಇಂದು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಿ ಹಾಗೂ ನವಲಗುಂದ ಕುರುಬ ಸಮಾಜದ ಹಿರಿಯರು ಬೀರಲಿಂಗೇಶ್ವರ ದೇವರ 15ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಆಹ್ವಾನ ನೀಡಿದರು. ರೈತರು ಹಾಗೂ ಸಾರ್ವಜನಿಕರು ಅಭಿವೃದ್ಧಿ ಕುರಿತು ಪ್ರತಿ ವಾರ ಮನವಿಗಳನ್ನು ಸ್ವೀಕರಿಸಿ ಅವುಗಳಿಗೆ ಪರಿಹಾರ ಕಂಡುಹಿಡಿಯಲು ಕೆಲಸ ಮಾಡುತ್ತಿರುವದು ಅಪರೂಪದ ಒಬ್ಬ ಶಾಸಕರನ್ನು ಈ ಕ್ಷೇತ್ರ ಜನತೆ ಪಡೆದಿರುವದು ನನಗೆ ಹೆಮ್ಮೆಯ ವಿಷಯ ಎಂದು ರೇವಣ್ಣ ಹೇಳಿದರು.



ಈ ವೇಳೆ ನವಲಗುಂದ ಶಾಸಕ ಎನ್.ಹೆಚ್. ಕೋನರಡ್ಡಿ, ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರಾಜ ನಾವಳ್ಳಿ, ನವಲಗುಂದ ಗ್ಯಾರೆಂಟಿ ಸಮಿತಿ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡ್ರ, ಹುಬ್ಬಳ್ಳಿ ತಾಲ್ಲೂಕು ಗ್ಯಾರೆಂಟಿ ಸಮಿತಿ ಅಧ್ಯಕ್ಷ ಶಿವಾನಂದ ಭೂಮಣ್ಣವರ, ಮುಖಂಡರುಗಳಾದ ಆನಂದ ಹವಳಕೋಡ, ಜೀವನ ಪವಾರ, ಮೋದಿನ ಶಿರೂರ, ಪ್ರದೀಪ ಲೆಂಕನಗೌಡ್ರ, ದೇವಪ್ಪ ರೋಣದ, ಭಗವಂತಪ್ಪ ಪುಟ್ಟಣ್ಣವರ ಸೇರಿದಂತೆ ಮತ್ತಿತರರಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ

◆ **ಹುಬ್ಬಳ್ಳಿ:** ನೈರುತ್ಯ ರೈಲ್ವೆ ದಿವ್ಯಾಂಗಜನ ವೆಲ್‌ಫೇರ್ ಅಸೋಸಿಯೇಷನ್ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು, ಕಿರಣ ಚಿನ್ನಾರಾಥೋಡ್ ಮರು ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿ ಷಣ್ಮುಖಪ್ಪ ಬಿ., ಖಜಾಂಚಿ ಎಂ.ಎ. ಅತ್ತಾರ ಅವರು ಸಹ ಮರು ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ದಿವ್ಯಾಂಗ ನೌಕರರ ಕ್ಷೇಮಾಭಿವೃದ್ಧಿ ಹಾಗೂ ಸಂಘಟನೆಯ ಮುಂದಿನ ಗುರಿಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಮರು ಆಯ್ಕೆಯಾದ ಪದಾಧಿಕಾರಿಗಳು ಸಂಘದ ಬಲವರ್ಧನೆಗೆ ಶ್ರಮಿಸುವುದಾಗಿ ಈ ಸಂದರ್ಭದಲ್ಲಿ ಭರವಸೆ ನೀಡಿದರು.

ಅಸೋಸಿಯೇಷನ್‌ನ ಸದಸ್ಯರು ಹಾಗೂ ರೈಲ್ವೆ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.



ಮಹಾವೀರ ಜಯಂತಿ



◆ **ಕುಂದಗೋಳ:** ತಾಲೂಕಿನ ಗುಡಗೇರಿ ಗ್ರಾಮದ 1008 ಭಗವಾನ್ ಶಾಂತಿನಾಥ ತೀರ್ಥಂಕರ ಜಿನ ಮಂದಿರದಲ್ಲಿ ಮಹಾವೀರ ಜಯಂತಿ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸೋಮವಾರ ನೆರವೇರಿದವು. ಬೆಳಗ್ಗೆ ಬಸದಿಯ ಮೂಲ ನಾಯಕ ಶಾಂತಿನಾಥ ತೀರ್ಥಂಕರಿಗೆ ಹಾಗೂ ಮಹಾವೀರ ತೀರ್ಥಂಕರಿಗೆ ಪಂಚಾಮೃತ ಅಭಿಷೇಕ ಲೋಕ ಶಾಂತಿಗಾಗಿ ಮಹಾ ಶಾಂತಿ ಮಂತ್ರ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಪಂಡಿತ್ ರವಿ ಕುಲಕರ್ಣಿ ನೆರವೇರಿಸಿದರು. ನಂತರ ಪಲ್ಲಕ್ಕಿ ಉತ್ಸವ, ಮಹಾವೀರ ತೀರ್ಥಂಕರ ತೊಟ್ಟಿಲೂತ್ಸವ ಕಾರ್ಯಕ್ರಮ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಸಮಾಜದ ಪದಾಧಿಕಾರಿಗಳು ಹಾಗೂ ಶ್ರಾವಕ, ಶ್ರಾವಕಿಯರು ಇದ್ದರು.

ಹನುಮ ಜಯಂತಿ ನಾಳೆ

◆ **ಉಪ್ಪಿನಬೆಟಗೇರಿ:** ಅಮ್ಮಿನಬಾವಿ ಗ್ರಾಮ ಪಂಚಾಯಿತಿ ಪಕ್ಕದಲ್ಲಿರುವ ಹಳೆಯ ಶ್ರೀವೀರಾಂಜನೇಯ ದೇವಸ್ಥಾನದಲ್ಲಿ ಏ.2ರಂದು ಗುರುವಾರ ದವನದ ಹುಣ್ಣಿಮೆ ನಿಮಿತ್ತವಾಗಿ ಶ್ರೀಹನುಮ ಜಯಂತಿ ಮಹೋತ್ಸವ ಜರುಗಲಿದೆ.

ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ಓಂಕಾರ ಸೇವಾ ಸಂಘ ಹಾಗೂ ಶ್ರೀಮಾರುತಿ ಅಭಿವೃದ್ಧಿ ಸೇವಾ ಸಂಘ ಹಾಗೂ ಅಮ್ಮಿನಬಾವಿಯ ವಿವಿಧ ಯುವಕ ಸಂಘಗಳ ಜಂಟಿ ಆಶ್ರಯದಲ್ಲಿ ನಡೆಯುವ 2026ನೆಯ ವರ್ಷದ ಶ್ರೀಹನುಮ ಜಯಂತಿ ಮಹೋತ್ಸವದ ಅಂಗವಾಗಿ ಏ.1 ರಂದು ಪ್ರಾತಃಕಾಲದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಜರುಗಲಿದೆ.

ವಿಶೇಷ ಮೆರವಣಿಗೆ: ಹುಣ್ಣಿಮೆಯ ದಿನ ಪ್ರಾತಃ ಕಾಲದಲ್ಲಿ ಶ್ರೀವೀರಾಂಜನೇಯ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಪೂಜೆ ನಡೆಯಲಿದ್ದು, ಬೆಳಿಗ್ಗೆ 7 ಗಂಟೆಗೆ ಶ್ರೀವೀರಾಂಜನೇಯನ ತೊಟ್ಟಿಲೋತ್ಸವ ಜರುಗಲಿದೆ. ಗುರುವಾರ ಬೆಳಿಗ್ಗೆ 8 ಗಂಟೆಗೆ ಹಲವಾರು ವಾದ್ಯಮೇಳಗಳು ವಿವಿಧ ಕಲಾ ತಡಗಳು, ಮಹಿಳೆಯರ ಪೂರ್ಣಕುಂಭಗಳು, ಕೇಸರಿ ಧ್ವಜ ಸಮೇತ ಶ್ರೀವೀರಾಂಜನೇಯಸ್ವಾಮಿ ಭಾವಚಿತ್ರದ ವಿಶೇಷ ಮೆರವಣಿಗೆಯನ್ನು ಸಂಘಟಿಸಲಾಗಿದೆ. ಮೆರವಣಿಗೆಯ ನಂತರ ದಾಸೋಹ ಸೇವೆಯಲ್ಲಿ ಸಾಮೂಹಿಕ ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಾಲಾ ತಡೆಗೋಡೆ ಎತ್ತರಿಸಲು ಮನವಿ

◆ **ನವಲಗುಂದ:** ನಮ್ಮ ಶಾಲೆಯಲ್ಲಿ 219 ಮಕ್ಕಳು ಇದ್ದು, ಇದ್ದ ಎರಡು ಶೌಚಾಲಯಗಳು ಸಾಲುತ್ತಿಲ್ಲ ಇಲ್ಲಿ ನೀರಿನ ಸೌಲಭ್ಯವಿಲ್ಲ, ಹಾಗಾಗಿ ಹೈಟೆಕ್ ಶೌಚಾಲಯ ನಿರ್ಮಾಣ ಹಾಗೂ ಶಾಲೆಯ ಆವರಣದಲ್ಲಿ ಸಾರ್ವಜನಿಕರು ತುಂಬಾ ಗಲೀಜು ಹಾಗೇ ಪದೇ ಪದೇ ತೊಂದರೆ ಮಾಡಿತ್ತಿದ್ದು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಲು ಆಟವಾಡಲು ತುಂಬಾ ತೊಂದರೆ ಆಗುತ್ತೆ, ಎಷ್ಟೇ ಹೇಳಿದರು ಸ್ಪಂದಿಸುತ್ತಿಲ್ಲ ಕೂಡಲೇ ತಾವುಗಳು ಶಾಲೆಗೆ ತಡೆಗೋಡೆ ಎತ್ತರಿಸಬೇಕು. ಜೊತೆಗೆ ಶಾಲಾ ಕಾರ್ಯಕ್ರಮ ವೇದಿಕೆಯನ್ನ ನಿರ್ಮಿಸಿ ಕೊಡಬೇಕೆಂದು ಅನತಿ ಮಾಡಿಕೊಂಡು ಶಾಸಕ ಎನ್.ಎಚ್. ಕೋನರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಅವರು ಮಂಗಳವಾರ ಶಾಸಕರ ಕಚೇರಿಯ ಜನತಾ ದರ್ಶನ ಹಾಗೂ ಅಹವಾಲು ಸಭೆಯಲ್ಲಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ:2 ರ ಎಸ್‌ಡಿಎಂಸಿ ಸದಸ್ಯರು ಹಾಗೂ ವಿದ್ಯಾರ್ಥಿಗಳು ಶಾಸಕರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಶರೀಫ್ ಕಲಬುರ್ಗಿ, ಅಮೀನಾ ಫೀರಜಾಧೆ, ರಾಜೇಸಾಬ್ ಶಿರಕೋಳ, ಶಿಕ್ಷಕಾರದ ಎ.ಎ.ಹೊಸಪೇಟೆ ಖಾಜಿ, ಜಿ.ಎ.ರಂಗಣ್ಣವರ, ಎಸ್‌ಡಿಎಂಸಿ ಸದಸ್ಯರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.





1967ರಿಂದ 2026ರವರೆಗಿನ ಆರು ದಶಕಗಳ ಸಮಗ್ರ ಅವಲೋಕನ

ನಕ್ಸಲ್ ಮುಕ್ತ ಭಾರತ

ಭಾರತದ ಆಂತರಿಕ ಭದ್ರತೆಗೆ ಆರು ದಶಕಗಳ ಕಾಲ ಅತಿ ದೊಡ್ಡ ಸವಾಲಾಗಿದ್ದ ನಕ್ಸಲ್ವಾದವು 2026ರ ಮಾರ್ಚ್ 31ರಂದು ಅಧಿಕೃತವಾಗಿ ಅಂತ್ಯ ಕಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾ.30ರಂದು ಲೋಕಸಭೆಯಲ್ಲಿ ಭಾರತವು ಸಂಪೂರ್ಣವಾಗಿ ನಕ್ಸಲ್ ಮುಕ್ತವಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ, ಪೊಲಿಟ್ಬ್ಯೂರೊ ಮತ್ತು ರಾಜ್ಯ ಸಮಿತಿಗಳ ಸಂಪೂರ್ಣ ರಚನೆಯನ್ನು ನಾಶಪಡಿಸಲಾಗಿದೆ ಎಂದು ಅವರು ಸಂಸತ್ತಿನಲ್ಲಿ ತಿಳಿಸಿದರು.

ನಕ್ಸಲ್‌ಬಾರಿ ದಂಗೆ (1967)

ನಕ್ಸಲ್‌ವಾದದ ಮೂಲವನ್ನು 1967ರ ಮೇ 25ರಂದು ಪಶ್ಚಿಮ ಬಂಗಾಳದ ದಾರ್ಜಿಲಿಂಗ್ ಜಿಲ್ಲೆಯ ನಕ್ಸಲ್ಬಾರಿ, ಖೋರಿಬಾರಿ ಮತ್ತು ಫಾನ್ಸಿಡೇವಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ರೈತ ದಂಗೆಗೆ ಗುರುತಿಸಬಹುದು. ಚಾರು ಮಜುಮ್ದಾರ್, ಕನು ಸನ್ಯಾಲ್ ಮತ್ತು ಜಂಗಲ್ ಸಂಥಾಲ್ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷದ ಒಳಗಿನ ಬಂಡಾಯ ಗುಂಪು ಈ ದಂಗೆಯನ್ನು ನಡೆಸಿತು. 1967ರ ಮಾರ್ಚ್ 3ರಂದು ಸುಮಾರು 150 ರೈತರು ಬಿಲ್ಲು-ಈಟಿಗಳೊಂದಿಗೆ ಭೂಮಾಲೀಕರ ಅಕ್ಕಿ ಮತ್ತು ಭೂಮಿಯನ್ನು ವಶಪಡಿಸಿಕೊಂಡರು. ಜೂನ್ ತಿಂಗಳ ಹೊತ್ತಿಗೆ ರೈತ ಸಮಿತಿಗಳು ನಕ್ಸಲ್ಬಾರಿ ಪ್ರದೇಶದ ಮೇಲೆ ಹಿಡಿತ ಸಾಧಿಸಿದವು. ಮೇ 25ರಂದು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಂಬತ್ತು ಮಹಿಳೆಯರು ಮತ್ತು ಒಂದು ಮಗು ಸಾವನ್ನಪ್ಪಿದರು. ಜುಲೈ 19ರಂದು ಸರ್ಕಾರ ಅರೆಸೈನಿಕ ಪಡೆಗಳನ್ನು ಕಳಿಸಿ ದಂಗೆಯನ್ನು ಹತ್ತಿಕ್ಕಿತು.

ಸಿಪಿಐ(ಮಾವೋವಾದಿ) ರಚನೆ

2004ರ ಸೆ.21ರಂದು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯುಜಿ) ಮತ್ತು ಮಾವೋವಾದಿ ಕಮ್ಯೂನಿಸ್ಟ್ ಸೆಂಟರ್ ಆಫ್ ಇಂಡಿಯಾ (ಎಂಸಿಸಿಐ) ವಿಲೀನಗೊಂಡು ಸಿಪಿಐ(ಮಾವೋವಾದಿ) ಎಂಬ ಏಕೀಕೃತ ಸಂಘಟನೆ ರಚನೆಯಾಯಿತು. ಈ ವಿಲೀನವು ನಕ್ಸಲ್ ಹಿಂಸಾಚಾರವನ್ನು ತೀವ್ರಗೊಳಿಸಿತು. ಅವರ ಸಶಸ್ತ್ರ ವಿಭಾಗ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಉಗ್ರಗಾಮಿ ಸಂಘಟನೆಯೆಂದು ಘೋಷಿಸಲ್ಪಟ್ಟಿತು. ಸಿಪಿಐ(ಮಾವೋವಾದಿ) ಭಾರತೀಯ ರಾಜ್ಯವನ್ನು ಸಾಮ್ರಾಜ್ಯಶಾಹಿಗಳು, ದಲ್ಲಾಳಿ ಬೂರ್ಜ್ವಾಗಳು ಮತ್ತು ಊಳಿಗಮಾನ್ಯ ಅಧಿಪತಿಗಳ ಸಹಯೋಗದಿಂದ ನಡೆಸಲಾಗುತ್ತಿದೆ ಎಂದು ಪ್ರತಿಪಾದಿಸುತ್ತಿತ್ತು. ದೀರ್ಘಕಾಲೀನ ಸಶಸ್ತ್ರ ಹೋರಾಟದ ಮೂಲಕ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು. ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಪೊಲಿಟ್‌ಬ್ಯೂರೋ ಆಗಿದ್ದು, ಅದರಲ್ಲಿ 13-14 ಸದಸ್ಯರಿದ್ದರು. ಪ್ರಾದೇಶಿಕ ಬ್ಯೂರೊಗಳು, ರಾಜ್ಯ ಸಮಿತಿಗಳು, ವಲಯ ಸಮಿತಿಗಳು, ಜಿಲ್ಲಾ ಸಮಿತಿಗಳು ಮತ್ತು ದಳಗಳು (ಸಶಸ್ತ್ರ ತಂಡಗಳು) ಎಂಬ ಶ್ರೇಣೀಕೃತ ರಚನೆ ಇತ್ತು. ಈ ಸಂಘಟನಾ ರಚನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಪ್ರಮುಖ ನಕ್ಸಲ್ ದಾಳಿಗಳು

ನಕ್ಸಲೀಯರು ನಡೆಸಿದ ಪ್ರಮುಖ ರಕ್ತಪಾತದ ಘಟನೆಗಳು ಈ ಕೆಳಗಿನಂತಿವೆ:

ವರ್ಷ	ಘಟನೆ	ಸಾವಿನ ಸಂಖ್ಯೆ
2010	ದಂತೆವಾಡ ದಾಳಿ (ಛತ್ತೀಸ್‌ಗಢ)	76 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2013	ಜೀರಮ್ ಘಾಟಿ ದಾಳಿ	ಕಾಂಗ್ರೆಸ್ ನಾಯಕ ಮಹೇಂದ್ರ ಕರ್ಮ ಸೇರಿ 29 ಹತ್ಯೆ
2017	ಬುರ್ಕಪಾಲ್ ದಾಳಿ (ಸುಕ್ಮಾ)	25 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2021	ಸುಕ್ಮಾ ದಾಳಿ	22 ಭದ್ರತಾ ಸಿಬ್ಬಂದಿ ಹತ್ಯೆ

ಸೌತ್ ಏಷ್ಯಾ ಟೆರರಿಸಮ್ ಪೋರ್ಟಲ್ ಪ್ರಕಾರ, 2000ರಿಂದ 2025ರ ನಡುವೆ ನಕ್ಸಲ್ ಹಿಂಸಾಚಾರದಲ್ಲಿ 4,134 ನಾಗರಿಕರು, 2,722 ಭದ್ರತಾ ಪಡೆ ಸಿಬ್ಬಂದಿ ಮತ್ತು 4,994 ನಕ್ಸಲೀಯರು ಸೇರಿ ಒಟ್ಟು 12,102 ಜನ ಮೃತಪಟ್ಟಿದ್ದಾರೆ.

ಪ್ರಮುಖ ಕಾರ್ಯಾಚರಣೆಗಳು

2025-26ರ ಅವಧಿಯಲ್ಲಿ ಅನೇಕ ಮಹತ್ವದ ಕಾರ್ಯಾಚರಣೆಗಳು ನಡೆದವು. 2025ರ ಜನವರಿಯಲ್ಲಿ ಒಡಿಶಾ-ಛತ್ತೀಸ್‌ಗಢ ಗಡಿಯಲ್ಲಿ ಕೇಂದ್ರ ಸಮಿತಿ ನಾಯಕ ರಾಮಚಂದ್ರ ರೆಡ್ಡಿ (ಚಳಪತಿ) ಹತನಾದ. ಈ 62 ವರ್ಷದ ನಾಯಕ 1 ಕೋಟಿ ರೂ. ಬಹುಮಾನ ಹೊಂದಿದ್ದ ಮತ್ತು 2018ರ ಮಾರಣಹೋಮ ದಾಳಿಗಳ ಸೂತ್ರಧಾರಿಯಾಗಿದ್ದ. ಸೆಪ್ಟೆಂಬರ್‌ನಲ್ಲಿ ಕೋಸಾ ಎಂಬ ಕೇಂದ್ರ ಸಮಿತಿ ಸದಸ್ಯ ಛತ್ತೀಸ್‌ಗಢದಲ್ಲಿ ಹತನಾದ. ಡಿಸೆಂಬರ್‌ನಲ್ಲಿ ಒಡಿಶಾದ ಕಂಧಮಾಲ ಅರಣ್ಯದಲ್ಲಿ 1.1 ಕೋಟಿ ರೂ. ಬಹುಮಾನದ ಗಣೇಶ್ ಉಯಿಕೆ ಹತನಾದ. 2026ರ ಜನವರಿಯಲ್ಲಿ ಝಾರ್ಖಂಡ್‌ನಲ್ಲಿ ಅನಲ್ ದಾ ಎಂಬ ಕೇಂದ್ರ ಸಮಿತಿ ಸದಸ್ಯ ಹತನಾದ. ವಿಶೇಷ ಕಾರ್ಯಾಚರಣೆಗಳಲ್ಲಿ ಕೆಲವು ಗಮನಾರ್ಹ ಸಂಗತಿಗಳು ಬೆಳಕಿಗೆ ಬಂದವು. ಬಸ್ತರ್ ಐಜಿಪಿ ಸುಂದರ್‌ರಾಜ್ ಅವರ ಪ್ರಕಾರ ಮಾವೋವಾದಿ ಸಂಘಟನೆಯು ಎಲ್‌ಟಿಟಿಇ (ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ) ಸೇರಿದಂತೆ ಇತರ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಮತ್ತು ತಾಂತ್ರಿಕ ನೆರವು ಪಡೆದಿತ್ತು. ಪ್ರಧಾನ ಕಾರ್ಯದರ್ಶಿ ಬಸವರಾಜು ಹಿಂಸಾತ್ಮಕ ಕಾರ್ಯಾಚರಣೆಗಳನ್ನು ಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ, ಗುಂಪು ವಿದೇಶಿ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಪಡೆದಿತ್ತು ಎಂಬ ಬಹಿರಂಗ ಮಾಹಿತಿಯು ನಕ್ಸಲ್ ಸಮಸ್ಯೆಯ ಅಂತಾರಾಷ್ಟ್ರೀಯ ಆಯಾಮವನ್ನು ಬಿಚ್ಚಿಟ್ಟಿತು. 2025ರ ಮಾರ್ಚ್‌ನಲ್ಲಿ ಮಾತ್ರ ಎರಡು ಬೃಹತ್ ಕಾರ್ಯಾಚರಣೆಗಳಲ್ಲಿ ಛತ್ತೀಸ್‌ಗಢದ ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕನಿಷ್ಠ 46 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಮೊದಲ ಕಾರ್ಯಾಚರಣೆಯಲ್ಲಿ ಮಾರ್ಚ್ 20ರಂದು ಬಿಜಾಪುರದಲ್ಲಿ 30 ಮಾವೋವಾದಿಗಳನ್ನು ಹೊಡೆದುರುಳಿಸಲಾಯಿತು. ಕೆಲವು ದಿನಗಳ ನಂತರ ಸುಕ್ಮಾದಲ್ಲಿ ಇನ್ನೂ 16 ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇವು ಯಾದೃಚ್ಛಿಕ ಹತ್ಯೆಗಳಾಗಿರಲಿಲ್ಲ - ನಕ್ಸಲೀಯರ ಕಾರ್ಯತಂತ್ರ ಸಭೆಗಳ ಸಮಯದಲ್ಲಿ ಯೋಜಿತ ಕಾರ್ಯಾಚರಣೆಗಳಾಗಿದ್ದವು. 2025ರ ಫೆಬ್ರವರಿಯಲ್ಲಿ ಒಂದೇ ದಿನ ಬಿಜಾಪುರದಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಿ ವಾತಾವರಣ ಸೃಷ್ಟಿಸಲಾಗಿತ್ತು.

ವರ್ಷವಾರು ಅಂಕಿಅಂಶಗಳು

ವರ್ಷ	ಎನ್‌ಕೌಂಟರ್‌ನಲ್ಲಿ ಹತರು	ಶರಣಾಗತಿ	ಬಂಧಿತರು
2019-2023	1,149 (ಒಟ್ಟು)	5,880	7,409
2024	290	928	1,090
2025	317+	2,337	800+
2026 (ಮಾರ್ಚ್ ವರೆಗೆ)	100+	630+	-

ಸಮಗ್ರ ಅಂಕಿಅಂಶಗಳು

2026ರ ಮಾರ್ಚ್ 30ರಂದು ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ನೀಡಿದ ಅಧಿಕೃತ ಅಂಕಿಅಂಶಗಳ ಪ್ರಕಾರ:

ಎನ್ಕೌಂಟರ್‌ನಲ್ಲಿ ಹತರಾದ ನಕ್ಸಲೀಯರು - 706

ಬಂಧಿತರು / ಜೈಲುವಾಸ - 2,218

ಶರಣಾಗತಿ ಹೊಂದಿದ ನಕ್ಸಲೀಯರು - 4,839

ಒಟ್ಟು ನಿಷ್ಕ್ರಿಯಗೊಳಿಸಲಾದ ನಕ್ಸಲೀಯರು - 7,763

ಹತರಾದ ಪ್ರಮುಖ ನಕ್ಸಲ್ ನಾಯಕರು

2014ರಿಂದ 2026ರ ನಡುವೆ ನಕ್ಸಲ್ ಸಂಘಟನೆಯ ಅಗ್ರ ನಾಯಕತ್ವವನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಅಮಿತ್ ಶಾ ಅವರ ಪ್ರಕಾರ, ಅಗ್ರ ನಾಯಕತ್ವದಲ್ಲಿ 12 ಜನ ಹತರಾಗಿದ್ದಾರೆ ಮತ್ತು ಕೇವಲ ಒಬ್ಬ ಮಾತ್ರ ತಲೆಮರೆಸಿಕೊಂಡಿದ್ದಾನೆ.

ನಾಯಕ ಹುದ್ದೆ ಮತ್ತು ಹತ್ಯೆ/ಶರಣಾಗತಿ ವಿವರ

- ನಂಬಳ ಕೇಶವ ರಾವ್ (ಬಸವರಾಜು) ಪ್ರಧಾನ ಕಾರ್ಯದರ್ಶಿ: ಮೇ 2025 - ಛತ್ತೀಸ್‌ಗಢದಲ್ಲಿ ಹತ
- ಮದ್ವಿ ಹಿಡ್ಮಾ: ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ನವೆಂಬರ್ 2025 - ಆಂಧ್ರಪ್ರದೇಶದಲ್ಲಿ ಹತ
- ರಾಮಚಂದ್ರ ರೆಡ್ಡಿ (ಚಳಪತಿ) ಕೇಂದ್ರ ಸಮಿತಿ ಸದಸ್ಯ ಜನವರಿ 2025 - ಒಡಿಶಾ ಗಡಿಯಲ್ಲಿ ಹತ
- ಗಣೇಶ್ ಉಯಿಕೆ:ಕೇಂದ್ರ ಸಮಿತಿ ಸದಸ್ಯ: ಡಿಸೆಂಬರ್ 2025 - ಒಡಿಶಾದಲ್ಲಿ ಹತ
- ಮಿಲಿಂದ ತೆಲ್ತುಂಬ್ಡೆಕೇಂದ್ರ ಸಮಿತಿ ಸದಸ್ಯ: ಗಡಚಿರೋಲಿ (ಮಹಾರಾಷ್ಟ್ರ) ಎನ್ಕೌಂಟರ್
- ವಿಕ್ರಮ ಗೌಡ: ಕರ್ನಾಟಕದ ಮೋಸ್ಟ್ ವಾಂಟೆಡ್ ನವೆಂಬರ್ 2024 - ಉಡುಪಿ ಬಳಿ ಹತ
- ಮಲ್ಲೋಜುಲ ವೇಣುಗೋಪಾಲ ರಾವ್ (ಭೂಪತಿ) ಪೊಲಿಟ್‌ಬ್ಯೂರೊ ಸದಸ್ಯ: ಅಕ್ಟೋಬರ್ 2025 - ಮಹಾರಾಷ್ಟ್ರದಲ್ಲಿ ಶರಣಾಗತಿ
- ಥಿಪ್ಪಿರಿ ತಿರುಪತಿ (ದೇವಜಿ)ಪ್ರಧಾನ ಕಾರ್ಯದರ್ಶಿ: ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ
- ಮಲ್ಲರಾಜಿ ರೆಡ್ಡಿ: ಕೇಂದ್ರ ಸಮಿತಿ ಸದಸ್ಯ ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ



ಮೋದಿ ಸರ್ಕಾರದ ಶೂನ್ಯ ಸಹಿಷ್ಣುತೆ ನೀತಿ

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರವು ನಕ್ಸಲ್ವಾದದ ವಿರುದ್ಧ ಬಹು-ಆಯಾಮಿ ಕಾರ್ಯತಂತ್ರವನ್ನು ರೂಪಿಸಿತು. 2015ರಲ್ಲಿ ಜಾರಿಗೊಳಿಸಲಾದ ರಾಷ್ಟ್ರೀಯ ನೀತಿ ಮತ್ತು ಕಾರ್ಯಯೋಜನೆಯು ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿತ್ತು: ಭದ್ರತೆ, ಅಭಿವೃದ್ಧಿ ಮತ್ತು ಪುನರ್ವಸತಿ. ಹಿಂದಿನ ಸರ್ಕಾರಗಳ ಹರಡಿದ ವಿಧಾನವನ್ನು ಬದಲಿಸಿ, ಸಮಗ್ರ ಮತ್ತು ಸಮನ್ವಯಿತ ವಿಧಾನವನ್ನು ಅಳವಡಿಸಲಾಯಿತು. ಗೃಹ ಸಚಿವ ಅಮಿತ್ ಶಾ ಅವರು 2024ರ ಆಗಸ್ಟ್‌ನಲ್ಲಿ ಎಡಪಂಥೀಯ ಉಗ್ರವಾದ ಪರಿಸ್ಥಿತಿಯನ್ನು ಪರಿಶೀಲಿಸಿ, 2026ರ ಮಾರ್ಚ್ 31ರ ಒಳಗೆ ಮಾವೋವಾದವನ್ನು ದೇಶದಿಂದ ನಿರ್ಮೂಲನೆ ಮಾಡಲಾಗುವುದು ಎಂದು ಘೋಷಿಸಿದರು. ಈ ಗಡುವು ಭದ್ರತಾ ಪಡೆಗಳನ್ನು ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಪ್ರೇರೇಪಿಸಿತು ಮತ್ತು ಕೇಂದ್ರ ಹಾಗೂ ರಾಜ್ಯ ಪಡೆಗಳ ನಡುವಿನ ಸಮನ್ವಯವನ್ನು ಬಲಪಡಿಸಿತು.

ಟ್ರೇಸ್-ಟಾರ್ಗೆಟ್-ನ್ಯೂಟ್ರಲೈಸ್ ಕಾರ್ಯತಂತ್ರ

ಭದ್ರತಾ ಕಾರ್ಯಾಚರಣೆಗಳನ್ನು ಟ್ರೇಸ್ (ಪತ್ತೆ), ಟಾರ್ಗೆಟ್ (ಗುರಿ) ಮತ್ತು ನ್ಯೂಟ್ರಲೈಸ್ (ನಿಷ್ಕ್ರಿಯಗೊಳಿಸು) ಎಂಬ ಕಾರ್ಯವಿಧಾನದ ಮೂಲಕ ನಡೆಸಲಾಯಿತು. ಸಿಆರ್‌ಪಿಎಫ್ ಮತ್ತು ಅದರ ಸಂಚಿಕೆ ಕೋಬ್ರಾ, (ಕಮಾಂಡೋ ಬೆಟಾಲಿಯನ್ ಫಾರ್ ರೆಸೊಲ್ಯೂಟ್ ಆಕ್ಷನ್) ಘಟಕಗಳು, ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್ (ಡಿಆರ್‌ಜಿ), ಬಸ್ತರ್ ಫೈಟರ್ಸ್ ಮತ್ತು ಸ್ಪೆಷಲ್ ಟಾಸ್ಕ್ ಫೋರ್ಸ್ (ಎಸ್ಟಿಎಫ್) ಸೇರಿದಂತೆ ಸುಮಾರು ಒಂದು ಲಕ್ಷ ಅರೆಸೈನಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಸ್ಥಳೀಯ ಭೂಪ್ರದೇಶ ಮತ್ತು ಭಾಷೆಯ ಮೇಲೆ ಹಿಡಿತ ಹೊಂದಿರುವ ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್, ಅದರಲ್ಲೂ ಶರಣಾಗತಿ ಹೊಂದಿದ ಮಾಜಿ ನಕ್ಸಲೀಯರನ್ನು ಒಳಗೊಂಡ ಈ ಘಟಕಗಳು ಕಾರ್ಯಾಚರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದವು.

ಆಪರೇಷನ್ ಕಾಗರ್

2024ರ ಜನವರಿಯಲ್ಲಿ ಆರಂಭವಾದ ಆಪರೇಷನ್ ಕಾಗರ್ ನಕ್ಸಲ್ ಹೋರಾಟದ ಅಂತಿಮ ಹಂತವನ್ನು ಗುರುತಿಸಿತು. ಈ ಕಾರ್ಯಾಚರಣೆಗೆ ನಾಲ್ಕು ಪ್ರಮುಖ ಕಾರ್ಯತಂತ್ರ ಗುರಿಗಳಿದ್ದವು: ಬಸ್ತರ್‌ನಾದ್ಯಂತ ಸಿಆರ್‌ಪಿಎಫ್ ನೆಲೆಗಳ ಸ್ಥಾಪನೆ, ಡ್ರೋನ್ ಮತ್ತು ಉಪಗ್ರಹ ಗುಪ್ತಚರ ಸಂಗ್ರಹ, 612ಕ್ಕೂ ಹೆಚ್ಚು ಪೊಲೀಸ್ ಠಾಣೆಗಳ ಸ್ಥಾಪನೆ, ಮತ್ತು ಶರಣಾಗತಿ ನೀತಿಯ ಜಾರಿ.

ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (ಕರ್ರೆಗುಟ್ಟಲು ಬೆಟ್ಟ ಕಾರ್ಯಾಚರಣೆ): 2025ರ ಏಪ್ರಿಲ್ 21ರಿಂದ ಮೇ 11ರವರೆಗೆ 21 ದಿನಗಳ ಕಾಲ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ ಭಾರತದ ಅತಿ ದೊಡ್ಡ ನಕ್ಸಲ್ ವಿರೋಧಿ ಕಾರ್ಯಾಚರಣೆಯಾಗಿತ್ತು. ಛತ್ತೀಸ್‌ಗಡ-ತೆಲಂಗಾಣ ಗಡಿಯಲ್ಲಿರುವ ಕರ್ರೆಗುಟ್ಟಲು ಬೆಟ್ಟ ಪ್ರದೇಶದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಈ ಪ್ರದೇಶವು ಪಿಎಲ್‌ಜಿಎ ಬೆಟಾಲಿಯನ್ 1, ಡಿಕೆಎಸ್‌ಝಡ್‌ಸಿ ಮತ್ತು ಟಿಎಸ್‌ಸಿ ಮುಂತಾದ ಪ್ರಮುಖ ನಕ್ಸಲ್ ಸಂಘಟನೆಗಳ ಏಕೀಕೃತ ಕೇಂದ್ರ ಕಚೇರಿಯಾಗಿತ್ತು. ಈ ಕಾರ್ಯಾಚರಣೆಯಲ್ಲಿ ಸಿಪಿಐ(ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಳ ಕೇಶವ ರಾವ್ (ಬಸವರಾಜು) ಸೇರಿದಂತೆ 27 ನಕ್ಸಲೀಯರನ್ನು ಮೇ 21ರಂದು ಹೊಡೆದುರುಳಿಸಲಾಯಿತು. ಭದ್ರತಾ ಪಡೆಗಳಲ್ಲಿ ಯಾವುದೇ ಸಾವು ಸಂಭವಿಸಲಿಲ್ಲ ಎಂಬುದು ವಿಶೇಷ.

ಭದ್ರತಾ ಮೂಲಸೌಕರ್ಯ ವಿಸ್ತರಣೆ

ಸರ್ಕಾರವು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಪಾರ ಭದ್ರತಾ ಮೂಲಸೌಕರ್ಯವನ್ನು ನಿರ್ಮಿಸಿದೆ. ನಕ್ಸಲ್ ಪೀಡಿತ ಪ್ರದೇಶಗಳ ಪೊಲೀಸ್ ಠಾಣೆಗಳ ಸಂಖ್ಯೆ 2014ರ 66ರಿಂದ 586ಕ್ಕೆ ಏರಿದೆ. 361 ಹೊಸ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿದೆ ಮತ್ತು 68 ರಾತ್ರಿ-ಲ್ಯಾಂಡ್ ಮಾಡಬಹುದಾದ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಡ್ರೋನ್ ಕಣ್ಗಾವಲು, ಉಪಗ್ರಹ ಚಿತ್ರಣ, ಕೃತಕ ಬುದ್ಧಿಮತ್ತೆ ಆಧಾರಿತ ವಿಶ್ಲೇಷಣೆ ಮತ್ತು ಮೊಬೈಲ್ ಡೇಟಾ ವಿಶ್ಲೇಷಣೆ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ.

ಅಂಶ	2014	2026
ನಕ್ಸಲ್ ಪೀಡಿತ ಜಿಲ್ಲೆಗಳು	126	7-8
ಅತಿ ಹೆಚ್ಚು ಪ್ರಭಾವಿತ ಜಿಲ್ಲೆಗಳು	35	3
ಪೊಲೀಸ್ ಠಾಣೆಗಳು	66	586
ನಕ್ಸಲ್ ಘಟನೆ ದಾಖಲಿಸಿದ ಪೊಲೀಸ್ ಠಾಣೆಗಳು	330 (76 ಜಿಲ್ಲೆ)	52 (22 ಜಿಲ್ಲೆ)
ಭದ್ರತಾ ಸಿಬ್ಬಂದಿ ಮರಣ (ವಾರ್ಷಿಕ)	88	19
ನಾಗರಿಕ ಮರಣ ಇಳಿಕೆ	-	70% ಕಡಿಮೆ
ಹಿಂಸಾಚಾರ ಘಟನೆಗಳು (ವಾರ್ಷಿಕ)	1,080	234

2014 ಮತ್ತು 2026 - ಹೋಲಿಕೆ

2014ಕ್ಕಿಂತ ಮೊದಲು ನಕ್ಸಲ್ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಕೇಂದ್ರ- ರಾಜ್ಯ ಸರ್ಕಾರಗಳು ಅನೇಕ ಸವಾಲುಗಳನ್ನು ಎದುರಿಸಿದ್ದವು. ನಕ್ಸಲ್‌ವಾದವನ್ನು ರಾಜ್ಯಗಳ ಸಮಸ್ಯೆ ಎಂದು ಪರಿಗಣಿಸಲಾಗುತ್ತಿತ್ತು. ರಾಷ್ಟ್ರೀಯ ನೀತಿ ಇರಲಿಲ್ಲ, ಕೇಂದ್ರ ಮತ್ತು ರಾಜ್ಯ ಪಡೆಗಳ ನಡುವೆ ಸಮನ್ವಯ ಕೊರತೆ ಇತ್ತು. ಗುಪ್ತಚರ ಮಾಹಿತಿ ಹಂಚಿಕೆ ಸಮರ್ಪಕವಾಗಿರಲಿಲ್ಲ, ಸೇನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಕೆಲಸಗಳ ನಡುವೆ ಸಮತೋಲನ ಇರಲಿಲ್ಲ. 2004ರಿಂದ 2014ರ ನಡುವೆ 19,135 ನಕ್ಸಲ್ ಸಂಬಂಧಿತ ಹಿಂಸಾಚಾರ ಘಟನೆಗಳು ನಡೆದಿದ್ದರೆ, 2015ರ ಜೂನ್‌ನಿಂದ 2025ರ ಮೇ ವರೆಗೆ ಈ ಸಂಖ್ಯೆ 56% ಕಡಿಮೆಯಾಗಿ 7,134ಕ್ಕೆ ಇಳಿದಿದೆ. 2010ರಲ್ಲಿ 1,936 ಘಟನೆಗಳು ನಡೆದಿದ್ದರೆ, 2024ರಲ್ಲಿ ಕೇವಲ 374 ಮತ್ತು 2025ರಲ್ಲಿ ಸುಮಾರು 234 ಘಟನೆಗಳು ನಡೆದಿವೆ. 2010ರಲ್ಲಿ 465 ಪೊಲೀಸ್ ಠಾಣೆಗಳಲ್ಲಿ ನಕ್ಸಲ್ ಹಿಂಸಾಚಾರ ವರದಿಯಾಗಿದ್ದರೆ, 2025ರಲ್ಲಿ ಕೇವಲ 119 ಠಾಣೆಗಳಲ್ಲಿ ಮಾತ್ರ ವರದಿಯಾಗಿದೆ. ನಾಗರಿಕ ಮತ್ತು ಭದ್ರತಾ ಪಡೆ ಸಾವುಗಳೂ ಗಮನಾರ್ಹವಾಗಿ ಕಡಿಮೆಯಾಗಿವೆ. 2010ರಲ್ಲಿ 1,005 ಜನ ಹತರಾಗಿದ್ದರೆ, 2024ರಲ್ಲಿ ಸುಮಾರು 150 ಮತ್ತು 2025ರಲ್ಲಿ ಸುಮಾರು 95-100 ಜನ ಮಾತ್ರ ಹತರಾಗಿದ್ದಾರೆ. ಇದು 85-91 % ಕಡಿಮೆ. ಭದ್ರತಾ ಸಿಬ್ಬಂದಿ ಸಾವಿನ ಸಂಖ್ಯೆ 73% ಕಡಿಮೆಯಾಗಿದೆ ಮತ್ತು ನಾಗರಿಕ ಸಾವಿನ ಸಂಖ್ಯೆ 70% ಕಡಿಮೆಯಾಗಿದೆ.

ಹಿಡ್ಮಾ ಹತ್ಯೆ

2025ರ ನವೆಂಬರ್ 18ರಂದು ಮದ್ವಿ ಹಿಡ್ಮಾ ಎಂಬ ಸಿಪಿಐ(ಮಾವೋವಾದಿ) ಕೇಂದ್ರ ಸಮಿತಿ ಸದಸ್ಯ, ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ಮತ್ತು ಪಿಎಲ್‌ಜಿಎ ಬೆಟಾಲಿಯನ್ 1ರ ಕಮಾಂಡರ್ ಆಗಿದ್ದ ಹಿಡ್ಮಾ ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಮಾರೆಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಗ್ರೇಹೌಂಡ್ಸ್ ಪಡೆಯ ಎನ್ಕೌಂಟರ್‌ನಲ್ಲಿ ಹತನಾದ. ಅವನ ಪತ್ನಿ ಮದಕಂ ರಾಜೆ ಮತ್ತು ನಾಲ್ಕು ಅಂಗರಕ್ಷಕರಾದ ಲಕ್ಮಲ್, ಕಮ್ಲು, ಮಲ್ಲ ಮತ್ತು ದೇವೆ ಸಹ ಹತರಾದರು. ಹಿಡ್ಮಾ ಮಾವೋವಾದಿ ಕೇಂದ್ರ ಸಮಿತಿಯ ಏಕೈಕ ಬುಡಕಟ್ಟು ಸದಸ್ಯನಾಗಿದ್ದ. ಅವನು ಕನಿಷ್ಠ 26 ಪ್ರಮುಖ ದಾಳಿಗಳಿಗೆ ನೇರ ಹೊಣೆಗಾರನಾಗಿದ್ದ ಮತ್ತು 172 ಭದ್ರತಾ ಸಿಬ್ಬಂದಿಯ ಹತ್ಯೆಗೆ ಕಾರಣನಾಗಿದ್ದ. ಅವನ ತಲೆಗೆ 50 ಲಕ್ಷ ರೂ. ಬಹುಮಾನ ಇತ್ತು. 2010ರ ದಂತೆವಾಡ ದಾಳಿ, 2013ರ ಜೀರಮ್ ಘಾಟಿ ದಾಳಿ, 2017ರ ಬುರ್ಕಪಾಲ್ ದಾಳಿ ಮತ್ತು 2021ರ ತೆಕುಲಗುಡೇಮ್ ದಾಳಿಗಳ ಹಿಂದಿನ ಪ್ರಮುಖ ಸೂತ್ರಧಾರನಾಗಿದ್ದ.



ನಗರ ನಕ್ಸಲೀಯರು

ನಗರ ನಕ್ಸಲೀಯರು ಎಂಬ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಚರ್ಚಾ ವಿಷಯವಾಗಿತ್ತು. ಅಮಿತ್ ಶಾ ಅವರ ಪ್ರಕಾರ, ನಗರ ನಕ್ಸಲೀಯರು ಸಶಸ್ತ್ರ ಮಾವೋವಾದಿಗಳೊಂದಿಗೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸಿದರು, ಆದರೆ ನಕ್ಸಲ್ ಹಿಂಸಾಚಾರದ ಸಾಮಾನ್ಯ ನಾಗರಿಕ ಬಲಿಪಶುಗಳ ಬಗ್ಗೆ ಕಾಳಜಿ ತೋರಲಿಲ್ಲ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 40 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿದರೆ, ಜಾರಿ ನಿರ್ದೇಶನಾಲಯ 12 ಕೋಟಿ ರೂ. ಮುಟ್ಟುಗೋಲು ಹಾಕಿ ನಕ್ಸಲ್‌ವಾದಕ್ಕೆ ಹಣಕಾಸು ಒದಗಿಸುತ್ತಿದ್ದ ಜಾಲಗಳನ್ನು ಛಿದ್ರಗೊಳಿಸಿದೆ.

ಕೇಂದ್ರ ಸರ್ಕಾರದ ಶರಣಾಗತಿ-ಸಹ-ಪುನರ್ವಸತಿ ಯೋಜನೆ

ಸೌಲಭ್ಯ	ವಿವರ
ಹಣಕಾಸು ನೆರವು (ಉನ್ನತ ಶ್ರೇಣಿ)	5 ಲಕ್ಷ ರೂ.
ಹಣಕಾಸು ನೆರವು (ಮಧ್ಯಮ/ಕೆಳ ಶ್ರೇಣಿ)	2.5 ಲಕ್ಷ ರೂ.
ಮಾಸಿಕ ವೇತನ (ವೃತ್ತಿ ತರಬೇತಿ ಅವಧಿ)	10,000 ರೂ. (36 ತಿಂಗಳು)
ವಸತಿ	ಸೂಕ್ತ ಮನೆ ನಿವೇಶನ ಹಂಚಿಕೆ
ಶಿಕ್ಷಣ	ಮಕ್ಕಳ ಶಿಕ್ಷಣಕ್ಕೆ ಉಚಿತ ಸೌಲಭ್ಯ
ಉದ್ಯೋಗ	ವೃತ್ತಿ ತರಬೇತಿ ಮತ್ತು ಕೆಲವು ಪ್ರಕರಣಗಳಲ್ಲಿ ಸರ್ಕಾರಿ ಉದ್ಯೋಗ
ಶಸ್ತ್ರ ಒಪ್ಪಿಸಿದ್ದಕ್ಕೆ ಪ್ರೋತ್ಸಾಹ	ಶಸ್ತ್ರ ಪ್ರಕಾರ ಹೆಚ್ಚುವರಿ ಬಹುಮಾನ
ಕಾನೂನು ನೆರವು	ಉಚಿತ ಕಾನೂನು ಸೇವೆ

ಕೇಂದ್ರ ಗೃಹ ಸಚಿವಾಲಯವು 2022ರ ಆಗಸ್ಟ್‌ನಲ್ಲಿ ಪರಿಷ್ಕರಿಸಿದ ಶರಣಾಗತಿ ಮತ್ತು ಪುನರ್ವಸತಿ ಮಾರ್ಗಸೂಚಿಗಳನ್ನು ಅಧಿಸೂಚಿಸಿತು. ಈ ಯೋಜನೆಯಡಿ ಶರಣಾಗತಿ ಹೊಂದಿದ ನಕ್ಸಲೀಯರಿಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತದೆ



ಕೆಂಪು ಕಾರಿಡಾರ್‌ನ ಪರಿವರ್ತನೆ

ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಯು ಸರ್ಕಾರದ ಕಾರ್ಯತಂತ್ರದ ಎರಡನೇ ಪ್ರಮುಖ ಸ್ತಂಭವಾಗಿತ್ತು. 2014ರಿಂದ 2025ರ ನಡುವೆ 12,000 ಕಿ.ಮೀ.ಗೂ ಹೆಚ್ಚು ರಸ್ತೆಗಳನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಗಡಿ ರಸ್ತೆ ಸಂಸ್ಥೆ ಐದು ಪ್ರಮುಖ ರಸ್ತೆಗಳು ಮತ್ತು ಆರು ಸೇತುವೆಗಳನ್ನು ನಿರ್ಮಿಸಿದೆ.

ಈ ಅಭಿವೃದ್ಧಿ ಕಾರ್ಯಕ್ರಮಗಳು ನಕ್ಸಲ್‌ವಾದದ ಸಾಮಾಜಿಕ-ಆರ್ಥಿಕ ಬೇರುಗಳನ್ನು ಕತ್ತರಿಸಿವೆ. ಹಿಂದೆ ಬಂದೂಕು ಹಿಡಿಯುತ್ತಿದ್ದ ಯುವಕರು ಈಗ ಶಿಕ್ಷಣ ಮತ್ತು ಉದ್ಯೋಗದ ಸಾಧನಗಳನ್ನು ಹಿಡಿದಿದ್ದಾರೆ ಎಂದು ಗೃಹ ಸಚಿವರು ಹೇಳಿದ್ದಾರೆ.

ಅಭಿವೃದ್ಧಿ ಅಂಶ	ಅಂಕಿಅಂಶ
ರಸ್ತೆ ನಿರ್ಮಾಣ	12,000+ ಕಿ.ಮೀ.
ಮೊಬೈಲ್ ಟವರ್‌ಗಳು	9,000 (2,343 - 4ಜಿಗೆ ಉನ್ನತೀಕರಣ)
ಹೊಸ ಬ್ಯಾಂಕ್ ಶಾಖೆಗಳು	1,000 +
ಎಟಿಎಂಗಳು	937
ಬ್ಯಾಂಕಿಂಗ್ ಪ್ರತಿನಿಧಿಗಳು	38,000
ಅಂಚೆ ಕಚೇರಿಗಳು	9,000
ಐಟಿಐಗಳು	48
ಕೌಶಲ್ಯ ಅಭಿವೃದ್ಧಿ ಕೇಂದ್ರಗಳು	61 (₹465 ಕೋಟಿ)
ಪಿಎಂ ಆವಾಸ್ ಯೋಜನೆ (ಮನೆಗಳು)	2,54,045
ಆಧಾರ್ ನೋಂದಣಿ	24..85 ಲಕ್ಷ
ಆಯುಷ್ಮಾನ್ ಕಾರ್ಡ್‌ಗಳು	21.44 ಲಕ್ಷ
ರೈಲ್ವೆ ಸಂಪರ್ಕ (ದಲ್ಲಿರಾಜ್ಹರಾ-ರಾವ್ಘಾಟ್)	65 ಕಿ.ಮೀ.

ಮತ್ತೆ ಯುದ್ಧೋನ್ಮಾದ

ಪುಟ ೧➔ **ಇಸ್ಫಾಹಾನ್ ಮೇಲಿನ ದಾಳಿ:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ಫಾಹಾನ್ ಮೇಲಿನ ದಾಳಿಯ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ಈ ನಗರ, ಇರಾನ್‌ನ ಮೂರು ಪ್ರಮುಖ ಪರಮಾಣು ಪುಷ್ಟೀಕರಣ ಕೇಂದ್ರಗಳಲ್ಲಿ ಒಂದನ್ನು ಹೊಂದಿದ್ದು, ಅಲ್ಲಿ ಹೆಚ್ಚಿನ ಪ್ರಮಾಣದ ಯುರೇನಿಯಂ ಸಂಗ್ರಹಿಸಲಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಉಪಗ್ರಹ ದೃಶ್ಯಗಳ ಪ್ರಕಾರ, ನಗರದ ದಕ್ಷಿಣ ಭಾಗದ ಪರ್ವತ ಪ್ರದೇಶದಲ್ಲಿ ಸ್ಫೋಟಗಳು ಸಂಭವಿಸಿವೆ. ಜೂನ್‌ನಲ್ಲಿ ಇರಾನ್ ಶೇ.60ರಷ್ಟು ಶುದ್ಧೀಕರಿಸಿದ ಯುರೇನಿಯಂ ಹೊಂದಿದ್ದ 18 ಕಂಟೈನರ್‌ಗಳನ್ನು ಈ ಪ್ರದೇಶದ ಸಮೀಪವಿರುವ ಕೇಂದ್ರಕ್ಕೆ ಸ್ಥಳಾಂತರಿಸಿತ್ತು ಎಂದು ತಿಳಿದುಬಂದಿದೆ.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಪುಟ ೧➔ ಮಧ್ಯಪ್ರಾಚ್ಯದಲ್ಲಿ ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯಲ್ಲಿ 3,500+ ಮತ್ತು ವಾಯುಪಡೆಯ ಸಾವಿರ ಸೈನಿಕರಿದ್ದಾರೆ. ಅಮೆರಿಕ ಸೈನಿಕರು ನುಗ್ಗಿದರೆ ಪ್ರಖರ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಸೈನಿಕರು ಯಾವಾಗ ಬರುತ್ತಾರೆಂದು ನಮ್ಮವರು ಕಾಯುತ್ತಿದ್ದಾರೆ. ಅವರನ್ನು ಮತ್ತವರ ಮಿತ್ರರಾಷ್ಟ್ರಗಳನ್ನು ಒಂದೇ ಬಾರಿಗೆ ಮುಗಿಸುತ್ತೇವೆ ಎಂದಿದೆ.

ಡ್ರೋನ್, ಕ್ಷಿಪಣಿ ದಾಳಿ

ದುಬೈ ಕರಾವಳಿಯಲ್ಲಿ ಕುವೈತ್ ತೈಲ ಟ್ಯಾಂಕರ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದರಿಂದ ಬೆಂಕಿ ಕಾಣಿಸಿಕೊಂಡಿದ್ದರೂ, ಯಾವುದೇ ತೈಲ ಸೋರಿಕೆಯಾಗಿಲ್ಲ. ಡ್ರೋನ್ ಪತನಗೊಂಡ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾ ತನ್ನ ರಾಜಧಾನಿಯತ್ತ ಬಂದ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ತಮಗೆ ಕೇವಲ ಅಮೆರಿಕ ಸೇನೆಯೇ ಗುರಿ ಎಂದು ಹೇಳಿದ್ದಾರೆ.


ಲೆಬನಾನ್, ಇರಾನ್‌ನಲ್ಲಿ ಸಾವು-ನೋವು

ದಕ್ಷಿಣ ಲೆಬನಾನ್‌ನಲ್ಲಿ ಮೂವರು ಶಾಂತಿ ಪಾಲಕರು ಮೃತಪಟ್ಟ ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತುರ್ತುಸಭೆ ಕರೆದಿದೆ. ಲೆಬನಾನ್‌ನಲ್ಲಿ 1,200 ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇರಾನ್‌ನಲ್ಲಿ 1,900, ಇಸ್ರೇಲ್‌ನಲ್ಲಿ 19 ಮತ್ತು ಅಮೆರಿಕದ 13 ಸೈನಿಕರು ಮೃತಪಟ್ಟಿದ್ದಾರೆ.

ಷೇರು ಮಾರುಕಟ್ಟೆ ತಲ್ಲಣ

ಇಸ್ಫಾಹಾನ್ ಮತ್ತು ತೈಲ ಟ್ಯಾಂಕರ್‌ಗಳ ಮೇಲಿನ ಹೊಸ ದಾಳಿಗಳಿಂದಾಗಿ ಬ್ರೆಂಟ್ ಕಚ್ಚಾತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107116 ಅಮೆರಿಕ ಡಾಲರ್‌ಗೆ ಏರಿಕೆಯಾಗಿದ್ದು, ಇದು ಭಾರತದ ಮೇಲೂ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯ ದಾಖಲೆ ಮಟ್ಟಕ್ಕೆ ಕುಸಿದಿದೆ. ಭಾರತೀಯ ಷೇರು ಮಾರುಕಟ್ಟೆಯ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ತೀವ್ರ ಕುಸಿತ ಕಂಡಿವೆ.

ರಾಮ ಬಾಣ



ಬಿಸಿಲಿನ ತಾಪಮಾನ: ಕಚೇರಿ ವೇಳಾಪಟ್ಟಿ ಬದಲಾವಣೆ

ಬೆಂಗಳೂರು: ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ಗಂಟೆ ವರೆಗೆ ಬದಲಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಈ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ, ಅಡೆತಡೆಯಿಲ್ಲದೆ ಕರ್ತವ್ಯವನ್ನು ನಿರ್ವಹಿಸಬೇಕು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಆಗದಂತೆ ಮತ್ತು ಡಿಸಿ, ಜಿಲ್ಲಾ ಪಂಚಾಯಿತಿ ಸಿಇಒ ಸೇರಿದಂತೆ ಹೊರೊಯ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

ರಸ್ತೆ ಸ್ವಚ್ಛಗೊಳಿಸುವವನು ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡಿದಾಗ ಊರು ಸ್ವಚ್ಛವಾಗುತ್ತೆ, ಶಿಕ್ಷಕನು ತನ್ನ ಸೇವೆಯನ್ನು ಜ್ಞಾನ ಸೇವೆ ಎಂಬ ಭಾವದಿಂದ ಮಾಡಿದಾಗ ವಿದ್ಯಾರ್ಥಿಗಳ ಭವಿಷ್ಯ ರೂಪುಗೊಳ್ಳುತ್ತೆ, ಇಂಜಿನಿಯರ್ ತನ್ನ ಹೊಣೆಗಾರಿಕೆಯನ್ನು ಸೇವಾಭಾವದಿಂದ ನಿರ್ವಹಿಸಿದಾಗ ಸೇತುವೆಗಳು ಸುರಕ್ಷಿತವಾಗಿರುತ್ತವೆ
- ಡಾ/ ವೀರೇಂದ್ರ ಹೆಗ್ಗಡೆ

- ಇನ್ನು ಸುಲಭವಾಗಿ ಹೇಳುವುದಾದರೆ ನಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ಕರ್ಮಯೋಗ, ಅದೇ ನಿಜವಾದ ದೇವರ ಪೂಜೆ!

ದಿನ ಭವಿಷ್ಯ

ಮೇಷ ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ವೃಷಭ ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಮಿಥುನ ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ ಆಗಲಿದೆ. ಆರೋಗ್ಯ ಸಮಸ್ಯೆ ಸಂಭವ.

ಕಟಕ ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ಸಿಂಹ ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಕನ್ಯಾ ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ತುಲಾ ಕೆಲ ಕೌಟುಂಬಿಕ ವಿಚಾರ ಇತ್ಯರ್ಥಕ್ಕೆ ದಿನ ಮೀಸಲು. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ.

ವೃಶ್ಚಿಕ ನಿಮ್ಮ ಸುತ್ತಮುತ್ತ ಹರ್ಷದ ವಾತಾವರಣ. ಇತರರ ಉತ್ಸಾಹದಲ್ಲಿ ಭಾಗಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ. ಖರ್ಚು ನಿಯಂತ್ರಣ.

ಧನು ನಿಮ್ಮ ಕಾರ್ಯಕ್ಕೆ ಸಹೋದ್ಯೋಗಿ ಬೆಂಬಲ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಮಕರ ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕುಂಭ ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ಮೀನ ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಣ್ಣ ಸಮಸ್ಯೆಯೊಂದು ನೆಮ್ಮದಿ ಕೆಡಿಸುವುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,0,5,1

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿ.ವೈ.ವಿಜಯೇಂದ್ರ ಪ್ರಚಾರ

ಕಾಂಗ್ರೆಸ್ ಹಣ ಕೆಲಸ ಮಾಡಲ್ಲ



ಬಾಗಲಕೋಟೆಯಲ್ಲಿ ಸೋಲುವ ಭಯದಿಂದ ಮುಖ್ಯಮಂತ್ರಿಗಳು 10-15 ಮಂತ್ರಿಗಳ ಜೊತೆ ಸೂಟ್ ಕೇಸ್ ಸಮೇತ ಠಿಕಾಣಿ ಹೂಡಿದ್ದಾರೆ. ದಾವಣಗೇರೆ, ಬಾಗಲಕೋಟೆಯಲ್ಲಿ ಸೋಲಿನ ಭಯದಲ್ಲಿ ಝುಂಡಾ ಹಾಕಿಕೊಂಡು ಕೂತಿದ್ದಾರೆ. ಎರಡೂ ಕಡೆಗಳಲ್ಲಿ ಬಿಜೆಪಿ ಗೆಲುವು ನಿಶ್ಚಿತ.
■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಾಗಲಕೋಟೆ: ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಕೊಡುತ್ತೇವೆ ಎಂದು ಪೊಳ್ಳು ಭರವಸೆ ನೀಡಿ ಇಲ್ಲಿವರೆಗೆ ಎಷ್ಟು ಸಾವಿರ ಕೋಟಿ ಬಿಡುಗಡೆ ಮಾಡಿದ್ದೀರಿ. ನಮ್ಮ ನಡೆ ಕೃಷ್ಣೆ ಕಡೆ ಎಲ್ಲಿ ಹೋಯ್ತು ಎಂದು ಜನರಿಗೆ ಉತ್ತರ ಕೊಡಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದರೆ ಸೂಟ್‌ಕೇಸ್ ಸಮೇತ ಏಕೆ ಠಿಕಾಣಿ ಹೂಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖ್ಯಮಂತ್ರಿಗಳ ವಿರುದ್ಧ ಪ್ರಶ್ನೆಯ ಸುರಿಮಳೆಗೈದರು.

ಉಪಚುನಾವಣೆ ನಿಮಿತ್ತ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ನವನಗರದಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿ ಮಾತನಾಡಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ ಅನುದಾನ ವಿಚಾರಕ್ಕೆ ಸಿಎಂಗೆ ತಿರುಗೇಟು ನೀಡಿ ಬೊಗಳೆ ಹೊಡೆದುಕೊಂಡೆ 3 ವರ್ಷ ಆಡಳಿತ ನಡೆಸಿದ್ದಾರೆ ಎಂದರು. ನಾಲ್ಕು ತಿಂಗಳ ಹಿಂದೆ ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶ ರೈತರಿಗೆ ಒಂದು ಎಕರೆ ನೀರಾವರಿ ಭೂಮಿಗೆ 40 ಲಕ್ಷ ರೂ., ಖುಷ್ಕಿ ಜಮೀನಿಗೆ 30ಲಕ್ಷ ರೂ.ಅಂತೆ ಎಷ್ಟು ಬಿಡುಗಡೆಯಾಗಿದೆ ಉತ್ತರ ಕೊಡಲಿ. 2010ರಲ್ಲಿ ಸುಪ್ರೀಂಕೋರ್ಟ್ ಆದೇಶ ಹೊರತಾಗಿಯೂ ಆಂಧ್ರ, ತೆಲಂಗಾಣ ಡಿಸ್ಪ್ಯೂಟ್ ಆಯ್ತು ಅಂತ ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ನಾಲ್ಕು ವರ್ಷ ಮುಂದೆ ಹೋಗಲು ಬಿಡದೇ ಕೇಂದ್ರದ ಮೇಲೆ ಗೂಬೆ ಕೂಡಿಸಿಕೊಂಡು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಕುತಂತ್ರ. ಷಡ್ಯಂತ್ರ ಮಾಡುವಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ ಎಂದು ಕಿಡಿಕಾರಿದರು.

ಸರ್ಕಾರಕ್ಕೆ ರೈತರ ಬಗ್ಗೆ, ಉತ್ತರ ಕರ್ನಾಟಕ ಬಗ್ಗೆ ಕಾಳಜಿ ಇಲ್ಲ, ನೀರಾವರಿ ಯೋಜನೆಗೆ ಹಣ ಒದಗಿಸಲು ಸಮಯವಿಲ್ಲ. ಹಣವಂತೂ ಮೊದಲೇ ಇಲ್ಲ. ಬಿಜೆಪಿ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪ ಹೊರಿಸಿ ಅಧಿಕಾರಕ್ಕೆ ಬಂದು ಹಗರಣಗಳ ಆಗರವಾಗಿ ನಿಂತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಅಭಿವೃದ್ಧಿಯನ್ನು ಸಹಿಸದ ಕಾಂಗ್ರೆಸ್ ಗೂಬೆಕೂರಿಸಿ ಅಧಿಕಾರಕ್ಕೆ ಬರುವ ನೀಚ ಬುದ್ಧಿಯನ್ನು ಮೈಗೂಡಿಸಿಕೊಂಡಿದ್ದು ಬಾಗಲಕೋಟೆಯ ಬುಡಾ, ಆರ್‌ಟಿಓ ಡ್ರೈವಿಂಗ್ ಟ್ರ್ಯಾಕ್, ಮೇಲ್ದರ್ಜೆಗೆ ಏರಿಸಿದ ನಗರಸಭೆ, ಜಿಲ್ಲಾಡಳಿತ ಭವನದ ನವೀಕರಣ ಸೇರಿದಂತೆ ಸಾಲು ಸಾಲು ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕಣ್ತುಂಬಿಕೊಳ್ಳಲಿ. ಸುಳ್ಳು ಹರಡುವುದನ್ನು ಬಿಟ್ಟು ಇನ್ನಾದರೂ ಪಾಠ ಕಲಿಯಲಿ. ವೀರಣ್ಣ ಚರಂತಿಮಠರ ಗೆಲುವನ್ನು ತಡೆಯಲು ಸಾಧ್ಯವಿಲ್ಲ ಎಂದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ



ಬೆಂಗಳೂರು: ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ (ಏ.1) ಆಯೋಜಿಸಲಾಗಿರುವ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ರಾತ್ರಿ ಭಾರತೀಯ ವಾಯುಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ರಾಷ್ಟ್ರಪತಿಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ವಿ. ಸೋಮಣ್ಣ, ಸಚಿವ ರಾಮಲಿಂಗರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ ಸಲೀಮ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ, ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

ಪುಟ ೧➔ ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲ ಸರ್ಕಾರಿ ಕಟ್ಟಡಗಳಿಂದ ಪಾಲಿಕೆಗಳಿಗೆ ಒಟ್ಟು 472 ಕೋಟಿ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿವೆ ಎಂದು ಆರೋಪಿಸಿದರು.

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ: ಕೇವಲ 50 ಸಾವಿರದಿಂದ 5 ಲಕ್ಷದವರೆಗೆ ತೆರಿಗೆ ಬಾಕಿ ಇರುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಹಾಕಲು ಮುಂದಾಗಿರುವ ಪಾಲಿಕೆ ಅಧಿಕಾರಿಗಳ ಧೋರಣೆ ಸರಿಯಲ್ಲ. ಬೃಹತ್ ಟೆಕ್ ಪಾರ್ಕ್‌ಗಳು, ಮಾಲ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ತೆರಿಗೆ ವಸೂಲಿ ಮಾಡದ ಅಧಿಕಾರಿಗಳು ಸಾಮಾನ್ಯ ಜನರ ಮೇಲೆ ದರ್ಪ ತೋರುತ್ತಿದ್ದಾರೆ ಎಂದು ರಮೇಶ್ ಕಿಡಿಕಾರಿದರು.

ಬೃಹತ್ ಬಾಕಿ ವಸೂಲಿ ಮಾಡಿ



ಪುಟ ೧➔ 18 ವರ್ಷಗಳಿಂದ ತೆರಿಗೆ ಕಟ್ಟದ ವಿಧಾನಸೌಧ, ವಿಕಾಸಸೌಧಗಳಿಗೆ ಕನಿಷ್ಠ ಒಂದು ದಿನವಾದರೂ ಬೀಗ ಜಡಿಯುವ ಮೂಲಕ ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ಸಾರಿ ಹೇಳಲಿ. ಜಿಬಿಎ ಮುಖ್ಯ ಆಯುಕ್ತರು ಮತ್ತು ಕಂದಾಯ ಇಲಾಖೆಯ ವಿಶೇಷ ಆಯುಕ್ತರು ಈ ಕೂಡಲೇ ಸೇವಾ ತೆರಿಗೆ ಬಾಕಿ ಉಳಿಸಿಕೊಂಡ ಸರ್ಕಾರಿ ಇಲಾಖೆಗಳ ಮುಖ್ಯಸ್ಥರಿಗೆ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಬೇಕು ಎಂದು ಎನ್.ಆರ್. ರಮೇಶ್ ಆಗ್ರಹಿಸಿದರು.

ಹಿಂದಿನ ಬಿಬಿಎಂಪಿ ಎಂಟು ವಲಯಗಳಲ್ಲಿರುವ ಸರ್ಕಾರಿ ಕಟ್ಟಡಗಳು 2025 ರ ಆರ್ಥಿಕ ವರ್ಷದವರೆಗೆ ಬಾಕಿ ಉಳಿಸಿಕೊಂಡಿರುವ ಸೇವಾ ತೆರಿಗೆಯ ವಲಯವಾರು ವಿವರ

ವಲಯದ ಹೆಸರು	ಬಾಕಿ ಮೊತ್ತ
ಪೂರ್ವ ವಲಯ	246
ಯಲಹಂಕ	67.48
ರಾಜರಾಜೇಶ್ವರಿ ನಗರ	57.52
ಮಹದೇವಪುರ	39.13
ದಕ್ಷಿಣ ವಲಯ	33.70
ಬೊಮ್ಮನಹಳ್ಳಿ	05.68
ದಾಸರಹಳ್ಳಿ	04.17
ಪಶ್ಚಿಮ ವಲಯ	03.61
ದಾಸರಹಳ್ಳಿ	04.17
ಪಶ್ಚಿಮ ವಲಯ	03.61

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

ಪುಟ ೧➔ **ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ:** ಉಪ ಚುನಾವಣೆ ಪ್ರಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಂಗಳವಾರ ಮತ್ತು ಬುಧವಾರ ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ, ಏಪ್ರಿಲ್ 5 ಮತ್ತು 6ರಂದು ಬಾಗಲಕೋಟೆಯಲ್ಲಿ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗುತ್ತೇನೆ. ಎರಡೂ ಕಡೆ ದೊಡ್ಡ ಅಂತರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ನನಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದು ಭವಿಷ್ಯ ನುಡಿದರು.

ಇಡೀ ಸರ್ಕಾರವೇ ಉಪಚುನಾವಣೆ ಪ್ರಚಾರದಲ್ಲಿದೆ. ಸ್ವತಃ ಮುಖ್ಯಮಂತ್ರಿಗಳೇ ನಾಲ್ಕೈದು ದಿನ ಅಲ್ಲಿ ಹೋಗಿ ಕುಳಿತಿದ್ದಾರೆ. ಅದರರ್ಥ ಚುನಾವಣಾ ಸೋಲಿನ ಭಯ ಅವರಿಗೆ ಕಾಡುತ್ತಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನ ಕಾಂಗ್ರೆಸ್‌ನವರಿಗೆ ತಕ್ಕ ಪಾಠ ಕಲಿಸಲಿ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಹಿತ ಮರೆತು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್‌ಗೆ ಈಗಾಗಲೇ ಇದೆ, ಮತ್ತೊಮ್ಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಎರಡೂ ಕ್ಷೇತ್ರಗಳ ಮತದಾರರು ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು. ಬಿಜೆಪಿಯ ಇಬ್ಬರು ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಿಕೊಡಲಿ ಎಂದು ಮನವಿ ಮಾಡಿದರು.

ಬಿಜೆಪಿ ಪರ ಪ್ರಚಾರಕ್ಕೆ ಹಸಿರು ನಿಶಾನೆ

ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಚಾರ ನಡೆಸಲಿರುವ ಹಿನ್ನೆಲೆಯಲ್ಲಿ ಅವರ ಪ್ರಚಾರಕ್ಕೆ ಬಿ.ಎಸ್. ಯಡಿಯೂರಪ್ಪ ಹಸಿರು ನಿಶಾನೆ ತೋರಿದ್ದಾರೆ. ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶವಿದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇನೆ ಎಂದು ಯಡಿಯೂರಪ್ಪ ಹೇಳಿದರು.

ಸಿಂದಗಿಯಲ್ಲಿ ಬೈಕ್ ಸವಾರ ಸಜೀವ ದಹನ

ಸಿಂದಗಿ: ಸಾರಿಗೆ ಬಸ್ ಹಾಗೂ ಬೈಕ್ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಸಾರಿಗೆ ಬಸ್ ಧಗಧಗ ಹೊತ್ತಿ ಉರಿದಿದ್ದು, ಬೈಕ್ ಸವಾರ ಸಜೀವ ದಹನಗೊಂಡಿರುವ ಹೃದಯ ವಿದ್ರಾವಕ ಘಟನೆ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್‌ಗೇಟ್ ಬಳಿ ನಡೆದಿದೆ. ಮೃತಪಟ್ಟವನನ್ನು ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಅಭಿಷೇಕ ಸಾಯಬಗೌಡ ನಾಗರಾಳ ಎಂದು ಗುರುತಿಸಲಾಗಿದೆ. ಸಾರಿಗೆ ಬಸ್ ಹಾಗೂ ಬೈಕ್ ಡಿಕ್ಕಿಯ ರಭಸಕ್ಕೆ ಬೈಕ್ ಟ್ಯಾಂಕಿನ ಪೆಟ್ರೋಲ್ ಚೆಲ್ಲಿ, ಬಸ್‌ಗೆ ಬೆಂಕಿ ತಗುಲಿಕೊಂಡಿದ್ದು, ಬೆಂಕಿ ಬಸ್‌ಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಪ್ರಯಾಣಿಕರು ಬಚಾವ್ ಆಗಿದ್ದು, ಬಸ್ ಅಡಿ ಸಿಲುಕಿದ್ದ ಬೈಕ್ ಸವಾರ ಸಜೀವ ದಹನಗೊಂಡಿದ್ದಾನೆ. ಸ್ಥಳಕ್ಕೆ ಸಿಂದಗಿ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಲು ಯತ್ನಿಸಿದ್ದು, ಸ್ಥಳಕ್ಕೆ ಪೊಲೀಸ್‌ರು ಭೇಟಿ ನೀಡಿ ಪರಿಶೀಲಿಸಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ಬೆದರಿಸಿ 25 ಲಕ್ಷ ರೂ.ವಂಚನೆ

ರಾಮನಗರ: ಐವರು ಮಹಿಳೆಯರ ಗುಂಪೊಂದು ಚಿತ್ರಮಂದಿರದ ಮಾಲೀಕ ನನ್ನು ಬೆದರಿಸಿ ಬರೋಬ್ಬರಿ 25 ಲಕ್ಷ ರೂಪಾಯಿಯನ್ನು ದೋಚಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಲೇಡಿ ಗ್ಯಾಂಗ್ ನಿಂದ ಸುಲಿಗೆಗೆ ಒಳಗಾದ ಅಗ್ರಹಾರ ಬಡಾವಣೆಯ ನಿವಾಸಿಯಾಗಿರುವ 52 ವರ್ಷದ ವ್ಯಕ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಸಂತ್ರಸ್ತ ವ್ಯಕ್ತಿ ನೀಡಿರುವ ದೂರಿನ ಪ್ರಕಾರ, ಆರೇಳು ತಿಂಗಳ ಹಿಂದೆ ರಾಮನಗರದ ಕೊತ್ತೀಪುರದ ಬಳಿ ವಾಸವಿದ್ದ ಆರೋಪಿ ಮಹಿಳೆಯೋರ್ವಳು ಸಿನಿಮಾ ನೋಡುವ ನೆಪದಲ್ಲಿ ತನ್ನ ಥಿಯೇಟರ್‌ಗೆ ಬಂದಿದ್ದಳು. ಬಳಿಕ ತನ್ನನ್ನು ಪರಿಚಯಿಸಿಕೊಂಡು ಮದುವೆಯಾಗಲು ಇಚ್ಛೆ ಇದೆ ಎಂದು ಹೇಳಿದ್ದಳು. ಆದರೆ ತಾನದನ್ನು ನಿರಾಕರಿಸಿದ ನಂತರ, ಆಕೆ ಮತ್ತಿಬ್ಬರು ಮಹಿಳೆಯರೊಂದಿಗೆ ಇನ್ನೊಮ್ಮೆ ಭೇಟಿ ನೀಡಿದ್ದಳು. ಬಳಿಕ ಮಹಿಳೆಯರೆಲ್ಲರೂ ಸೇರಿ ಒಂದಲ್ಲ ಒಂದು ನೆಪದಲ್ಲಿ ತನ್ನನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣಗಳನ್ನು ಸುಲಿಗೆ ಮಾಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧ ಐಜೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಚಲಿಸುತ್ತಿದ್ದ ಕಾರಿಗೆ ಬೆಂಕಿ

ದೇವನಹಳ್ಳಿ: ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿರುವ ಪರಿಣಾಮ, ಕಾರು ಸಂಪೂರ್ಣವಾಗಿ ಸುಟ್ಟುಹೋಗಿರುವ ಘಟನೆ ಹೊಸಕೋಟೆ-ದಾಬಸ್‌ಪೇಟೆ ಹೆದ್ದಾರಿಯಲ್ಲಿ ನಡೆದಿದೆ. ನಗರದಹೊರವಲಯದಲ್ಲಿರುವ ದಾಬಸ್‌ಪೇಟೆ ಹೆದ್ದಾರಿಯಲ್ಲಿ ಕಾರಿನ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸಂಪೂರ್ಣ ಕಾರಿಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ, ಮಾಲೀಕ ಕಾರಿನಿಂದ ಕೆಳಗೆ ಇಳಿದು ಕಾರಿನಲ್ಲಿದ್ದವರನ್ನು ಕೆಳಗೆ ಇಳಿಸಿದ್ದರಿಂದ ಪ್ರಾಣಾಪಾಯ ತಪ್ಪಿಸಿಕೊಂಡಿದ್ದಾರೆ.

ತೃತೀಯಲಿಂಗಿ ಮೇಲೆ ಹಲ್ಲೆ

ಮೈಸೂರು: ವೈಯಕ್ತಿಕ ಖರ್ಚಿಗೆ ಹಣ ನೀಡಲು ನಿರಾಕರಿಸಿದ ಕಾರಣಕ್ಕೆ ತೃತೀಯಲಿಂಗಿಯ ಮೇಲೆ ಯುವಕರ ತಂಡವೊಂದು ತಲ್ವಾರ್ ಮತ್ತು ಚಾಕುವಿನಿಂದ ಭೀಕರವಾಗಿ ಹಲ್ಲೆ ನಡೆಸಿರುವ ಆಘಾತಕಾರಿ ಘಟನೆ ಮೈಸೂರಿನ ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ನಡೆದಿದೆ. ಅಮೃತ ಬಡಾವಣೆ ನಿವಾಸಿಯಾದ ಅನಮ್ ಎಂಬ ತೃತೀಯಲಿಂಗಿಯ ಬಳಿ ಕೆಲವು ಯುವಕರು ತಮ್ಮ ವೈಯಕ್ತಿಕ ಖರ್ಚಿಗೆ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಅನಮ್ ಹಣ ನೀಡಲು ನಿರಾಕರಿಸಿದಾಗ ಯುವಕರು ಗಲಾಟೆ ಆರಂಭಿಸಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ಅನಮ್ ತನ್ನ ಸ್ನೇಹಿತೆ ಪಾರಿ ಎಂಬಾಕೆಗೆ ದೂರವಾಣಿ ಕರೆ ಮಾಡಿ, ಸ್ಥಳಕ್ಕೆ ಬರಲು ತಿಳಿಸಿದ್ದಾಳೆ. ಗೌಸಿಯಾನಗರದ ನಿವಾಸಿಯಾದ ಪಾರಿ ಸ್ಥಳಕ್ಕೆ ಬರುತ್ತಿದ್ದಂತೆಯೇ, ಆಕ್ರೋಶಗೊಂಡಿದ್ದ ಯುವಕರು ತಲ್ವಾರ್ ಮತ್ತು ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪಾರಿ ಅವರ ಮುಖಕ್ಕೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಲಾಗಿದೆ. ರಕ್ಷಣೆ ಬಂದ ಪಾರಿಗೂ ಗಂಭೀರವಾಗಿ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರೂ ತೃತೀಯಲಿಂಗಿಯರು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಅಹಿಂಸಾ ತತ್ವ ಮರು ಸ್ಥಾಪನೆ ಅತಿ ಅವಶ್ಯ

ಪುಟ ೧➔ ಪ್ರಾಚೀನ ಮೌಲ್ಯಯುತ ಹಸ್ತಪ್ರತಿಗಳನ್ನು ಸಂರಕ್ಷಿಸಲು ವಿಫಲವಾಗಿರುವ ಹಿಂದಿನ ಸರಕಾರಗಳ ಲೋಪಗಳನ್ನು ನಾವು ಸರಿಪಡಿಸುತ್ತಿದ್ದೇವೆ ಎಂದು ಹೇಳಿದರು.

ಭಾರತದಲ್ಲಿ ಮಾತ್ರ ಕಾರ್ಯಸಾಧ್ಯ: ವೇದಗಳು, ಪುರಾಣಗಳು, ಆಯುರ್ವೇದ, ಯೋಗ ಮತ್ತಿತರ ಸೈದ್ಧಾಂತಿಕ ವಿಚಾರಧಾರೆಸಹಿತ ಪರಂಪರೆ, ಸಂಪ್ರದಾಯಗಳನ್ನು ಒಗ್ಗೂಡಿಸಿರುವ ಮ್ಯೂಸಿಯಂ, ಭಾರತದ ವೈವಿಧ್ಯತೆ ಮತ್ತು ಏಕತೆಗಳ ಅತ್ಯುಚ್ಚ ಬಲವನ್ನು ಪ್ರತಿಫಲಿಸಿದೆ. ಸಾಮ್ರಾಟ್ ಸಂಪ್ರತಿ ಸಿದ್ಧಾಂತ ಮತ್ತು ಆಡಳಿತ ನಡುವಣ ಸಂಬಂಧವನ್ನು ಪ್ರತಿನಿಧಿಸಿದ್ದಾರೆ. ಸಾಮ್ರಾಟ್ ಸಂಪ್ರತಿ ಚಾರಿತ್ರಿಕ ದೊರೆಯ ಹೆಸರಷ್ಟೇ ಅಲ್ಲ, ಭಾರತದ ಸಿದ್ಧಾಂತವನ್ನು ಅದರ ಅನುಷ್ಠಾನದೊಂದಿಗೆ ಜೋಡಿಸುವ ಸೇತುವಾಗಿದ್ದಾರೆಂದು ಪ್ರಧಾನಿ ಮೋದಿ ಬಣ್ಣಿಸಿದರು.

ವಿದೇಶಿ ದಾಳಿಕೋರರಿಂದ ಜ್ಞಾನ ಭಂಡಾರ ನಾಶ: ಸಂಪ್ರತಿ ಮಹಾರಾಜರ ದಂತಕಥೆಯನ್ನು ಈ ಮ್ಯೂಸಿಯಂ ಸಂರಕ್ಷಿಸುವುದು ಮಾತ್ರವಲ್ಲ, ಹೆಚ್ಚೆ ಹೆಚ್ಚಿಗೂ ಭಾರತದ ಅಸ್ಮಿತೆಯನ್ನು ಎತ್ತಿಹಿಡಿಯಲಿದೆ. ಮ್ಯೂಸಿಯಂನ ಏಳು ಗ್ಯಾಲರಿಗಳು ಭಾರತದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಸಂಪನ್ನತೆಯನ್ನು ಎತ್ತಿಹಿಡಿಯಲಿವೆ ಎಂದು ಸಾರಿದ ಪ್ರಧಾನಿ, ತಕ್ಷಶಿಲೆ ಮತ್ತು ನಳಂದಾದಂತಹ ನಮ್ಮ ಅದೆಷ್ಟೋ ಪ್ರಾಚೀನ ಜ್ಞಾನಭಂಡಾರ ಕೇಂದ್ರಗಳನ್ನು ಗತಕಾಲದಲ್ಲಿ ವಿದೇಶಿ ದಾಳಿಕೋರರು ನಾಶಪಡಿಸಿದ ಪರಿಣಾಮ, ಭಾರತಕ್ಕೆ ಅಪಾರ ಅಮೂಲ್ಯ ಜ್ಞಾನ ಸಂಪತ್ತು ನಷ್ಟವಾಗಿದೆ. ದಾಳಿಕೋರರು ಅಮೂಲ್ಯ ಹಸ್ತಪ್ರತಿಗಳನ್ನು ಸುಟ್ಟುಹಾಕಿದ್ದರಿಂದ ಮಾನವೀಯತೆಯ ಯಥೇಚ್ಛ ಪರಂಪರೆ ಕೈತಪ್ಪಿಹೋಗಿದೆ ಎಂದು ಬೇಗುದಿ ವ್ಯಕ್ತಪಡಿಸಿದರು.

ರಾಷ್ಟ್ರೀಯ ಪ್ರಾಧಾನ್ಯತೆ ನೀಡದ ಕಾಂಗ್ರೆಸ್ ಸರಕಾರ: ನಂತರದ ವರ್ಷಗಳಲ್ಲಿ , ಅಳಿದುಳಿದ ಹಸ್ತಪ್ರತಿಗಳನ್ನು ಜನರು ಒಂದು ತಲೆಮಾರಿನಿಂದ ಇನ್ನೊಂದಕ್ಕೆ ತಲುಪಿಸುವ ಮುಖೇನ ಇವುಗಳನ್ನು ಸಂರಕ್ಷಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಹಿಂದಿನ ಸರಕಾರಗಳು ಜ್ಞಾನಭಂಡಾರಯುಕ್ತ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಿಸಲು ಮುಂದಾಗಲಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಇವಕ್ಕೆ ರಾಷ್ಟ್ರೀಯ ಪ್ರಾಧಾನ್ಯತೆ ಕೊಡಬೇಕಿತ್ತು. ದುರದೃಷ್ಟವಶಾತ್ ವಸಾಹತುಶಾಹಿ ಚಿಂತನೆಯಿಂದಾಗಿ ಈ ಮಹತ್ವದ ವಿಚಾರಕ್ಕೆ ಪ್ರಾಧಾನ್ಯತೆ ಸಿಗಲೇ ಇಲ್ಲ ಎಂದು ಪ್ರಧಾನಿ 2014ರ ಮುನ್ನ ದೇಶವಾಳಿದ್ದ ಕಾಂಗ್ರೆಸ್ ನೇತೃತ್ವದ ಸರಕಾರಗಳನ್ನು ತರಾಟೆಗೆತ್ತಿಕೊಂಡರು.

ಸೆಮಿಕಂಡಕ್ಟರ್ ಜೋಡಣಾ ಸೌಲಭ್ಯ ಉದ್ಘಾಟನೆ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಸನಂದ್‌ನಲ್ಲಿ ಕೇನ್ಸ್ ಸೆಮಿಕಾನ್‌ನ ಹೊರಗುತ್ತಿಗೆ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಸೌಲಭ್ಯವನ್ನು ಉದ್ಘಾಟಿಸಿದರು. ಜಾಗತಿಕ ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹ ಸೆಮಿಕಂಡಕ್ಟರ್ ಪೂರೈಕೆದಾರನಾಗಿ ಭಾರತವು ತನ್ನ ಪಾತ್ರವನ್ನು ಬಲಪಡಿಸುತ್ತಿದೆ ಎಂದು ಹೇಳಿದರು. ಈ ಸೌಲಭ್ಯದ ಉದ್ಘಾಟನೆಯು ಸ್ವಾವಲಂಬನೆ ಕಡೆಗೆ ಭಾರತದ ಪ್ರಯತ್ನವನ್ನು ಬಲಪಡಿಸುತ್ತದೆ.

ಇದು ದೃಢವಾದ ಅರೆವಾಹಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಒಂದು ಹೆಗ್ಗುರುತು ಹೆಜ್ಜೆಯಾಗಿದೆ ಎಂದು ಮೋದಿ ಹೇಳಿದರು. ಪ್ಯಾಕ್ಸ್ ಸಿಲಿಕಾ ಯೋಜನೆಗೆ ಸೇರುವ ಭಾರತದ ನಿರ್ಧಾರವು ನಿರ್ಣಾಯಕ ಖನಿಜಗಳ ಪೂರೈಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ಮೋದಿ ಹೇಳಿದರು.



ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದ್ದು, ಮಂಗಳವಾರ ಹೊಸದಿಲ್ಲಿಯ ಕಮಾನಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು.


ಜನರಿಂದ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ: ಯಡಿಯೂರಪ್ಪ

ದಾವಣಗೆರೆ: ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಬೇಸತ್ತಿರುವ ಜನರು ಉಪಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ, ಲೂಟಿ ಹೊಡೆಯುವುದೇ ಸರ್ಕಾರದ ಸಾಧನೆ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರೈತರಿಗೂ ದ್ರೋಹ ಎಸಗಿದೆ ಎಂದು ದೂರಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಹಗರಣ ನಡೆದಿದ್ದು, ಹಣವನ್ನು ಬೇರೆ ರಾಜ್ಯದ ಚುನಾವಣೆಗೆ ಬಳಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರು ರಾಜೀನಾಮೆ ಕೂಡ ನೀಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ಅನ್ಯಾಯ: 2000 ರೂಪಾಯಿ ಗೃಹಲಕ್ಷ್ಮೀ ಹಣ ಹಾಕಿ, ಸಿಕ್ಕ ಸಿಕ್ಕ ವಸ್ತುಗಳ ದರ ಏರಿಕೆ ಮಾಡಲಾಗಿದೆ. 39 ಸಾವಿರ ಕೋಟಿ ಎಸ್‌ಸಿಪಿ ಟಿಎಸ್‌ಪಿ ಹಣ ಗ್ಯಾರಂಟಿ ಯೋಜನೆಗೆ ಅಕ್ರಮವಾಗಿ ವರ್ಗಾವಣೆ ಅಂತ ಬಿಎಸ್‌ವೈ ಆರೋಪಿಸಿದ್ರು. ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ತೆಲಂಗಾಣ ಚುನಾವಣೆಗೆ ಬಳಕೆ ಮಾಡಿದೆ ಅಂತ ಇದೇ ಸಂದರ್ಭದಲ್ಲಿ ಬಿಎಸ್‌ವೈ ಆರೋಪಿಸಿದರು.



ಬೇಲೂರು ಶ್ರೀ ಚನ್ನಕೇಶವ ಸ್ವಾಮಿಯವರ ಬ್ರಹ್ಮ ರಥೋತ್ಸವವು ಮಂಗಳವಾರ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಲೋಕಾಯುಕ್ತ ನ್ಯಾಯಾಲಯ ಮಹತ್ವದ ತೀರ್ಪು

ಮಾಜಿ ಎಂಡಿ ವಿ. ಮುನಿಯಪ್ಪ ದೋಷಿ: ಮೂರು ವರ್ಷ ಶಿಕ್ಷೆ

ಬೆಂಗಳೂರು: ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ಕರ್ನಾಟಕ ತಾಂತ್ರಿಕ ಶಿಕ್ಷಣ ಪರಿಷತ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ವಿ. ಮುನಿಯಪ್ಪ ಅವರು ದೋಷಿ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ.



ಸುಮಾರು 12 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ ಈ ಶಿಕ್ಷೆ ಪ್ರಕಟವಾಗಿದ್ದು, ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಇದೊಂದು ಪ್ರಮುಖ ಮೈಲಿಗಲ್ಲಾಗಿದೆ. ಸಧ್ಯ ಬೆಂಗಳೂರಿನ ಬಸವ ಭವನದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ವಿ. ಮುನಿಯಪ್ಪ ವಿರುದ್ಧ 2014ರಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆಯ ಆರೋಪದ ಮೇಲೆ ಪ್ರಕರಣ ದಾಖಲಾಗಿತ್ತು.

ಲೋಕಾಯುಕ್ತ ಪೊಲೀಸರು ನಡೆಸಿದ ತನಿಖೆಯಲ್ಲಿ, ಮುನಿಯಪ್ಪ ಅವರು ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಕೋಟ್ಯಾಂತರ ರೂ. ಮೌಲ್ಯದ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದು ಸಾಕ್ಷ್ಯಾಧಾರಗಳ ಸಮೇತ ಸಾಬೀತಾಗಿತ್ತು. ಪ್ರಕರಣದ ಸಮಗ್ರ ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 4.5 ಕೋಟಿ ರೂ.ಗಳ ಬೃಹತ್ ದಂಡವನ್ನು ವಿಧಿಸಿದೆ. ಒಂದು ವೇಳೆ ಈ ದಂಡದ ಮೊತ್ತವನ್ನು ಪಾವತಿಸಲು ವಿಫಲವಾದರೆ, ಆರೋಪಿಯು ಹೆಚ್ಚುವರಿಯಾಗಿ ಆರು ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಬೇಕೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ. 2014ರಲ್ಲಿ ಆರಂಭವಾದ ಈ ಕಾನೂನು ಪ್ರಕ್ರಿಯೆಯು 2026ರಲ್ಲಿ ಅಂತಿಮವಾಗಿ ಶಿಕ್ಷೆಯ ಮುದ್ರೆಯೊಂದಿಗೆ ಅಂತ್ಯಗೊಂಡಿದೆ.

ಕಿರುಸುದ್ದಿ

ಪತ್ರಕರ್ತೆ ನವ್ಯಜ್ಯೋತಿಗೆ ಕೆಯುಡಬ್ಲ್ಯೂಜೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹೊಸದಿಗಂತ ಪತ್ರಿಕೆಯ ವಿಶೇಷ ಪ್ರತಿನಿಧಿ ನೆಲ್ಲಿಜೆ ನವ್ಯಜ್ಯೋತಿ ಅವರು, ಪತ್ರಕರ್ತ ದಿ. ಗುರುಲಿಂಗಸ್ವಾಮಿ ಹೊಳಿಮಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜನರ ಮೇಲೆ ಸಾಲದ ಹೊರೆ ಏರಿಸಿದ ಸರ್ಕಾರ

ದಾವಣಗೆರೆ: ರಾಜ್ಯದಲ್ಲಿರುವುದು ಕಾಂಗ್ರೆಸ್ಸಿನ ಫೋನ್ ಪೇ ಲಂಚದ ಸರ್ಕಾರ. ರಾಜ್ಯದ ಜನರ ಮೇಲೆ ಸಾಲದ ಹೊರೆ ಏರಿಸುವ ಮೂಲಕ ಸಿಎಂ ಸಿದ್ದರಾಮಯ್ಯನವರು ಸಾಲದರಾಮಯ್ಯ ಆಗಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದರು. ಮಂಗಳವಾರ ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿಯನ್ನು ಮರೆತು ಕೇವಲ ಲಂಚ ಪಡೆಯುವುದರಲ್ಲಿ ಮಗ್ನವಾಗಿದೆ. ಲಂಚದ ಹಣವನ್ನು ಫೋನ್ ಪೇ ಮೂಲಕವೇ ಹಾಕಿಸಿಕೊಳ್ಳುತ್ತಿದೆ. ಸಿದ್ದರಾಮ್ಯಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಈ ಮೂರು ವರ್ಷಗಳ ಅವಧಿಯಲ್ಲಿ ವಿಪರೀತ ಸಾಲ ಮಾಡುವ ಮೂಲಕ ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದೆ. ಪ್ರತಿಯೊಬ್ಬ ನಾಗರಿಕರ ಮೇಲೆ 1.12 ಲಕ್ಷ ರೂ. ಸಾಲ ಹೊರಿಸಿದೆ ಎಂದರು. ಹಿಂದಿ ಹೇರಿಕೆ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರು ಇತಿಹಾಸ ನೆನಪಿಸಿಕೊಳ್ಳಬೇಕು. ದೇಶದಲ್ಲಿ ತ್ರಿಭಾಷಾ ಸೂತ್ರ ತಂದವರು ಮಹಾತ್ಮ ಗಾಂಧೀಜಿ, ನೆಹರು ಮತ್ತು ಇಂದಿರಾ ಗಾಂಧಿ. ದೇಶದ ಎಲ್ಲಾ ಜಿಲ್ಲೆ ಮತ್ತು ನಗರಗಳಿಗೆ ಹಿಂದಿಯನ್ನು ತಲುಪಿಸಿದವರು ಕಾಂಗ್ರೆಸ್ಸಿಗರೇ ಹೊರತು ಬಿಜೆಪಿಯಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ: ಸುನೀಲ್ ಕುಮಾರ್

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳು ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ತರಲಿದ್ದು, ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಶಾಸಕ ವಿ.ಸುನೀಲ್ ಕುಮಾರ್ ಹೇಳಿದರು.



ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಉಪಚುನಾವಣೆಗಳು ಕೇವಲ ಕ್ಷೇತ್ರ ಮಟ್ಟಕ್ಕೆ ಸೀಮಿತವಾಗಿಲ್ಲ, ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವಂತಿವೆ. ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಾರ್ಯಕರ್ತರು ನಿರ್ಮಿಸಿರುವ ಉತ್ಸಾಹಭರಿತ ವಾತಾವರಣವು ಬಿಜೆಪಿ ಗೆಲುವಿನ ಸೂಚಕವಾಗಿದೆ. ರಾಜ್ಯದ ಎಲ್ಲೆಡೆಯಿಂದ ಕಾರ್ಯಕರ್ತರು ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು ಎಂಬ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು.

ಪ್ರಚಾರದಲ್ಲಿ ಒಳಮೀಸಲಾತಿ ವಿಚಾರ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಯಾರಿಗೂ ಅನ್ಯಾಯ ಮಾಡಲ್ಲ

ಬಾಗಲಕೋಟೆ: ಒಳ ಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯವಾಗಲಿ, ಎಡಗೈ ಮತ್ತು ಬಲಗೈ ಸಮುದಾಯ ಸೇರಿದಂತೆ ಸಣ್ಣ ಸಮುದಾಯಕ್ಕೂ ಕೂಡ ಯಾವುದೇ ಅನ್ಯಾಯ ಮಾಡುವುದಿಲ್ಲ. ಕಾಂಗ್ರೆಸ್ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟ ಪಕ್ಷವಾಗಿದೆ. ಯಾರೂ ಕೂಡ ಒಳಮೀಸಲಾತಿ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರ ನಡೆಸಿ, ನೀಲಾನಗರದಲ್ಲಿ ಬಹಿರಂಗ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಂಜಾರ ಸಮುದಾಯವನ್ನು ಎಸ್ಟಿ ವರ್ಗಕ್ಕೆ ಸೇರಿಸಿದ್ದು ಕಾಂಗ್ರೆಸ್. ಹೀಗಾಗಿ ಒಳಮೀಸಲಾತಿ ವಿಚಾರದಲ್ಲಿಯೂ ಕೂಡ ಅನ್ಯಾಯವಾಗದ ರೀತಿ ಸರ್ಕಾರ ನಡೆದುಕೊಳ್ಳುತ್ತದೆ ಎಂದು ಭರವಸೆ ನೀಡಿದರು.

ನಮ್ಮದು ಪಕ್ಷಾತೀತವಾದ ಅಭಿವೃದ್ಧಿಪರ ಸರ್ಕಾರವಾಗಿದೆ. ಬಿಜೆಪಿಯವರು ಗ್ಯಾರಂಟಿ ಯೋಜನೆಯನ್ನು ವಿರೋಧಿಸಿದ್ದಾರೆ. ಬಡವರು, ಮಹಿಳೆಯರು ಬಗ್ಗೆ ಬಿಜೆಪಿಯವರಿಗೆ ಕಾಳಜಿ ಇಲ್ಲ ಎಂದು ಹೇಳಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪ್ರಮುಖ ಪಾತ್ರ ವಹಿಸಿದೆ. ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜತೆಗೆ ಬಿಜೆಪಿಯವರು ಸೇರಿಕೊಂಡಿದ್ದರು. ಬಿಜೆಪಿಯವರಿಗೆ ಬಡವರ, ಮಹಿಳೆಯರ ಕಷ್ಟ ಗೊತ್ತಿಲ್ಲ, ಅದಕ್ಕೇ ಅವರು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ದಲಿತರಿಗೆ ಮೀಸಲಾತಿ ತಂದವರು ನಾವು. ಬಿಜೆಪಿ ತರಲಿಲ್ಲ, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜೊತೆ ಸೇರಿದ್ದ ಬಿಜೆಪಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಲೇ ಇಲ್ಲ. 1925ರಲ್ಲೇ ಆರ್‌ಎಸ್‌ಎಸ್ ಸ್ಥಾಪನೆ ಆಗಿದ್ದರೂ ಬ್ರಿಟೀಷರ ವಿರುದ್ಧ ಆರ್‌ಎಸ್‌ಎಸ್ ಧ್ವನಿ ಎತ್ತಲಿಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಇದು ಕಾಂಗ್ರೆಸ್‌ನ ಹೋರಾಟದ ಪರಂಪರೆ ಮತ್ತು ಕಾಂಗ್ರೆಸ್ ಪಕ್ಷದ ಇತಿಹಾಸ ಎಂದರು.

ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ ಮೇಟಿ ಅವರನ್ನು ಗೆಲ್ಲಿಸಲೇಬೇಕು ಎಂದು ಕರೆ ನೀಡಿದರು. ಸಚಿವ ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಸಂಯುಕ್ತ ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ ಇದ್ದರು.

ಬಿಜೆಪಿಯವರಿಗೆ ಸೋಲಿನ ಭೀತಿ: ಸಿಎಂ

ಬಾಗಲಕೋಟೆ: ಬಿಜೆಪಿಯವರು ಸೋಲಿನ ಭೀತಿಯಿಂದ ನಮ್ಮ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್ ಪಕ್ಷದ ಪ್ರತೀತಿಯಾಗಿದ್ದು, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಿಎಂ ಸ್ಥಾನದ ಬಗ್ಗೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿಯವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ, ಪಕ್ಷದ ಹೈಕಮಾಂಡ್‌ನ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆ. ಬಿಜೆಪಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರೇ ಆಗಿದ್ದ ಪೈಲ್ವಾನ್ ಸಾದಿಕ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರೂ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜನರ ಮೇಲೆ ಬೆಲೆ ಏರಿಕೆ ಯುದ್ಧ: ಡಿಕೆಶಿ

ಬೆಂಗಳೂರು: ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಟೀಕಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಯುದ್ಧಗಳ ನೆಪ, ಕೇಂದ್ರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ ಎಂದರು. ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೊಟೇಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದೆ ಎಂದು ಲೇವಡಿ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ? ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ವಾಗ್ದಾಳಿ ನಡೆಸಿದರು. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ ಎಂದರು.

> ಇಂದಿನಿಂದ ಕೇಂದ್ರ ಬಿಜೆಪಿ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆ ದಾಳಿ ಮಾಡಲಿದೆ. ಬೆಲೆ ಏರಿಕೆಯು ಜನರ ಪರಿಶ್ರಮದ ಹಣವನ್ನು ಪಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ.
> ■ ರಣದೀಪ್ ಸಿಂಗ್ ಸುರ್ಜೇವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಜನತೆಗೆ ನೆರವಾಗಲಿ

ನಾವು ಗ್ಯಾರಂಟಿ ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನಸಾಮಾನ್ಯರ ಬವಣೆಯ ಜೊತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ

ಟಿಬಿ ಡ್ಯಾಂನಲ್ಲಿ ನೂತನ ಕ್ರಸ್ಟ್‌ಗೇಟ್

ವಿಜಯನಗರ: ತುಂಗಭದ್ರಾ ಜಲಾಶಯದ ಎಲ್ಲ 32 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಮೇ ಅಂತ್ಯದೊಳಗೆ ಮುಕ್ತಾಯವಾಗಿದ್ದು, ಮುಂದಿನ 50 ವರ್ಷಗಳ ವರೆಗೆ ಅಭಾದಿತ ಎಂದು ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ ವ್ಯಕ್ತಪಡಿಸಿದರು.



ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿದ ಅವರು, ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಪರಿಶೀಲಿಸಿದರು. ಇದೇ ವೇಳೆ ಜಲಾಶಯದಲ್ಲಿ ನಡೆರುವ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ದುರಸ್ತಿ ಕಾರ್ಯಗಳ ಬಗ್ಗೆ ತುಂಗಭದ್ರಾ ಬೋರ್ಡ್‌ನ ತಾಂತ್ರಿಕ ತಜ್ಞರು ಸಚಿವರಿಗೆ ಮಾಹಿತಿ ಒದಗಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪಾಯವುಲ ಕೇಶವ ಅವರು, ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಹಲವು ದಶಕಗಳು ಕಳೆದಿವೆ. 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದ ಬಳಿಕ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಸಲಹೆ ಮೇರೆಗೆ ಎಲ್ಲ ಗೇಟ್‌ಗಳನ್ನು ಹೊಸದಾಗಿ ಅಳವಡಿಸಲಾಗುತ್ತಿದೆ. ಮೇ ತಿಂಗಳ ಒಳಗಾಗಿ ಎಲ್ಲ ಕ್ರಸ್ಟ್ ಗೇಟ್‌ಗಳು ಅಳವಡಿಕೆಯಾಗಲಿದೆ. ಅಷ್ಟರೊಳಗೆ ಮುಂಗಾರು ಮಳೆ ಚುರುಕುಗೊಳ್ಳುವ ಬಗ್ಗೆ ಹವಾಮಾನ ಇಲಾಖೆಯೂ ಮುನ್ಸೂಚನೆ ನೀಡಿದ್ದರಿಂದ ಈ ಬಾರಿ ಮುಂಗಾರು ಹಂಗಾಮು ರೈತರಿಗೆ ವರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಟಿಬಿ ಡ್ಯಾಂ ಮೂರು ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಎಲ್ಲ ರಾಜ್ಯಗಳು ತಮ್ಮ ಪಾಲಿನ ಅನುದಾನವನ್ನು ಈಗಾಗಲೇ ಒದಗಿಸಿದೆ. ಮುಂದಿನ ದಿನಗಳಲ್ಲಿ ಅಗತ್ಯವಾದರೆ, ಮತ್ತಷ್ಟು ಅನುದಾನ ನೀಡಲು ಆಂಧ್ರಪ್ರದೇಶ ಸರ್ಕಾರ ಸಿದ್ಧವಾಗಿದೆ. ಅನುದಾನ ವಿನಿಯೋಗ ಹಾಗೂ ತಾಂತ್ರಿಕ ವಿಚಾರಗಳನ್ನು ಟಿಬಿ ಬೋರ್ಡ್ ನಿರ್ಧರಿಸಲಿದೆ. ಇದರಲ್ಲಿ ಯಾವುದೇ ಸರ್ಕಾರದ ಹಸ್ತಕ್ಷೇಪವಿಲ್ಲ. ಈಗ ನಡೆದಿರುವ ನೂತನ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ಇತರೆ ದುರಸ್ತಿ ಕಾರ್ಯಗಳಿಂದಾಗಿ ಜಲಾಶಯಧ ಆಯಸ್ಸು 50 ವರ್ಷಗಳಷ್ಟು ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಸರ್ಕಾರದ ಮುಖ್ಯ ಸಚೇತಕ ಕಲವಾ ಶ್ರೀನಿವಾಸಲು, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆರೆಡ್ಡಿ, ಅಧೀಕ್ಷಕ ಅಭಿಯಂತರ ನಾರಾಯಣ ನಾಯಕ್, ಶಾಖಾಧಿಕಾರಿ ಕಿರಣ್ ಇದ್ದರು.

ವಿಪಕ್ಷ ನಾಯಕರ ಹೇಳಿಕೆ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಆಯವ್ಯಯ ಪತ್ರವೇ ಸರ್ಕಾರದ ಶ್ವೇತ ಪತ್ರ

ಬೆಂಗಳೂರು: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ನಾನು ಮಂಡಿಸಿದ್ದೇನೆ, ಅದು ಅಂಕಿ ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ 7 ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕ ಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದು ಸ್ಪಷ್ಟಪಡಿಸಿದ್ದಾರೆ. ಆಯವ್ಯಯದ ಬಗ್ಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದಿದೆ. ಇದರ ಬಗ್ಗೆ ಇನ್ನೂ ನಿಮಗೆ ಅನುಮಾನಗಳಿದ್ದರೆ ವಿವರಣೆ ಕೊಡಲು ನಾನು ಸಿದ್ಧನಿದ್ದೇನೆ. ಚುನಾವಣೆಯ ಅಖಾಡದಲ್ಲಿಯೇ ನಿಮ್ಮ ಜೊತೆ ಬಹಿರಂಗ ಚರ್ಚೆಗೂ ನಾನು ಸಿದ್ಧನಿದ್ದೇನೆ. ದಯವಿಟ್ಟು ಕೇವಲ ರಾಜಕೀಯ ಮಾತನಾಡಬೇಕೆಂಬ ಬಾಯಿ ಚಪಲಕ್ಕಾಗಿ ಆಯವ್ಯಯ ಪತ್ರದ ಪಾವಿತ್ರ್ಯವನ್ನು ಹಾಳು ಮಾಡಲು ಹೋಗಬೇಡಿ ಎಂದು ಕುಟುಕಿದ್ದಾರೆ.

ರಾಜ್ಯ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪದ ಹಿಂದೆ ನಮ್ಮ ಸರ್ಕಾರವನ್ನು ರಾಜಕೀಯವಾಗಿ ಎದುರಿಸಲಾಗದ ಬಿಜೆಪಿ ನಾಯಕರ ಅಸಹಾಯಕತೆ, ಹತಾಶೆ ಮತ್ತು ಅಸೂಯೆ ಇದೆ. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ದಿವಾಳಿ ಸ್ಥಿತಿಯಲ್ಲಿಲ್ಲ, ನಮ್ಮ ಸರ್ಕಾರ ಆರ್ಥಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸುಭದ್ರವಾಗಿದೆ. ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ ಎಂದಿದ್ದಾರೆ. 2025-26 ರಲ್ಲಿ ದೇಶದ ಜಿಡಿಪಿಯ ಬೆಳವಣಿಗೆ ಶೇ.7.4 ರಷ್ಟಿದ್ದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರದ ಆರ್ಥಿಕ ಸುಭದ್ರತೆಗೆ ಸಾಕ್ಷಿಯಾಗಿದೆ. ಈ ವರ್ಷ ನಮ್ಮ ಜಿಎಸ್‌ಡಿಪಿ ರೂ.33,05,500 ಕೋಟಿಯಷ್ಟಿದೆ ಎಂದು ವಿವರಿಸಿದ್ದಾರೆ.

ಸರ್ಕಾರದಿಂದ ವಿತ್ತೀಯ ಶಿಸ್ತು


ನಾನು ಮಂಡಿಸಿರುವ 17 ಬಜೆಟ್‌ಗಳಲ್ಲಿಯೂ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇನೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ಅನುಗುಣವಾಗಿ ನಮ್ಮ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.25 ರೊಳಗೆ ಇರಬೇಕು, ನಮ್ಮದು ಶೇ.24.94 ರಷ್ಟಿದೆ. ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.40 ರೊಳಗೆ ಇರಬೇಕಾಗುತ್ತದೆ. ಅದು ಶೇ.55.6 ರಷ್ಟಿದೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಪ್ರಶ್ನಿಸಿದ್ದು, 16ನೇ ಹಣಕಾಸು ಆಯೋಗದ ಮಾರ್ಗಸೂಚಿ ಅನುಸಾರ ವಿತ್ತೀಯ ಕೊರತೆ ರಾಜ್ಯಗಳಲ್ಲಿ ಜಿಎಸ್‌ಡಿಪಿಯ ಶೇ.3 ರೊಳಗೆ ಹಾಗೂ ಕೇಂದ್ರ ಸರ್ಕಾರ ಜಿಡಿಪಿಯ ಶೇ.4.2 ರೊಳಗೆ ಇರಬೇಕು. ನಮ್ಮ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3 ರ ಒಳಗೆ ಇದೆ. ಆದರೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟಿದೆ ಎಂದು ವಿವರಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ವರ್ಗೀಕರಣ ರದ್ದುಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಆಗ್ರಹ

ಅಡಿಕೆಗೆ ಕ್ಯಾನ್ಸರ್‌ಕಾರಕ ಹಣೆಪಟ್ಟಿ ಸರಿಯಲ್ಲ

ಹೊಸದಿಲ್ಲಿ: ವಿಶ್ವ ಆರೋಗ್ಯ ಸಂಸ್ಥೆ ಅಡಿಕೆಗೆ ಅಂಟಿಸಿರುವ ಕ್ಯಾನ್ಸರ್ ಕಾರಕ ಹಣೆಪಟ್ಟಿ ವೈಜ್ಞಾನಿಕವಾಗಿ ಸರಿಯಲ್ಲ, ಈ ಕುರಿತು ಭಾರತ ಸರ್ಕಾರ ಮಧ್ಯಪ್ರವೇಶಿಸಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಅಡಿಕೆ ಬೆಳೆಗಾರರ ಪರ ಪ್ರಬಲವಾಗಿ ವಾದ ಮಂಡಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಹೊಸದಿಲ್ಲಿಯಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಬಿ.ವೈ.ರಾಘವೇಂದ್ರ, ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ದೇಶದ ಒಟ್ಟು ಅಡಿಕೆ ಉತ್ಪಾದನೆಯ ಸುಮಾರು ಶೇ.65 ರಷ್ಟನ್ನು ಒದಗಿಸುವ ಮಲೆನಾಡಿನ ಅಡಿಕೆ ಬೆಳೆಗಾರರು ತೀವ್ರ ಆತಂಕ ಮತ್ತು ಸಂಕಷ್ಟದಲ್ಲಿದ್ದಾರೆ. ಸುಮಾರು 1 ಲಕ್ಷ ಕೋಟಿ ರೂ. ಆರ್ಥಿಕತೆ ಹೊಂದಿರುವ ಮತ್ತು 11 ರಾಜ್ಯಗಳ 2 ಕೋಟಿಗೂ ಅಧಿಕ ಜನರ ಜೀವನಾಧಾರ ವಾಗಿರುವ ಅಡಿಕೆ ಬೆಳೆಯ ರಕ್ಷಣೆ ಇಂದು ಆದ್ಯತೆಯ ವಿಷಯವಾಗಬೇಕಿದೆ ಎಂದು ಪ್ರತಿಪಾದಿಸಿದ್ದಾರೆ.



ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆ IARC, ಅಡಿಕೆಯನ್ನು Group&I Carcinogen ಎಂದು ವರ್ಗೀಕರಿಸಿರುವುದು ವೈಜ್ಞಾನಿಕವಾಗಿ ದೋಷಪೂರ್ಣ, ಪಕ್ಷಪಾತತನದಿಂದ ಕೂಡಿದೆ. ಭಾರತದ ಐಸಿಎಆರ್ ಸಿಪಿಸಿಆರ್‌ಐ(ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್-ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ಸ್ ರೀಸರ್ಚ್ ಇನ್ಸಿಟ್ಯೂಟ್) ನಡೆಸಿ ರುವ ಸಂಶೋಧನೆಗಳ ಪ್ರಕಾರ, ಐಸಿಎಆರ್ ಉಲ್ಲೇಖಿಸಿರುವ ಬಹಳಷ್ಟು ಅಧ್ಯಯನಗಳು, ತಂಬಾಕು ಮಿಶ್ರಿತ ಉತ್ಪನ್ನಗಳನ್ನು ಶುದ್ಧ ಅಡಿಕೆಯೊಂದಿಗೆ ತಾಳೆ ಮಾಡಿ ತಪ್ಪು ತೀರ್ಮಾನಕ್ಕೆ ಬಂದಿವೆ.

ಅಡಿಕೆಯ ಮುಖ್ಯ ಘಟಕ ಅರೆಕೋಲಿನ್ Group &2Bಯಲ್ಲಿದ್ದರೂ ಅಡಿಕೆಯನ್ನೇ Group&I ಎಂದು ವರ್ಗೀಕರಿಸಿರುವ ಆಂತರಿಕ ವಿರೋಧವೂ ಇದೆ. ಜನವರಿ 2026ರಲ್ಲಿ ಡಬ್ಲ್ಯುಹೆಚ್‌ಓ ವೆಬಿನಾರ್ ನಿರ್ಬಂಧಾತ್ಮಕ ನೀತಿಗಳ ಸಂಕೇತ ನೀಡಿರುವ ಹಿನ್ನೆಲೆಯಲ್ಲಿ ಭಾರತ ಕೂಡಲೇ ಮಧ್ಯ ಪ್ರವೇಶಿಸಿ, ಅಡಿಕೆ ಬೆಳೆಗಾರರ ಹಿತ ಕಾಯಬೇಕು ಎಂದರು.

ಮೇ 2025ರಲ್ಲಿ ಅಮೇರಿಕಾ ವಿಷಕಾರಿ ಕ್ಷಾರ ವಲಸೆ ಎಂಬ ಕಾರಣ ನೀಡಿ ಅಡಿಕೆ ಹಾಳೆ ತಟ್ಟೆಗಳ ಮೇಲೆ ನಿಷೇಧ ಹೇರಿರುವುದು ನಮ್ಮ ಗ್ರಾಮೀಣ ಕೈಗಾರಿಕೆಗಳಿಗೆ ಗಂಭೀರ ಪೆಟ್ಟು ಕೊಟ್ಟಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿ ಪರಿಸರ ಸ್ನೇಹಿ ಆಶಯಗಳಿಗೆ ತದ್ವಿರುದ್ಧವಾಗಿರುವ ಈ ನಿಷೇಧವನ್ನು ವೈಜ್ಞಾನಿಕವಾಗಿ ಮತ್ತು ರಾಜತಾಂತ್ರಿಕತೆ ಮೂಲಕ ಪ್ರಶ್ನಿಸಬೇಕೆಂದು ರಾಘವೇಂದ್ರ ಕೋರಿದ್ದಾರೆ.

ಕೇಂದ್ರ ಸಚಿವರ ಭರವಸೆ

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಖುದ್ದು ಭೇಟಿ ಮಾಡಿ ಸಂಸದ ಬಿ.ವೈ. ರಾಘವೇಂದ್ರ ಮನವಿ ಸಲ್ಲಿಸಿದರು. ಸಚಿವರು ಈ ವಿಷಯದಲ್ಲಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಸಿಪಿಸಿಆರ್‌ಐ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದೇಶದ 11 ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಈಗಾಗಲೇ ಅಡಿಕೆ ಕುರಿತು ಸಂಶೋಧನೆ ನಡೆಸುತ್ತಿವೆ. ಶೀಘ್ರದಲ್ಲೇ ಒಂದು ಸಮಗ್ರ ವರದಿ ಸಿದ್ಧವಾಗಲಿದೆ. ಈ ವರದಿಯನ್ನು ಸಿಪಿಸಿಆರ್‌ಐ ಐಸಿಎಂಆರ್‌ಗೆ ಸಲ್ಲಿಸಲಿದ್ದು, ಅಂತಿಮ ವರದಿ ಕೇಂದ್ರ ಸರ್ಕಾರಕ್ಕೆ ಲಭಿಸಿದ ತಕ್ಷಣ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಮೋದಿ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ಸೋಲಿನ ಭೀತಿ: ಛಲವಾದಿ

ಬಾಗಲಕೋಟೆ: ರಾಜ್ಯದ ಎರಡು ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತವಾಗಿದೆ. ಇದರಿಂದ ಗಾಬರಿ ಬಿದ್ದಿರುವ ಕಾಂಗ್ರೆಸ್ ಸರ್ಕಾರ ಮತದಾರರಿಗೆ ಗ್ಯಾರಂಟಿ ನಿಲ್ಲಿಸುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿ ಮಾಡಿ ಧಮ್ಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರಾ? ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೈತಿಕತೆಯಿಂದ ಉಪ ಚುನಾವಣೆ ಎದುರಿಸುತ್ತಿಲ್ಲ, ಸೋಲಿನ ಭೀತಿ ಕಾಂಗ್ರೆಸ್‌ನಲ್ಲಿ ಮನೆ ಮಾಡಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಐದು ದಿನ ಬಾಗಲಕೋಟೆ ಪ್ರಚಾರಕ್ಕೆ ಠಿಕಾಣಿ ಹೂಡಿದ್ದಾರೆ. ಸಿಎಂ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಆ ಬಳಿಕ ಪ್ರಣಾಳಿಕೆಯಲ್ಲಿ ನೀಡಿದ್ದ ಯಾವುದೇ ಭರವಸೆ ಈಡೇರಿಸಿಲ್ಲ, ಬೋಗಸ್ ಹೇಳಿದ್ದಾರೆ. ಅನೇಕ ನಿಗಮಗಳಿಗೆ ಅನುದಾನ ನೀಡಿಲ್ಲ, ಸದನದಲ್ಲಿ ಕೇಳಿದರೇ ಶಾಸಕರು ಬಳಸಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಧಮ್ಕಿ ಹಾಕಿ ಮತ ಪಡೆಯಲು ಯತ್ನ

ಕಾಂಗ್ರೆಸ್‌ನವರು ಧಮ್ಕಿ ಹಾಕಿ ಮತ ಪಡೆಯಲು ಹೊರಟಿದ್ದಾರೆ. ಬಾಗಲಕೋಟೆಯ ಜನ ಅದಕ್ಕೆ ಹೆದರುವುದಿಲ್ಲ. ಇಪ್ಪತ್ತು ವರ್ಷಗಳ ಹಿಂದಿನ ಬಾಗಲಕೋಟೆಗೂ ಇಂದಿನ ಬಾಗಲಕೋಟೆಗೂ ಇರುವ ಅಭಿವೃದ್ಧಿ ಬದಲಾವಣೆಯ ಕಾರಣಿಕರ್ತರನ್ನು ಹುಡುಕಿದರೆ ಸಿಗುವುದು ಚರಂತಿಮಠರು ಮಾತ್ರ. ರಾಜಧಾನಿ ಬೆಂಗಳೂರಿನಲ್ಲಿಯೂ ಈ ಮಾದರಿಯ ಸುಸಜ್ಜಿತ ರಸ್ತೆಗಳಿಲ್ಲ. ರಾಜ್ಯದ ಯಾವ ಜಿಲ್ಲೆಯೂ ಬಾಗಲಕೋಟೆಯಷ್ಟು ವಿಶಾಲವಾಗಿ ಬೆಳೆದಿಲ್ಲ. ಇದೆಲ್ಲವನ್ನು ನೋಡಿದ ಜನ ಯಾರು ಗೆಲ್ಲಬೇಕೆಂದು ತೀರ್ಮಾನ ಮಾಡುತ್ತಾರೆ ಎಂದರು.

ಸಂಪಾದಕೀಯ

ಇಂಥ ಆಸೆ ಪ್ರಜಾಪ್ರಭುತ್ವ ವಿರೋಧಿ

ಐಪಿಎಲ್ ಆರಂಭವಾಗಿದೆ. ರಾಜ್ಯ ವಿಧಾನಸಭಾ ಅಧಿವೇಶನ ಮುಗಿದಿದೆ. ಇವೆರಡರ ತುಲನೆಯಿಂದ ಯಾವ ವಿಷಯವನ್ನು ಹೇಳಲಾರಂಭಿಸಬಹುದು ಎಂಬುದು ಕೂಡ ಈಗ ರಾಜ್ಯಕ್ಕೆ ತಿಳಿದಿದೆ! ಕೆಲವು ಶಾಸಕರು ತಮಗೆ ಐಪಿಎಲ್ ಟಿಕೇಟುಗಳನ್ನು ಉಚಿತವಾಗಿ ನೀಡಬೇಕೆಂದು ಇಟ್ಟ ಬೇಡಿಕೆಯನ್ನು ಸರ್ಕಾರ ಈಡೇರಿಸಿದೆ. ಓರ್ವ ಶಾಸಕರಂತೂ ಸರದಿ ಸಾಲಿನಲ್ಲಿ ನಿಂತು ಟಿಕೇಟ್ ಖರೀದಿಸಲು ನಾವೇನು ಸಾಮಾನ್ಯರೇ ಎಂಬ ಪ್ರಶ್ನೆಯನ್ನೇ ಹಾಕಿದ್ದರು. ಅದನ್ನು ಸಂಬಂಧಪಟ್ಟವರು ಪುರಷ್ಕರಿಸಿ ಇದೀಗ ಅಧಿಕಾರದಲ್ಲಿರುವ ರಾಜಕಾರಣಿಗಳೆಲ್ಲರೂ ಸಾಮಾನ್ಯರಲ್ಲ ಎಂದು ಷರಾ ಬರೆದಿದೆ. ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಇದು ಚರ್ಚೆಯಾಗುತ್ತಿರುವ ಸಂಗತಿ.

ಹಲವು ಆಯಾಮಗಳ ಮೂಲಕ ಈ ಪ್ರಕರಣವನ್ನು ಅವಲೋಕಿಸಬೇಕಾಗಿದೆ. ಏಕೆಂದರೆ ಐಪಿಎಲ್ ಎಂದರೆ ಇಂದು ಕೇವಲ ಕ್ರಿಕೇಟ್ ಆಗಿ ಉಳಿದಿಲ್ಲ. ಶ್ರೀಮಂತಿಕೆ ಮತ್ತು ಮನರಂಜನೆಗಳನ್ನು ಬಿಟ್ಟರೆ ಅದರಲ್ಲಿ ಉಳಿದಿದ್ದೇನೂ ಇಲ್ಲ. ಕ್ರೀಡೆಯೊಂದರಲ್ಲಿ ಇನ್ನು ಇರಬೇಕಾದುದು ತಾನೇ ಏನು ಪ್ರಶ್ನೆ ಇಲ್ಲಿ ಹುಟ್ಟಬಹುದು.



ಕ್ರೀಡೆಯನ್ನು ಮನರಂಜನಾ ಕ್ಷೇತ್ರವಾಗಿ ಪರಿವರ್ತಿಸಿದ ಮೇಲೆ ಅಲ್ಲಿ ಕ್ರೀಡಾ ಮೌಲ್ಯಗಳು ಉಳಿದಿರುತ್ತವೆಯೋ ಎಂಬ ಉತ್ತರ ಅನೇಕರಿಗೆ ಹಿಡಿಸದಿರಬಹುದು. ಕ್ರೀಡೆಯಲ್ಲೂ ಮೌಲ್ಯಗಳೇ ಎಂದು ಕೂಡ ಪ್ರಶ್ನಿಸಬಹುದು. ಅದಕ್ಕೂ ಉತ್ತರ ರಾಜ್ಯ ವಿಧಾನಮಂಡಲದಲ್ಲಿ ಚರ್ಚೆಯಾದ ಟಿಕೇಟ್ ಪ್ರಕರಣ ಮತ್ತು ಶಾಸಕರಿಗೆ ಮಂಜೂರಾಗುವ ಉಚಿತ ಟಿಕೇಟ್! ಈ ಪ್ರಕರಣವನ್ನು ನೋಡಬೇಕಾದ ಮತ್ತೊಂದು ಕೋನವೆಂದರೆ ಇಂಥ ಕ್ರೀಡಾಕೂಟಕ್ಕೆ ಉಚಿತ ಟಿಕೇಟುಗಳನ್ನು ಕೇಳುವುದೆಷ್ಟು ಸರಿ ಎನ್ನುವುದು. ಐಪಿಎಲ್ ಎಂದರೆ ಶಾಸಕರೆಲ್ಲರೂ ಕಡ್ಡಾಯವಾಗಿ ನೋಡಬೇಕಾದುದಲ್ಲ. ಆದರೆ ಶಾಸಕರು ಕೂಡ ಮನುಷ್ಯರೆ. ಸಮಾಜಕ್ಕೆ ಐಪಿಎಲ್‌ನ ಹುಚ್ಚು ಇರುವಂತೆ ಶಾಸಕರಿಗೆ ಇರಬಾರದು ಎಂದೇನಿಲ್ಲ. ಆದರೆ ಶಾಸಕರಾದ ಒಂದೇ ಕಾರಣಕ್ಕೆ ಟಿಕೇಟ್ ಅಥವಾ ಪಾಸ್ ಅನ್ನು ಕ್ರಿಕೇಟ್ ಸಂಸ್ಥೆಗಳು ಉಚಿತವಾಗಿ ನೀಡಬೇಕೇ ಎನ್ನುವುದು ಎನ್ನುವುದು ಪ್ರಶ್ನೆ. ಶಾಸಕರೇ ಆಸೆಪಟ್ಟ ಮೇಲೆ ಕೊಡಬಾರದೇ ಎನ್ನುವುದು ಸಂಸ್ಥೆಗಳ ಉತ್ತರವಾಗಬಹುದು. ಅಂತಿಮವಾಗಿ ಅದು ಮುಟ್ಟುವುದು ಶಾಸಕರ ಮನಸ್ಥಿತಿಯೆಡೆಗೆ. ಒಂದೆಡೆ ಸಂವಿಧಾನದ ಸಮಾನತೆಯ ಹಕ್ಕುಗಳನ್ನು ಪುಂಖಾನುಪುಂಖವಾಗಿ ಉದುರಿಸುತ್ತಾ ರಾಜಕಾರಣಕ್ಕೆ ಬರುವ ಮಂದಿಯ ಗುಣಮಟ್ಟ ಈ ಹಂತಕ್ಕೆ ಇಳಿಯಿತೇ ಎನ್ನುವಲ್ಲಿಯವರೆಗೆ ಪ್ರಕರಣವನ್ನು ವ್ಯಾಖ್ಯಾನಿಸಬಹುದು. ಅದರಲ್ಲೂ ಸರದಿ ಸಾಲಿನಲ್ಲಿ ನಿಲ್ಲಲು ನಾವೇನು ಜನಸಾಮಾನ್ಯರೇ ಎನ್ನುವ ಹೇಳಿಕೆ ನೇರವಾಗಿ ಪ್ರಜಾಪ್ರಭುತ್ವ ವಿರೋಧಿ. ಪ್ರಜೆಗಳೇ ಪ್ರಭುಗಳು ಎನ್ನುವುದು ಪ್ರಜಾಪ್ರಭುತ್ವದ ಆಶಯ. ಆದರೆ ಇಂದಿನ ರಾಜಕಾರಣದಲ್ಲಿ ಶಾಸಕರೇ ತಾವು ಜನಸಾಮಾನ್ಯರಿಗಿಂತ ಭಿನ್ನ ಎಂದು ಸದನದಲ್ಲೇ ಹೇಳಿಕೊಳ್ಳುತ್ತಾರೆಂದರೆ ಅವರ ಮಾನಸಿಕತೆ ಹೇಗಿರಬಹುದು? ರಾಜಕಾರಣದ ಮೌಲ್ಯಗಳು ಎಷ್ಟು ಉಳಿದಿರಬಹುದು? ಆಶ್ಚರ್ಯವೆಂದರೆ ಇಂಥ ಮಾನಸಿಕತೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ವ್ಯಾಪಿಸಿರುವುದು. ರಾಜಕಾರಣಕ್ಕೆ ಬರುವಾಗಲೇ ಸಂವೇದನೆಯನ್ನು, ಬುದ್ಧಿಮಟ್ಟವನ್ನು ಗಂಟುಕಟ್ಟಿ ಇಟ್ಟುಬರಬೇಕು ಎಂಬ ಮಾತಿಗೆ ಇಂಥ ಪ್ರಕರಣಗಳು ಬಲನೀಡುತ್ತವೆ. ಏನೇ ಆದರೂ ಇಂಥ ಮನಸ್ಥಿತಿಯನ್ನು ಎಲ್ಲಾ ಪಕ್ಷಗಳು ಶಿಸ್ತಿನ ಕ್ರಮದ ಮೂಲಕ ಹತ್ತಿಕ್ಕಬೇಕಾಗಿದೆ.

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com



ಮೊದಲು ಸರ್ಕಾರದ ಯೋಜನೆಯೂ ಇತ್ತು. ಅದರ ಜತೆಗೆ ಗ್ರಾಮೀಣ ಪ್ರದೇಶದ ಜನರೂ ಬೇರೆ ಉರುವಲುಗಿಂತ ಗ್ಯಾಸ್ ಉತ್ತಮ ಎಂದು ಗೋಬರ್ ಗ್ಯಾಸ್ ತಯಾರಿಸಿಕೊಳ್ಳುವ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮನೆಗಳಲ್ಲೇ ಹೊಂದಿದ್ದರು. ಆಗ ಯಾರೂ ಈಗಿನ ರೀತಿ ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತರಾಗಿರಲಿಲ್ಲ. ಕಟ್ಟಿಗೆ ಒಲೆ ಇತ್ತು. ಅದರ ನಂತರ ಕಟ್ಟಿಗೆ ಆಧಾರಿತ, ಆದರೆ ಸುಧಾರಿತ ಅಸ್ತ್ರ ಒಲೆ ಬಂತು. ಅದರಿಂದ ಹೊಗೆಯ ಸಮಸ್ಯೆಯೂ ಅಷ್ಟು ಇಲ್ಲವಾಗಿತ್ತು. ಇನ್ನೂ ಕೆಲವು ಹೊಸ ಮಾದರಿಯ ಒಲೆಗಳು ಬರುತ್ತಿದ್ದವು.

ಆದರೆ ನಮ್ಮದೇ ಸರ್ಕಾರಗಳು ಜನರು ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತವಾಗುವಂತೆ ಮಾಡಿದವು. ಪರಿಸರಕ್ಕೆ ಹಾನಿ, ಇನ್ನೊಂದು ಮತ್ತೊಂದು ಕಾರಣಕ್ಕೆ ಕಟ್ಟಿಗೆ ಬೇಡ, ಹೊಗೆ ಆರೋಗ್ಯಕ್ಕೆ ಹಾನಿಕರ ಎಂದೆಲ್ಲ ಹೇಳಿ ಸರ್ಕಾರಗಳೇ ನಮ್ಮ ಪಾರಂಪರಿಕ ಇಂಧನ ಪದ್ಧತಿ ಬಿಡುವಂತೆ ಮಾಡಿದವು. ಕಟ್ಟಿಗೆ ಒಲೆ ಬಳಸುವುದು ಅಂದರೆ ಹಿಂದುಳಿದಿರುವುದರ ಸಂಕೇತ, ಗ್ಯಾಸ್ ಬಳಸಿದರೆ ಅದು ಆಧುನಿಕತೆಯ, ಅಭಿವೃದ್ಧಿಯ ಸಂಕೇತ ಎಂದು ಬಿಂಬಿಸಿದವು.



ಮನೆಗೆ ಮೊದಲು ಒಂದು ಸಿಲಿಂಡರ್ ಇತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗುವುದೇ ಕಷ್ಟವಿತ್ತು. ಸಿಕ್ಕರೂ ದರ ಜಾಸ್ತಿ, ಅದನ್ನು ಪೇಟೆಯಿಂದ ತರುವುದು ಕಷ್ಟ ಅಥವಾ ತಂದವನಿಗೂ ಹೆಚ್ಚುವರಿ ಹಣ ನೀಡಬೇಕು ಎಂಬೆಲ್ಲ ಸಮಸ್ಯೆ ಇತ್ತು. ಒಂದು ಸಿಲಿಂಡರ್ ಇದ್ದಾಗ ಮತ್ತು ಸಿಗುವುದು ಕಷ್ಟ ಇದ್ದಾಗ ಜನ ಗೋಬರ್ ಗ್ಯಾಸ್ ಮತ್ತು ಇತರ ಇಂಧನ ಮೂಲಗಳನ್ನು ಸಂಪೂರ್ಣ ಬಿಟ್ಟಿರಲಿಲ್ಲ. ಯಾಕೆಂದರೆ ಸಿಲಿಂಡರ್ ಖಾಲಿಯಾದರೆ, ಬದಲಿ ವ್ಯವಸ್ಥೆ ಇರಲೇಬೇಕಿತ್ತು. ಬಹುಶಃ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಇರಬೇಕು, ಮನೆಗೆ ಎರಡು ಗ್ಯಾಸ್ ಸಿಲಿಂಡರ್ ಕೊಟ್ಟರು. ಸಿಲಿಂಡರ್ ಪೂರೈಕೆ ಕೂಡ ಭಾರೀ ಪ್ರಮಾಣದಲ್ಲಿ ಹೆಚ್ಚಿತು. ಯಾರಿಗೆ ಯಾವಾಗ ಕೇಳಿದರೂ ಸಿಲಿಂಡರ್ ಸಿಗುತ್ತಿತ್ತು. ನೀವು ಖಾಲಿಯಾದ ಸಿಲಿಂಡರ್ ಕೊಟ್ಟು, ತುಂಬಿದ ಸಿಲಿಂಡರ್ ತರುವಷ್ಟು ಸುಲಭವಾಗಿ ಸಿಲಿಂಡರ್ ಸಿಗಲಾರಂಭಿಸಿತು. ಆಗ ಜನರಿಗೆ ಬೆಳಗ್ಗೆದ್ದು ಸೆಗಣಿ ಕರಡಿ, ಆಮೇಲೆ ಅದರ ಸ್ಲರಿ ತೆಗೆದು ತೋಟಕ್ಕೋ, ಇನ್ನೆಲ್ಲೋ ಹಾಕುವ ಕೆಲಸಕ್ಕಿಂತ ಸೀದಾ ಅಂಗಡಿಯಿಂದ ಸಿಲಿಂಡರ್ ತರುವುದೇ ಸುಲಭ ಅನ್ನಿಸಲಾರಂಭಿಸಿತು. ಸರ್ಕಾರ ಸಿಲಿಂಡರ್‌ಗೆ ಸಬ್ಸಿಡಿಯನ್ನೂ ನೀಡುತ್ತಿತ್ತು. ಅಷ್ಟು ಸುಲಭವಾಗಿ ಸಿಕ್ಕರೆ ಯಾರಿಗೆ ಬೇಡ. ಜನರೆಲ್ಲ ಸಿಲಿಂಡರ್ ಮೊರೆ ಹೋದರು.

ಹಾಗೆನೋಡಿದರೆ ಆಗ ಗ್ರಾಮೀಣ ಭಾರತ ನಿಜವಾಗಿ ಆತ್ಮನಿರ್ಭರವಾಗಿತ್ತು. ಹಾಗಿದ್ದವರನ್ನು ಸಿಲಿಂಡರ್ ಅವಲಂಬಿಯಾಗಿ ಮಾಡಿದ್ದೇ ನಮ್ಮ ವ್ಯವಸ್ಥೆ. ಈಗ ಬಹುತೇಕ ಜನ ಸಿಲಿಂಡರ್ ದಾಸರಾಗಿಯಾಗಿದೆ. ಬಹುಶಃ ಇದ್ದವರು ಕೂಡ ಗೋಬರ್ ಗ್ಯಾಸ್ ಬಳಸುವುದು ಬಿಟ್ಟು ದಶಮಾನಗಳೇ ಕಳೆದಿವೆ. ಹಾಗಾಗಿ ಗೋಬರ್ ಗ್ಯಾಸ್ ಪ್ಲ್ಯಾಂಟ್ ಹಾಳಾಗಿದೆ. ಒಲೆ ಅಳಿಸಿಹಾಕಿಯಾಗಿದೆ. ಈಗಿನ ತಲೆಮಾರಿನವರಿಗೆ ಸೀಮೆಎಣ್ಣೆ ಇಲ್ಲದೆ ಬೆಂಕಿ ಹಚ್ಚಲೇ ಬರವುದಿಲ್ಲ, ಒಲೆ ಊದಿ ಬೆಂಕಿ ಹೊತ್ತಿಸಬೇಕೆಂದರೆ ಅತ್ಯಂತ ಕಷ್ಟದ ಕೆಲಸ ಅದಕ್ಕಿಂತ ಸ್ವಿಗ್ಗಿ– ಜೊಮೆಟೊನೆ ಸುಲಭ ಅನ್ನಿಸಿಬಿಡುತ್ತದೆ.

ಈಗ ಅಮೆರಿಕ–ಇರಾನ್ ಯುದ್ಧದಿಂದಾಗಿ ದಿಢೀರನೆ ಸಿಲಿಂಡರ್ ಗ್ಯಾಸ್ ಸಮಸ್ಯೆ ಆರಂಭವಾಗಿದೆ. ನಾವೆಷ್ಟೇ ಆತ್ಮನಿರ್ಭರ ಅಂದರೂ, ನಾವೆಷ್ಟು ಅವಲಂಬಿತರಾಗಿದ್ದೇವೆ ಎಂಬುದರ ಅರಿವಾಗಿದೆ. ಈಗ ಸಿಲಿಂಡರ್ ಗ್ಯಾಸ್ ಇಲ್ಲವೆಂದರೆ ನಮಗೆ ಜೀವನವೇ ನಡೆಯುವುದು ಕಷ್ಟವೇನೊ ಎಂಬ ರೀತಿಯಲ್ಲಿ ನಾವು ಆತಂಕಪಡುತ್ತಿದ್ದೇವೆ. ನಾವು ಬೇಕಾಬಿಟ್ಟಿಯಾಗಿ ಗ್ಯಾಸ್ ಬಳಸುವುದನ್ನು ರೂಢಿಸಿಕೊಂಡು, ಮನೆಯಲ್ಲಿ ಸದಾ ಇನ್ನೊಂದು ತುಂಬಿದ ಸಿಲಿಂಡರ್ ಇಟ್ಟುಕೊಂಡು ರೂಢಿಯಾಗಿರುವುದರಿಂದ ಒಂದು ಸಿಲಿಂಡರ್ ಖಾಲಿಯಾಗಿ ನಾಲ್ಕು ದಿನಕ್ಕೆ ನಮಗೆ ಆತಂಕ ಕಾಡಲಾರಂಭಿಸುತ್ತದೆ.

ಈಗ ಯುದ್ಧದಿಂದ ಕಷ್ಟವಾಗುತ್ತಿದ್ದರೂ, ಇದು ನಮಗೆ ಹೊಸ ಆತ್ಮನಿರ್ಭರದ ದಾರಿ ತೋರಿಸಲು ಕಾರಣವಾಗಬಹುದೇ ಎಂಬ ಯೋಚನೆ ಬರುತ್ತಿದೆ. ಕೊರೋನಾ ಕಾಲದಲ್ಲಿ ನಾವು ಸಾಕಷ್ಟು ಹೊಸ ಸಂಗತಿಗಳನ್ನು ರೂಢಿಸಿಕೊಂಡಿದ್ದೇವೆ. ಏನೇನೊ ಹೊಸ ಮಾರ್ಗ ಕಂಡುಕೊಂಡಿದ್ದೇವೆ. ಈಗ ಅಡುಗೆ ಅನಿಲಕ್ಕಾಗಿ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಮೂಲಕ ನಾವು ಆತ್ಮನಿರ್ಭರ ಮನೆಯಾಗುವತ್ತ ಗಮನಹರಿಸಲು ಸಕಾಲವೇನೊ.

ಹತ್ತಿಪ್ಪತ್ತು–ಮೂವತ್ತು ವರ್ಷ ಹಿಂದಿನ ತಂತ್ರಜ್ಞಾನಕ್ಕೆ ಹೋಲಿಸಿದರೆ ಈಗ ತುಂಬಾ ಬದಲಾವಣೆಗಳಾಗಿವೆ. ಆಗ ಗೋಬರ್ ಗ್ಯಾಸ್ ಪ್ಲ್ಯಾಂಟ್ ಮಾಡಬೇಕೆಂದರೆ ತುಂಬಾ ಜಾಗ ಬೇಕಿತ್ತು. ಕೆಲಸವೂ ಅಷ್ಟೇ ಇತ್ತು. ಆದರೆ ಈಗ ಬದಲಾದ ತಂತ್ರಜ್ಞಾನದ ಸಹಾಯದಿಂದ ಸಣ್ಣ ಸಣ್ಣ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮಾಡಲು ಸಾಧ್ಯವಿದೆ. ಗೋಬರ್ ಗ್ಯಾಸ್ ಅಷ್ಟೇ ಅಲ್ಲ, ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ನಾವೇ ನಮ್ಮ ಮನೆಗಳಲ್ಲಿ ನಿರ್ಮಿಸಿಕೊಳ್ಳಲು ಸಾಧ್ಯವಿದೆ. ನಗರ ಪ್ರದೇಶದಲ್ಲಿ ದಿನವೂ ಸಾವಿರಾರು ಟನ್ ಕಸ ಸೃಷ್ಟಿಯಾಗುತ್ತದೆ. ನಾವೇ ನಮ್ಮ ಮನೆಗಳಲ್ಲಿ ದಿನವೂ ಒಣಕಸ ಮತ್ತು ಹಸಿ ಕಸ ಬೇರ್ಪಡಿಸಿ, ಸ್ಥಳೀಯ ಸಂಸ್ಥೆಯ ಕಸ ಸಂಗ್ರಾಹಕರಿಗೆ ನೀಡುತ್ತೇವೆ. ಅಷ್ಟೆಲ್ಲ ಕಸವನ್ನು ಇಟ್ಟುಕೊಂಡು ಸ್ಥಳೀಯ ಸಂಸ್ಥೆಗಳೇ ಬಯೋ ಗ್ಯಾಸ್ ಪ್ಲ್ಯಾಂಟ್ ತಯಾರಿಸಿ, ಅದನ್ನು ಅಗತ್ಯ ಇರುವ ಹೊಟೆಲ್‌ಗಳಿಗೆ ಅಥವಾ ಸಮೀಪದ ಮನೆಗಳಿಗೆ ಪೈಪ್ ಮೂಲಕ ಪೂರೈಕೆ ಮಾಡಬಹುದೇನೊ, ಅದು ದೊಡ್ಡ ಯೋಜನೆಗಳಾದವು. ಈಗ ಕನಿಷ್ಠ 20,000 ರೂಪಾಯಿಯಿಂದ ಒಂದು ಲಕ್ಷದ ಒಳಗೆ ಮನೆ, ತೋಟದ ಮನೆಗಳಿಗೆ ಅಗತ್ಯವಿರುವಷ್ಟು ಗಾತ್ರದ ಸಿದ್ಧವಿರುವ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳು ಲಭ್ಯವಿದೆ. ಅಮೆಜಾನ್‌ನಂತಹ ತಾಣಗಳಲ್ಲೂ ಸಿಗುತ್ತಿವೆ. ಇವುಗಳನ್ನು ಬಳಸಿ ನಮ್ಮ ನಮ್ಮ ಮನೆಯ ಹಸಿ ಕಸ ಜತೆಗೆ ಇದಕ್ಕೆ ಬಳಕೆಯಾಗಬಲ್ಲ ಒಣಕಸವನ್ನು ಬಳಸಿ, ನಾವೇ ನಮ್ಮ ಮನೆಗೆ ಬೇಕಾಗುವಷ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳಲು ಸಾಧ್ಯವಿದೆ. ಅದಕ್ಕೆ ಗುಂಡಿ ತೋಡಿ ಮುಚ್ಚಬೇಕಾದ ಅಗತ್ಯ ಕೂಡ ಈಗ ಇಲ್ಲ, ಕಸದಬುಟ್ಟಿ ಇಟ್ಟಂತೆ ಇಟ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳುವ ಟ್ಯಾಂಕ್‌ಗಳು ಕೂಡ ಬಂದಿವೆ.

> ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ.

ಯಾವ್ಯಾವುದನ್ನೋ ಉಚಿತವಾಗಿ ಕೊಡುವ ಸರ್ಕಾರ, ಗ್ಯಾಸ್ ಸಿಲಿಂಡರಿಗೆ ಸಬ್ಸಿಡಿ ಕೊಡುವ ಸರ್ಕಾರ, ಈ ರೀತಿಯ ಸಣ್ಣ ಸಣ್ಣ ಮನೆ ಬಳಕೆಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಹಾಕಿಕೊಳ್ಳಲು ಜನರಿಗೆ ಪ್ರೋತ್ಸಾಹ ನೀಡಬಹುದು. ಈಗ ಗ್ಯಾಸ್ ಸಿಗುತ್ತಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ, ಅದರಲ್ಲಿ ಹೇಗೆ ಲಾಭ ಮಾಡಿಕೊಳ್ಳಬಹುದು ಎಂದು ಪ್ರಯತ್ನಿಸುವ ಬದಲು, ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಗ್ಯಾಸ್ ಕೊರತೆ ಆಗದ ಹಾಗೆ ನಾವೇನು ಮಾಡಬಹುದು ಎಂದು ಯಾಕೆ ಯೋಚಿಸಬಾರದು?

ವಿಶೇಷವಾಗಿ ನಗರದಿಂದ ಹೊರಗೆ ಇರುವ ಹೊಟೆಲ್‌ಗಳಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಬಯೋ ಗ್ಯಾಸ್ ಪ್ಲ್ಯಾಂಟ್ ಹಾಕಿಕೊಳ್ಳಬಹುದು. ಹೊಟೆಲ್‌ಗಳಲ್ಲಂತೂ ಹಸಿ ಕಸ, ಆಹಾರ ತ್ಯಾಜ್ಯ ವಿಪರೀತವಾಗಿರುತ್ತದೆ. ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಗೆ ದುಡ್ಡು ಕೊಡುವ ಬದಲು, ಅದೇ ಹಣದಲ್ಲಿ ಬಯೋಗ್ಯಾಸ್ ಪ್ಲ್ಯಾಂಟ್ ನಿರ್ಮಿಸಿಕೊಂಡು, ಆ ಮೂಲಕ ಗ್ಯಾಸ್ ಕರ್ಚನ್ನು ಉಳಿಸಲು ಸಾಧ್ಯವಿದೆ. ಅಂತಹ ಕೆಲಸಕ್ಕೆ ಸರ್ಕಾರವೂ ಪ್ರೋತ್ಸಾಹ ನೀಡಿದರೆ, ಆಗ ಸಹಜವಾಗಿ ಉದ್ಯಮಿಗಳು ಅದನ್ನು ಬೇಗ ಅಳವಡಿಸಿಕೊಳ್ಳುತ್ತಾರೆ.

ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ. ಸಂಪೂರ್ಣ ಬಯೋ ಗ್ಯಾಸ್‌ನಿಂದಲೇ ನಮ್ಮ ಜೀವನ ನಡೆಯದೇ ಇರಬಹುದು. ಆದರೆ ಸಿಲಿಂಡರ್ ಮೇಲಿನ ಅವಲಂಬನೆಯನ್ನು ಅರ್ಧದಷ್ಟು ಕಡಿಮೆ ಮಾಡಲು ಖಂಡಿತ ಸಾಧ್ಯವಿದೆ. ದೇಶಾದ್ಯಂತ ಅರ್ಧದಷ್ಟು ಸಿಲಿಂಡರ್ ಬಳಕೆ ಕಡಿಮೆಯಾದರೆ ನಾವು–ನಮ್ಮ ದೇಶ ಅದೆಷ್ಟು ಆತ್ಮನಿರ್ಭರವಾಗಬಹುದು ನೀವೇ ಯೋಚಿಸಿ.

ಭಾಷೆ–ಅಂಕಗಳ ತೂಗುಯ್ಯಾಲೆ

• ಡಾ. ಮೈತ್ರಿ ಭಟ್, ವಿಟ್ಲ



> ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ.

ಒಂದು ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿದ್ದರೂ ಭವಿಷ್ಯವನ್ನು ನಿರ್ಧರಿಸುವುದು ಶಿಕ್ಷಣ ಕ್ಷೇತ್ರವೇ ಆಗಿದೆ. ಈ ಶಿಕ್ಷಣದ ತಳಹದಿ ಭಾಷೆಯೇ ಆಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ವಿದ್ಯಾರ್ಥಿಗಳಿಗೆ ಕಲಿಕೆಗೆ ಸಹಕಾರಿ ಎಂದೂ ಹೇಳಲಾಗಿದೆ. ಮಾತ್ರವಲ್ಲ, ಯಾವ ಸರಕಾರವು ಶಿಕ್ಷಣಕ್ಕೆ ಒತ್ತು ನೀಡುವುದೋ ಆಗ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎಂದೇ ಭಾವಿಸಲಾಗಿದೆ. ಹೀಗಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಭವಿಷ್ಯ ನಿರ್ಧಾರಕಗಳು ಆಗಿರುವುದನ್ನು ಮನಗಂಡು ಯಾರೇ ಆಗಲಿ, ಯಾವ ಸರಕಾರವೇ ಆಗಲಿ ಯಾವುದೇ ಬದಲಾವಣೆ ಮಾಡುವ ಮೊದಲು ವಿವಿಧ ಮಗ್ಗುಲುಗಳಲ್ಲಿ, ಹತ್ತಾರು ಆಯಾಮದಲ್ಲಿ ಆಲೋಚಿಸದೇ ಮುಂದುವರಿಯುವುದು ಸರಿಯಲ್ಲ. ಆದರೆ ಅದೇಕೋ ನಮ್ಮ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯು ತರಾತುರಿಯಲ್ಲಿ ಎಸ್ ಎಸ್‌ಎಲ್‌ಸಿ ಪರೀಕ್ಷೆ ಆರಂಭವಾದ ಮೇಲೆ ಎಂಬಂತೆ ತೆಗೆದುಕೊಂಡ ತೀರ್ಮಾನವೊಂದು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನೇ ಗೊಂದಲಕ್ಕೀಡು ಮಾಡಿದೆ. ಇಲ್ಲಿ ಅಧ್ಯಾಪಕರ ಆತಂಕ ಒಂದು ಬಗೆಯದಾದರೆ, ವಿದ್ಯಾರ್ಥಿಗಳ ಆತಂಕ ಮತ್ತೊಂದು ಬಗೆಯದು.

ಈಗಾಗಲೇ ಶಿಕ್ಷಣ ಇಲಾಖೆಯು ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿಕೆ ನೀಡಿದ ಕುರಿತ ಪರ–ವಿರೋಧದ ಚರ್ಚೆ ಮುಗಿಯುವ ಮೊದಲೇ, ತರಾತುರಿಯಲ್ಲಿ ಎಂಬಂತೆ ತುರ್ತು ಸುದ್ದಿಗೋಷ್ಠಿ ಕರೆದ ಶಿಕ್ಷಣ ಸಚಿವರು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತೃತೀಯ ಭಾಷೆಗೆ ಅಂಕವನ್ನು ನೀಡುವ ಬದಲು ಗ್ರೇಡಿಂಗ್ ನೀಡಲಾಗುವುದು ಎಂದು ಹೇಳಿದರು. ವಿದ್ಯಾರ್ಥಿಗಳ ಮೇಲಿನ ಒತ್ತಡದ ಹೊರೆಯನ್ನು ತಗ್ಗಿಸುವ ಹಾಗೂ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ತಡೆಯುವ ಉದ್ದೇಶದಿಂದ ಎಂಬಂತೆ ಅವರು ನೀಡಿದ ಈ ಹೇಳಿಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಚಡಪಡಿಕೆ ಉಂಟುಮಾಡಿದೆ.

ನಮ್ಮ ಸರಕಾರ ಮತ್ತು ಶಿಕ್ಷಣ ಇಲಾಖೆ ಅದೇಕೆ ಇಂತಹ ಆತುರದ ನಿರ್ಧಾರ ತೆಗೆದುಕೊಳ್ಳಲು ಮುಂದಾಗುವುದೋ ಅರ್ಥವಾಗದ್ದು. ವಿದ್ಯಾರ್ಥಿಗಳ ಭವಿಷ್ಯ, ಶಿಕ್ಷಣ ಎರಡೂ ಮುಖ್ಯ. ಅದನ್ನೇ ಅಡಕತ್ತರಿಯಲ್ಲಿ ಇಟ್ಟಂತೆ ಮಾಡುವುದು ತರವಲ್ಲ. ಅಷ್ಟಕ್ಕೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಏನಾದರೂ ನಿರ್ಧಾರ ತೆಗೆದುಕೊಳ್ಳಲೇಬೇಕು ಎಂದಿದ್ದರೆ ಆ ನಿರ್ಧಾರಗಳನ್ನು ಆಯಾ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ತೆಗೆದುಕೊಳ್ಳುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೂಕ್ತವಾದುದು.

ಭಾಷೆ ಎಂಬುದು ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಕಲಿಯುವಿಕೆ ಮತ್ತು ಕಲಿಸುವಿಕೆಯ ಮೂಲಕ ಭಾಷೆಯು ಸಂಸ್ಕೃತಿಯಾಗಿ ಪಸರಿಸುತ್ತದೆ. ಮನೆಯಲ್ಲಿ ಪೋಷಕರ ಮೂಲಕ ತಮ್ಮ ಭಾವನೆಗಳನ್ನು, ಬಯಕೆಗಳನ್ನು ಮೂಲ ಅವಶ್ಯಕತೆಯ ಹಂಚಿಕೆಯ ಕಾರಣಕ್ಕಾಗಿ ಮಕ್ಕಳು ಭಾಷೆಯನ್ನು ಕಲಿತರೆ, ಶಾಲೆಯಲ್ಲಿ ಅದು ಔಪಚಾರಿಕ ಶಿಕ್ಷಣದ ರೂಪದಲ್ಲಿ ತೆರೆದುಕೊಳ್ಳುತ್ತದೆ.

ಹೀಗಿರುವಾಗ ಸರಕಾರದ ನಿರ್ಧಾರದ ಜೊತೆಗೆ ಕನ್ನಡಪರ ಸಂಘಟನೆಗಳೂ ಕೂಡಾ 'ಹಿಂದಿ ಹೇರಿಕೆ ಸಲ್ಲದು' ಎನ್ನುತ್ತಿದ್ದಾರೆ. ಜೊತೆಗೆ ಇದು ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆಯನ್ನು ತಗ್ಗಿಸಲಿದೆ ಎನ್ನುತ್ತಿದ್ದಾರೆ. ಒಂದೆಡೆ ಸರಕಾರದ ನಿಲುವಿನ ಬಗೆಗೆ ಚರ್ಚೆಗಳಾಗುತ್ತಿದ್ದರೆ ಮತ್ತೊಂದೆಡೆ ಈ ನಿರ್ಧಾರ ತೆಗೆದುಕೊಂಡ ಸಮಯದ ಬಗೆಗೂ ಮಾತುಗಳು ಕೇಳಿ ಬರುತ್ತಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಪರೀಕ್ಷಾ ವೇಳಾಪಟ್ಟಿ ಘೋಷಣೆಗೂ ಮುನ್ನ ನಿರ್ಧಾರ ತೆಗೆದುಕೊಳ್ಳದೆ ಈ ತುರ್ತಿನ ನಿರ್ಧಾರ ಏಕೆ ಎಂಬುದು ನಿಜಕ್ಕೂ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಆಸಕ್ತಿ ಇದ್ದವರಿಗೆ ಭಾಷೆ ಕಲಿಯುವುದು ಕಷ್ಟವೇನಲ್ಲ. ಅವರು ಹೇಗಾದರೂ ಕಲಿಯುತ್ತಾರೆ. ಅದಕ್ಕೆ ಶಾಲಾ ಶಿಕ್ಷಣದ ಚೌಕಟ್ಟು ಬೇಕಿಲ್ಲ. ಏನೇ ಆದರೂ ಸರಕಾರ ಇನ್ನು ಹದಿನೈದು ದಿನ ಕಾದಿದ್ದರೆ ಪರೀಕ್ಷೆ ಮುಗಿದು ಹೋಗುತ್ತಿತ್ತು. ಈ ಸಲದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹೇಗಿದ್ದರೂ ಈಗಾಗಲೇ ಪರೀಕ್ಷಾ ತಯಾರಿ ನಡೆಸಿ ಆಗಿತ್ತು. ಆದುದರಿಂದ ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನ ತೆಗೆದುಕೊಂಡರೂ ಸಾಕಿತ್ತು.

ಇದರ ನಡುವೆ ಸರಕಾರ ಹಾಗೂ ಕನ್ನಡಪರ ಹೋರಾಟಗಾರರು ಯೋಚಿಸದೇ ಬಿಟ್ಟಿರುವ ಆಯಾಮವೊಂದಿದೆ. ಕರ್ನಾಟಕದಲ್ಲಿ ಸಾವಿರಾರು ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕನ್ನಡವನ್ನೂ ಕಲಿಯುತ್ತಿದ್ದಾರೆ! ಹಾಗಾಗಿ ಈ ನಿರ್ಧಾರವು ಇದು ಕನ್ನಡದ ಬೆಳವಣಿಗೆಗೂ ಕೊಡಲಿ ಏಟು ಕೊಟ್ಟಂತೆ ಅಲ್ಲವೇ?

ಆರೋಗ್ಯ, ಹಾಗೂ ಶಿಕ್ಷಣವು ದೇಶದ ಆಧಾರ ಸ್ತಂಭಗಳಿದ್ದಂತೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಎಷ್ಟು ಎಚ್ಚರ ತೆಗೆದುಕೊಂಡರೂ ಸಾಲದು. ಹೀಗಿರುವಾಗ ಸಂಪುಟ ಸಭೆಯಲ್ಲಿ ಚರ್ಚಿಸಿ, ತಜ್ಞರ ಅಭಿಪ್ರಾಯ ಪಡೆದು, ಸರಿಯಾಗಿ ವಿಮರ್ಶೆ–ವಿಶ್ಲೇಷಣೆ ನಡೆಸಿ, ಅಧ್ಯಯನಗಳ ಆಧಾರದಲ್ಲಿ ತೆಗೆದುಕೊಳ್ಳಬೇಕಾಗಿದ್ದ ತೀರ್ಮಾನ ಹೀಗೆ ಗೊಂದಲದ ಗೂಡಂತೆ ಹೊರಬರಬೇಕಿತ್ತೇ?

ಈಗಾಗಲೇ ಬಿಜೆಪಿ ಸರಕಾರ ಜಾರಿಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಬೇಡ ಎಂದು ರಾಜ್ಯ ಶಿಕ್ಷಣ ನೀತಿ ಅನುಸರಿಸಲಾಗುತ್ತಿದೆ. ಒಂದನೇ ತರಗತಿಗೆ ಸೇರ್ಪಡೆಗೆ 6 ವರ್ಷಗಳಾಗಿರಬೇಕು ಎಂಬ ನೀತಿಯಲ್ಲಿ ಈ ವರ್ಷ ಮತ್ತೆ ಸಡಿಲಿಕೆ ಮಾಡಲಾಗಿದೆ. ಎತ್ತ ಸಾಗುತ್ತಿದೆ ನಮ್ಮ ಮಕ್ಕಳ, ವಿದ್ಯಾರ್ಥಿಗಳ ಭವಿಷ್ಯ? ಅಧಿಕಾರಕ್ಕೆ ಬಂದ ಪಕ್ಷಕ್ಕೆ ಸ್ವಪ್ರತಿಷ್ಠೆ ಮುಖ್ಯವೇ ಅಥವಾ ದೇಶದ ಯುವ ಸಂಪತ್ತಿನ ಭವಿಷ್ಯ ಮುಖ್ಯವೇ?

ಒಟ್ಟಿನಲ್ಲಿ ಸರಕಾರ ಅಂಕಗಳಿಗೆ ಸಂಬಂಧಿಸಿ ನಿರ್ಧಾರ ತೆಗೆದುಕೊಂಡರೂ ಭಾಷೆಯ ಕುರಿತಾಗಿ ನಾವೂ ಯೋಚಿಸಬೇಕಿದೆ. ಭಾಷೆ ಯಾವುದೇ ಇರಲಿ, ಅದರ ಪ್ರಭಾವಶಾಲಿ ಚಲನೆ ಸಾಧ್ಯವಾಗುವುದು ಮಾಧ್ಯಮಗಳು ಹಾಗೂ ಶಿಕ್ಷಣದಲ್ಲಿ. ಹೀಗಿರುವಾಗ ಈ ಹೊಸ ಆತುರದ ನಿರ್ಧಾರ ಭಾಷೆಯ ಬಗೆಗೆ ಹೊಸ ಗೊಂದಲವೊಂದನ್ನು ಹುಟ್ಟುಹಾಕಿದೆ. ಈ ವಿಚಾರವನ್ನು ಪರಿಹರಿಸುವ ಸಂದರ್ಭದಲ್ಲಿ ನಮ್ಮನ್ನು ನಾವು ವಿಮರ್ಶೆಗೊಳಪಡಿಸಬೇಕಾಗಿದೆ. ನಮಗೆ ಮಾದರಿಯಾಗಬೇಕಾಗಿರುವುದು ಯಾರು ಎಂಬುದನ್ನು ಯೋಚಿಸಬೇಕಾಗಿದೆ.

ಮಕ್ಕಳಲ್ಲಿ ಕನ್ನಡ ಭಾಷಾ ಅಭಿಮಾನ, ಪ್ರೀತಿ ಬೆಳೆಸುವಲ್ಲಿ ನಾವು ಸೋತಿದ್ದೇವೆ. ಹಾಗಿದ್ದರೆ ಈಗ ನಾವು ಮಾಡಬೇಕಾಗಿರುವುದಾದರೂ ಏನು? ಮೊದಲಿಗೆ ನಮ್ಮ ಮಕ್ಕಳಿಗೆ ನಾವು ಕನ್ನಡವನ್ನು ಕಲಿಸೋಣ. ಮಕ್ಕಳಲ್ಲಿ, ಹೆತ್ತವರಲ್ಲಿ ನಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಒಲವು, ಗೌರವವನ್ನು ಮೂಡಿಸೋಣ. ಆ ಮೂಲಕ ಯಾರೇ ಆಗಲಿ ಕನ್ನಡವನ್ನು ಮನದುಂಬಿ ಕಲಿಯುವಂತೆ ಮಾಡೋಣ. ಅವರವರನ್ನು ಅವರವರದೇ ಭಾಷೆಯಲ್ಲಿ ಮಾತನಾಡಿಸುವ ನಮ್ಮ ಉದಾರತೆಯನ್ನು ಇನ್ನಾದರೂ ತೊರೆಯೋಣ. ಆ ಮೂಲಕ ಕನ್ನಡ ಭಾಷೆ ಬೆಳೆಸೋಣ. ನಮ್ಮ ನಾಡು–ನುಡಿಯ ಬಗೆಗಿನ ಗೌರವವನ್ನು ವ್ಯಕ್ತಪಡಿಸುವುದು ಹೇಗೆ ಎಂಬುದನ್ನು ಅರಿಯೋಣ. ಏಕೆಂದರೆ ಬೇರೆಯವರು ನಮ್ಮ ನಾಡು–ನುಡಿಯ ಬಗ್ಗೆ ಗೌರವವನ್ನು ಸೂಚಿಸುತ್ತಿಲ್ಲ ಎಂದಾದಲ್ಲಿ ಅದರ ಹಿಂದಿನ ಕಾರಣೀಭೂತರೂ ನಾವೇ ಆಗಿದ್ದೇವೆ. ಹಾಗೆಂದು ಕಡ್ಡಾಯಗೊಳಿಸುವ ಮೂಲಕ ಕಲಿಸುತ್ತೇವೆ ಅಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ಅಲ್ಲಿ ಭಾಷೆಯ ಬಗೆಗೆ ಯಾವುದೇ ರೀತಿಯ ಅಭಿಮಾನವಾಗಲೀ ಪ್ರೀತಿಯಾಗಲೀ ಇರಲಾರದು.

ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ. ಬಲವಂತದ ಹೇರಿಕೆ ಎಂದಿದ್ದರೂ ಅಪಾಯಕಾರಿಯೇ. ಒಂದು ಪ್ರದೇಶದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ಜೊತೆಗಿದ್ದಾಗ ಸೌಹಾರ್ದಯುತ ಜೀವನವನ್ನು ನಡೆಸಲು ಸ್ಥಳೀಯ ಭಾಷೆಯನ್ನು ಕಲಿಯುವುದು ಅನುಕೂಲಕರ. ಆದರೆ ಕಲಿಯಬೇಕೇ ಬೇಡವೇ ಅನ್ನುವುದು ವೈಯಕ್ತಿಕ ವಿಚಾರ.

ನಾವಿಂದು ಯೋಚಿಸಬೇಕಾಗಿರುವುದು ಕೇವಲ ಸರಕಾರದ ನೀತಿ ನಿರ್ಧಾರಗಳ ಬಗೆಗೆ ಮಾತ್ರವಲ್ಲ, ನಮ್ಮ ಭಾಷೆಯ ಬಗೆಗೂ ಆಗಿದೆ. ವ್ಯಕ್ತಿ ಬಹುಭಾಷೆ ಕಲಿಯುವುದು ಭವಿಷ್ಯಕ್ಕೆ ಪೂರಕ. ಅಂತಾರಾಷ್ಟ್ರೀಯ ಭಾಷೆ ಎಂದು ಇಂಗ್ಲಿಷ್ ಅನ್ನು ಪುರಸ್ಕರಿಸುವ ನಮಗೆ ಉಳಿದ ಭಾಷೆಗಳು ಮಾತ್ರ ಕಿರಿಕಿರಿ ಉಂಟು ಮಾಡುತ್ತಿರುವುದು ಆಭಾಸಕರ. 'ಇಂಗ್ಲಿಷ್ ಬಲ್ಲವ ಮಾತ್ರ ಜಾಣ' ಎಂಬ ಭಾವ ಮನದೊಳಗಿದೆ. ಕಾರಣ– ನಮ್ಮ ನಾಡು–ನುಡಿಯ ಹಿರಿಮೆಯನ್ನು ತೋರಿಸುವ ಪ್ರಜ್ಞೆ, ಕೌಶಲ್ಯ, ಕ್ಷಮತೆಯ ಕೊರತೆಯು ನಮ್ಮಲ್ಲಿದೆ. ಅಂದರೆ ಸೃಜನಶೀಲ ನಿರ್ವಹಣೆಯ ಕೊರತೆ ನಮ್ಮದು. ಅದನ್ನು ಕೊನೆಗಾಣಿಸಿ ನಮ್ಮ ಸಂಸ್ಕೃತಿಯ ವಿಶಿಷ್ಟತೆಯನ್ನು ಮನಗಾಣಿಸಬೇಕಿದೆ; ಸಾಹಿತ್ಯದ ಬಗ್ಗೆ ಪ್ರೇರೇಪಿಸಿ, ಅಭಿಮಾನ ಬೆಳೆಸಬೇಕಿದೆ. ನಮ್ಮ ಸಂಸ್ಕೃತಿಯನ್ನು ನಾವೇ ಸರಿಯಾಗಿ ಬಿಂಬಿಸದೆ ಇತರರು ಆದರಿಸುತ್ತಿಲ್ಲ, ಗೌರವಿಸುತ್ತಿಲ್ಲ ಎಂದು ಅತ್ತರೇನು ಫಲವಿಲ್ಲ. ಆದುದರಿಂದ ಪ್ರತಿಭಟನೆ, ಕಡ್ಡಾಯಗೊಳಿಸುವಿಕೆಗಳ ಬದಲಾಗಿ ನಮ್ಮ ಸಂಸ್ಕೃತಿ, ಭಾಷೆಯನ್ನು ಉತ್ತಮವಾಗಿ ಬಿಂಬಿಸುವ ಸಕಾರಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಬೇಕಾಗಿದೆ.

ಭಜನ, ಯುವಜನ ಮತ್ತು ಸಮಾಜ ಪ್ರಬೋಧನ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



> ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ, ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ಎಂಬ ಭಾಗವತದ ಉಕ್ತಿಯಂತೆ ಒಂಬತ್ತು ವಿಧದ ಭಕ್ತಿಗಳಲ್ಲಿ ಕೀರ್ತನೆಯೂ ಕೂಡ ಒಂದು. ಕೀರ್ತನವೆಂದರೆ ನಾಮಸ್ಮರಣೆ ಅಥವಾ ಭಗವಂತನ ಮಾಹಾತ್ಮ್ಯದ ವರ್ಣನೆ. ಇದು ಭಜನ, ಕೀರ್ತನ, ನಾಮಸ್ಮರಣೆ, ಜಪ, ಸ್ತೋತ್ರ ಮೊದಲಾದ ಆಯಾಮಗಳಲ್ಲಿ ಪ್ರಕಟವಾಗುತ್ತದೆ. ಭಜನವು ಅತ್ಯಂತ ಪ್ರಾಚೀನಕಾಲದಿಂದಲೂ ಭಗವದ್ಭಕ್ತಿಯ ಅಭಿವ್ಯಕ್ತಿಯ ಸಾಧನವಾಗಿದೆ. ಭಜನದ ಮೂಲಕ ಮನಸ್ಸು ಪರಮಾತ್ಮನಲ್ಲಿ ನೆಲೆಯಾಗಲು ಸಹಾಯಕವಾಗಿದೆ. ಭಜ ಸೇವಾಯಾಂ ಎಂಬ ಧಾತುವಿನಿಂದ ನಿಷ್ಪನ್ನಗೊಂಡ ಭಜನವೆಂಬ ಶಬ್ದವು ಸೇವೆಯೆಂಬ ಅರ್ಥವನ್ನು ಹೊಂದಿದೆ. ಪರಮಾತ್ಮನ ಮಾನಸವಾದ ಸೇವೆಯ ರೂಪದಲ್ಲಿ ಭಜನೆಯು ನಮ್ಮ ಮತ್ತು ಪರಮಾತ್ಮನ ನಡುವಿನ ಸೇತುವೆಯೇ ಆಗಿದೆ. ಭಜನೆಗೆ ಪ್ರಾಚೀನ ಕಾಲದ ಇತಿಹಾಸವಿದೆ. ಉಪನಿಷತ್ತಿನಲ್ಲಿಯೇ ನಾಮಸ್ಮರಣೆಯ ಬಗ್ಗೆ ಉಲ್ಲೇಖವಿದೆ. ಕಲಿಸಂತರಣೋಪನಿಷತ್ ಮೊದಲಾದವುಗಳಲ್ಲಿ ನಾಮಜಪದ ಬಗೆಗೆ ಉಲ್ಲೇಖಗಳಿವೆ. ನಾಮಸ್ಮರಣೆಯನ್ನು ಗಾಯನದ ಮೂಲಕ ಮಾಡಿದಾಗ ಅದು ಭಜನೆ ಎನಿಸಿಕೊಳ್ಳುತ್ತದೆ. ಇದು ಭಗವದ್ಭಕ್ತಿಯ ಅಭಿವ್ಯಕ್ತಿಗೆ ಅತ್ಯುತ್ತಮವಾದ ಸಾಧನವಾಗಿದೆ.

ಭಜನೆಯಲ್ಲಿ ಭಗವಂತನ ರೂಪದ, ಆತನ ಐಶ್ವರ್ಯದ ಮತ್ತು ಚರಿತೆಯ ವರ್ಣನೆಯನ್ನು ಮತ್ತು ಸ್ತುತಿಯನ್ನು ಮಾಡಲಾಗುತ್ತದೆ. ಆ ಮೂಲಕ ದೀರ್ಘಕಾಲ ಮನಸ್ಸು ಒಂದೇ ವಿಷಯದಲ್ಲಿ ನಿಲ್ಲುವಂತೆ ಮಾಡುತ್ತದೆ. ರಾಮಾಯಣದಲ್ಲಿ ಲವಕುಶರು ಶ್ರೀರಾಮನ ಚರಿತ್ರೆಯನ್ನು ಹಾಡುತ್ತಾ ಅಯೋಧ್ಯೆಗೆ ಬರುವ ಪ್ರಸಂಗವಿದೆ. ಈ ರೀತಿಯಲ್ಲಿ ಭಗವಂತನ ವಿಭೂತಿಯನ್ನು ಸ್ಮರಿಸಿಕೊಳ್ಳುತ್ತಾ, ತನ್ನ ಚಿತ್ತವನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಇದೊಂದು ಸಮರ್ಥವಾದ ಮಾಧ್ಯಮವಾಗಿದೆ. ಒಂದೇ ನಾಮವನ್ನು ಅಥವಾ ವಾಕ್ಯವನ್ನು ಮತ್ತೆ ಮತ್ತೆ ಉಚ್ಚರಿಸುವುದರಿಂದ ಸಮಾನವಿಷಯಕವಾದ ಮನೋವೃತ್ತಿಯುಂಟಾಗುತ್ತದೆ. ಇದು ಮನಸ್ಸಿನಲ್ಲಿ ಉಂಟಾಗುವ ಉಳಿದೆಲ್ಲ ಆಲೋಚನಾತ್ಮಕವಾದ ವೃತ್ತಿಗಳನ್ನು ನಿರೋಧಿಸುವ ಮೂಲಕ ಧ್ಯಾನಸ್ಥಿತಿಗೆ ಕೊಂಡೊಯ್ಯುತ್ತದೆ. ಹಾಗಾಗಿ ಸಾಮಾನ್ಯರಿಂದ ಸಾಧಕರವರೆಗೆ ಮನಸ್ಸಿನ ನಿಗ್ರಹದ ಜೊತೆಗೆ ಅದರ ಏಕಾಗ್ರತೆಯನ್ನು ಸಾಧಿಸಲು ಪ್ರಭಾವಕಾರಿಯಾದ ಸಾಧನವಾಗಿದೆ. ಭಜನೆಯು ಮನಸ್ಸಿನಲ್ಲಿ ಸಕಾರಾತ್ಮಕವಾದ ತರಂಗವನ್ನು ಉಂಟುಮಾಡುವ ಮೂಲಕ ಶಾಂತಿಯನ್ನೂ, ಹೊಸ ಉತ್ಸಾಹವನ್ನೂ, ಪ್ರೇರಣೆಯನ್ನೂ ಒದಗಿಸುತ್ತದೆ.

ನಾವು ಸಣ್ಣ ವಯಸ್ಸಿನಲ್ಲಿದ್ದಾಗ ಅವಿಭಕ್ತಕುಟುಂಬದ ಎಲ್ಲ ಹಿರಿಯರು ಕಿರಿಯರೊಂದಿಗೆ ಸಾಯಂಕಾಲದಲ್ಲಿ ದೇವರ ಎದುರು ಕೂತು ಭಜನೆಯನ್ನು ಮಾಡುವ ಸಂಪ್ರದಾಯವಿತ್ತು. ಆಗ ದೂರದರ್ಶನವಾಗಲೀ, ಮೊಬೈಲ್ ಆಗಲೀ ಇಲ್ಲದ ಕಾರಣ ಎಲ್ಲರೂ ಭಜನೆಯನ್ನು ಮಾಡುತ್ತಾ ಭಗವದ್ಭಕ್ತಿಯಲ್ಲಿ ಮುಳುಗುತ್ತಿದ್ದರು. ಈ ಮೂಲಕ ಕುಟುಂಬದ ಎಲ್ಲ ಸದಸ್ಯರೂ ತಮ್ಮ ಹಗಲಿನ ಶ್ರಮವನ್ನೆಲ್ಲ ಮರೆಯುತ್ತಿದ್ದರು. ಜೊತೆಗೆ ಕುಟುಂಬದ ಎಲ್ಲ ಸದಸ್ಯರ ಜೊತೆಗೆ ಸೌಮನಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಭಜನೆಯು ನೆರವಾಗುತ್ತಿತ್ತು. ಗಣೇಶ ಚತುರ್ಥಿ ಮೊದಲಾದ ಹಬ್ಬಗಳ ಸಂದರ್ಭದಲ್ಲಿಯಂತೂ ಊರವರೆಲ್ಲ ಸೇರಿ ಸಾಮೂಹಿಕ ಭಜನೆಯನ್ನು ಮಾಡುತ್ತಿದ್ದರು. ಆ ಮೂಲಕ ಭಜನೆಯು ಊರಿನ ಎಲ್ಲರನ್ನೂ ಒಂದುಗೂಡಿಸುತ್ತಿತ್ತು. ಇಲ್ಲಿ ಎಲ್ಲರೂ ಒಂದೇ ಎಂಬ ಏಕತೆಯ ಭಾವವನ್ನು ಅದು ಉಂಟುಮಾಡುತ್ತಿತ್ತು. ಎಲ್ಲೆಡೆಯೂ ಭಜನಾಮಂಡಳಿಗಳು ಇರುತ್ತಿದ್ದವು. ಹೀಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ತಲುಪಿಸುವ ಮಾಧ್ಯಮವಾಗಿಯೂ, ಕುಟುಂಬದ ಸದಸ್ಯರ ಜೊತೆಗೆ ಇಡೀ ಊರಿನ ಸದಸ್ಯರನ್ನೆಲ್ಲರನ್ನೂ ಒಂದಾಗಿಸುವ ಮತ್ತು ಏಕತೆಯನ್ನು, ಸೌಹಾರ್ದವನ್ನು ಬೆಳೆಸುವ ಮಾಧ್ಯಮವೂ ಆಗಿತ್ತು.

ಇಂದಿನ ವೇಗದ ಜೀವನದಲ್ಲಿ ನಾವೆಲ್ಲ ತಂತ್ರಜ್ಞಾನ ಮತ್ತು ಮಾಹಿತಿಯ ಪ್ರವಾಹದ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಸಾಮಾಜಿಕ ಜಾಲತಾಣಗಳು, ನಿರಂತರ ಸ್ಪರ್ಧೆ, ಜೀವನದ ಒತ್ತಡಗಳು–ಇವುಗಳ ಪರಿಣಾಮವಾಗಿ ಮನಸ್ಸಿನ ಶಾಂತಿ ಕುಂದುತ್ತಿದೆ. ಇಂದಿನ ಯುವಸಮುದಾಯ ಅತಿ ಹೆಚ್ಚು ಶಾಂತಿಯನ್ನು ಅರಸುತ್ತಿದೆ. ಚಿಕ್ಕ ವಯಸ್ಸಿನಲ್ಲಿಯೇ ಯುವಕರು ಅನೇಕ ವಿಧದ ಮಾನಸಿಕ ಒತ್ತಡಗಳಿಗೆ ಸಿಲುಕುತ್ತಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಧರಿಸುವಲ್ಲಿ ಹೆಚ್ಚು ಎಡವುತ್ತಿದ್ದಾರೆ. ಅದಕ್ಕೆ ಕಾರಣ ಲೋಕದ ಆಕರ್ಷಣೆಯೇ ಆಗಿದೆ. ಉದ್ಯೋಗವನ್ನು ಹಿಡಿದು ಹಣದ ಸಂಪಾದನೆಯನ್ನು ಮಾಡಿ, ಅದನ್ನು ನಾನಾವಿಧದಲ್ಲಿ ವ್ಯಯಿಸುವುದೇ ಆನಂದದ ಮೂಲ



ಎಂಬ ಭ್ರಾಂತಿಗೆ ಎಲ್ಲರೂ ಒಳಗಾಗಿದ್ದಾರೆ. ಹಾಗಾಗಿ ಹೆಚ್ಚು ಹೆಚ್ಚು ಸಂಪಾದಿಸುವುದೇ ಮುಖ್ಯ ಎಂಬಂತಾಗಿದೆ. ಈ ನಡುವೆ ಅಗಾಧವಾದ ಒತ್ತಡ ಹಾಗೂ ಮಾನಸಿಕ ಅಶಾಂತಿಗೆ ಎಲ್ಲರೂ ಈಡಾಗುತ್ತಿದ್ದಾರೆ. ಎರಡು ನಿಮಿಷ ಕೂತು ಸುಧಾರಿಸಿಕೊಳ್ಳುವಷ್ಟು ಕೂಡ ಯಾರಿಗೂ ವ್ಯವಧಾನವಿಲ್ಲ, ತಾಳ್ಮೆಯನ್ನು ಅಕ್ಷರಶಃ ಕೆಡಿಸಿಕೊಂಡಿದ್ದೇವೆ. ಇಂಥ ಕಾಲಘಟ್ಟದಲ್ಲಿ ಭಜನೆಯ ಮಹತ್ವ ಇನ್ನಷ್ಟು ಹೆಚ್ಚುತ್ತಿದೆ. ನಿಧಾನವಾಗಿ ಭಜನೆಗಳು ಮತ್ತೆ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತಿವೆ. ಈ ಮೂಲಕ ಭಾರತೀಯ ಜೀವನ ಪದ್ಧತಿಯು ಎಲ್ಲ ಕಾಲಕ್ಕೂ ಸೂಕ್ತವಾದುದು ಎಂಬುದು ಸಮಾಜ ಅರಿವಿಗೆ ಮತ್ತೊಮ್ಮೆ ಬರುತ್ತಿದೆ. ನಮ್ಮ ಹಿರಿಯರ ಜೀವನ ಪದ್ಧತಿಯನ್ನು ಅನುಸರಿಸುವುದೇ ಎಲ್ಲ ಆಧುನಿಕ ಸಮಸ್ಯೆಗಳಿಗೂ ಪರಿಹಾರವೆಂಬ ಎಚ್ಚರ ಮೂಡುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಹೌದು.

ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ, ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಯಾವ ಸಾಮಾಜಿಕ ಜಾಲತಾಣಗಳು ಅತ್ಯಧಿಕ ಮಾನಸಿಕ ವಿಕ್ಷೇಪವನ್ನು ಉಂಟುಮಾಡಲು ಕಾರಣವಾಗಿವೆಯೋ, ಅವುಗಳೇ ಮತ್ತೊಮ್ಮೆ ಹೊಸ ಹೊಸ ರೂಪದಲ್ಲಿ ಭಜನೆಗಳನ್ನು ಯುವಸಮುದಾಯಕ್ಕೆ ತಲುಪಿಸುತ್ತಾ, ಭಜನೆಯತ್ತ ಆಕರ್ಷಿಸುವ ಮಾಧ್ಯಮವೂ ಆಗಿವೆ. ಇವತ್ತು ಉಳಿದೆಲ್ಲ ಸಂಗೀತದ ಕಾರ್ಯಕ್ರಮಗಳಂತೆ, ಆಧುನಿಕ ಪರಿಕರಗಳೊಂದಿಗೆ ನಡೆಸಲಾಗುವ ಭಜನೆ, ಕೀರ್ತನೆಗಳ ಕಾರ್ಯಕ್ರಮಗಳೂ ಜನಪ್ರಿಯವಾಗುತ್ತಿವೆ. ಈ ಕಾರಣಕ್ಕಾಗಿ ಜೆನ್–ಝೀ ಇನ್ನಿಲ್ಲದಷ್ಟು ಭಜನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಯೂಟ್ಯೂಬ್, ಇನ್ಸ್ಟಾಗಳಲ್ಲಿ ಭಜನೆಗಳನ್ನು ಆಧರಿಸಿದ ಕಲಾವಿದರಿಗೆ ಹೆಚ್ಚೆಚ್ಚು ದೃಶ್ಯಾಂಕಗಳು ದೊರೆಯುತ್ತಿವೆ. ಸಂಗೀತದ ಮೂಲಕ ಇದನ್ನು ಮೊದಲು ಆರಂಭಿಸಿದವರು ಕುಲದೀಪ ಪೈ ಅಂಥವರು. ಅವರು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಬಾಲಪ್ರತಿಭೆಗಳ ಸಂಗೀತವನ್ನು ಪ್ರಸ್ತುತಪಡಿಸುತ್ತಾ ಸೂರ್ಯಗಾಯತ್ರಿಯಂಥ ಅನೇಕ ಪ್ರತಿಭೆಗಳನ್ನು ಲೋಕಕ್ಕೆ ಪರಿಚಯಿಸಿದರು. ಈಗ ಸೂರ್ಯಗಾಯತ್ರಿ, ರಾಹುಲ ವೆಳ್ಳಾಲ ಮೊದಲಾದವರು ದೇವರ ನಾಮವನ್ನು ಸಂಗೀತದ ಮೂಲಕ ಪ್ರಸ್ತುತಪಡಿಸುತ್ತಾ ಲಕ್ಷಾಂತರ ಜನರನ್ನು ಸೆಳೆಯುತ್ತಿದ್ದಾರೆ. ಮೈಥಿಲಿ ಠಾಕೂರ್, ರಾಧಿಕಾ ದಾಸ್ ಮೊದಲಾದವರು ಭಜನೆಗಳಿಗೆ ಹೊಸ ಶ್ರೋತೃವರ್ಗವನ್ನು ಸೃಷ್ಟಿಸಿದ್ದಾರೆ. ಭಜನೆಗಳಿಗೆ ಹೊಸ ಆಯಾಮವನ್ನೂ ಒದಗಿಸಿದ್ದಾರೆ.

ಇಂದು ಭಜನೆಯೆಂಬುದು ಹೊಸ ರೂಪದೊಂದಿಗೆ ಮತ್ತೆ ಪ್ರಸಿದ್ಧವಾಗುತ್ತಿದೆ. ಶಂಕರರು ನಿರ್ಮಿಸಿದ ಸ್ತೋತ್ರಗಳಿಂದ ಹಿಡಿದು, ದಾಸರ ಪದ, ಮರಾಠಿ ಅಭಂಗಗಳವರೆಗೆ ಎಲ್ಲ ಪ್ರಾಚೀನ ಕೃತಿಗಳು ಹೊಸ ರೂಪದೊಂದಿಗೆ ಮತ್ತೆ ಎಲ್ಲರ ಬಾಯಲ್ಲಿ ನಲಿಯುತ್ತಿವೆ. ಶಂಕರಾಚಾರ್ಯರು ಸಾವಿರಾರು ವರ್ಷಗಳ ಹಿಂದೆಯೇ ಸ್ತೋತ್ರಸಾಹಿತ್ಯದ ಮೂಲಕ ಕೇವಲ ಭಗವದ್ಭಕ್ತಿಯ ಜಾಗರಣೆ ಯನ್ನು ಮೂಡಿಸಿದ್ದಷ್ಟೇ ಅಲ್ಲ, ಉಪನಿಷತ್ತುಗಳ, ಶಾಸ್ತ್ರಗಳ ಸಾರವನ್ನು ನಿತ್ಯವೂ ಸಾಮಾನ್ಯನ ಬಾಯಲ್ಲಿ ನಲಿಯುವಂತೆ ಮಾಡಲು ಕಾರಣರಾಗಿದ್ದರು. ಇವತ್ತು ಮತ್ತೆ ಅಂಥ ಕೃತಿಗಳು ಸಮಾಜದಲ್ಲಿ ಅನುರಣನಗೊಳ್ಳುತ್ತಿವೆ. ಸ್ತೋತ್ರ, ಭಜನೆಗಳು ಮತ್ತೆ ಮುನ್ನೆಲೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಇದಕ್ಕೆ ಇನ್ನಷ್ಟು ವೇಗವನ್ನು ಕೊಡುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೂಡ ಪಂಚ ಪರಿವರ್ತನೆಗಳಲ್ಲಿ ಭಜನೆಯನ್ನೂ ಸೇರಿಸಿಕೊಂಡಿದೆ. ಯಾಕೆಂದರೆ ಭಜನೆಯು ವ್ಯಕ್ತಿತ್ವದ ನಿರ್ಮಾಣದಲ್ಲಿಯೂ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜೊತೆಗೆ ಸಾಮಾಜಿಕ ಸಮರಸತೆಗೆ ಸೇತುವೂ ಆಗಿದೆ.

ಮಠಗಳು ಭಜನೆ ಮತ್ತು ಕೀರ್ತನೆಗಳ ವ್ಯಾಪಕ ಪ್ರಚಾರವನ್ನು ಮಾಡುತ್ತಿವೆ. ಏಕಸ್ವರದಲ್ಲಿ ಲಕ್ಷಕಂಠದ ಸ್ತೋತ್ರಪಾರಾಯಣದ ಸಮರ್ಪಣೆಯಂಥ ಕಾರ್ಯಕ್ರಮಗಳು ಮಹಾನಗರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಭಜನೆಗೆ ಪರಿಸರ ಸಂರಕ್ಷಣೆಯ ಹೊಸ ಮುಖವೊಂದನ್ನು ಸ್ವರ್ಣವಲ್ಲಿಯ ಶ್ರೀ ಶ್ರೀ ಮದ್ಗಂಗಾಧರೇಂದ್ರ ಸ್ವಾಮಿಗಳು ಕೊಟ್ಟಿದ್ದಾರೆ. ಉತ್ತರ ಕನ್ನಡದ ನದಿಗಳ ತಿರುವು ಯೋಜನೆಯ ವಿರುದ್ಧದ ಜನರ ಧ್ವನಿಯಾಗಿರುವ ಸ್ವರ್ಣವಲ್ಲೀ ಸ್ವಾಮಿಗಳು ಶಿರಸಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾವೇಶಗಳನ್ನು ನಡೆಸಿದ್ದಷ್ಟೇ ಅಲ್ಲ, ಈ ಬಗ್ಗೆ ವ್ಯಾಪಕವಾದ ಜನಜಾಗರಣದ ದೃಷ್ಟಿಯಿಂದ ಮತ್ತು ಪರಿಸರ ಸಂರಕ್ಷಣೆಯ ಅಭಿಯಾನಕ್ಕೆ ಆಧ್ಯಾತ್ಮಿಕ ಹಿನ್ನೆಲೆಯನ್ನೂ ಜೋಡಿಸುವ ಉದ್ದೇಶದಿಂದ ತಮ್ಮೆಲ್ಲ ಶಿಷ್ಯವಲಯಕ್ಕೆ ನಿರಂತರವಾಗಿ ಭಜನೆಗಳನ್ನು ಮಾಡುವ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಆಯಾ ಊರಿನ ಎಲ್ಲರೂ ಒಂದು ದೇವಾಲಯದಲ್ಲಿ ಸೇರಿ ನಿತ್ಯವೂ ಒಂದು ಘಂಟೆಯ ಕಾಲ ಭಜನೆಯನ್ನು ಮಾಡಬೇಕೆಂಬ ಶ್ರೀಗಳ ಅಪ್ಪಣೆಯಂತೆ ಉತ್ತರಕನ್ನಡದ ಎಲ್ಲ ಊರುಗಳಲ್ಲಿಯೂ ಯಶಸ್ವಿಯಾಗಿ ಭಜನೆಯನ್ನು ನಡೆಸಲಾಗುತ್ತಿದೆ.

ಹೀಗೆ ಭಜನೆಯು ವ್ಯಕ್ತಿತ್ವನಿರ್ಮಾಣದ, ಆಧ್ಯಾತ್ಮಿಕ ಸಾಧನೆಯ, ಸಾಮಾಜಿಕ ಸಮರಸತೆಯ, ಪರಂಪರೆಯ ಸಂರಕ್ಷಣೆಯ ಅನೇಕ ಮಜಲುಗಳಲ್ಲಿ ಒಂದು ಪ್ರಖರ ಮಾಧ್ಯಮವಾಗಿದ್ದು ಮತ್ತೊಮ್ಮೆ ಸಮಾಜದಲ್ಲಿ ಮುನ್ನಲೆಗೆ ಬರುತ್ತಿರುವುದು ಅತ್ಯಂತ ಸಂತಸದ ವಿಷಯ. ನಮ್ಮ ಮನೆಗಳಲ್ಲೂ ಭಜನೆಯು ನಿರಂತರ ನಡೆಯುವಂತೆ ಪ್ರಯತ್ನಿಸಿದಲ್ಲಿ ಸುಖ, ಶಾಂತಿ, ಸಮೃದ್ಧಿಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಜಲಸಂಧಿ ಬಹುತೇಕ ಮುಚ್ಚಿದ್ದರೂ ಯುದ್ಧ ನಿಲ್ಲಿಸಲು ಟ್ರಂಪ್ ಒಲವು

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

- ಇರಾನ್ ನೌಕಾಪಡೆ ದುರ್ಬಲಗೊಳಿಸುವುದೇ ಗುರಿ
- ಜಲಸಂಧಿ ಅಮೆರಿಕಕ್ಕಿಂತ ಇತರ ರಾಷ್ಟ್ರಗಳಿಗೆ ಬಹು ಮುಖ್ಯ: ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿಸಾಧಿಸಲುಇನ್ನೂನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ.



ಇದರಿಂದಾಗಿ ಅಮೆರಿಕ ಸದ್ಯ ಹಾರ್ಮುಜ್ ವಶಪಡಿಸುವ ಕಾರ್ಯಾಚರಣೆ ಯೋಜನೆಯನ್ನು ಕೈಬಿಟ್ಟಿದೆ. ಹಾರ್ಮುಜ್ ವಶಪಡಿಸುವ ಬದಲಿಗೆ ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯಲ್ಲಿ ಗುರಿ ಸಾಧಿಸುವುದರ ಬಗ್ಗೆ ಹೆಚ್ಚಿನ ಗಮನಹರಿಸುತ್ತಿದೆ. ಇರಾನ್ ನೌಕಾಪಡೆಯನ್ನು ದುರ್ಬಲಗೊಳಿಸುವುದು, ಇರಾನ್ ಕ್ಷಿಪಣಿ ಸಂಗ್ರಹಾಗಾರಗಳ ನಾಶ ಮತ್ತು ರಾಜತಾಂತ್ರಿಕ ಮಾತುಕತೆ ಮೂಲಕ ಒತ್ತಡ ಹಾಕುವುದರ ಮೇಲೆ ಅಮೆರಿಕ ಗಮನ ಹರಿಸಲಿದೆ ಎಂದು ವರದಿಯಾಗಿದೆ.

ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಹಾರ್ಮುಜ್ ಜಲಸಂಧಿ ಎಷ್ಟೊಂದು ಪ್ರಮುಖ ಪಾತ್ರವಹಿಸುತ್ತದೆ ಎಂಬ ಸಂದೇಶವನ್ನು ಸಾಮಾನ್ಯ ಜನರಿಗೆ ಈಗಾಗಲೇ ಅಧ್ಯಕ್ಷ ಟ್ರಂಪ್ ರವಾನಿಸಿದ್ದಾರೆ. ಜಲಸಂಧಿಯನ್ನು ತೆರೆಯದಿದ್ದರೆ ಇರಾನ್ ಇಂಧನ ಮೂಲಸೌಕರ್ಯಗಳ ಮೇಲೆ ಬಾಂಬ್ ದಾಳಿ ನಡೆಸುವುದಾಗಿ ಬೆದರಿಕೆಯೊಡ್ಡುವ ಮೂಲಕ ಜಲಸಂಧಿಯಪ್ರಾಮುಖ್ಯತೆಕುರಿತುಅರಿವುಮೂಡಿಸಿದ್ದಾರೆ. ಇದಲ್ಲದೆ, ಜಲಸಂಧಿಯು ಅಮೆರಿಕಕ್ಕಿಂತ ಹೆಚ್ಚು ಇತರ ರಾಷ್ಟ್ರಗಳ ಸಾಗರೋತ್ತರ ವ್ಯವಹಾರಕ್ಕೆ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದೂ ಟ್ರಂಪ್ ಮನದಟ್ಟು ಮಾಡಿದ್ದಾರೆ.

ಹಾರ್ಮುಜ್ ಬಂದ್: ವ್ಯಾಪಾರ ಅನಿಶ್ಚಿತತೆ

ಜಾಗತಿಕ ತೈಲ ಪೂರೈಕೆಯ ಶೇ.20ರಷ್ಟು ಭಾಗ ಹಾರ್ಮುಜ್ ಜಲಸಂಧಿಯನ್ನು ದಾಟಿ ಹೋಗಬೇಕಾಗುತ್ತದೆ. ಹೀಗಾಗಿ ಇರಾನ್ ಮೇಲಿನ ಯುದ್ಧದಿಂದ ಜಲಸಂಧಿ ಮುಚ್ಚಿರುವುದರಿಂದ ಶೇ.20ರಷ್ಟು ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದೆ. ಇದಲ್ಲದೆ ವಿಶ್ವದ ದೊಡ್ಡ ದೊಡ್ಡ ತೈಲ ಮಾರುಕಟ್ಟೆಗಳ ಮೇಲೆ ಹಾರ್ಮುಜ್ ನೇರ ಪರಿಣಾಮವನ್ನು ಬೀರುತ್ತದೆ. ಈ ಹಿಂದೆ ಜಲಸಂಧಿಯನ್ನು ಯಾವುದೇ ಅಡೆತಡೆಗಳಿಲ್ಲದೆ ದಾಟುತ್ತಿದ್ದ ರಾಷ್ಟ್ರಗಳನ್ನೂ ಯುದ್ಧ ಪರಿಸ್ಥಿತಿ ಬಾಧಿಸಿದೆ. ಜಾಗತಿಕ ಮಟ್ಟದಲ್ಲಿ ತೈಲ ಅಥವಾ ಅನಿಲ ಪೂರೈಕೆಯಷ್ಟೇ ಅಲ್ಲದೆ, ರಸಗೊಬ್ಬರ, ಹೀಲಿಯಂ, ಸೆಮಿಕಂಡಕ್ಟರ್, ಗ್ಲಾಸ್ ಬಾಟಲ್ ಉತ್ಪಾದನೆ ಇತ್ಯಾದಿ ಉದ್ಯಮಗಳನ್ನೂ ಬಾಧಿಸಿದೆ. ಜಾಗತಿಕವಾಗಿ ಒಂದು ಬ್ಯಾರೆಲ್ ತೈಲ ಬೆಲೆಯು 100 ಡಾಲರ್ ಹೆಚ್ಚಾಗಿದೆ.

ಅಮೆರಿಕದ ಸಿಗೋನೆಲ್ಲಾ ವಾಯುನೆಲೆ ಬಳಸಲು ಅನುಮತಿಸದ ಇಟಲಿ!

ರೋಮ್: ಸಿಸಿಲಿಯಲ್ಲಿರುವ ಸಿಗೋನೆಲ್ಲಾ ಮಿಲಿಟರಿ ವಾಯುನೆಲೆಯನ್ನು ಸಾಮಾನ್ಯೇತರ ಕಾರ್ಯಾಚರಣೆಗಳಿಗಾಗಿ ಬಳಸಲು ಅಮೆರಿಕಕ್ಕೆ ಇಟಲಿ ಅನುಮತಿ ನಿರಾಕರಿಸಿದೆ. ಈ ಮೂಲಕ ಮತ್ತೊಮ್ಮೆ ಟ್ರಂಪ್‌ಗೆ ಭಾರೀ ಮುಖಭಂಗವಾಗಿದೆ. ಮಧ್ಯಪ್ರಾಚ್ಯದತ್ತ ತೆರಳುತ್ತಿದ್ದ ಅಮೆರಿಕದ ಬಾಂಬರ್ ವಿಮಾನಗಳ ಹಾರಾಟ ಯೋಜನೆಯನ್ನು ಗಮನಿಸಿದ ರಕ್ಷಣಾ ಸಚಿವ ಗೈಡೋ ಕ್ರೊಸೆಟ್ಟೊ ಈ ನಿರ್ಧಾರ ಕೈಗೊಂಡಿದ್ದಾರೆ. ವಿಮಾನಗಳು ಈಗಾಗಲೇ ಟೇಕ್-ಆಫ್ ಆದ ನಂತರವಷ್ಟೇ ಇಟಲಿ ಅಧಿಕಾರಿಗಳಿಗೆ ಈ ಮಿಷನ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಪ್ರಾಥಮಿಕ ತಪಾಸಣೆಯ ನಂತರ, ಈ ಹಾರಾಟಗಳು ಕೇವಲ ಲಾಜಿಸ್ಟಿಕಲ್ ಉದ್ದೇಶದ್ದಲ್ಲ ಮತ್ತು ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳ ವ್ಯಾಪ್ತಿಗೆ ಬರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲಾಯಿತು. ಇಂತಹ ಕಾರ್ಯಾಚರಣೆಗಳಿಗೆ ಪೂರ್ವಭಾವಿ ರಾಜಕೀಯ ಮತ್ತು ಮಿಲಿಟರಿ ಸಮಾಲೋಚನೆಗಳ ಅಗತ್ಯವಿರುತ್ತದೆ. ಸಾಮಾನ್ಯ ಕಾರ್ಯಾಚರಣೆಗಳ ಹೊರತಾದ ಯಾವುದೇ ಚಟುವಟಿಕೆಗಳಿಗೆ ಸಂಸತ್ತಿನ ಅನುಮೋದನೆ ಅಗತ್ಯ ಎಂದು ಪ್ರಧಾನಿ ಜಾರ್ಜಿಯಾ ಮೆಲೋನಿ ಈ ಹಿಂದೆ ತಿಳಿಸಿದ್ದರು. ಸಿಗೋನೆಲ್ಲಾ ನೆಲೆಯು ಅಮೆರಿಕ ಸೇನೆಗೆ ಮೆಡಿಟರೇನಿಯನ್ ಪ್ರದೇಶದಲ್ಲಿ ಆಯಕಟ್ಟಿನ ಕೇಂದ್ರವಾಗಿದೆ. ಇರಾನ್ ವಿರುದ್ಧದ ಸಂಘರ್ಷಕ್ಕೆ ಸ್ಪೇನ್ ತನ್ನ ವಾಯುಪ್ರದೇಶವನ್ನು ಮುಚ್ಚಿದ ಬೆನ್ನಲ್ಲೇ ಇಟಲಿಯೂ ಈ ನಿರ್ಧಾರ ತೆಗೆದುಕೊಂಡಿದೆ.

ಇಂಧನ ಬೇಕಿದ್ದರೆ, ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು ಯುದ್ಧ ನೌಕೆಗಳನ್ನು ಕಳುಹಿಸಲು ಅಮೆರಿಕ ಮನವಿಯನ್ನು ತಿರಸ್ಕರಿಸಿದ್ದ ಮಿತ್ರ ರಾಷ್ಟ್ರಗಳು ತಮಗೆ ತೈಲ ಬೇಕಾಗಿದ್ದರೆ ಅಮೆರಿಕದಿಂದ ಖರೀದಿಸಲಿ ಅಥವಾ ಹಾರ್ಮುಜ್‌ಗೆ ಹೋಗಿ ಅಲ್ಲಿಂದ ನೇರ ಸಂಗ್ರಹಿಸಿಕೊಳ್ಳಲಿ ಎಂದು ಟ್ರಂಪ್ ಕುಹಕವಾಡಿದ್ದಾರೆ. ಬ್ರಿಟನ್ ಸೇರಿದಂತೆ ಎಲ್ಲಾ ಮಿತ್ರರಾಷ್ಟ್ರಗಳು ಹಾರ್ಮುಜ್ ಮೂಲಕ ತೈಲ ಆಮದು ಮಾಡಿಕೊಳ್ಳುತ್ತವೆ. ಇಂತಹ ರಾಷ್ಟ್ರಗಳ ಮುಂದೆ ಎರಡು ಆಯ್ಕೆಗಳಿವೆ. ಅಮೆರಿಕದಿಂದ ತೈಲ ಖರೀದಿಸುವುದು ಅವರಿಗಿರುವ ಮೊದಲ ಆಯ್ಕೆ. ಸ್ವಲ್ಪ ತಡವಾದರೂ ಧೈರ್ಯ ಮಾಡಿಕೊಂಡು ಹಾರ್ಮುಜ್ ಜಲಸಂಧಿಗೆ ನೇರ ಹೋಗಿ ತೈಲ ಸಂಗ್ರಹಿಸುವುದು ಎರಡನೇ ಆಯ್ಕೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ನಿಮಗೋಸ್ಕರ ಹೋರಾಡಲು ಕಲಿಯಿರಿ: ನಿಮಗೋಸ್ಕರ ನೀವೇ ಹೋರಾಡಲು ಕಲಿತುಕೊಳ್ಳಿ, ನೀವು ಹೇಗೆ ನಮಗೆ ಸಹಾಯ ಮಾಡಿಲ್ಲವೋ ಹಾಗೆ ಮುಂದೆ ನಿಮಗೇನಾದರೂ ಸಮಸ್ಯೆಯಾದರೆ ಅಮೆರಿಕ ಸಹಾಯ ಮಾಡಲ್ಲ ಎಂದು ಅಧ್ಯಕ್ಷ ಟ್ರಂಪ್ ಯುರೋಪ್ ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ.

ಇಸ್ಫಾಹಾನ್ ಮೇಲೆ ಬೃಹತ್ ದಾಳಿ




ಸುಮಾರು 23 ಲಕ್ಷ ಜನಸಂಖ್ಯೆ ಹೊಂದಿರುವ ಮತ್ತು ಬದ್ರ್ ಸೇನಾ ವಿಮಾನ ನಿಲ್ದಾಣವಿರುವ ಇಸ್ಫಾಹಾನ್ ನಗರದ ಮದ್ದುಗುಂಡು ಸಂಗ್ರಹಣಾ ಕೇಂದ್ರದ ಮೇಲೆ ಅಮೆರಿಕ ಸೇನೆ 2,000 ಪೌಂಡ್ (ಸುಮಾರು 907 ಕೆಜಿ) ತೂಕದ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸಿದೆ. ಈ ದಾಳಿಯಿಂದಾಗಿ ಸರಣಿ ಸ್ಫೋಟಗಳು ಮತ್ತು ಬಲವಾದ ಆಘಾತಕಾರಿ ಅಲೆಗಳು ಸೃಷ್ಟಿಯಾಗಿವೆ. ಇರಾನ್ ತನ್ನ ಬಳಿಯಿರುವ ಸುಮಾರು 540 ಕೆಜಿ ಪುಷ್ಟೀಕರಿಸಿದ ಯುರೇನಿಯಂ ಅನ್ನು ಈ ನಗರದ ಭೂಗತ ಕೇಂದ್ರಕ್ಕೆ ಸ್ಥಳಾಂತರಿಸಿರಬಹುದು ಎಂಬ ವರದಿಗಳ ಬೆನ್ನಲ್ಲೇ ಈ ದಾಳಿ ನಡೆದಿದೆ.

ಮೂಲಸೌಕರ್ಯಗಳ ನಾಶದ ಬೆದರಿಕೆ: ಒಂದು ವೇಳೆ ಯುದ್ಧ ನಿಲ್ಲಿಸಲು ಶೀಘ್ರವೇ ಒಪ್ಪಂದಕ್ಕೆ ಬರದಿದ್ದರೆ ಮತ್ತು ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಇರಾನ್‌ನ ಇಂಧನ ಸಂಪನ್ಮೂಲಗಳು, ಪರಮಾಣು ಕೇಂದ್ರಗಳು ಮತ್ತು ನೀರಿನ ಪ್ಲಾಂಟ್‌ಗಳನ್ನು ನಾಶಪಡಿಸುವುದಾಗಿ ಟ್ರಂಪ್ ಎಚ್ಚರಿಸಿದ ಒಂದು ದಿನದ ನಂತರ ಈ ಕಾರ್ಯಾಚರಣೆ ನಡೆದಿದೆ.

ಬಂಕರ್ ಬಸ್ಟರ್ ತಂತ್ರಜ್ಞಾನ: ಈ ದಾಳಿಯಲ್ಲಿ ಬಳಸಲಾದ ಬಿಎಲ್‌ಯು-109 ನಂತಹ ಬಾಂಬ್‌ಗಳು ಗಟ್ಟಿಯಾದ ಉಕ್ಕಿನ ಕವಚವನ್ನು ಹೊಂದಿದ್ದು, ಮಣ್ಣು ಮತ್ತು ಕಾಂಕ್ರೀಟ್ ಪದರಗಳನ್ನು ಕೊರೆದು ಒಳಗೆ ಹೋದ ನಂತರವೇ ಸ್ಫೋಟಗೊಳ್ಳುತ್ತವೆ. ಇವುಗಳಲ್ಲಿ ಕೆಲವು ಸ್ಮಾರ್ಟ್ ಫ್ಯೂಸ್‌ಗಳನ್ನು ಹೊಂದಿದ್ದು, ಕಟ್ಟಡದ ಎಷ್ಟು ಮಹಡಿಗಳನ್ನು ದಾಟಬೇಕು ಅಥವಾ ಶಬ್ದಗಳನ್ನು ಕೇಳಿಸಿಕೊಂಡ ನಂತರವೇ ಸ್ಫೋಟಗೊಳ್ಳಬೇಕೆಂಬುದನ್ನು ನಿರ್ಧರಿಸುವ ತಂತ್ರಜ್ಞಾನ ಹೊಂದಿವೆ.

ಪ್ರಾದೇಶಿಕ ಹಿನ್ನೆಲೆ: ಈ ಸಂಘರ್ಷ ಎರಡನೇ ತಿಂಗಳಿಗೆ ಕಾಲಿಟ್ಟಿದೆ. ಇರಾನ್ ಪರಮಾಣು ಅಸ್ತ್ರ ತಯಾರಿಕೆಗೆ ಹತ್ತಿರದಲ್ಲಿದೆ, ಎಂದು ಅಮೆರಿಕ ಮತ್ತು ಇಸ್ರೇಲ್ ಆರೋಪಿಸುತ್ತಿದ್ದರೂ, ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ ಈ ವಾದವನ್ನು ಬೆಂಬಲಿಸಿಲ್ಲ. ಕಳೆದ ವರ್ಷ ಕೂಡ 'ಆಪರೇಷನ್ ಮಿಡ್‌ನೈಟ್ ಹ್ಯಾಮರ್ ಅನ್ವಯದಲ್ಲಿ ಇಸ್ಫಾಹಾನ್ ನಗರವನ್ನು ಗುರಿಯಾಗಿಸಲಾಗಿತ್ತು.

ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಅಂತ್ಯ



ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಕೊನೆಗಾಣಲಿದೆ. ಮುಂದಿನ ಕೆಲವು ದಿನಗಳು ಮಧ್ಯಪ್ರಾಚ್ಯ ಯುದ್ಧದಲ್ಲಿ ಬಹಳ ನಿರ್ಣಾಯಕ ದಿನಗಳೆಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹಾಗೂ ರಕ್ಷಣಾ ಜಂಟಿ ಮುಖ್ಯಸ್ಥ ಜನರಲ್ ಡಾನ್ ಕೇನ್ ಮಂಗಳವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧವು ಮುಂದಿನ ದಿನಗಳಲ್ಲಿ ಅನಿರೀಕ್ಷಿತ ತಿರುವುಗಳನ್ನು ಕಾಣಲಿದೆ ಎಂದು ಹೆಗ್ಸೆತ್ ಹೇಳಿದ್ದಾರೆ. ಇರಾನ್‌ಗೆ ಸೈನ್ಯವನ್ನು ಕಳುಹಿಸಲು ಅಮೆರಿಕ ಬಯಸುವುದಿಲ್ಲ, ಆದರೆ ಒಂದು ವೇಳೆ ನಾವು ಸೈನ್ಯ ಕಳುಹಿಸಿದರೆ ಯಾರಿಗೂ ಹೇಳಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ. ಇರಾನ್‌ನಲ್ಲಿ ಅಮೆರಿಕ ತನ್ನ ಎಪಿಕ್ ಫ್ಯೂರಿ ಕಾರ್ಯಾಚರಣೆ ಮುಂದುವರಿಸಲು ಸಿದ್ಧವಾಗಿದೆ ಎಂದು ಹೆಗ್ಸೆತ್ ತಿಳಿಸಿದ್ದಾರೆ.

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್‌ನಿಂದ ದಾಳಿ ಬೆದರಿಕೆ

- ಪಶ್ಚಿಮ ಏಷ್ಯಾ ಯುದ್ಧ ಉಲ್ಬಣ
- ಅಮೆರಿಕದ ಟೆಕ್ ದೈತ್ಯ ಸಂಸ್ಥೆಗಳ ಮೇಲೆ ದಾಳಿ ಎಚ್ಚರಿಕೆ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆ, ಇರಾನ್ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ನೇರ ಬೆದರಿಕೆ ಹಾಕಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಭಯೋತ್ಪಾದಕ ಕಾರ್ಯಾಚರಣೆಗಳಿಗೆ ಪ್ರತಿಯಾಗಿ, ಮೈಕ್ರೋಸಾಫ್ಟ್, ಆ್ಯಪಲ್, ಗೂಗಲ್, ಇಂಟೆಲ್, ಬೋಯಿಂಗ್ ಸೇರಿದಂತೆ ಹಲವು ಕಂಪನಿಗಳನ್ನು ಗುರಿಯಾಗಿಸಲಾಗುವುದು ಎಂದು ಇರಾನ್‌ನ ಇಸ್ಲಾಮಿಕ್‌ರೆವಲ್ಯೂಷನರಿಗಾರ್ಡ್‌ಕಾರ್ಪ್ಸ್ ಎಚ್ಚರಿಸಿದೆ. ಅಮೆರಿಕದ ಐಸಿಟಿ ಮತ್ತು ಕೃತಕ ಬುದ್ಧಿಮತ್ತೆ(ಎಐ) ಕಂಪನಿಗಳು ಹತ್ಯೆ ಕಾರ್ಯಾಚರಣೆಗಳನ್ನು ರೂಪಿಸುವ ಮತ್ತು ಜಾರಿಗೆತರುವಲ್ಲಿಪ್ರಮುಖಪಾತ್ರವಹಿಸುತ್ತಿವೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಲ್ಲಿ ನಡೆಯುವ ಪ್ರತಿಯೊಂದು ದಾಳಿಗೂ ಪ್ರತಿಯಾಗಿ ಈ ಕಂಪನಿಗಳ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

ಈ ಬೆದರಿಕೆಯ ಭಾಗವಾಗಿ, ಕಂಪನಿಗಳ ಕಚೇರಿಗಳ ಸುತ್ತಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಉದ್ಯೋಗಿಗಳು ಮತ್ತು ನಿವಾಸಿಗಳಿಗೆ ಸ್ಥಳತ್ಯಾಗ ಮಾಡಲು ಸೂಚಿಸಲಾಗಿದೆ. ಏ. 1ರಂದು ಟೆಹರಾನ್ ಸಮಯ ರಾತ್ರಿ 8 ಗಂಟೆಯಿಂದ ಪ್ರತೀಕಾರ ಕಾರ್ಯಾಚರಣೆಗಳು ಆರಂಭವಾಗಲಿವೆ ಎಂದು ಅದು ಎಚ್ಚರಿಕೆ ನೀಡಿದೆ. ಇದಕ್ಕೂ ಮುನ್ನವೂ ಇರಾನ್ ಇದೇರೀತಿಯ ಎಚ್ಚರಿಕೆ ನೀಡಿದ್ದರೂ, ಯಾವುದೇ ನೈಜ ದಾಳಿ ನಡೆದಿರಲಿಲ್ಲ, ಆದರೆ ಈ ಬಾರಿ ಪರಿಸ್ಥಿತಿ ಹೆಚ್ಚು ಗಂಭೀರವಾಗಿದೆ ಎಂಬ ಆತಂಕ ವ್ಯಕ್ತವಾಗಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಅಮೆರಿಕವೂ ಕಠಿಣ ನಿಲುವು ತಾಳಿದೆ. ಮುಂದಿನ ದಿನಗಳಲ್ಲಿ ನಾವು ತೀವ್ರ ರೀತಿಯಲ್ಲಿ ದಾಳಿ ನಡೆಸಲಿದ್ದೇವೆ. ಕೆಲವು ದಿನಗಳು ನಿರ್ಣಾಯಕವಾಗಿವೆ ಎಂದು ಹೇಳಿದೆ.



ಕಿರುಸುದ್ದಿ

ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ

ಕೋಲ್ಕತ್ತಾ: ಭಾರತೀಯ ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಶ್ಚಿಮ ಬಂಗಾಳ ಚುನಾವಣೆಗೂ ಮುನ್ನ ಈ ಬೆಳವಣಿಗೆ ನಡೆದಿದೆ. ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಟೆನಿಸ್ ತಾರೆ ಲಿಯಾಂಡರ್ ಪೇಸ್ ಇತ್ತೀಚೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾದ ಬಳಿಕ ಅವರು ಬಿಜೆಪಿಗೆ ಸೇರ್ಪಡೆಯಾಗುತ್ತಾರೆಂಬ ಊಹಾಪೋಹಗಳು ಸೃಷ್ಟಿಯಾಗಿತ್ತು.

ಕಾಲ್ತುಳಿತ: 9 ಭಕ್ತರ ಸಾವು

ಪಾಟ್ನಾ: ಭಕ್ತರ ಸಂದಣಿಯಿಂದ ಬಿಹಾರದ ನಳಂದ ಜಿಲ್ಲೆಯ ಶೀತಲ ದೇವಸ್ಥಾನದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಕನಿಷ್ಠ 9 ಮಹಿಳಾ ಭಕ್ತರು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.ಧಾರ್ಮಿಕ ಸಭೆ ವೇಳೆ ಈ ದುರಂತ ಸಂಭವಿಸಿದೆ. ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಇದರಿಂದಾಗಿ ಜನದಟ್ಟಣೆ ಉಂಟಾಗಿದ್ದು, ಬ್ಯಾರಿಕೇಡ್ ಮುರಿದ್ದು, ಒಬ್ಬರ ಮೇಲೆ ಒಬ್ಬರಂತೆ ಕೆಳಗೆ ಬಿದ್ದಿದ್ದಾರೆ.

ಭಾರತದತ್ತ ಮತ್ತೆ ಇರಾನ್ ಕಚ್ಚಾ ತೈಲ ಹೊತ್ತ ಟ್ಯಾಂಕರ್

ಹೊಸದಿಲ್ಲಿ: ಆರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಇರಾನ್ ಮೂಲದ ಕಚ್ಚಾ ತೈಲ ಖರೀದಿ ಮತ್ತೆ ಆರಂಭವಾಗುವ ಲಕ್ಷಣಗಳು ಕಾಣಿಸುತಿವೆ. ಅಮೆರಿಕದ ತಾತ್ಕಾಲಿಕ ನಿರ್ಬಂಧ ಸಡಿಲಿಕೆ ಬೆನ್ನಲ್ಲೇ ಸುಮಾರು 6 ಲಕ್ಷ ಬ್ಯಾರೆಲ್ ಇರಾನಿಯನ್ ಕಚ್ಚಾ ತೈಲವನ್ನು ಹೊತ್ತ ಟ್ಯಾಂಕರ್ ಒಂದು ಗುಜರಾತ್ ತೀರದ ವಡಿನಾರ್ ಬಂದರಿಗೆ ಮುಖ ಮಾಡಿದೆ ಎಂಬ ಮಾಹಿತಿ ಹಡಗು ಟ್ರ್ಯಾಕಿಂಗ್ ಡೇಟಾದಿಂದ ತಿಳಿದು ಬಂದಿದೆ.

- ಗುಜರಾತ್ ತೀರಕ್ಕೆ ಮೊದಲ ಕಾರ್ಗೋ ಆಗಮನ ಸಾಧ್ಯತೆ

ಅಮೆರಿಕ ಸರ್ಕಾರ 30 ದಿನಗಳ ಅವಧಿಗೆ ಸಮುದ್ರದಲ್ಲಿರುವ ಇರಾನ್ ತೈಲ ಖರೀದಿಗೆ ಸಡಿಲಿಕೆ ನೀಡಿದ್ದು, ಇದರ ಪರಿಣಾಮವಾಗಿ ಭಾರತ ಸೇರಿ ಕೆಲ ದೇಶಗಳು ಮತ್ತೆ ಈ ತೈಲವನ್ನು ಖರೀದಿಸಲು ಮುಂದಾಗಿವೆ. ಈ ಹಿನ್ನೆಲೆ ಪಿಂಗ್ ಶುನ್ ಎಂಬ ಅಫ್ರಮ್ಯಾಕ್ಸ್ ಟ್ಯಾಂಕರ್ ಮಾರ್ಚ್ ಆರಂಭದಲ್ಲಿ ಖರ್ಗ್ ದ್ವೀಪದಿಂದ ಹೊರಟು ಏಪ್ರಿಲ್ 4ರಂದು ವಡಿನಾರ್ ತಲುಪುವ ನಿರೀಕ್ಷೆಯಿದೆ.

ಕಮೊಡಿಟಿ ಮಾರುಕಟ್ಟೆ ವಿಶ್ಲೇಷಕ ಸಂಸ್ಥೆ ಕ್ಲೆಪರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಪ್ರಕಾರ, 2019ರ ಮೇ ಬಳಿಕ ಭಾರತಕ್ಕೆ ಬರುತ್ತಿರುವ ಮೊದಲ ಇರಾನಿಯನ್ ತೈಲ ಸರಕು ಇದು.

ಪಾವತಿ ಸಮಸ್ಯೆ ಮುಂದುವರಿಕೆ: ಅಮೆರಿಕ ನೀಡಿರುವ ಸಡಿಲಿಕೆ ಕೇವಲ ತಾತ್ಕಾಲಿಕವಾಗಿದ್ದು, ಏಪ್ರಿಲ್ 19ರವರೆಗೆ ಮಾತ್ರ ಮಾನ್ಯವಾಗಿದೆ. ಜಾಗತಿಕ ಬ್ಯಾಂಕಿಂಗ್ ಸಂಪರ್ಕ ವ್ಯವಸ್ಥೆಯಾದ ಸ್ವಿಫ್ಟ್‌ನಿಂದ ಇರಾನ್ ಹೊರಗಿಡಲ್ಪಟ್ಟಿರುವುದರಿಂದ ಪಾವತಿ ಹೇಗೆ ನಡೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

ಗುವಾಹಟಿ: ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆಗಾಗಿ ಭಾರತೀಯ ಜನತಾ ಪಾರ್ಟಿ ಮಂಗಳವಾರ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಅಧಿಕಾರಕ್ಕೆ ಬಂದ ಮೂರು ತಿಂಗಳೊಳಗೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತರುವುದಾಗಿ ಭರವಸೆ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಮುಖ್ಯಮಂತ್ರಿಹಿಮಂತಬಿಸ್ವಶರ್ಮಾ, 31ಭರವಸೆಗಳನ್ನೊಳಗೊಂಡ ಸಂಕಲ್ಪ ಪತ್ರವನ್ನು ಬಿಡುಗಡೆ ಮಾಡಿದರು. ಲವ್ ಜಿಹಾದ್ ಮತ್ತು 'ಲ್ಯಾಂಡ್ ಜಿಹಾದ್' ವಿರುದ್ಧ ಕಾನೂನು ತರುವುದಾಗಿ ಪಕ್ಷ ಪ್ರತಿಜ್ಞೆ ಮಾಡಿದೆ. ಬುಡಕಟ್ಟು ಸಮುದಾಯಗಳ ಅವರನ್ನು ಏನಾಸಂ ವ್ಯಾಪ್ತಿಯಿಂದ ಹೊರಗಿಡಲಾಗುವುದು, ಎಂದು ತಿಳಿಸಲಾಗಿದೆ.

ಅಕ್ರಮ ವಲಸಿಗರ ಪತ್ತೆಗೆ 'ವಲಸಿಗರ (ಅಸ್ಸಾಂನಿಂದ ಹೊರಹಾಕುವಿಕೆ) ಕಾಯ್ದೆ, 1950' ಅನ್ನು ಜಾರಿಗೆ ತರುವುದಾಗಿ ಪ್ರಣಾಳಿಕೆ ವಿವರಿಸಿದೆ. 'ಮಿಷನ್ ಬಸುಂಧರಾ' ಅನ್ವಯದಲ್ಲಿ ಅತಿಕ್ರಮಿತ ಭೂಮಿಯನ್ನು ಮುಕ್ತಗೊಳಿಸಿ ಅಧಿಕೃತ ನಾಗರಿಕರಿಗೆ ಹಕ್ಕುಗಳನ್ನು ನೀಡುವ, ಅತಿಕ್ರಮಣಕ್ಕೊಳಗಾದ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸುವ ಭರವಸೆಯೂ ಒಳಗೊಂಡಿದೆ.

ಮೂಲಸೌಕರ್ಯಕ್ಕಾಗಿ 5 ಲಕ್ಷ ಕೋಟಿ ರೂ. ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 18,000 ಕೋಟಿ ರೂ. ಹೂಡಿಕೆ ಮಾಡುವ ಪ್ರಸ್ತಾವನೆ ಇಡಲಾಗಿದೆ. 2 ಲಕ್ಷ ಸರ್ಕಾರಿ ಉದ್ಯೋಗಗಳು, ಅರುಣೋದೋಯ ಯೋಜನೆಯಡಿ ಮಾಸಿಕ ಧನಸಹಾಯವನ್ನು 3,000 ರೂ.ಗೆ ಏರಿಕೆ ಮತ್ತು ಚಹಾ ತೋಟದ ಕಾರ್ಮಿಕರ ದಿನಗೂಲಿಯನ್ನು 500 ರೂ.ಗೆ ಹೆಚ್ಚಿಸುವ ಭರವಸೆ ನೀಡಲಾಗಿದೆ.

ಇನ್‌ಫ್ಲುಯೆನ್ಸರ್ಸ್ ಮೇಲೆ ಕೇಂದ್ರದ ಹದ್ದಿನ ಕಣ್ಣು

ಹೊಸದಿಲ್ಲಿ: ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಹೊಸ ಐಟಿ (ಡಿಜಿಟಲ್) ನಿಯಮ 2026 ಕಾಯ್ದೆ ಕರಡುಪ್ರತಿಯನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ಇನ್‌ಫ್ಲುಯೆನ್ಸರ್‌ಗಳು ಮತ್ತು ವೈಯಕ್ತಿಕ ಬಳಕೆದಾರರು ಅಪ್ಲೋಡ್ ಮಾಡುವ ಡಿಜಿಟಲ್ ಕಂಟೆಂಟ್ ಮೇಲೆ ಹೆಚ್ಚಿನ ನಿಗಾ ಇರಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಐಟಿ ಕಾಯ್ದೆಯನ್ನು ಪರಿಚಯಿಸಲು ಮುಂದಾಗಿದೆ.

- ಸರ್ಕಾರ ಅಥವಾ ಕೋರ್ಟ್ ಆದೇಶಿಸಿದರೆ 3 ಗಂಟೆಗಳಲ್ಲಿ ಪೋಸ್ಟ್ ಅಳಿಸಿಹಾಕಬೇಕು (ಈ ಹಿಂದೆ 36 ಗಂಟೆಗಳಲ್ಲಿ)
- ಡೀಪ್‌ಫೇಕ್ ನಗ್ನತೆ ಅಥವಾ ದ್ವೇಷಪೂರಿತ ನೀಲಿ ಚಿತ್ರಗಳ ಪೋಸ್ಟ್ ಅನ್ನು 2 ಗಂಟೆಗಳಲ್ಲಿ ಅಳಿಸಿಹಾಕಬೇಕು
- ಡೀಪ್‌ಫೇಕ್ ಪ್ರಕರಣದಲ್ಲಿ 3 ವರ್ಷ ಜೈಲು ಮತ್ತು ದಂಡ, ಕಂಟೆಂಟ್ ನಗ್ನತೆಯಿಂದ ಕೂಡಿದ್ದರೆ 5 ವರ್ಷ ಜೈಲು
- ಎಐ ಸುದ್ದಿ ವಿಡಿಯೋ, ವಾಯ್ಸ್ ಓವರ್ ಅಥವಾ ಚಿತ್ರಗಳನ್ನು ಪೋಸ್ಟ್ ಮಾಡುವ ಕ್ರಿಯೇಟರ್ಸ್ ಅದರಲ್ಲಿ ಎಐ-ಜನರೇಟೆಡ್ ವಾಟರ್‌ಮಾರ್ಕ್ ಬಳಸುವುದು ಕಡ್ಡಾಯ
- ವಯೋಮಾನ ಆಧಾರಿತ ಡಿಜಿಟಲ್ ಕಂಟೆಂಟ್ ಜಾರಿಗೆ ಬರಲಿದ್ದು, ಯು (ಯುನಿವರ್ಸಲ್), 7+, 13+, 16+ ಅಥವಾ ಎ(ಅಡಲ್ಟ್) ಲೇಬಲ್ ಬಳಕೆ ಸಾಧ್ಯತೆಯಿದೆ.
- ಕೋಮು ಗಲಭೆ ಅಥವಾ ಚುನಾವಣೆ ವೇಳೆ ಸರ್ಕಾರಿ ನಿರ್ದೇಶ ಉಲ್ಲಂಘಿಸುವುದು ಐಟಿ ನಿಯಮ ಉಲ್ಲಂಘನೆ ಎನಿಸಿಕೊಳ್ಳಲಿದೆ.

ಬಿಇಎಲ್ ಜತೆ ₹1,950 ಕೋಟಿ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಅತಿ ಸೂಕ್ಷ್ಮಸಂವೇದಿ ಗಡಿ ವಲಯಗಳಲ್ಲಿ ದೇಶದ ವಾಯು ರಕ್ಷಣಾ ಸಾಮರ್ಥ್ಯಗಳ ಬಲವರ್ಧನೆಗಾಗಿ ಭಾರತ ಸರಕಾರ ಅತ್ಯಂತ ಮಹತ್ವದ ಹೆಜ್ಜೆಯಿರಿಸಿದೆ .ಇದರಂಗ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಾಗಣೆಯೂ ಸಾಧ್ಯವಿರುವ ಎರಡು ರಾಡಾರ್‌ಗಳ ಖರೀದಿ ಮತ್ತು ಇವುಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳ ಒದಗಣೆಗಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜತೆ 1950ಕೋಟಿ ರೂ.ಮೊತ್ತದ ಒಪ್ಪಂದಕ್ಕೆ ಸರಕಾರ ಸಹಿ ಹಾಕಿದೆ.

ಅತ್ಯೆತ್ತರದ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ರಾಡಾರ್‌ಗಳ ಲಭ್ಯತೆ ತೀರಾ ಸೀಮಿತವಿದೆ. ಇಂತಹ ಪ್ರದೇಶಗಳಲ್ಲಿ ವಿಮಾನ, ಹೆಲಿಕಾಪ್ಟರ್‌ಗಳು, ಡ್ರೋನ್‌ಗಳ ಮುಖೇನ ಎದುರಾಗುವ ಯಾವುದೇ ಬೆದರಿಕೆಗಳ ಪತ್ತೆ ಮಾಡಲು ಪ್ರಸ್ತಾವಿತ ಪರ್ವತ ರಾಡಾರ್‌ಗಳು ತುಂಬು ಪೂರಕವಾಗಲಿದೆ.


ಕೇರಳ ವಿಧಾನಸಭೆ: ಆರೋಗ್ಯ ಕಾರ್ಡ್, ಶಬರಿಮಲೆ ತನಿಖೆ ಸಿಬಿಐಗೆ ಸೇರಿ ಹಲವು ಭರವಸೆ

ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದ್ದು, ಇದರಂತೆ, ಅನೇಕ ಅಭಿವೃದ್ಧಿ ಯೋಜನೆ, ಆರೋಗ್ಯ ಸಂಬಂಧಿ ಯೋಜನೆ ಮತ್ತು ಮೂಲಸೌಕರ್ಯ ಒದಗಿಸುವ ಬಗ್ಗೆ ಜನತೆಗೆ ಭರವಸೆ ನೀಡಿದೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಇಲ್ಲಿನ ಇಡಪಳಂಜಿಯಲ್ಲಿನ ಆರ್‌ಡಿಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿಯ ಕೇರಳ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು.

ಕೇರಳದಲ್ಲಿ ಬಿಜೆಪಿ ಈ ಬಾರಿ ಬೃಹತ್ ಸಾಧನೆಯ ಗುರಿ ಹೊಂದಿ ಕೆಲಸ ಮಾಡುತ್ತಿದ್ದು, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಮೂಡಿಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ''ವಿಕಸಿತ ಕೇರಳಂ''ನ ಧ್ಯೇಯದೊಂದಿಗೆ ಕೇರಳದ ಆರ್ಥಿಕ ಬೆಳವಣಿಗೆ ಮತ್ತು ಕೇರಳದ ಅಸ್ಮಿತೆಗಳನ್ನು ರಕ್ಷಿಸುವ ನಿರ್ದಿಷ್ಟ ಭರವಸೆಗಳೊಂದಿಗೆ ಆಳುವ ಎಡರಂಗ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಪರ್ಯಾಯ ಪಕ್ಷವಾಗಿ ಬಿಜೆಪಿ ಮೂಡಿಬಂದಿದೆ.



ಶಬರಿಮಲೆ ತನಿಖೆ: ಕೇರಳದ ಹಿಂದುಗಳ ಪರಮಪವಿತ್ರ ಕ್ಷೇತ್ರವಾದ ಶಬರಿಮಲೆ ಶ್ರೀ ಅಯ್ಯಪ್ಪ ದೇವಾಲಯದಲ್ಲಿ ಭಕ್ತರ ಕಾಣಿಕೆ, ಚಿನ್ನದ ಹೊದಿಕೆ ಲೂಟಿಯಂತಹ ಹೀನ ಪ್ರಕರಣಗಳು ನಡೆದಿರುವುದು ಹಿಂದುಗಳಲ್ಲಿ ತೀವ್ರ ಆಘಾತ ತಂದಿರುವಂತೆಯೇ, ಶಬರಿಮಲೆಯಲ್ಲಿ ನಡೆದ ಚಿನ್ನ ಲೂಟಿ ಹಗರಣಗಳ ಕುರಿತಂತೆ ಕಾಲಮಿತಿಯ ಸಿಬಿಐ ತನಿಖೆ ನಡೆಸುವ ಮತ್ತು ದೇವಾಲಯಗಳ ಆಡಳಿತದಲ್ಲಿ ಭಕ್ತರ ಹೆಚ್ಚಿನ ಪಾಲ್ಗೊಳ್ಳುವಿಕೆ ಹಾಗೂ ಭ್ರಷ್ಟಾಚಾರಕ್ಕೆ ತಡೆಹಾಕುವ ಮೂಲಕ ದೇವಸ್ವಂ ಮಂಡಳಿಗಳನ್ನು ಪುನರಾಚಿಸುವ ಬಗೆಗೂ ಬಿಜೆಪಿ ಸ್ಪಷ್ಟ ಭರವಸೆ ನೀಡುವ ಮೂಲಕ ಅಯ್ಯಪ್ಪ ಭಕ್ತರ ಕಳವಳಕ್ಕೆ ಸ್ಪಂದನ ನೀಡಿದೆ.

ಬಡವರು ಮತ್ತು ಮಹಿಳೆಯರ ಅಭಿವೃದ್ಧಿಗೆ ಒತ್ತು ನೀಡಿರುವ ಪ್ರಣಾಳಿಕೆಯು ,ಬಡ-ದುರ್ಬಲ ವರ್ಗದ ಕುಟುಂಬಗಳಿಗಾಗಿ ಅಭಿವೃದ್ಧಿ ಯೋಜನೆಗಳು ಮತ್ತು ಬಡಕುಟುಂಬದ ಮುಖ್ಯಸ್ಥರಾಗಿರುವ ಮಹಿಳೆಯರು, ವಿಧವೆಯರು, 70ಕ್ಕಿಂತ ಮೇಲಿನ ಹಿರಿಯ ನಾಗರಿಕ ಮಹಿಳೆಯರಿಗೆ ತಿಂಗಳಿಗೆ 3000ರೂ.ಗಳ ಪಿಂಚಣಿ ಯೋಜನೆಯೊಂದನ್ನು ಪ್ರಕಟಿಸಿದೆ.


ಇನ್ನೊಂದು ಪ್ರಮುಖ ಭರವಸೆಯಂತೆ, ಬಡ ಮತ್ತು ಬಿಪಿಎಲ್ ಕುಟುಂಬಗಳ ಮಹಿಳೆಯರಿಗಾಗಿ ''ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್''ಯೋಜನೆಯೊಂದನ್ನು ಘೋಷಿಸಿದೆ. ಇದರಂತೆ ತಿಂಗಳಿಗೆ 2,500ರೂ.ಗಳ ಮಾಸಿಕ ರಿಚಾರ್ಜ್ ಕಾರ್ಡ್ ಒದಗಿಸಲಾಗುತ್ತದೆ. ಈ ಕಾರ್ಡಿನ ಮೂಲಕ ಈ ಬಡ ಕುಟುಂಬಗಳು ತಮಗೆ ಅಗತ್ಯವಿರುವ ದಿನಸಿಗಳು ಮತ್ತು ಔಷಧಗಳನ್ನು ಖರೀದಿಸಬಹುದಾಗಿದೆ.

ಭಾರತದ ಮೋಸ್ಟ್ ವಾಂಟೆಡ್ ಉಗ್ರ | ಹಲವು ದಾಳಿಯ ಕಿಂಗ್‌ಪಿನ್

ಮಸೂದ್ ಅಜರ್ ಸಹೋದರ ಹತ್ಯೆ

ಹೊಸದಿಲ್ಲಿ: ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್‌ನನ್ನೇ ಅನಾಮದೇಯರು ಹೊಡೆದುರುಳಿಸಿದ್ದಾರೆ.ಈತ ಭಾರತದಲ್ಲಿ ಹಲವು ಉಗ್ರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದನು.

ಅನ್ವರ್ ಅಂತಾರಾಷ್ಟ್ರೀಯ ಭಯೋತ್ಪಾದಕ ಮಸೂದ್ ಅಜರ್‌ನ ಐವರು ಸಹೋದರರಲ್ಲಿ ಒಬ್ಬ, ನಿಷೇಧಿತ ಸಂಘಟನೆ ಜೈಶ್-ಎ-ಮೊಹಮ್ಮದ್‌ನ ಕಾರ್ಯಾಚರಣೆಗಳಲ್ಲಿ ಈತನೂ ಪ್ರಮುಖ ಪಾತ್ರ ವಹಿಸಿದ್ದ. ಅನ್ವರ್‌ನ ಅಂತ್ಯಕ್ರಿಯೆ ಪಾಕಿಸ್ತಾನದ ಬಹಾವಲ್ಪುರದ ಜಾಮಿಯಾ ಮಸೀದಿ ಉಸ್ಮಾನ್ ವಾಲಿಯಲ್ಲಿ ಸೋಮವಾರ ನಡೆದಿದೆ. ಪಾಕಿಸ್ತಾನದ ಅಧಿಕಾರಿಗಳಾಗಲಿ ಅಥವಾ ಜೈಶ್-ಎ-ಮೊಹಮ್ಮದ್ ಸಂಘಟನೆಯ ಅಧಿಕೃತ ಮೂಲಗಳಾಗಲಿ ಆತನ ಸಾವಿಗೆ ದೀರ್ಘಕಾಲದ ಕಾಯಿಲೆ ಅಥವಾ ಹಠಾತ್ ವೈದ್ಯಕೀಯ ತುರ್ತು ಪರಿಸ್ಥಿತಿಯಂತಹ ಯಾವುದೇ ನಿರ್ದಿಷ್ಟ ಕಾರಣವನ್ನು ಉಲ್ಲೇಖಿಸಿಲ್ಲ. ಕೆಲವು ವರದಿಗಳು, ಆತ, ಇತ್ತೀಚೆಗೆ ಸ್ಥಾಪಿಸಲಾದ ಸಂಘಟನೆಯ ಮಹಿಳಾ ವಿಭಾಗ 'ಜಮಾತ್-ಉನ್-ಮೊಮಿನಾತ್' ಕೇಂದ್ರದಲ್ಲಿ ಅಥವಾ ಅದರ ಸಮೀಪ ಮೃತಪಟ್ಟಿರಬಹುದು ಎಂದಿವೆ.



ಕುಟುಂಬ ಸದಸ್ಯರ ಸಾವು: ಕಳೆದ ವರ್ಷ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂದೂರ್‌ನ ವೈಮಾನಿಕ ದಾಳಿಯಲ್ಲಿ ತನ್ನ ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಸಹಚರರು ಮೃತಪಟ್ಟಿದ್ದರು ಎಂದು ಮಸೂದ್ ಅಜರ್ ಹೇಳಿಕೊಂಡಿದ್ದ.

ಮಸೂದ್ ಅಜರ್ ಹಿನ್ನೆಲೆ: ಮಸೂದ್ ಅಜರ್ ವಿಶ್ವಸಂಸ್ಥೆಯಭದ್ರತಾಮಂಡಳಿಯಿಂದ ಪಟ್ಟಿ ಮಾಡಲ್ಪಟ್ಟ ಅಂತಾರಾಷ್ಟ್ರೀಯ ಭಯೋತ್ಪಾದಕ.

1994 ರಲ್ಲಿ ಭಾರತ ಈತನನ್ನು ಬಂಧಿಸಿತ್ತಾದರೂ, ಏರ್ ಇಂಡಿಯಾ ವಿಮಾನ ಐಸಿ 814 ರ ಅಪಹರಣದ ನಂತರ ಬಿಡುಗಡೆ ಮಾಡಲಾಗಿತ್ತು. ಈತ 2001 ರ ಸಂಸತ್ ಭವನದ ದಾಳಿ, 2008 ರ ಮುಂಬೈ ದಾಳಿ, 2016 ರ ಪಠಾಣ್‌ಕೋಟ್ ದಾಳಿ ಮತ್ತು 2019 ರ ಪುಲ್ವಾಮಾ ದಾಳಿ ಸೇರಿದಂತೆ ಹಲವು ಪಿತೂರಿಗಳಲ್ಲಿ ಭಾಗಿಯಾಗಿದ್ದಾನೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,50,000 (2,45,000) ಅಪರಂಜಿ ಚಿನ್ನ: 1,49,510 (1,48,260) ಆಭರಣ ಚಿನ್ನ: 1,37,050 (1,35,900) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 71,947 (1,635↓) ಎನ್‌ಎಸ್‌ಇ 22,331 (488↓) $1 = ₹93.72

ಕಿರುಸುದ್ದಿ

ಕಾರ್ಯನಿರ್ವಹಿಸುವ ಸ್ಥಳದಲ್ಲಿಯೇ ಗಣತಿಗೆ ನಿಯೋಜಿಸಿ



ಹುಬ್ಬಳ್ಳಿ: ಸರ್ಕಾರ ನಡೆಸುತ್ತಿರುವ ಗಣತಿಕಾರ್ಯಕ್ಕೆ ಶಿಕ್ಷಕರಿಗೆ ವಹಿಸಲಾಗಿದ್ದು, ಅವರು ಕಾರ್ಯನಿರ್ವಹಿಸುವ ಸ್ಥಳದಲ್ಲಿಯೇ ನಿಯೋಜಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಅವರಿಗೆ ಸೂಚಿಸಿದರು.

ಜಿಲ್ಲೆಯ ಗ್ರಾಮೀಣದ ಬಹುತೇಕ ಪ್ರೌಢಶಾಲಾ ಶಿಕ್ಷಕರಿಗೆ ಹುಬ್ಬಳ್ಳಿ ನಗರದಲ್ಲಿ ಗಣತಿ ಕಾರ್ಯಕ್ಕೆ ನಿಯೋಜಿಸಲಾಗಿದೆ. ಇದು ಮಹಿಳಾ ಶಿಕ್ಷಕರಿಗೆ ಸಮಸ್ಯೆ ಆಗುತ್ತದೆ. ನಗರವಾಸಿಗಳು ಈ ಹಿಂದೆ ನಡೆಸಿದ ಸಾಮಾಜಿಕ ಶೈಕ್ಷಣಿಕ ಮತ್ತು ಜಾತಿಗಣತಿಗಳಲ್ಲಿ ಸರಿಯಾಗಿ ಸ್ಪಂದನೆ ಇಲ್ಲದಿರುವುದು ಇದಕ್ಕೆ ಕಾರಣ ಎಂದು ಶಿಕ್ಷಕಿಯರ ಮುಖಂಡರಾದ ವನಮಾಲಾ ಹೆಗಡೆ ಸಭಾಪತಿಗಳ ಗಮನಕ್ಕೆ ತಂದರು.

ಇದೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ನಾರಾಯಣ ಭಜಂತ್ರಿ ರವರು ಮನವಿ ಸಲ್ಲಿಸಿ ಪ್ರೌಢಶಾಲಾ ಶಿಕ್ಷಕರು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯದಲ್ಲಿದ್ದಾರೆ. 8 ಮತ್ತು9ನೇ ತರಗತಿಗಳ ಪರೀಕ್ಷೆಯೂ ನಡೆದಿರುತ್ತದೆ. ಇವರನ್ನು ಗಣತಿಯಿಂದ ಕೈಬಿಡುವುದು ಒಳಿತು ಎಂದು ಮನವಿ ಮಾಡಿದರು. ಜಿಲ್ಲಾ ಉಪಾಧ್ಯಕ್ಷ ಪ್ರಮೋದ್ ಹರಿಬಟ್, ಜಿಲ್ಲಾ ಕಾರ್ಯದರ್ಶಿ ಭೀಮರಾವ್ ಬಶೆಟ್ಟಿ, ಧಾರವಾಡ ತಾಲೂಕು ಅಧ್ಯಕ್ಷ ಮಂಜುನಾಥ ಕುರಕುರಿ, ಕಾರ್ಯದರ್ಶಿ ಬಸವರಾಜ ವಾಸನದ, ರವಿಕುಮಾರ ದಾಸರ, ಪ್ರಕಾಶ ಬೂತಲ, ಸುರೇಶ್ ಮುಗಳಿ, ರೇಣುಕಾ ಪಾಟೀಲ, ಶ್ರೀದೇವಿ ದೊಡಮನಿ, ವಿಜಯಲಕ್ಷ್ಮಿ ಪಾಟೀಲ ಸೇರಿದಂತೆ ನೂರಾರು ಶಿಕ್ಷಕರು ಭಾಗವಹಿಸಿದ್ದರು.

ನೀರಿಗಾಗಿ ಪ್ರತಿಭಟನೆ



ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ವಾರ್ಡ್9 ನಂ.55ರ ನಿವಾಸಿಗಳು 12 ದಿನ ಕಳೆದರು ಕುಡಿಯುವ ನೀರು ಸರಬರಾಜು ಮಾಡದ ಕಾರಣ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ಇಲ್ಲಿಯ ಮುದಿ ಹನುಮಾನ ದೇವಸ್ಥಾನ ಹತ್ತಿರ ರಸ್ತೆ ತಡೆದು ಎಲ್ ಆ್ಯಂಡ್ ಟಿ ಹಾಗೂ ಮಹಾನಗರ ಪಾಲಿಕೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ 24 ಗಂಟೆ ನೀರು ಸರಬರಾಜು ಮಾಡಲಾಗುತ್ತದೆ ಎಂದು ಬರಿ ಜನಪ್ರತಿನಿಧಿಗಳು ಆಶ್ವಾಸನೆ ನೀಡುತ್ತಿದ್ದು, 12 ದಿನ ಕಳೆದರು ನೀರು ಬರುತ್ತಿಲ್ಲ. ಹೀಗಾದರೆ ಜನ ಸಾಮಾನ್ಯರು ಹೇಗೆ ಜೀವನ ನಡೆಸಬೇಕು. ನೀರು ಬಿಡುವರೆಗೂ ರಸ್ತೆ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಆಗ ಸ್ಥಳಕ್ಕೆ ಬಂದ ಪಾಲಿಕೆ ಸದಸ್ಯ ಇಕ್ಬಾಲ್ ನವಲೂರ ಎಲ್ ಆ್ಯಂಡ್ ಟಿ ಸಿಬ್ಬಂದಿ ಕರೆಸಿ ಅವರೊಂದಿಗೆ ಚರ್ಚಿಸಿ ನೀರು ಸರಬರಾಜು ಮಾಡುವುದಾಗಿ ಆಶ್ವಾಸನೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂಪಡೆದರು. ಈ ವೇಳೆ ವಾರ್ಡ್‌ನ 25ಕ್ಕೂ ಹೆಚ್ಚು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಿಡಿಲು ಬಡಿದು ಯುವಕ ಸಾವು

ಬೀದರ್: ಸಿಡಿಲು ಬಡಿದು ಯುವಕನೊಬ್ಬ ಮೃತಪಟ್ಟ ಘಟನೆ ಔರಾದ್ ತಾಲೂಕಿನ ಬಾದಲಗಾಂವ್ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ನಡೆದಿದೆ. ರಾಹುಲ್ ಭಾಸ್ಕರೆ (25) ಮೃತಪಟ್ಟ ಯುವಕ. ರಾಹುಲ್ ಸೋಮವಾರ ಮುಂಜಾನೆ ಕೆಲಸದ ನಿಮಿತ್ತ ಹೊಲಕ್ಕೆ ಹೋಗಿ ಮರಳಿ ಬರುತ್ತಿದ್ದ ವೇಳೆ ಗುಡುಗು ಸಹಿತ ಮಳೆ ಸುರಿದಿದೆ. ಈ ಹಿನ್ನೆಲೆಯಲ್ಲಿ ರಾಹುಲ್ ಒಂದು ಮರದ ಕೆಳಗೆ ನಿಂತಿದ್ದರು. ಈ ವೇಳೆ ಸಿಡಿಲು ಬಡಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಕುರಿತು ಔರಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿದ್ಯುತ್ ತಂತಿ ಸ್ಪರ್ಶಿಸಿ ರೈತ ಸಾವು

ಯರಗಟ್ಟಿ: ವಿದ್ಯುತ್ ತಂತಿ ಸ್ಪರ್ಶಿಸಿ ತಾಲೂಕಿನ ಕೊಡ್ಲಿವಾಡ ರೈತ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜಮೀನನಲ್ಲಿ ಟಿಸಿ ಡಿವಾಲ್ ಹಾಕಲು ಹೋಗಿ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿ ರೈತ ಶ್ರೀಕಾಂತ ದಾನನ್ನವರ(63) ಸ್ಥಳದಲ್ಲೇ ಮೃಪಟ್ಟಿದ್ದಾರೆ. ಈ ಘಟನೆ ಯರಗಟ್ಟಿ ತಾಲೂಕಿನ ಕೊಡ್ಲಿವಾಡ ಗ್ರಾಮದಲ್ಲಿ ಸಂಭವಿಸಿದೆ. ಸ್ಥಳಕ್ಕೆ ಮುರಗೋಡ ಪೊಲೀಸ್ ಠಾಣೆಯ ಪಿಎಸ್ಐ ಎಲ್.ಬಿ.ಮಾಳಿ, ಎಎಸ್ಐ ಜಿ.ಎಸ್.ಆಲದಕಟ್ಟಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಳಗಾವಿ ಜಿಲ್ಲೆಗೂ ತಟ್ಟಿದ ಎಲ್‌ಪಿಜಿ ಸಿಲಿಂಡರ್ ಕೊರತೆ

ಕೈ ಹಿಡಿದ ಗೋಬರ್ ಗ್ಯಾಸ್ ಪದ್ಧತಿ

ಬಾಳಗೌಡ ಪಾಟೀಲ

ದಿಗಂತ ವಿಶೇಷ

ಬೆಳಗಾವಿ: ಜಾಗತಿಕ ಮಟ್ಟದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಕಾರ್ಮೋಡ ಕವಿದಿದೆ. ಇದರ ನೇರ ಪರಿಣಾಮ ಭಾರತಕ್ಕೂ ತಟ್ಟಿದ್ದು, ಅಡುಗೆ ಅನಿಲದ ಮೇಲೆ ಪರಿಣಾಮ ಬೀರಿದೆ. ಆದರೆ, ಗಡಿ ಜಿಲ್ಲೆ ಬೆಳಗಾವಿಯ ರೈತರಿಗೆ ಮಾತ್ರ ಈ ಬಗ್ಗೆ ಕಿಂಚಿತ್ತೂ ಆತಂಕವಿಲ್ಲ. ಅವರು ಈಗ ಗೋಬರ್ ಗ್ಯಾಸ್ ಮಂತ್ರ ಜಪಿಸುತ್ತಿದ್ದಾರೆ.

ಬೆಳಗಾವಿ ತಾಲೂಕಿನ ಕಡೋಲಿ ಸೇರಿದಂತೆ ಗ್ರಾಮೀಣ ಭಾಗದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ರೈತರು ಮಾತ್ರ ಈ ಸಂಕಷ್ಟಕ್ಕೆ ಸವಾಲು ಹಾಕಿದ್ದಾರೆ. ಹೈನುಗಾರಿಕೆಯನ್ನೇ ನಂಬಿಕೊಂಡಿರುವ ಇಲ್ಲಿನ ರೈತರು, ಪರಿಸರವಾದಿ ಶಿವಾಜಿರಾವ್ ಕಾಗಣೀಕರ ಅವರ ಜನಜಾಗೃತಿಯಿಂದಾಗಿ ಸುಮಾರು 30 ವರ್ಷಗಳ ಹಿಂದೆಯೇ ಸಗಣಿ ಗೋಬರ್ ಗ್ಯಾಸ್ ಅಳವಡಿಸಿಕೊಂಡಿದ್ದರು.

ಮಧ್ಯದಲ್ಲಿ ಆಧುನಿಕತೆಯ ವ್ಯಾಮೋಹಕ್ಕೆ ಬಿದ್ದು ಎಲ್‌ಪಿಜಿ ಸಿಲಿಂಡರ್ ಮೊರೆ ಹೋಗಿದ್ದ ರೈತರು, ಈಗ ಸಿಲಿಂಡರ್ ಬೆಲೆ ಏರಿಕೆ ಮತ್ತು ಕೊರತೆಯಿಂದ ಬೇಸತ್ತು ಮತ್ತೆತಮ್ಮ ಹಳೆಯ ಸಗಣಿ ಗೋಬರ್ ಗ್ಯಾಸ್ ಪದ್ಧತಿಯತ್ತ ಮುಖ ಮಾಡುತ್ತಿದ್ದಾರೆ. ಒಂದು ಬುಟ್ಟಿ ಸಗಣಿ ಹಾಕಿದರೇ ಸಾಕು ಗೋಬರ್ ಗ್ಯಾಸ್ ನಿರ್ವಹಿಸುತ್ತದೆ. ಇದರಿಂದ ಹಣ ಕೂಡ ಉಳಿತಾಯವಾಗುತ್ತದೆ. ಗೋಬರ್ ಗ್ಯಾಸ್ ಇದ್ದವರೂ ಅದನ್ನು ಉಪಯೋಗಿಸಿದರೇ, ಎಲ್‌ಪಿಜಿ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎನ್ನುವುದು ರೈತರ ಅಭಿಪ್ರಾಯ.

ಸಿಲಿಂಡರ್ ಬುಕ್ಕಿಂಗ್ ಮಾಡುವ ಕಿರಿಕಿರಿ ಇಲ್ಲದ ಈ ಪರಿಸರ ಸ್ನೇಹಿ ಇಂಧನ ವ್ಯವಸ್ಥೆ ಈಗ ಇಡೀ ಜಿಲ್ಲೆಗೆ ಮಾದರಿಯಾಗಿದೆ. ಆಧುನಿಕ ಸೌಲಭ್ಯಗಳ ನಡುವೆಯೂ ಸ್ವಾವಲಂಬಿ ಬದುಕು ಹೇಗೆ ಸಾಧ್ಯ ಎಂಬುವುದನ್ನು ಕಡೋಲಿ ಭಾಗದ ರೈತರು ಇಡೀ ದೇಶಕ್ಕೆ ತೋರಿಸಿಕೊಟ್ಟಿದ್ದಾರೆ.



> ಕಳೆದ 30 ವರ್ಷಗಳಿಂದ ಗೋಬರ್ ಗ್ಯಾಸ್‌ನೇ ಅಡುಗೆಗಾಗಿ ಉಪಯೋಗಿಸುತ್ತಿದ್ದೆವು. ನಂತರ ಎಲ್‌ಪಿಜಿ ಬಳಕೆಯಿಂದ ಅದು ನಿಂತು ಹೋಗಿತ್ತು. ಈಗ ಎಲ್‌ಪಿಜಿ ಕೊರತೆ ಹಿನ್ನೆಲೆ ಗೋಬರ್ ಗ್ಯಾಸ್‌ನ್ನು ದುರಸ್ತಿ ಮಾಡಿಕೊಂಡಿದ್ದು, ಅದನ್ನೇ ಮತ್ತೆ ಬಳಸುತ್ತಿದ್ದೇವೆ.
> ■ ಶಾಂತಾ ಚೌಗುಲೆ, ರೈತ ಮಹಿಳೆ

> ಮೊದಲೂ ಕಟ್ಟಿಗೆ ಬಳಸಿ ಒಲೆಯನ್ನು ಬಳಸಲಾಗುತ್ತಿತ್ತು. ಆನಂತರ ಗೋಬರ್ ಗ್ಯಾಸ್ ಆರಂಭಿಸಲಾಯಿತು. ನಂತರ ಎಮ್ಮೆ ಕೋಣಗಳ ಸಾಕಾಣಿಕೆ ಕಡಿಮೆಯಾದಾಗ ಎಲ್‌ಪಿಜಿ ಮೊರೆ ಹೋದರು. ಆದರೇ, ಈಗ ಎಲ್‌ಪಿಜಿ ಕೊರತೆ ಹಿನ್ನೆಲೆ ಮತ್ತೆ ಜನರು ಗೋಬರ್ ಗ್ಯಾಸ್ ಕಡೆ ಮುಖ ಮಾಡಿದ್ದಾರೆ. ಪರಿಸರ ಸ್ನೇಹಿಯಾದ ಗೋಬರ್ ಗ್ಯಾಸ್‌ನ್ನು ಮತ್ತೆ ಬಳಸುತ್ತಿದ್ದೇವೆ.
> ■ ಅಪ್ಪಾಸಾಹೇಬ್ ದೇಸಾಯಿ, ಪ್ರಗತಿಪರ ರೈತ

ಪತ್ರಕರ್ತರ ಸಮ್ಮೇಳನಕ್ಕೆ ಸಿಎಂ ಭಾಗಿ: ಸಚಿವ ಖಂಡ್ರೆ



ಬೀದರ : ನಗರದಲ್ಲಿ ಏ.11 ಹಾಗೂ 12ರಂದು ಆಯೋಜಿಸಿರುವ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಲಿದ್ದಾರೆ. ಈ ಸಂದರ್ಭದಲ್ಲಿ ಯಾವುದೇ ಲೋಪವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಕರೆದ ಮುಖ್ಯಮಂತ್ರಿಯವರ ಬೀದರ್ ಭೇಟಿಯ ಪೂರ್ವಭಾವಿ ತಯಾರಿ, ಸಿಎಂಐಡಿಪಿ ಯೋಜನೆಯ ರೂ 50 ಕೋಟಿ ಕಾಮಗಾರಿಗಳ ಪ್ರಗತಿ ಪರಿಶೀಲನೆ, ಬೇಸಿಗೆ ಅವಧಿಯಲ್ಲಿ ಜಿಲ್ಲೆಯಲ್ಲಿ ಜನ-ಜಾನುವಾರು ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷ ವಹಿಸಿ ಮಾತನಾಡಿದರು.

ಸಿಎಂ ಭೇಟಿ ಸಂದರ್ಭದಲ್ಲಿ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ, ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ವಿವಿಧ ಸರ್ಕಾರಿ ಸೌಲಭ್ಯ ವಿತರಣೆ ಕಾರ್ಯಕ್ರಮ ಆಯೋಜನೆ ಮಾಡುವ ಚಿಂತನೆ ಇದೆ. ಅಂದುಕೊಂಡತೆ ಕಾರ್ಯಕ್ರಮ ಆಯೋಜನೆ ಮಾಡಿದಲ್ಲಿ ಎಲ್ಲರೂ ಸೇರಿ ಯಶಸ್ವಿಗೊಳಿಸಬೇಕೆಂದರು.

ಜಿಲ್ಲೆಯಲ್ಲಿ ಕೆಲವು ಕಡೆ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ದೂರುಗಳು ಬರುತ್ತಿವೆ. ದೂರು ಬಂದ 24 ಗಂಟೆಯಲ್ಲಿ ನೀರು ಒದಗಿಸಬೇಕು. ದೂರುಗಳ ನಿರ್ವಹಣೆಗಾಗಿ ಟಾಸ್ಕ್ ಫೋರ್ಸ್ ರಚಿಸಬೇಕು. ಜಿಲ್ಲೆಯಲ್ಲಿ ಅಕ್ರಮವಾಗಿ ಸಿಲಿಂಡರ್ ಮಾರುತ್ತಿರುವ ಕುರಿತು ಸಹ ದೂರುಗಳು ಬರುತ್ತಿವೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದರು.


ಹುಲಸೂರಿನ ಬಲವಂತರಾಯ್ ಎನ್ನುವವರ ಪಟ್ಟಾ ಜಮೀನು ಸರ್ಕಾರಿ ಜಮೀನು ಎಂದಾಗಿದೆ ಎಂದು ಅವರು ದೂರು ನೀಡಿದ್ದಾರೆ ಕೂಡಲೇ ಅದನ್ನು ಸರಿಪಡಿಸಬೇಕು. ಕಬ್ಬಿನ ಬಿಲ್ಲು ಬಾಕಿ ಉಳಿಸಿಕೊಂಡಿರುವ ಕಂಪನಿಗಳಿಗೆ ನೋಟೀಸ್ ನೀಡಿ ಎಂದು ಸಚಿವರು ತಿಳಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಸಿಇಓ ಡಾ.ಗಿರೀಶ್ ದಿಲೀಪ್ ಬದೋಲೆ, ಮಹಾನಗರ ಪಾಲಿಕೆಯ ಆಯುಕ್ತರಾದ ಮುಕುಲ್ ಜೈನ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶೀಶ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಮತೆ ಇತರರು ಉಪಸ್ಥಿತರಿದ್ದರು.

ಐತಿಹಾಸಿಕ ಕುರುಹುಗಳ ಸಂರಕ್ಷಣೆಗೆ ಮನವಿ

ಯಲ್ಲಾಪುರ: ತಾಲೂಕಿನ ಹುತ್ಕಂಡ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಹಿಂಭಾಗದ ಅರಣ್ಯ ಪ್ರದೇಶದಲ್ಲಿರುವ 12ನೇ ಶತಮಾನದ ವೀರಗಲ್ಲುಗಳು, ಶಿಲಾಶಾಸನ ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳ ಸಂರಕ್ಷಣೆಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಪತ್ರಕರ್ತೆ ದಿವ್ಯಾ ಹೆಗಡೆ ಕಬ್ಬಿಗದ್ದೆ ಅವರು ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ದೇವರಾಜು ಎ. ಅವರನ್ನು ಮಂಗಳವಾರ ಮೈಸೂರಿನಲ್ಲಿ ಭೇಟಿಯಾಗಿ ವಿನಂತಿ ಮಾಡಿದರು.

ಐತಿಹಾಸಿಕವಾಗಿ ಅತಿ ಶ್ರೀಮಂತವಾಗಿರುವ ಈ ಭಾಗದ ಇನ್ನಿತರ ಪ್ರಾಚ್ಯಾವಶೇಷಗಳ ಅಧ್ಯಯನ ಮತ್ತು ಸಂರಕ್ಷಣೆಯೂ ಆಗಬೇಕೆಂದು ಮನವಿ ಮಾಡಿದರು.



ಸಿಲಿಂಡರ್ ಅಕ್ರಮ ಮಾರಾಟ: ಆರೋಪಿ ಬಂಧನ



ಬಳ್ಳಾರಿ: ಎಲ್‌ಪಿಜಿ ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸಿ ಅಕ್ರಮವಾಗಿ ಸಂಗ್ರಹಿಸಿ, ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬರನ್ನು ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗಲಕೆರೆ-ಹೊಸಪೇಟೆ ರಸ್ತೆಯ ನಿವಾಸಿ ಗಂಗಮೂರ್ತಿ ಬಂಧಿತ ಆರೋಪಿ. ಜಿಲ್ಲೆಯಲ್ಲಿ ಅಕ್ರಮವಾಗಿ ಸಿಲಿಂಡರ್ ಸಂಗ್ರಹ ಹಾಗೂ ಸಾಗಣೆ ಮಾಡುವವರ ವಿರುದ್ಧ ಮುಲಾಜಿಲ್ಲದೇ ಕಠಿಣ ಕ್ರಮಕೈಗೊಳ್ಳುವಂತೆ ಪೊಲೀಸ್ ಇಲಾಖೆ ಮೇಲಧಿಕಾರಿಗಳ ಸೂಚನೆ ಹಿನ್ನೆಲೆ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನೇತೃತ್ವದ ತಂಡ ವ್ಯಾಪ್ತಿಯ ಗೌತಮ್ ನಗರ ಪ್ರದೇಶದ ವಾಟರ್ ಟ್ಯಾಂಕ್ ಬಳಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಜಾಲವನ್ನು ಬೇಧಿಸಿ ಆರೋಪಿಯನ್ನು ಬಂಧಿಸಿದ್ದಾರೆ. ಎಲ್‌ಪಿಜಿ ಸಿಲಿಂಡರ್‌ಗಳನ್ನು ಅಕ್ರಮವಾಗಿ ಸಂಗ್ರಹಿಸಿ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳಿಗೆ ಹಾಗೂ ಆಟೋಗಳಿಗೆ ಹೆಚ್ಚಿನ ಬೆಲೆಯಲ್ಲಿ ಅನಿಲ ತುಂಬುವ ಕುರಿತು ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ.

ಠಾಣೆಯ ಪಿಐ ಉದಯ ರವಿ ನೇತೃತ್ವದಲ್ಲಿ ಶ್ರೀನಿವಾಸ, ಬೀರಪ್ಪ, ನಾಗಿರೆಡ್ಡಿ, ರಮೇಶ್ ಬಾಬು ಸೇರಿದಂತೆ ಆಹಾರ ಇಲಾಖೆಯ ನಿರೀಕ್ಷಕ ಆದಿಶೇಷಲೂ ಅಂಬೇಡ್ಕರ್ ಅವರ ನೇತೃತ್ವದ ಜಂಟಿ ತಂಡ ಕಾರ್ಯಾಚರಣೆ ನಡೆಸಿದೆ. ಈ ಕುರಿತು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಗಿಡ ಬೆಳೆದ ವ್ಯಕ್ತಿ ಬಂಧನ



ಯರಗಟ್ಟಿ: ತಾಲೂಕಿನ ಮುಗಳಿಹಾಳ ಗ್ರಾಮದ ಹೊಲದಲ್ಲಿ ಅಕ್ರಮವಾಗಿ ಗಾಂಜಾ ಗಿಡ ಬೆಳೆದ ವ್ಯಕ್ತಿಯನ್ನು ಮುರಗೋಡ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಮುಗಳಿಹಾಳ ಗ್ರಾಮದ ನಿವಾಸಿ ಸಾಬಣ್ಣಾ ಬಸಪ್ಪ ದಳವಾಯಿ ಬಂಧಿತ ಆರೋಪಿ. ಈತನಿಂದ ಸುಮಾರು 19 ಗಾಂಜಾ ಗಿಡಗಳನ್ನು ವಶಡಿಸಿಕೊಂಡಿದ್ದಾರೆ.

ಈತನು ತಾನೇ ಲಾವಣಿ ಮಾಡಿದ ಹೊಲದಲ್ಲಿ ಗಾಂಜಾ ಗಿಡ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಮುರಗೋಡ ಪೊಲೀಸ್ ಠಾಣೆ ಸಿಪಿಐಐ ಎಂ. ಮಠಪತಿ, ಪಿಎಸ್ಐ ಎಲ್.ಬಿ.ಮಾಳಿ, ಎಎಸ್ಐ ಬಿ.ಕೆ. ರಂಗಣ್ಣವರ, ಸಿಬ್ಬಂದಿಗಳಾದ ವಿಠ್ಠಲ ಭಾಂಗಿ, ಎಂ.ಬಿ.ಸಣ್ಣನಾಯ್ಕ, ರಮೇಶ ತೇಲಿ, ಈರಣ್ಣಾ ವಕ್ಕುಂದ ಪಶುವೈದ್ಯಾಧಿಕಾರಿ ಎಂ.ವ್ಹಿ.ಪಾಟೀಲ ಅವರೊಂದಿಗೆ ದಾಳಿ ನಡೆಸಿ ಗಾಂಜಾ ಗಿಡ ಸಮೇತ ಬಂಧಿಸಿದ್ದಾರೆ. ಈ ಸಂಬಂಧ ಮುರಗೋಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪರೀಕ್ಷೆ ಹೊತ್ತಲ್ಲಿ ಗೊಂದಲ ಸೃಷ್ಟಿ ಸಲ್ಲ: ನಾರಾಯಣಸ್ವಾಮಿ

ಕೊಲ್ಹಾರ: ತ್ರಿಭಾಷಾ ತೆಗೆದು ಹಾಕಿ ರಾಜ್ಯಕ್ಕೆ ಕೆಟ್ಟ ಹೆಸರು ತರಬೇಡಿ. ಮೊದಲೇ ನಿಮ್ಮದು ಥರ್ಡ್ ಗ್ರೇಡ್ ಸರ್ಕಾರ. ಪರೀಕ್ಷೆ ಹೊತ್ತಲ್ಲಿ ಗೊಂದಲ ಸೃಷ್ಟಿಸಬೇಡಿ ಮೊದಲಿನ ಹಾಗೆ ಹಿಂದಿ ಭಾಷೆ ಮುಂದುವರಿಸಿ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಅವರು ಸ್ಥಳೀಯ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಯಲ್ಲಮ್ಮದೇವಿ ಸಿಬಿಎಸ್‌ಸಿ ಶಾಲಾ ಆವರಣದಲ್ಲಿ ನಡೆಯುತ್ತಿರುವ ಬಿಜೆಪಿ ಪ್ರಶಿಕ್ಷಣ ಮಹಾಭಿಯಾನದ ಮೊದಲನೆಯ ತಂಡದ ಸಮಾರೋಪದಲ್ಲಿ ಭಾಗವಹಿಸಿ ಹೊಸ ದಿಗಂತದೊಂದಿಗೆ ಮಾತನಾಡಿ, ಸಂವಹನಕ್ಕಾಗಿ ಎಲ್ಲ ಭಾಷೆಗಳು ನಮಗೆ ಅವಶ್ಯಕತೆ ಇದೆ. ನಾವು ಎಲ್ಲ ಭಾಷೆಗಳನ್ನು ಕಲಿಯಬೇಕು. ಕನ್ನಡಕ್ಕೆ ಮೊದಲ ಆದ್ಯತೆ ಇರಲಿ ಎಂದರು.



ಆದರೆ, ಬೇರೆ ರಾಜ್ಯದವರೊಂದಿಗೆ ಸಂಪರ್ಕಕ್ಕಾಗಿ ನಾವು ಬೇರೆ ಭಾಷೆ ಕಲಿಯಬೇಕು. ಹಿಂದಿ ಬಹಳ ದಿನಗಳಿಂದ ಶಾಲೆಗಳಲ್ಲಿ ಕಲಿತಿರುವ ಭಾಷೆ ಈಗ ಕಲಿಯುತ್ತಿರುವ ಸಂದರ್ಭದಲ್ಲಿ ಪರೀಕ್ಷೆ ಬರೆಯುತ್ತಿರುವಾಗ ತೀರ್ಮಾನ ತೆಗೆದುಕೊಂಡಿದ್ದು ಸರಿಯಲ್ಲ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಿಂದಿ ಭಾಷೆ ಮಾತನಾಡುವುದಕ್ಕೆ ಬರುವುದಿಲ್ಲ ಹಾಗಾಗಿ ಅವರು ಪಾರ್ಲಿಮೆಂಟಿಗೆ ಹೋಗೋದಿಲ್ಲ. ರಾಹುಲ್ ಗಾಂಧಿ ಓಲೈಕೆಗೆ ಪ್ರಯತ್ನಿಸಬೇಡಿ ಎಂದು ತಿವಿದರು.

ಮುಸ್ಲಿಂ ಸಮುದಾಯ ಓಲೈಕೆ | ಡಾ.ವಿನಯಾ ಭಾಷಣಕ್ಕೆ ಪ್ರತಿರೋಧ

ಸಮ್ಮೇಳನದಲ್ಲಿ ಸೈದ್ಧಾಂತಿಕ ಸಂಘರ್ಷ

ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಧಾರವಾಡ ಜಿಲ್ಲಾ 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭವು ಸಂಘರ್ಷದ ವೇದಿಕೆಯಾಗಿ ಮಾರ್ಪಟ್ಟಿತು.

ಸಮಾರೋಪ ಭಾಷಣ ಮಾಡಿದ ಡಾ.ವಿನಯಾ ಒಕ್ಕುಂದ, ತಮ್ಮ ಭಾಷಣದಲ್ಲಿ ನೀಡಿದ ಕೆಲವು (ಮುಸ್ಲಿಂ) ಪ್ರಸ್ತಾಪಗಳಿಗೆ ಸಭಿಕರ ಆಕ್ರೋಶಕ್ಕೆ ಕಾರಣವಾಗುವ ಜೊತೆ ವೇದಿಕೆ ಮುಂಭಾಗ ತೀವ್ರ ವಾಗ್ವಾದ ನಡೆಯಿತು.

ಧಾರವಾಡದ ನುಗ್ಗೇಕೇರಿ ಹನುಮಂತನ ದೇವಸ್ಥಾನದ ಮುಂದೆ ಕಲ್ಲಂಗಡಿ ಮಾರುತ್ತಿದ್ದ ಮುಸ್ಲಿಂ ವ್ಯಕ್ತಿಯ ನಷ್ಟ ಮತ್ತು ಅಲ್ಲಿನ ಘಟನೆ ಉಲ್ಲೇಖಿಸಿದರು. ಈ ವಿಷಯ ಒಂದು ವರ್ಗದ ಸಾಹಿತ್ಯಾಸಕ್ತರನ್ನು ಕೆರಳಿಸಿತು.

ಡಾ.ವಿನಯಾ ಒಕ್ಕುಂದ ಮಾತು ಮುಗಿಯುತ್ತಿದ್ದಂತೆ, ಕಲ್ಲಂಗಡಿ ಮಾರುವ ವ್ಯಕ್ತಿಯ ನೋವು ನಿಮಗೆ ಕಾಣಿಸಿತು, ಹುಬ್ಬಳ್ಳಿಯ ಮಾನ್ಯ ಪಾಟೀಲ ಘಟನೆ ಕಾಣಿಸಲಿಲ್ಲವೇ? ರಾಜೇಂದ್ರಕುಮಾರ ಮಠ ಪ್ರಶ್ನಿಸಿದರು.

ಅಲ್ಲದೇ, ಇದು ಸರ್ಕಾರಿ ಕಾರ್ಯಕ್ರಮ ಅಲ್ಲ, ಸಾಹಿತ್ಯ ಸಮ್ಮೇಳನ. ಸಾಹಿತ್ಯದ ವೇದಿಕೆಯಲ್ಲಿ ಕೇವಲ ಒಂದು ಸಮುದಾಯದ ಓಲೈಕೆಯು ಏಕೆ? ಎಂಬ ಪ್ರಶ್ನೆಗೆ ಕೆಲವು ಸಭಿಕರು ಕೂಡ ಸಾಥ್ ನೀಡಿದರು. ಸಾಹಿತಿಗಳು ಎಲ್ಲರನ್ನೂ ಸಮಾನವಾಗಿ ನೋಡಬೇಕು. ಒಂದು ಧರ್ಮ ಅಥವಾ ಸಮುದಾಯದ ಪರವಾಗಿ ವಕಾಲತ್ತು ವಹಿಸುವುದು ಸಾಹಿತ್ಯ ಸಮ್ಮೇಳನದ ಘನತೆಗೆ ತಕ್ಕುದಲ್ಲ ಎಂದು ಆಕ್ಷೇಪಿಸಿದರು.



ಸಭಿಕರ ತೀವ್ರ ಆಕ್ಷೇಪ ಮತ್ತು ವಾಗ್ವಾದದ ನಡುವೆಯೂ ಸಮಾಧಾನಚಿತ್ತರಾಗಿ ಅತೀವ ಗಂಭೀರವಾಗಿ ಪ್ರತಿಕ್ರಿಯಿಸಿದ ಡಾ.ವಿನಯಾ ಒಕ್ಕುಂದ, ಹುಬ್ಬಳ್ಳಿ ಘಟನೆಯ ಬಗ್ಗೆಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

ನಾನು ಕಲ್ಲಂಗಡಿ ಮಾರುವ ಮುಸ್ಲಿಂ ವ್ಯಕ್ತಿಯ ಉದಾಹರಿಸಿರುವುದು ಆತನ ಧರ್ಮದ ಕಾರಣಕ್ಕಾಗಿ ಅಲ್ಲ, ಬದಲಾಗಿ ರಸ್ತೆಯ ಮೇಲೆ ಚೆಲ್ಲಲ್ಪಟ್ಟ ಆತನ ಬೆವರು ಹನಿ ನೋಡಿ, ಲೇಖಕಿಯಾಗಿ ನನಗಾದ ಸಂಕಟಕ್ಕಾಗಿ. ಹಸಿವು ಮತ್ತು ನಷ್ಟಕ್ಕೆ ಯಾವುದೇ ಧರ್ಮವಿಲ್ಲ ಎಂದರು.

ಹತ್ಯೆಯಾಗಲಿ ಅಥವಾ ಅಮಾಯಕ ಜೀವದ ಹಾನಿಯಾಗಲಿ, ಅದು ಖಂಡನೀಯವೇ. ಹಿಂಸೆ ಎಲ್ಲಿಯೇ ನಡೆದರೂ, ಅದು ಮನುಕುಲಕ್ಕೆ ಮಾಡುವ ಅವಮಾನ. ಒಂದು ಘಟನೆ ಪ್ರಸ್ತಾಪಿಸಿದಾಗ ಹುಬ್ಬಳ್ಳಿಯ ಘಟನೆ ಹೇಳಲಿಲ್ಲ ಏಕೆ? ಎಂದು ರಾಜೇಂದ್ರ ತಿರುಗೇಟು ನೀಡಿದರು. ಲೇಖಕಿಯಾಗಿ ಸಮಾಜದಲ್ಲಿ ಸೌಹಾರ್ದತೆ ಕೆಡುತ್ತಿರುವಾಗ ಸುಮ್ಮನಿರಲು ಸಾಧ್ಯ ವಿಲ್ಲ, ಸಣ್ಣಪುಟ್ಟ ವ್ಯಾಪಾರಿಗಳ ಬದುಕಿನ ಮೇಲಿನ ದಾಳಿ ನಮ್ಮ ಸಂಸ್ಕೃತಿಗೆ ಶೋಭೆಯಲ್ಲ. ನಾನು ಒಂದು ಸಮುದಾಯ ಓಲೈಸಿಲ್ಲ, ಮಾನವೀಯತೆ ಬಗ್ಗೆ ಧ್ವನಿ ಎತ್ತಿರುವುದಾಗಿ ಹೇಳಿದರು. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳಿಗೆ ಗೌರವವಿರಬೇಕು. ನೀವು ನನ್ನ ಮಾತನ್ನು ವಿರೋಧಿಸುವ ಹಕ್ಕನ್ನು ಹೊಂದಿದ್ದೀರಿ, ಹಾಗೆಯೇ ಸಮಾಜದ ಕಹಿ ಸತ್ಯಗಳನ್ನು ವೇದಿಕೆಯ ಮೇಲೆ ಹೇಳುವ ಹಕ್ಕು ನನಗೂ ಇದೆ. ತಮ್ಮ ನಿಲುವನ್ನು ಗಟ್ಟಿಯಾಗಿ ಪ್ರತಿಪಾದಿಸಿದರು.

ನನ್ನ ಮಾತುಗಳು ಯಾರಿಗಾದರೂ ನೋವುಂಟು ಮಾಡಿದ್ದರೆ ಅದು ನನ್ನ ತಪ್ಪಲ್ಲ, ಆದರೆ, ಸತ್ಯವನ್ನು ಹೇಳುವಾಗ ಬರುವ ಕಹಿಯನ್ನು ನಾವೆಲ್ಲರೂ ನುಂಗಲೇಬೇಕು ಎಂದು ಹೇಳುವ ಮೂಲಕ ಡಾ.ವಿನಯಾ ಒಕ್ಕುಂದ ಅವರು ತಮ್ಮ ಭಾಷಣಕ್ಕೆ ಇತಿಶ್ರೀ ಹಾಡಿದರು.

ಅರೆಬೆಂದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ ಪ್ರಕರಣ

ಮೂವರು ಆರೋಪಿಗಳ ಬಂಧನ

ಗದಗ: ತಾಲೂಕಿನ ಹೊಂಬಳ-ಹುಯಿಲಗೋಳ ರಸ್ತೆ ಬದಿಯ ಸೇತುವೆ ಕೆಳಗೆ ಅರೆಬೆಂದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ ಪ್ರಕರಣವನ್ನು 48 ಗಂಟೆಗಳಲ್ಲಿ ಭೇದಿಸಿರುವ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಈರಪ್ಪ ಕುದರಿ (34), ಮಹಾಂತೇಶ ಹದ್ಲಿ (30) ಹಾಗೂ ರತ್ನಾ ಈರಪ್ಪ ಕುದರಿ (27) ಬಂಧಿತ ಆರೋಪಿಗಳು.

ಕೆಲವು ದಿನಗಳ ಹಿಂದೆ ನಾಪತ್ತೆಯಾಗಿದ್ದ ಯುವಕನ ಮೃತದೇಹ ಹೊಂಬಳ-ಹುಯಿಲಗೋಳ ರಸ್ತೆ ಬದಿಯ ಸೇತುವೆ ಕೆಳಗೆ ಅರೆಬರೆ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಬಳಿಕ ತನಿಖೆ ನಡೆಸಿದ ಪೊಲೀಸರು ಮೃತ ವ್ಯಕ್ತಿಯನ್ನು ಹುಯಿಲಗೋಳ ಗ್ರಾಮದ ಚಂದ್ರು ಬಸವರಾಜ ಕುರಿ (28) ಎಂದು ಗುರುತಿಸಿದ್ದರು.

ಕೊಲೆ ಆರೋಪಿಗಳ ಪತ್ತೆಗಾಗಿ ಗದಗ ಗ್ರಾಮೀಣ ಠಾಣೆ ಸಿಪಿಐ ಸಿದ್ಧರಾಮೇಶ್ವರ ಗಡೇದ ಅವರನೇತೃತ್ವದಲ್ಲಿ ಪಿಎಸ್ಐ ಎಸ್.ಬಿ.ಕವಲೂರ, ವಿ.ಜಿ.ಪವಾರ, ಸಿಬ್ಬಂದಿಯಾದ ಪ್ರಕಾಶ ಗಾಣಿಗೇರ, ಎನ್.ಜಿ.ಮಜ್ಜಿಗಿ, ಎಂ.ಬಿ.ವಡ್ಡಟ್ಟಿ, ಎಂ.ಐ.ಪಾಟೀಲ, ಖಾಜಾ ಮುಲ್ಲನವರ, ಎಲ್.ಬಿ.ಪೂಜಾರ, ಗುರುರಾಜ ಬೂದಿಹಾಳ, ಎ.ಪಿ.ದೊಡ್ಡಮನಿ, ಸಂಜಯ್ ಕೊರಡೂರು ಅವರ ತಂಡ ರಚಿಸಲಾಗಿತ್ತು.



ಘಟನೆಯ ಬಳಿಕ ತಲೆಮರೆಸಿಕೊಂಡಿದ್ದ ಆರೋಪಿಗಳು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಯರಗುಪ್ಪಿ ಗ್ರಾಮದ ಸಂಬಂಧಿಕರ ಮನೆಯಲ್ಲಿ ಅಡಗಿ ಕುಳಿತಿರುವ ಖಚಿತ ಮಾಹಿತಿ ಪಡೆದ ಪೊಲೀಸರು ಅವರನ್ನು ಬಂಧಿಸಿದ್ದಾರೆ.

ಚಂದ್ರು ಕುರಿ ಆರೋಪಿಯಾದ ರತ್ನಾಳನ್ನು ಪೀಡಿಸುತ್ತಿದ್ದ. ಈ ವಿಚಾರ ರತ್ನಾಳ ಪತಿ ಈರಪ್ಪ ಕುದರಿ ಹಾಗೂ ಆಕೆಯ ಅಣ್ಣ ಮಹಾಂತೇಶ ಹದ್ಲಿಗೆ ತಿಳಿದು, ಅವರು ಚಂದ್ರುವಿಗೆ ಎರಡು ಬಾರಿ ಎಚ್ಚರಿಕೆ ನೀಡಿದ್ದರು. ಆದರೂ ಆತ ತನ್ನ ವರ್ತನೆ ಬದಲಿಸಿರಲಿಲ್ಲ. ಇದರಿಂದ ಕೆರಳಿದ್ದ ಅವರು, ಮಾರ್ಚ್ 24ರಂದು ರತ್ನಾಳಿಂದಲೇ ಚಂದ್ರುವಿಗೆ ಫೋನ್ ಮಾಡಿಸಿ ಮಧ್ಯರಾತ್ರಿ ಮನೆಗೆ ಬರಲು ತಿಳಿಸಿದ್ದಾರೆ.

ರಾತ್ರಿ 12ರ ಸುಮಾರಿಗೆ ಚಂದ್ರು ಮನೆಗೆ ಬಂದಾಗ ಆರೋಪಿಗಳು ಅವನ ಮೇಲೆ ಹಲ್ಲೆ ಮಾಡಿ, ಬೈಕ್‌ನಲ್ಲಿ ಕೂರಿಸಿಕೊಂಡು ಹೊಂಬಳ-ಹುಯಿಲಗೋಳ ರಸ್ತೆಯ ಸೇತುವೆ ಕೆಳಗೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಕತ್ತು ಕೊಯ್ದು ಕೊಲೆ ಮಾಡಿ, ಗುರುತು ಸಿಗಬಾರದು ಎಂಬ ಉದ್ದೇಶದಿಂದ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗದಗ ಗ್ರಾಮೀಣ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ವಿದ್ಯಾರ್ಥಿನಿಗೆ ಅವಾಚ್ಯ ಶಬ್ದಗಳಿಂದ ನಿಂದನೆ: ವ್ಯಕ್ತಿಗೆ ಧರ್ಮದೇಟು



ಮುಂಡಗೋಡ: ವಿದ್ಯಾರ್ಥಿನಿಗೆ ವ್ಯಕ್ತಿಯೊಬ್ಬ ಅವಾಚ್ಯ ಶಬ್ದಗಳಿಂದ ಬೈದಿದ್ದಾನೆಂದು ಆರೋಪಿಸಿ ವಿದ್ಯಾರ್ಥಿನಿ ಹಾಗೂ ಸ್ಥಳೀಯರು ವ್ಯಕ್ತಿಗೆ ಧರ್ಮದೇಟು ನೀಡಿದ ಘಟನೆ ಮಂಗಳವಾರ ನಡೆದಿದೆ.

ಇಲ್ಲಿನ ಬಸ್ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬ ಕಾಲೇಜ್ ವಿದ್ಯಾರ್ಥಿನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಾನೆಂದು ವಿದ್ಯಾರ್ಥಿನಿಯೂ, ವ್ಯಕ್ತಿಯನ್ನು ಹಿಡಿದು ಕಪಾಳಮೋಕ್ಷ ಮಾಡಿದ್ದಾಳೆ. ನಂತರ ಸ್ಥಳೀಯರು ಆತನನ್ನು ಹಿಡಿದು ಧರ್ಮದೇಟು ನೀಡಿದರು. ಈ ವೇಳೆ ವಿದ್ಯಾರ್ಥಿನಿಯ ಮೈಮೇಲೆ ದೈವ ಬಂದಿರುವ ರೀತಿ ವಿಚಿತ್ರವಾಗಿ ವರ್ತನೆ ಮಾಡಿ ನನ್ನ ಶಿಷ್ಯಗೆ ಬೈಯುತ್ತಿಯಾ ಎಂದು ವ್ಯಕ್ತಿಗೆ ಕಪಾಳಮೋಕ್ಷ ಮಾಡಿ ನೆಲದ ಮೇಲೆ ಬಿದ್ದಳು. ಇನ್ನೇನು ಪೊಲೀಸರು ಸ್ಥಳಕ್ಕೆ ಬರುವಷ್ಟರಲ್ಲಿ ವ್ಯಕ್ತಿ ಓಡಿ ಹೋಗಿದ್ದಾನೆ. ಈ ವ್ಯಕ್ತಿಯೂ ಕಲಘಟಗಿ ತಾಲೂಕಿನವನು ಎಂದು ತಿಳಿದುಬಂದಿದೆ.

ಕೆಡಿಪಿ ಸಭೆ | ಅಧಿಕಾರಿಗಳಿಗೆ ಶಾಸಕ ವಿನಯ ಕಟ್ಟುನಿಟ್ಟಿನ ಸೂಚನೆ

ಅಕ್ರಮ ಚಟುವಟಿಕೆಗೆ ಕಡಿವಾಣ ಹಾಕಿ



◆ **ಧಾರವಾಡ:** ಜಿಲ್ಲೆಯ ನಗರಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆದ ಸರಾಯಿ ಮಾರಾಟಕ್ಕೆ ತಕ್ಷಣ ಕಡಿವಾಣ ಹಾಕಬೇಕು ಎಂದು ಶಾಸಕ ವಿನಯ ಕುಲಕರ್ಣಿ ಅಧಿಕಾರಿಗಳಿಗೆ ಸೂಚಿಸಿದರು.

ಕಿತ್ತೂರಿನ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಕೆಡಿಪಿಯ ಪ್ರಗತಿ ಪರಿಶೀಲನೆ ಸಭೆ ನಡೆಸಿ, ಜಿಲ್ಲೆಯಲ್ಲಿ ಸರಾಯಿ, ಇಸ್ಪೆಟ್, ಡ್ರಗ್ಸ್, ಬೆಟ್ಟಿಂಗ್ ಅಂತಹ ಅಕ್ರಮ ಚಟುವಟಿಕೆ ಎಲ್ಲೆ ಮೀರಿದೆ ಎಂದು ಕಿಡಿಕಾರಿದರು.

ಈ ಅಕ್ರಮಕ್ಕೆ ಪೊಲೀಸ್ ಅಧಿಕಾರಿಗಳೇ ಕುಮ್ಮಕ್ಕು ನೀಡುವ ಮಾಹಿತಿ ಇದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಅಬಕಾರಿ ಮತ್ತು ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮೀಣ ಭಾಗದಲ್ಲಿ ಜಲ ಜೀವನ ಮಿಷನ್ ಯೋಜನೆ ಅದ್ವಾನ ಸೃಷ್ಟಿಸಿದೆ. ಉತ್ತಮ ಸಿಮೆಂಟ್ ರಸ್ತೆಗಳು ಕೊರೆದು ಕೆಡಲಾಗಿದೆ. ಎಲ್ ಆಂಡ್ ಟಿ ಕಂಪನಿ ಅಧಿಕಾರಿಗಳ ಸಭೆ ನಡೆಸುವುದಾಗಿ ಹೇಳಿದರು.

ನರೇಂದ್ರ, ಅಮ್ಮಿನಬಾವಿ, ಉಪ್ಪಿನ ಬೆಟಗೇರಿ, ತಡಕೋಡ, ಹೆಬ್ಬಳ್ಳಿ ಸೇರಿ ಹಲವಾರು ಗ್ರಾಮಗಳಲ್ಲಿ ಜೆಜೆಎಂ ಯೋಜನೆ ಕರಾಳತೆ ಕಣ್ಣಿಗೆ ಗೋಚರಿಸುತ್ತಿದ್ದು, ಜನರು ರೋಸಿ ಹೋಗಿದ್ದಾಗಿ ಅವರು ವಿವರಿಸಿದರು.

ಇನ್ನು ಆರು ತಿಂಗಳಲ್ಲಿ ಮನೆ ಮನೆಗೆ ಮಲಪ್ರಭೆ ನೀರು ಬರಲಿದ್ದು, ಅಷ್ಟರಲ್ಲಿ ಜೆಜೆಎಂ ದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ವಿನಯ ಕುಲಕರ್ಣಿ ಕಟ್ಟುನಿಟ್ಟಿನ ಆದೇಶ ಮಾಡಿದರು.

ಅಧಿಕಾರಿಗಳು ಸಾಮಾನ್ಯ ಜನರ ಸೇವೆಗೆ ಅಗತ್ಯವಾಗಿ ಕೆಲಸ ಮಾಡಬೇಕು. ನಾನು ಕ್ಷೇತ್ರದಲ್ಲಿ ಇಲ್ಲದೇ ಹೋದರೂ ಕ್ಷೇತ್ರದ ಜನರ ಎಲ್ಲಾ ಸಮಸ್ಯೆಗಳಿಗೂ ನಾನು ಸ್ಪಂದಿಸುತ್ತಿದ್ದೇನೆ ಎಂದರು.

ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ, ತಮ್ಮ ನಿಗಮದ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳಿಗೆ ಅಧಿಕಾರಿಗಳು ತುರ್ತಾಗಿ ಸ್ಪಂದಿಸುವಂತೆ ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಎಚ್.ಬಿ.ಹೂಗಾರ, ಸಿಪಿಐ ಕಮತರ, ವಲಯ ಅರಣ್ಯ ಅಧಿಕಾರಿ ಕಿರಣಕುಮಾರ್ ಕರತಂಗಿ ಸೇರಿದಂತೆ ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಪಾಲ್ಗೊಂಡಿದ್ದರು.

> **ರೂ.179 ಕೋಟಿ ವೆಚ್ಚದಲ್ಲಿ ಧಾರವಾಡ ನಗರದ ಒಳಚರಂಡಿಗಳನ್ನು ಅಭಿವೃದ್ಧಿಪಡಿಸಲು ಯೋಜನೆ ಶೀಘ್ರವೇ ಪ್ರಾರಂಭವಾಗಲಿದೆ. ದೊಡ್ಡ ಗ್ರಾಮಗಳಲ್ಲಿ ಕೂಡ ಬೂದು ನೀರು ಹರಿಯುವುದಕ್ಕೆ ಅಗತ್ಯ ಕಾಲುವೆ ನಿರ್ಮಿಸಲಿದೆ.**
> ■ **ಶಿವಲೀಲಾ ಕುಲಕರ್ಣಿ, ಅಧ್ಯಕ್ಷರು, ರಾಜ್ಯ ನಗರ ನೀರು ಸರಬರಾಜು-ಒಳಚರಂಡಿ ಮಂಡಳಿ.**

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಬೇಳೆ	6750	6750
ಕಡಲೆಕಾಳು	1520	5355
ಉದ್ದಿನಕಾಳು	810	6511
ಧನಿಯಾ	5100	5100
ಒಣ ಮೆಣಸಿನಕಾಯಿ	17009	48889
ಬಟಾಣಿ	3263	3263
ಹೆಸರುಕಾಳು	830	7136
ಹುರುಳಿ ಕಾಳು	3603	3603
ಬೆಲ್ಲ	4476	4952
ಜೋಳ	1675	4229
ಮೆಕ್ಕೆಜೋಳ	1526	1838
ಮಡಿಕೆ (ಮಟಿಕೆ)	12425	12895
ಸಾಸುವೆ	4225	5486
ಈರುಳ್ಳಿ	500	2000
ಭತ್ತ	2300	2300
ಆಲೂಗಡ್ಡೆ	1500	1900
ರಾಗಿ	2625	2625
ಅಕ್ಕಿ	5485	6180
ಕುಸುಬೆ	5170	5170
ಸಾಮೆ/ಸಾವಿ	3995	3995
ಸೋಯಾಬಿನ್	1300	5409
ಸೂರ್ಯಕಾಂತಿ	6666	6666
ಗೋಧಿ	1919	2765

CHANGE OF NAME
I, JAGADISH SHAH Residing at C/o. Pragaji, Plat No t-02, 3rd Floor. Venkatadri Appartment,Behind Yemmikeri Bus Stop, Rly Station Road, Malmaddi, Dharwad, Karnataka-580001 state that I have changed my name from JAGADISH PRAGAJI SHAH TO JAGADISH SHAH Vide Affidavit sworn before Shri.Desai S.R., Notary of Govt.Of India,Hubballi on 17th March 2026.

CHANGE OF NAME
I, JAFIYABANU ABDUL AZIZ HERBAG (Old Name) Resident of Sulatani Mohalla, Post : Chandavar, Taluk : Honnavar, Dist. : Uttara Kannada, Karnataka State, Pin Code : 581323, India, have changed my name as SAFIYA YUSUF SAYED (New Name) for all purposes affidavit Dtd.: 31-03-2026 sworn before notary S. G. Hegde.

CHANGE OF NAME
I, SMITA SAGAR GANACHARI (Old Name) Resident of Plot No: 2446 Ramatirth Nagar Belgaum Pin - 590001, have changed my name as SMITA WASTRAD (New Name) for all purposes affidavit Dtd.: 31-03-2026 sworn before notary Bidaralli N. B.

CHANGE OF NAME
I, SHWETA SAJJANAR (Old Name) Resident At H No: 81/B Ananad Nagar Road Krishnagir Old Hubli Hubballi - 580024 in the Distrct of Dharwad in Karnataka State, have changed my name as SWETHA MALLIKARJUN SAJJANAR (New Name) for all purposes affidavit Dtd.: 31-03-2026 sworn before notary M. B. Sunkad.

CHANGE OF NAME
I, IMAMSAHEB N RAHUT (Old Name) R/o Subhash Nagar, Gudihal Road, Hubli-580024 have changed my name to IMAMASAB RAHUT (New Name) Vide Affidavit Sworn Before Notary Patil V.H. on 21-03-2026

CHANGE OF NAME
I, NAGINA KOUSAR MANIYAR (Old Name) R/o Anpin Galli, Gadag have changed my name to NAGINKOUSAR JAHEED MANIYAR (New Name) Vide Affidavit Sworn Before Notary M.M. Hiremath on 26-03-2026

CHANGE OF NAME
I, ANISA BHAVIKATTI (Old Name) R/o Javali Galli, Gadag have changed my name to ANISA MAHMADHANIF BHAVIKATTI (New Name) Vide Affidavit Sworn Before Notary M.M. Hiremath on 26-03-2026

CHANGE OF NAME
I, SHREEDEVI HUNDEKAR (Old Name) Resident of H No: 7, Jaya Nagar, Vidyanagar, Hubli - 580021, have changed my name as SHRIDEVI NAVEEN MULKIGOUDAR (New Name) for all purposes affidavit Dtd.: 31-03-2026 sworn before notary Bidaralli N. B.

CHANGE OF NAME
I, ABDUL KADER BASIT RUKNADDIN (old name) R/o: H No. 1282A, Qasre Sijal, Madina Colony, Jali, Bhatikal - 581320, Uttara Kannada, Karnataka, have changed my name as ABDUL BASIT RUKNUDDIN S/O: UMER SAHEB (new name) henceforth I will be called and recognized by new name for all future purposes, dated: 31/03/2026.

CHANGE OF NAME
I, BASIM (old name) R/o: H No. 1282A, Qasre Sijal, Madina Colony, Jali, Bhatkal - 581320, Uttara Kannada, Karnataka, have changed my name as BASIM RUKNUDDIN S/O: ABDUL BASIT RUKNUDDIN (new name) henceforth I will be called and recognized by new name for all future purposes, dated: 31/03/2026.

CHANGE OF NAME
I, KETAN CHENDAKE Resident of H No: 278 Mahadev Galli A/P Nagunur, have changed my name KETAN MAHADEV CHENDAKE with wild affidavit before the Notary of Smt. A. H. Suryawanshi of Nipani dated 31st Mar. 2026.

CHANGE OF NAME
I, MOHAMMED KAMRAN MOHAMMED IQBAL SAIFULLA (Old Name) R/o: No. 277, National Colony 6th Cross, Mavalli, Murdeshwar - 581350, Uttara Kannada, Karnataka, have changed my name as MOHAMMED KAMRAN SAIFULLA S/O: MOHAMMED IQBAL SAIFULLA (New Name) for all purposes affidavit Dtd.: 30-03-2026 sworn before notary N. M. Hegde.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು-572 142, ಮೋ: 7338590199
ಇ-ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-21/2025-26 ದಿನಾಂಕ : 24.03.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ ರೂ.394.77ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.286.53ಲಕ್ಷ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 30.03.2026 ಸಂಜೆ 4.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 04.04.2026 ಮಧ್ಯಾಹ್ನ 4:00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.04.2026 ಬೆಳಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/524/KSMCA/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ). 6ನೇ ಮಹಡಿ. ಕಾವೇರಿ ಭವನ. ಕೆ.ಜಿ ರಸ್ತೆ. ಬೆಂಗಳೂರು-560009.

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
ಉತ್ತರ ಪಶ್ಚಿಮ-1	ಬೆಂಜಮಂ/ಕಾನಿಅ(ಉಪ-1)/ ಟಿಬಿ/6723/2025-26 ದಿನಾಂಕ: 26.03.2026 (3ನೇ ಕರೆ)	ರೂ. 26,47,639/- / ರೂ. 53,000/-	08.04.2026ರ ಸಂಜೆ 5.00 ಗಂಟೆಯವರೆಗೆ	09.04.2026ರ ಸಂಜೆ 5.15 ಗಂಟೆಯ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ-ಪಶ್ಚಿಮ-1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/6524/NR/2025-26

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,
ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಚಿಂತಾಮಣಿ ತಾಲ್ಲೂಕು, ಚಿಂತಾಮಣಿ
ಇ-ಮೇಲ್ ವಿಳಾಸ: amocmy@gmail.com, ದೂರವಾಣಿ ಸಂಖ್ಯೆ: 08154-450758
ಸಂಖ್ಯೆ:ಸಾಆಚಿಂ/ಪಥ್ಯಾಹಾರ ಟೆಂಡರ್/03/2025-26/E-42695
ದಿನಾಂಕ:28.03.2026

ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿ ಇಲ್ಲಿ 2026-27 ನೇ ಸಾಲಿಗೆ ಒಳ ರೋಗಿಗಳಿಗೆ ಉತ್ತಮ ದರ್ಜೆಯ ಪಥ್ಯಾಹಾರ ಪದಾರ್ಥಗಳು ಹಾಗೂ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ **ಪಥ್ಯಾಹಾರ ಆಹಾರ ಸಾಮಾಗ್ರಿಗಳು ಮತ್ತು ಬ್ರೆಡ್ ಪೂರೈಕೆಗಾಗಿ kppp.karnataka.gov.in** ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿಯು ಕಾರ್ಯಾದೇಶ ನೀಡುವ ದಿನಾಂಕದಿಂದ **ದಿನಾಂಕ: 31.03.2027 ರವರೆಗೆ ಮಾತ್ರ ಇರುತ್ತದೆ**. ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ: **ರೂ: 105 ಲಕ್ಷಗಳು**. ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ.

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಾಆಚಿಂ/ಪಥ್ಯಾಹಾರ/ಟೆಂಡರ್/03/ 2025-26/E-42695 ದಿನಾಂಕ:28.03.2026			
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ ಸಂ	ವಿವರ	ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ)	
		1	Group A:	ರೂ.83 ಲಕ್ಷ	EMD Rs.
		2	Group B:	ರೂ.22 ಲಕ್ಷ	Rs.2,70,000

(3) E-Portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು **ಪ್ರಾರಂಭಿಸುವ ದಿನಾಂಕ: 28.03.2026 (4) E-Portal** ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: **10.04.2026ರ ಸಂಜೆ 3.00 ಗಂಟೆ. (5)** ಪ್ರಿ ಬಿಡ್‌ದಿನಾಂಕ ಮತ್ತು ಸಮಯ: ದಿನಾಂಕ: **02.04.2026 ರಂದು ಸಂಜೆ: 03.00 ಗಂಟೆ. (6) E-Portal**ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ: **ದಿನಾಂಕ: 15.04.2026ರಂದು ಸಂಜೆ: 03.00 ಗಂಟೆಗೆ. (7) E-Portal** ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 17.04.2026 ರಂದು ಬೆಳಿಗ್ಗೆ: 11.00 ಗಂಟೆಗೆ. ಅಥವಾ ಮೇಲಾಧಿಕಾರಿಗಳು ಸೂಚಿಸಿದ ದಿನಾಂಕದಂದು (8)** ಇ.ಎಂ.ಡಿ:ಅನುಬಂಧ-1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವುದು. ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್ ಟೆಂಡರ್‌ನ **ಅಂದಾಜು ಮೌಲ್ಯದ ಶೇ2.5% ರೂ.2,70,000/-** **(9)** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ. ದೂರವಾಣಿ ಸಂಖ್ಯೆ: **website:www.kppp.karnataka.gov.in.** ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ. **e-mail: amocmy@gmail.com** ದೂರವಾಣಿ ಸಂಖ್ಯೆ: 08154-450758

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:514/ಕೆಎಸ್‌ಎಂಸಿಎ/2026-27

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in
ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿ.ಎನ್.ಡಿ./ಇಪ್ರೋ-26/ 2025-26 ದಿನಾಂಕ : 31-03-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ **ವಾರ್ಷಿಕ ನಿರ್ವಹಣೆ ಮಾಡುವ ಅಂದರೆ ರಸ್ತೆ, ಒಳಚರಂಡಿ, ವಿಭಾಗಜಕ, ನಾಲಾ ಸ್ವಚ್ಛಗೊಳಿಸುವುದು, ಗಣೇಶ ಹಬ್ಬ, ಸಭೆ ಸಮಾರಂಭ, ಹಬ್ಬ ಮತ್ತು ಉತ್ಸವಗಳಿಗೆ ವಿವಿಧ ವ್ಯವಸ್ಥೆ ಹಾಗೂ ಇತರೆ ಅಭಿವೃದ್ಧಿ ಮಾಡುವ ಕಾಮಗಾರಿಗಳಿಗೆ SC Category - 03, ST Category - 01, CAT-II(A) - 03 ಹಾಗೂ ಸಾಮಾನ್ಯ ಮಿಸಲಾತಿಗೆ 16 ಹೀಗೆ ಒಟ್ಟು 23 ಕಾಮಗಾರಿಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 09-04-2026 ರ ಸಂಜೆ 5.00 ಘಂಟೆವರೆಗೆ, 2) ಟೆಂಡರಿನ ಮೊದಲನೆ ಸಭೆಯ (Pre-Bid Meeting) ದಿನಾಂಕ : 10-04-2026 ರ ಬೆಳಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 16-04-2026 ರ ಅಪರಾಹ್ನ 4.00 ಘಂಟೆವರೆಗೆ, 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 18-04-2026 ರ ಬೆಳಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ, 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 21-04-2026 ರ ಬೆಳಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್ : **https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/2174/ಮಣಿಪಾಲ್/2025-26

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560 001. ದೂರವಾಣಿ ಸಂಖ್ಯೆ: 080-22133370
ಸಂಖ್ಯೆ: 68/2025-26 ದಿನಾಂಕ:27.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ಆನೇಕಲ್ ಉಪವಿಭಾಗಕ್ಕೆ** ಸಂಬಂಧಿಸಿದಂತೆ **01 ಸಂಖ್ಯೆಯ (ರೂ.13.00 ಲಕ್ಷಗಳ)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್ **https://kppp.karnataka.gov.in** ನಲ್ಲಿ ಸೂಚಿಸಲಾಗಿದೆ.
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:07.04.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 08.04.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/6516/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ಸಹಕಾರ ಸಂಘಗಳ ಉಪ ನಿಬಂಧಕರು(ನಿ.,441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. 'ಸೌಹಾರ್ದ ಸಹಕಾರಿ ಸೌಧ" #68, 1ನೇ ಮಹಡಿ, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055.
ವಾದಿ: ವ್ಯವಸ್ಥಾಪಕರು, ಶ್ರೀಯಾನ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ..ಗಂಗಾವತಿ ಸಿ.ಬಿ.ಎಸ್. ಡ್ರೈವಿಂಗ್ ಸ್ಕೂಲ್ ಹತ್ತಿರ, ಗಂಗಾವತಿ.
ಪ್ರತಿವಾದಿಗಳು: ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ../1110/2025-26
1). ಶ್ರೀ ಶಿವರಾಜ ಕುಮಾರ ತಂದೆ ಹನುಮಂತಪ್ಪ, ಗುಡುದೂರ ರಂಗಮಂದಿರ ಹತ್ತಿ ದಾಸನಾಳ, ದಾಸನಾಳ-583235, ಮೋ.ನಂ:7026422532.
3). ಶ್ರೀ ಶರಣಬಸವ ತಂದೆ ಯಮನೂರಪ್ಪ, ರಂಗಮಂದಿರ ಹತ್ತಿರ ದಾಸನಾಳ, ದಾಸನಾಳ-583235 ಮೋ. ನಂ:7483523092
ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ../1111/2025-26
2) ಶ್ರೀ ಮಂಜುನಾಥ ತಂದೆ ಹನುಮಂತಪ್ಪ
ವಾರ್ಡನಂ:02, ಆರ್ಹಾಳ, ಆರ್ಹಾಳ-583235, ಮೋ:9591148523
ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್
ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ:ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ./1110,1111/2025-26ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ರಲ್ಲಿ 39ರಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು ನೀವು ಪ್ರತಿವಾದಿಯಾಗಿರುತ್ತೀರಿ, ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ:10.04.2026 ರಂದು ಬೆಳಗ್ಗೆ 11-30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು. ಸದರಿ ಪ್ರಕಟಣೆಯನ್ನು ದಿನಾಂಕ:06.03.2026ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/-
ಸಹಕಾರ ಸಂಘಗಳ ಉಪ ನಿಬಂಧಕರು (ನಿ.441) ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ, ಬೆಂಗಳೂರು (ನ್ಯಾಯಾಲಯದ ಆದೇಶದ ಮೇರೆಗೆ)

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.
ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ ಹೊಸಪೇಟೆ-583 201,
ದೂರವಾಣಿ ಸಂಖ್ಯೆ: 08394-227749
E-mail:hospethuda@gmail.com
ಸಂಖ್ಯೆ:ಹೊನಅಪ್ರಾ:ಎ1/ಭೂಉಬ 28/2025-26 ದಿನಾಂಕ: 31.3.2026

:ಸಾರ್ವಜನಿಕ ಪ್ರಕಟಣೆ:

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14 ಎ ರಡಿಯಲ್ಲಿ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಪೇಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ ತಾ:88 ಮುದ್ಲಾಪುರ ಗ್ರಾಮದ ಸ.ನಂ.205/ಬಿ ರಲ್ಲಿ 0.67 ಎಕರೆ ಜಮೀನನು ಶ್ರೀ.ಹೆಚ್.ರಮೇಶ್ ಹಾಗೂ ಇತರರು ಇವರ ಮಾಲೀಕತ್ವದಲ್ಲಿ ಇರುತ್ತದೆ.

ಸದರಿ ಜಮೀನು ಅನುಮೋದಿತ ಮಹಾಯೋಜನೆ(ಪ-1)ರಲ್ಲಿ ಕೃಷಿ ವಲಯದಲ್ಲಿ ಬರುತ್ತದೆ. ಅನುಮೋದಿತ ವಿನ್ಯಾಸದ ರಸ್ತೆಯಿಂದ ಸಂಪರ್ಕ ಇರುತ್ತದೆ. ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡಿ,ವಿನ್ಯಾಸವನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ನಿವೇಶನ ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

ಕಾರಣ ಪ್ರಸ್ತಾಪಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಸಾರ್ವಜನಿಕರ ಸಲಹೆ/ಆಕ್ಷೇಪನೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಆಯುಕ್ತರು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಲಿಖಿತ ಸಲಹೆ/ ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವಂತೆ ತಿಳಿಸಲಾಗಿದೆ. ಅವಧಿಯ ನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/622

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-2/2025-26/2485 ದಿ:26.03.2026

ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ-3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702-ಪ್ಲಾನ್ ಪಿನೀಯೋ ಸಿ.ಎಂ.ಐ.ಡಿ.ಪಿ-ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ 02 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. 59.02 ಲಕ್ಷ, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ. 71.24 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 23.03.2026 ರಿಂದ ದಿನಾಂಕ: 04.04.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 06.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 08.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1198/ಕೆಎಸ್‌ಎಂಸಿಎ/2025-26

ಕ್ರಿ.ಮಿ. ನಂ .263/2026
ಮಾ। ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಬಾಗಲಕೋಟ ಇವರ ನ್ಯಾಯಲಯದಲ್ಲಿ
ಅರ್ಜಿದಾರರು :1) ಶ್ರೀಮತಿ ಮಹಾದೇವಿ ಗಂಡ ಕಸನು ಚವ್ಹಾಣ ಹಾಗೂ ಇತರರು.
ವಿರುದ್ಧ
ಎದುರುದಾರರು : 1) ಮಾ। ಪೌರಾಯುಕ್ತರು (ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳ) ನಗರಸಭೆ ಕಾರ್ಯಾಲಯ, ನವನಗರ ಬಾಗಲಕೋಟ,
ಸಾರ್ವಜನಿಕ ಜಾಹೀರ ಪ್ರಕಟಣೆ
ಸದರಿ ಪ್ರಕರಣದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಮೃತ ಪ್ರವೀಣ ತಂದೆ ಕಸನು ಚವ್ಹಾಣ ಈತನು ದಿನಾಂಕ : 20-07-2021 ರಂದು ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿದ್ದು, ಇವರ ಬಗ್ಗೆ ಮಾ। ನ್ಯಾಯಾಲಯದಿಂದ ಎದುರುದಾರರಿಗೆ ಮರಣ ವಿವರವನ್ನು ಮರಣ ರಜಿಸ್ಟರದಲ್ಲಿ ದಾಖಲ್ ಮಾಡಿಕೊಳ್ಳಲು ಮಾ। ನ್ಯಾಯಾಲಯದಿಂದ ಎದುರುದಾರರಿಗೆ ನಿರ್ದೇಶನ ನೀಡುವ ಕುರಿತು ಸದರಿ ಅರ್ಜಿಯನ್ನು ಮಾಡಿರುತ್ತಾರೆ, ಆದರೆ, ಸದರಿ ಪ್ರಕರಣದಲ್ಲಿ ಮೃತನ ಹಿತಾಸಕ್ತಿವುಳ್ಳವರು ಇದ್ದಲ್ಲಿ ದಿನಾಂಕ :9/4/2026 ರಂದು ಮಾ। ನ್ಯಾಯಾಲಯದ ಮುಂದೆ ಹಾಜರಿದ್ದು, ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಯಾರದೂ ಏನೂ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮಾ।ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ನೀಡಿದ ಸಾರ್ವಜನಿಕ ನೋಟಿಸು.
ಸದರಿ ನೋಟಿಸನ್ನು ಇವತ್ತು ದಿನಾಂಕ 12/3/2026 ರಂದು ಮಾ। ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.
ಸ್ಥಳ : ಬಾಗಲಕೋಟ
ದಿನಾಂಕ : 12/3/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು
ಮಾ। ಪ್ರಧಾನ ದಿವಾಣಿ ನ್ಯಾಯಾಧೀಶ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಬಾಗಲಕೋಟ
ಸಹಿ/-(ಎಸ್. ಎ. ಫರೀದ)
ಅರ್ಜಿದಾರರ ಪರ ವಕೀಲರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580 023.
ದೂರವಾಣಿ : (0836) 2223877 ಫ್ಯಾಕ್ಸ ಸಂಖ್ಯೆ : (0836) 2324307
E-Mail : seepmc.hescom@gmail.com Web Site : www.hescom.co.in
Corporate Identity Number (CIN) : U31401KA2002SGC030437
No: HESCOM/SEE(PMC)/EE-P1/AEE-1/2025-26/cys-13045 Date : 27-03-2026

ಟೆಂಡರ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

Sl.No.	Particulars	Bid indent No for Others
1	ಹೆಸ್ಕಾಂ ವ್ಯಾಪ್ತಿಯಲ್ಲಿನ ವಿವಿಧ 33/11ಕೆವಿ ಉಪಕೇಂದ್ರಗಳಲ್ಲಿ ಹೆಚ್ಚುವರಿಯಾಗಿ 5 ಎಮ್‌ವಿಎ, 33/11ಕೆವಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸುವುದು (5 ಎಮ್‌ವಿಎ ವಿದ್ಯುತ್ ಪರಿವರ್ತಕ ಮತ್ತು ಇತರ ಸಾಮಗ್ರಿಗಳನ್ನು ಇಲಾಖಾವಾರು ಪೂರೈಸಲಾಗುವುದು)	HESCOM/2025-26/EL/ WORK_INDENT 1099, 1100,1101, 1102, 1103, 1104, 1105, 1106, 1107, 1108, 1109 & 1110 (12 packages)
2	ಬೆಳಗಾವಿ ಜಿಲ್ಲೆಯ 33/11 ಕೆವಿ ಬಾಳೇಕುಂದ್ರಿ ಮತ್ತು ಉತ್ತರ ಕನ್ನಡ ಜಿಲ್ಲೆಯ 33/11 ಕೆವಿ ಭಟ್ಕಳ ಉಪಕೇಂದ್ರಗಳಲ್ಲಿ 2X5 ಎಮ್.ವಿ.ಎ ಪರಿವರ್ತಕಗಳನ್ನು 2X8 ಎಮ್.ವಿ.ಎ ಪರಿವರ್ತಕಗಳಿಂದ ಬದಲಾಯಿಸುವ ಕಾಮಗಾರಿಗಳು.	HESCOM/2025-26/EL/ WORK_INDENT 1111 & 1112 (2 packages)
3	ಹೆಸ್ಕಾಂ ವ್ಯಾಪ್ತಿಯಲ್ಲಿನ 110/33/11 ಕೆವಿ ಸಬ್ ಸ್ಟೇಷನ್‌ಗಳಿಂದ ವಿವಿಧ 33/11 ಕೆವಿ ಸಬ್‌ಸ್ಟೇಷನ್‌ಗಳಿಗೆ 33 ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ.	HESCOM/2025-26/EL/ WORK_INDENT 1113, 1114 & 1115 (3 packages)

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ ದಿನಾಂಕ : **31.03.2026** ರ 5:00 PM ನಂತರ ಪಡೆಯಬಹುದು.
ಸಹಿ/- ಅಧೀಕ್ಷಕ ಇಂಜನೀಯರರು(ವಿ), (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1406/2025-26

೧೦
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಬುಧವಾರ, 1 ಏಪ್ರಿಲ್ 2026
ಹುಬ್ಬಳ್ಳಿ



ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ರಿಕೆಲ್ಟನ್ (ಮುಂಬೈ)	ಜೇಕಬ್ ಡಫಿ (ಆರ್‌ಸಿಬಿ)
81 ರನ್	3 ವಿಕೆಟ್



ಕಿರುಸುದ್ದಿ

ಫುಟ್‌ಬಾಲ್: ಭಾರತ ಶುಭಾರಂಭ

ಕೊಚ್ಚಿ: ಇಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯದಲ್ಲಿ ಭಾರತ 2–1 ಅಂತರದಲ್ಲಿ ಹಾಂಗ್ ಕಾಂಗ್ ತಂಡವನ್ನು ಸೋಲಿಸಿ ನಗರದಲ್ಲಿ ತನ್ನ ಮೊದಲ ಗೆಲುವು ದಾಖಲಿಸಿದೆ. ಪಂದ್ಯದ ಆರಂಭದಲ್ಲೇ ಎಲ್ಲರ ಗಮನ ಸೆಳೆದ ರಿಯಾನ್ ವಿಲಿಯಮ್ಸ್, ತಮ್ಮ ಡೆಬ್ಯೂ ಪಂದ್ಯದಲ್ಲೇ 4ನೇ ನಿಮಿಷದಲ್ಲಿ ಗೋಲು ಬಾರಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಇದು ಭಾರತೀಯ ಪುರುಷರ ತಂಡದ ಇತಿಹಾಸದಲ್ಲಿ ಡೆಬ್ಯೂ ಆಟಗಾರರಿಂದ ಬಂದ ಅತ್ಯಂತ ವೇಗದ ಗೋಲು ಕೂಡ ಆಗಿದೆ.

ಇನ್ನೊಂದು ಗೋಲು ಆಕಾಶ್ ಮಿಶ್ರಾ ಅವರಿಂದ ಬಂತು. ಅವರು ಭಾರತ ಪರ ತಮ್ಮ ಮೊದಲ ಗೋಲು ದಾಖಲಿಸಿದರು. 65ನೇ ನಿಮಿಷದಲ್ಲಿ ಎವರ್ಟನ್ ಕಮಾರ್ಗೋ ಗೋಲು ಬಾರಿಸಿ ಹಾಂಗ್ ಕಾಂಗ್ ಅಂತರವನ್ನು ಕಡಿಮೆ ಮಾಡಿದರೂ, ಕೊನೆಯವರೆಗೂ ಮುನ್ನಡೆ ಕಾಯ್ದುಕೊಂಡ ಭಾರತ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಖಾಲಿದ್ ಜಮೀಲ್ ನೇತೃತ್ವದ ಭಾರತ ತಂಡ ತನ್ನ ಏಷ್ಯನ್ ಕಪ್ ಅರ್ಹತಾ ಅಭಿಯಾನವನ್ನು ಸಕಾರಾತ್ಮಕವಾಗಿ ಮುಕ್ತಾಯಗೊಳಿಸಿದೆ.

ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಅನುಮಾನಾಸ್ಪದ ಸಾವು

ಮುಂಬೈ: ಬ್ರಿಟಿಷ್ ನಾಗರಿಕ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಇಯಾನ್ ವಿಲಿಯಮ್ಸ್ ಲ್ಯಾಂಗ್‌ಫೋರ್ಡ್ ಮುಂಬೈನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟರೆಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. 76 ವರ್ಷದ ಇಯಾನ್ ಮುಂಬೈನ ಖಾಸಗಿ ಹೋಟೆಲಿನಲ್ಲಿ ಮೃತಪಟ್ಟರು. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸಿದೆ. ಪ್ರಕಟಣೆಯಲ್ಲಿ ಐಪಿಎಲ್ ಬ್ರಾಡ್‌ಕಾಸ್ಟಿಂಗ್ ಇಂಜಿನೀಯರ್ ಮೃತರಾದರು. ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸುತ್ತದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಐಪಿಎಲ್ ಯಶಸ್ಸಿನಲ್ಲಿ ಅವರ ಪಾತ್ರ ನಮಗೆ ಸದಾ ನೆನಪಿರುತ್ತದೆ. ಅವರ ಕುಟುಂಬಕ್ಕೆ ಬೇಕಾದ ಎಲ್ಲಾ ಬೆಂಬಲ ಬಿಸಿಸಿಐ ನೀಡುತ್ತದೆ ಎಂದು ಬರೆದುಕೊಂಡಿದೆ.

ಕನ್ನಡಿಗ ವಿಜಯ್‌ಗೆ 3 ವಿಕೆಟ್ | ಗುಜರಾತ್ 162/6

ವೈಶಾಖ್ ಮಾರಕ ಬೌಲಿಂಗ್ ಪಂಜಾಬ್‌ಗೆ ಸ್ಪರ್ಧಾತ್ಮಕ ಗುರಿ

ಚಂಡೀಗಢ: ಮೊದಲಿಗೆ ಸ್ಫೋಟಕ ಬ್ಯಾಟಿಂಗ್ ಮಾಡಿದರೂ, ಕನ್ನಡಿಗ ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 4ನೇ ಪಂದ್ಯದಲ್ಲಿ ಸ್ಪರ್ಧಾತ್ಮಕ ಗುರಿ ಮಾತ್ರ ನೀಡಲು ಶಕ್ತವಾಯಿತು.

ಗಿಲ್, ಸುದರ್ಶನ್ ಹಾಗೂ ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ದೊಡ್ಡ ಸ್ಕೋರ್‌ನತ್ತ ಸಾಗುತ್ತಿದ್ದ ಗುಜರಾತ್ ಮಧ್ಯಮ ಇನ್ನಿಂಗ್ಸ್‌ನಲ್ಲಿ ಎಡವಿತು. ವೇಗಿ ವಿಜಯ್ ಕುಮಾರ್ ವೈಶಾಖ್ ಅವರ ದಾಳಿಯಲ್ಲಿ ಸಿಲುಕಿಕೊಂಡು ಚಾಹಲ್ ದಾಳಿಗೆ ತತ್ತರಿಸಿತು. ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 162 ರನ್ ಗಳಿಸಿದೆ. ಗಿಲ್ ಹೆಚ್ಚು ರನ್ ಗಳಿಸಿದವರಲ್ಲಿ ಬಂದರೆ, ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲಿ ಪಂಜಾಬ್‌ನ ಬಹುತೇಕ ಎಲ್ಲಾ ಬೌಲರ್‌ಗಳು ಮಿಂಚಿದರು. ವೈಶಾಖ್ 3, ಚಾಹಲ್ 2 ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ಡಾಟ್‌ಗಳ ಮೂಲಕ ಗಮನ ಸೆಳೆದರು.

ಉತ್ತಮ ಆರಂಭ: ಗುಜರಾತ್‌ನ ಸ್ವಾಭಾವಿಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಶುರುವಾಯಿತು. ಗಿಲ್ ಮತ್ತು ಸಾಯಿ ಸುದರ್ಶನ್ ಆರಂಭಿಕ ಹಂತದಲ್ಲಿ ಸೆಟ್ ಆಗುವತ್ತ ಗಮನ ಹರಿಸಿದರು. ಆದರೆ ಸೆಟ್ ಆಗುವ ಮೊದಲೇ ಸಾಯಿ ಸುದರ್ಶನ್ ಕ್ಯಾಚ್ ಆದರು. 11 ಎಸೆತ ಎದುರಿಸಿದ ಅವರು 13 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಟ್ಲರ್ ಬಂದು ಒಂದು ಬದಿಯಲ್ಲಿ ಅಂಟಿಕೊಂಡು ನಿಲ್ಲುವ ಜವಾಬ್ದಾರಿ ನಂದೆಂದರು. ಅಷ್ಟರೊತ್ತಿಗಾಗಲೇ ಸೆಟ್ ಆಗಿ ನಿಂತಿದ್ದ ಗಿಲ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 6 ಸ್ಟ್ರೋಕ್‌ಗಳ ಮೂಲಕ ಮನಮೋಹಕ ಬೌಂಡರಿಗಳೊಂದಿಗೆ 27 ಬಾಲ್‌ಗಳಲ್ಲಿ 39 ರನ್ ಗಳಿಸಿ ಔಟಾದರು. ಅನಿರೀಕ್ಷಿತವಾಗಿ ಜಾಸ್ ಬಟ್ಲರ್ ಸೆಟ್ ಆಗುವುದಕ್ಕೆ ಹೆಚ್ಚಿನ ಸಮಯ ತೆಗೆದುಕೊಂಡರು. ನಡುವೆ ಒಂದೆರಡು ಬೌಂಡರಿಗಳನ್ನು ಚಾಡಿಸಿದರೂ, 33 ಬಾಲ್‌ಗಳಲ್ಲಿ ಅವರು ಗಳಿಸಿದ್ದು 38 ರನ್ ಮಾತ್ರ. ಇದರಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ಸೇರಿವೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್ ಸರಸರನೇ ಬೌಂಡರಿ ಸಿಕ್ಸರ್‌ಗಳನ್ನು ಬಾರಿಸಿ 25 ಕ್ಕೆ ಕ್ಯಾಚ್ ಆದರು. ಸುಂದರ್ ಔಪಚಾರಿಕತೆ ಮುಗಿಸುವಷ್ಟರಲ್ಲಿ 18ಕ್ಕೆ ವಿಕೆಟ್ ಕೊಟ್ಟರು.



ದಿಢೀರ್ ಕುಸಿತ

ಗಿಲ್, ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಗುಜರಾತ್ ಅವರ ವಿಕೆಟ್ ಬಿದ್ದ ನಂತರ ನಿಧಾನವಾಯಿತು. ರನ್ ವೇಗ ಕುಸಿಯಿತು, ಒತ್ತಡಕ್ಕೆ ಸಿಲುಕಿಕೊಂಡ ಗುಜರಾತ್, ಭಾರೀ ಹಿನ್ನಡೆ ಅನುಭವಿಸಲಾರಂಭಿಸಿತು. ಆರಂಭದಲ್ಲಿ 200 ರನ್ ದಾಟುವ ಭರವಸೆಯಲ್ಲಿದ್ದ ತಂಡ ಈಗ 160 ರನ್ ದಾಟುವುದಕ್ಕೂ ಪರದಾಟ ನಡೆಸಿದಂತೆ ಮಾಡಿತು. ಯಜ್ವೇಂದ್ರ ಚಾಹಲ್ ಮಾರಕ ಬೌಲಿಂಗ್ ದಾಳಿಯೊಂದಿಗೆ 3 ವಿಕೆಟ್ ಕಿತ್ತರು. ಚಾಹಲ್ 2 ವಿಕೆಟ್ ಕಿತ್ತರು. ಅಂತಿಮದಲ್ಲಿ ಟೆವಾಟಿಯಾ 160ರ ಗಡಿ ದಾಟಿಸಿದರು.

ಸ್ಕೋರ್ ವಿವರ

ಗುಜರಾತ್: 162/6

ಸುದರ್ಶನ್	ಸಿ ಶ್ರೇಯಸ್ ಬಿ ಯಾನ್ಸನ್	13
ಗಿಲ್	ಸಿ ಕೂಪರ್ ಬಿ ಚಾಹಲ್	39
ಬಟ್ಲರ್	ಸಿ ಬಾರ್ಟ್‌ಲೆಟ್ ಬಿ ಚಾಹಲ್	38
ಫಿಲಿಪ್ಸ್	ಸಿ ಯಾನ್ಸನ್ ಬಿ ವೈಶಾಖ್	25
ಸುಂದರ್	ಸಿ ಅರ್ಶದೀಪ್ ಬಿ ವೈಶಾಖ್	18
ಶಾರುಖ್	ಸಿ ಅರ್ಶದೀಪ್ ಬಿ ವೈಶಾಖ್	4
ಟೆವಾಟಿಯಾ	ನಾಟೌಟ್	11
ರಶಿದ್	ನಾಟೌಟ್	0
ಇತರೆ	14	
ಅರ್ಶದೀಪ್	4-0-42-0	
ಬಾರ್ಟ್‌ಲೆಟ್	4-0-36-0	
ಯಾನ್ಸನ್	4-0-20-1	
ವೈಶಾಖ್	4-0-34-3	
ಚಾಹಲ್	4-0-28-2	

ಗೆಲುವಿನ ಭರವಸೆಯಲ್ಲಿ ರಿಷಭ್ ಪಂತ್ ಪಡೆ

ಇಂದು ಲಖನೌ vs ದಿಲ್ಲಿ



ಪಿಚ್ ರಿಪೋರ್ಟ್

ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳಿಗೆ ಅಲ್ಪ ಅನುವು ಮಾಡಿಕೊಡುವ ಏಕೈಕ ಐಪಿಎಲ್ ಪಿಚ್ ಇದಾಗಿದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಮಿಂಚುವ ಸಾಧ್ಯತೆ ಇದೆ. ದೊಡ್ಡ ದೊಡ್ಡ ಸ್ಕೋರ್‌ಗಳು ಬಂದರೂ ತೀರಾ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲ್ಲ. ಪಿಚ್‌ನಲ್ಲಿ ಹೆಚ್ಚಿನ ಬೌನ್ಸ್ ಇರುತ್ತದೆ, ನೇರ ಬ್ಯಾಟ್‌ಗೆ ಬರಬಹುದು.

ಲಖನೌ: ಬದಲಾವಣೆಗಳೊಂದಿಗೆ ಮೈದಾನಕ್ಕಿಳಿಯುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳೆದ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ದಿಲ್ಲಿ ಕ್ಯಾಪಿಟಲ್ಸ್ ಕೊನೆಯಲ್ಲಿ ಹಿನ್ನಡೆ ಅನುಭವಿಸಿತ್ತು. ಇತ್ತ ಲಖನೌ ಕೂಡ ಆರಂಭಿಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಬಳಿಕ ಹೊರಬಿದ್ದಿತ್ತು. ದಿಲ್ಲಿ ಪಡೆಯಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಮತ್ತು ಲಖನೌ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಅರ್ಜುನ್ ತೆಂಡೂಲ್ಕರ್ ಮತ್ತು ಮುಖ್ಯವಾಗಿ ಮೊಹಮ್ಮದ್ ಶಮಿಯವರನ್ನು ಟ್ರೇಡ್ ಮಾಡಿಕೊಂಡಿತ್ತು. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೇಕಾದ ಆಟಗಾರರನ್ನು ಹರಾಜಿನಲ್ಲಿ ಆಯ್ಕೆ ಮಾಡಿಕೊಂಡಿದ್ದಲ್ಲದೆ ನಿತಿಶ್ ರಾಣಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ಅಗತ್ಯ ಬದಲಾವಣೆಯೊಂದಿಗೆ ಕಣಕ್ಕಿಳಿಯುತ್ತಿರುವ ಉಭಯ ತಂಡಗಳು ಕುತೂಹಲ ಮೂಡಿಸಿವೆ. ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂತ್ ಲಯ ಲಖನೌ ಶಕ್ತಿ: ಬ್ಯಾಟಿಂಗ್‌ನಲ್ಲಿ ಆರಂಭಿಕರು ಮಾರ್ಕ್ರಂ ಮತ್ತು ಮಾರ್ಷ್ ಮತ್ತೊಮ್ಮೆ ತಯಾರಾಗಿ ನಿಂತಿದ್ದಾರೆ. ಕಳೆದ ಬಾರಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದ್ದ ರಿಷಭ್ ಪಂತ್ ಅಭ್ಯಾಸದಲ್ಲಿ ಬಲಿಷ್ಠರಾಗಿ ಕಾಣಿಸಿಕೊಂಡಿರುವುದೇ ತಂಡಕ್ಕೆ ಆನೆ ಬಲ. ನಿಕೊಲಸ್ ಪೂರಣ್ ಸ್ಪಷ್ಟ ಹೊಡೆತಗಳ ಮೂಲಕ ಮಿಂಚಲು ಸಿದ್ಧರಾಗಿದ್ದಾರೆ. ಇನ್ನು ಬಲಿಷ್ಠ ಜೋಶ್ ಇಂಗ್ಲಿಸ್ ಅವರನ್ನು ಆಯ್ಕೆ ಖರೀದಿಸಿದ್ದಾರೆ. ಫಿನಿಶಿಂಗ್‌ಗೆ ಅಬ್ದುಲ್ ಸಮಾದ್, ಆಯುಷ್ ಬದೋನಿ ಅಂಥವರು ಕಣಕ್ಕಿಳಿಯಲಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಶಾರ್ದೂಲ್ ಠಾಕೂರ್ ಈ ಬಾರಿ ಮುಂಬೈ ಸೇರಿಕೊಂಡಿದ್ದಾರೆ. ಆದಾಗ್ಯೂ ಶಮಿ, ನೋಕಿಯಾ, ಮುಕುಲ್ ಚೌಧ್ರಿ ಅವರನ್ನು ಖರೀದಿಸಿದೆ. ದೇಸಿ ಬೌಲರ್‌ಗಳ ಬಲವೂ ತಂಡಕ್ಕಿದೆ.

ದಿಲ್ಲಿಯಲ್ಲಿ ವಿಶ್ವಾಸ: ಇನ್ನು ಕೆ.ಎಲ್. ರಾಹುಲ್ ಇರುವ ತಂಡ ದಿಲ್ಲಿ ಕೂಡ ಬಲಿಷ್ಠ ಪಡೆಯಾಗಿ ನಿಂತಿದೆ. ಪೃಥ್ವಿ ಶಾ, ಪೋರೆಲ್ ಅಂಥವರು ತಂಡದಲ್ಲಿದ್ದಾರೆ. ಅಕ್ಷರ್ ಪಟೇಲ್ ಮುನ್ನಡೆಸಲಿರುವ ತಂಡಕ್ಕೆ ಸ್ಟಾರ್ಕ್ ಇಲ್ಲದ ಶಾಕ್ ಇದ್ದರೂ ಚಮೀರಾ, ಕೇಲ್ ಜೆಮಿಸನ್, ಟಿ ನಟರಾಜನ್, ಲುಂಗಿ ಎನ್‌ಗಿಡಿ ಅಂತವರು ತಂಡದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ನಿಸ್ಸಂಕಾ, ನಿತಿಶ್ ರಾಣಾ, ಕರುಣ್ ನಾಯರ್ ಇದ್ದು ಬಲಿಷ್ಠ ತಂಡ ಸಿದ್ಧವಾಗಿದೆ.

ಪಂದ್ಯದ ವಿವರ:
ಯಾವಾಗ?: ಗುರುವಾರ
ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಪಿಎಲ್‌ನಲ್ಲಿ ಸೂರ್ಯವಂಶಿಯ ಮಿಂಚಿನಾಟ

ವೈಭವ್ ಅಂತಾರಾಷ್ಟ್ರೀಯ ಪದಾರ್ಪಣೆ ಯಾವಾಗ?

ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 15 ವರ್ಷದ ಸಂಚಲನ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿರುವುದು ವಿಶ್ವ ಕ್ರಿಕೆಟ್‌ನಲ್ಲಿ ಮತ್ತೊಂದು ಚರ್ಚೆ ಹುಟ್ಟುಹಾಕಿದೆ.

ರಾಜಸ್ಥಾನ ಹಾಗೂ ಚೆನ್ನೈ ನಡುವಿನ ಪಂದ್ಯದಲ್ಲಿ 17 ಬಾಲ್‌ಗಳಲ್ಲಿ ಅವರು ಅರ್ಧಶತಕ ಬಾರಿಸಿದರು. ಇದರೊಂದಿಗೆ ಹೊಸ ಶೈಲಿಯ ಕ್ರಿಕೆಟ್‌ನಲ್ಲಿ ಮತ್ತೊಂದು ದಾಖಲೆ ಮಾಡಿದರು. ರಾಜಸ್ಥಾನ ಆ ಪಂದ್ಯ ಗೆದ್ದಿತು. ಈ ಬಳಿಕ ವಿಶ್ವದ ಗಣ್ಯ ಕ್ರಿಕೆಟಿಗರೆಲ್ಲಾ ವೈಭವ್ ಸೂರ್ಯವಂಶಿ ಅವರನ್ನು ಪುರುಷರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡುವ ಕುರಿತು ಮಾತನಾಡಿದ್ದಾರೆ.

ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದಂತೆ ಇತ್ತ ಇಂಗ್ಲೆಂಡಿನ ಮಾಜಿ ನಾಯಕ ಮೈಕಲ್ ವಾಘನ್ ಬಿಸಿಸಿಐಗೆ ಮನವಿ ಸಲ್ಲಿಸಿದ್ದಾರೆ. ಜವೈಭವ್ ಸೂರ್ಯವಂಶಿ ಅವರ ಅಂತಾರಾಷ್ಟ್ರೀಯ ತಂಡಕ್ಕೆ ಆಯ್ಕೆ ಯಾವಾಗ? ನಾನು ಕಾಯುತ್ತಿದ್ದೇನೆ, ಅವರು ಒಂದು ತಂಡದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆಂದರೆ ಸೀನಿಯರ್ ತಂಡದಲ್ಲಿ ಯಾಕೆ ಆಯ್ಕೆಯಾಗಬಾರದು? ಮುಂದಿನ ದಿನಗಳಲ್ಲಿ ಇಂಗ್ಲೆಂಡ್‌ನೊಂದಿಗೆ ವೈಟ್‌ಬಾಲ್ ಸರಣಿಯಿದೆ ಅಲ್ಲಿ ಅವರನ್ನು ಆಯ್ಕೆ ಮಾಡಿದರೆ ಇತಿಹಾಸ ಆಗುವುದನ್ನು ನೋಡಬಹುದು' ಎಂದಿದ್ದಾರೆ. ಇತ್ತ ಭಾರತ ತಂಡದ ಮಾಜಿ ಆಟಗಾರ ಮೊಹಮ್ಮದ್ ಕೈಫ್ ಕೂಡ ಈ ಬಗ್ಗೆ ಮಾತನಾಡಿ, 'ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಪಂದ್ಯವಾಡುವುದಕ್ಕೆ ಸಿದ್ಧರಿದ್ದಾರೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇತ್ತ ಸಾಮಾಜಿಕ ಜಾಲತಾಣದಲ್ಲೂ ಚರ್ಚೆಗಳು ಜೋರಾಗಿವೆ.

ಭಾರತದ ಸರಣಿಯಲ್ಲಿ ಟಿ20: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮುಕ್ತಾಯಗೊಂಡ ನಂತರ ಭಾರತ ಪುರುಷರ ತಂಡ ಇಂಗ್ಲೆಂಡಿನಂತಹ ಪ್ರವಾಸ ಕೈಗೊಳ್ಳಲಿದೆ. ತವರು ಸರಣಿಗಳಲ್ಲಿ ಟಿ20 ಪಂದ್ಯಗಳನ್ನಾಡಲಿದೆ. ವೈಟ್ ಬಾಲ್ ಕ್ರಿಕೆಟಿ ನಲ್ಲಿ ವೈಭವ್ ಅವರಿಗೆ ಒಂದಾದರೂ ಅವಕಾಶ ನೀಡಬೇಕೆಂಬ ಮಾತು ವಿವಿಧ ಕ್ರಿಕೆಟ್ ಎಕ್ಸ್‌ಪರ್ಟ್‌ಗಳದ್ದಾಗಿದೆ.

ಅಂಡರ್–19ನಲ್ಲಿ ವೈಭವ್‌ಗಿಲ್ಲ ಅವಕಾಶ?: ವಿಶ್ವಕಪ್ ಗೆದ್ದಿರುವ ಭಾರತ ಅಂಡರ್–19 ತಂಡವು ಮುಂದಿನ ದಿನಗಳಲ್ಲಿ ಮತ್ತಷ್ಟು ಅಂಡರ್–19 ಸರಣಿ, ಪಂದ್ಯಾವಳಿಗಳನ್ನು ಆಡಲಿವೆ. ಆದರೆ ಅಂಡರ್–19 ವಿಶ್ವಕಪ್‌ಗಳಲ್ಲಿ ಒಮ್ಮೆ ಆಡಿದ ಆಟಗಾರರನ್ನು ಎರಡನೇ ಬಾರಿ ಆಯ್ಕೆ ಮಾಡಲಾಗಲ್ಲ. ಈಗಾಗಲೇ ಒಂದು ಬಾರಿ ಆಡಿರುವ ವೈಭವ್ ಸೂರ್ಯವಂಶಿ ಇನ್ನೊಂದು ಬಾರಿ ಆಯ್ಕೆಯಾಗಲ್ಲ, ಇದು ಬಿಸಿಸಿಐ ವಾಡಿಕೆ. ಹೀಗಾಗಿ ಐಪಿಎಲ್ ಮುಗಿದ ತಕ್ಷಣ ವೈಭವ್ ದೇಶಿ ಕ್ರಿಕೆಟ್‌ವರೆಗೂ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ವೈಭವ್ ಸೂರ್ಯವಂಶಿಗೆ ಆಯ್ಕೆ ಮಾಡಬೇಕು ಅನ್ನುವ ಅಭಿಪ್ರಾಯಗಳು ಮುಂದೆ ಬರುತ್ತಿವೆ. ಒಟ್ಟಿನಲ್ಲಿ ವೈಭವ್ ಆಯ್ಕೆ ಮಾಡಿದರೆ ಹತ್ತಾರು ದಾಖಲೆಗಳು ಆಗಲಿವೆ. ಕ್ರಿಕೆಟ್ ದೇವರಾದ ಸಚಿನ್ ತೆಂಡೂಲ್ಕರ್ ಅಂತವರ ದಾಖಲೆಗಳನ್ನು ಅವರು ಮುರಿಯಲಿದ್ದಾರೆ. ಆದರೆ ಬಿಸಿಸಿಐನ ಹೊಸ ಮಾನದಂಡಗಳ ಪ್ರಕಾರ ಇಂತಿಷ್ಟು ದೇಶಿ ಕ್ರಿಕೆಟ್ ಪಂದ್ಯಗಳನ್ನಾಡಬೇಕೆಂಬ ನಿಯಮಗಳಿವೆ. ಆದಾಗ್ಯೂ ವೈಭವ್ ದೇಶಿ ಕ್ರಿಕೆಟ್‌ನಲ್ಲೂ ಸಾಧನೆ ಮಾಡಿದ್ದಾರೆ. ಸೂರ್ಯವಂಶಿ ಸಾಧನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತಾ ಎಂಬ ವಿಚಾರ ತಂಡ ಬಿಡಗಡೆ ವೇಳೆ ಗೊತ್ತಾಗಲಿದೆ.



ವೈಭವ್ ದಾಖಲೆ

- 2025ರಲ್ಲಿ ಐಪಿಎಲ್‌ಗೆ ಆಯ್ಕೆಯಾದ ಅತಿ ಕಿರಿಯ ಆಟಗಾರ
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ
- ಐಪಿಎಲ್‌ನ ವೇಗದ ಶತಕ ಬಾರಿಸಿರುವುದು
- ರಣಜಿ ಆಡಿದ ಅತಿ ಕಿರಿಯ(12 ವರ್ಷ)
- ಒಂದು ಐಪಿಎಲ್ ಆವೃತ್ತಿಯಲ್ಲಿ 300 ರನ್ ಬಾರಿಸಿದ ಅತ್ಯಂತ ಕಿರಿಯ
- ಅಂಡರ್–19 ವಿಶ್ವಕಪ್‌ನಲ್ಲಿ ಸರಣಿಶ್ರೇಷ್ಠ
- ವಿಶ್ವಕಪ್ ಫೈನಲ್‌ನಲ್ಲಿ ಶತಕ
- ಅಂಡರ್–19 ಫೈನಲ್‌ನಲ್ಲಿ ಅತಿ ಹೆಚ್ಚು ರನ್

ವೈಭವ್ ಉದಯ

2024ರಲ್ಲಿ ನಡೆದಿದ್ದ 2025ರ ಐಪಿಎಲ್ ಹರಾಜಿನಲ್ಲಿ 14 ವರ್ಷದ ಬಾಲಕ ನಾಮನಿರ್ದೇಶನ ಮಾಡಿದ್ದ. ಆರ್‌ಆರ್ ತಂಡದ ಪ್ರಮುಖ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಥಟ್ಟನೆ ಖರೀದಿಸಿದರು. ಅಲ್ಲಿಂದ ಐಪಿಎಲ್‌ನಲ್ಲಿ ಹೊಸ ಇತಿಹಾಸ ಶುರುವಾಯಿತು. ಆ ಇತಿಹಾಸ, ಭಾರತದ ಭವಿಷ್ಯದ ಹೆಸರು ವೈಭವ್ ಸೂರ್ಯವಂಶಿ. ಐಪಿಎಲ್ ಪಂದ್ಯದಲ್ಲಿ ಅವಕಾಶ ಸಿಕ್ಕ ನಂತರ 14 ವರ್ಷದ ಬಾಲಕ ಅಂತಾರಾಷ್ಟ್ರೀಯ ಬೌಲರುಗಳನ್ನು ಮನ ಬಂದಂತೆ ದಂಡಿಸಲಾರಂಭಿಸಿದರು. ಎಲ್ಲಿಲ್ಲದ ಸ್ಫೋಟಕ ಬ್ಯಾಟಿಂಗ್, ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಐಪಿಎಲ್‌ನ ವೇಗದ ಶತಕ ಬಾರಿಸಿದರು. ಬಾಲನೊಬ್ಬನ ಸ್ಫೋಟಕ ಬ್ಯಾಟಿಂಗ್ ನೋಡಿ ನಿಬ್ಬೆರಗಾಗಿ ನಿಂತ ಜನರು ಕ್ರಿಕೆಟಿನಲ್ಲಿ ಭಾರತದ ಉಜ್ವಲ ಭವಿಷ್ಯ ಪ್ರತ್ಯಕ್ಷ ಕಂಡರು. ಅಲ್ಲಿಂದ ಭಾರತದಲ್ಲಿ ಹೊಸ ಸಂಚಲನ. ತಕ್ಷಣಕ್ಕೆ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡದೆ ಅಂಡರ್–19 ತಂಡದಲ್ಲಿ ಸೇರಿಸಲಾಗಿತ್ತು. ಅಲ್ಲದೆ ದೇಶಿ ಕ್ರಿಕೆಟಿನಲ್ಲಿ ಬಿಹಾರ ತಂಡಕ್ಕೂ ಅವರನ್ನು ಆಯ್ಕೆ ಮಾಡಲಾಗಿತ್ತು. ಅಂಡರ್–19 ತಂಡದ ಏಷ್ಯಾಕಪ್, ವಿಶ್ವಕಪ್ ಪಂದ್ಯಾವಳಿಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಅಬ್ಬರದಾಟ ಪ್ರದರ್ಶಿಸಿದ ಸೂರ್ಯವಂಶಿ ಜಾಗತಿಕ ಮಟ್ಟದ ಮಾಧ್ಯಮದಲ್ಲಿ ಹೆಡ್‌ಲೈನ್ ಆದರು. ಸೂರ್ಯವಂಶಿ ಈಗ ವಿಶ್ವದರ್ಜೆಯ ಸ್ಟಾರ್. ಆಸಕ್ತಿದಾಯಕ ಕ್ರಿಕೆಟಿಗರಿಗೆ ವೈಭವ್ ಫೇವರಿಟ್, ಕ್ರಿಕೆಟ್ ಅಭಿಮಾನಿಗಳಿಗೆ ಅವರೊಬ್ಬ ರೋಲ್ ಮಾಡಲ್. ಇಂತದ್ದೇ ಸಮಯದಲ್ಲಿ ಮತ್ತೊಂದು ಬಾರಿ ಐಪಿಎಲ್ ಶುರುವಾಗಿದೆ. ಮೊದಲ ಪಂದ್ಯದಲ್ಲೇ ವೈಭವ್ ಸೂರ್ಯವಂಶಿ ದಾಖಲೆಯ ಬ್ಯಾಟಿಂಗ್ ಮಾಡಿದ್ದಾರೆ.

ಏಪ್ರಿಲ್ 9ಕ್ಕೆ ಒಲಿಂಪಿಕ್ಸ್ ಕೂಟದ ಟಿಕೆಟ್ ಲಭ್ಯ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದ ಟಿಕೆಟ್‌ಗಳು ಏಪ್ರಿಲ್ 9 ರಂದು ಸಾರ್ವಜನಿಕರಿಗೆ ಮಾರಾಟಕ್ಕೆ ಬರಲಿವೆ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ. ವಿಶೇಷವಾಗಿ ಈ ಬಾರಿ ಅಭಿಮಾನಿಗಳಿಗೆ ಟಿಕೆಟ್ ಭದ್ರತೆಯ ಬಗ್ಗೆ ಭರವಸೆ ನೀಡಲು ಮುಂದಾಗಿದೆ.

ಲಾಸ್ ಏಂಜಲೀಸ್ ಮತ್ತು ಒಕ್ಲಹೋಮ ನಗರದ ಅರ್ಹತಾ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಪೂರ್ವ–ಮಾರಾಟವು ಏಪ್ರಿಲ್ 2 ರಂದು ಪ್ರಾರಂಭವಾಗಲಿದ್ದು, ಆಯ್ದ ಖರೀದಿದಾರರಿಗೆ ಅಧಿಸೂಚನೆ ಇಮೇಲ್‌ಗಳು ಮಾರ್ಚ್ 31 ರಿಂದ ಏಪ್ರಿಲ್ 4 ರವರೆಗೆ ಬಿಡುಗಡೆಯಾಗಲಿವೆ ಎಂದು ತಿಳಿಸಿದೆ. ಏಪ್ರಿಲ್ 7 ರಂದು, ಸಂಘಟನಾ ಸಮಿತಿಯು ಉಳಿದ ನೋಂದಣಿದಾರರಿಗೆ ಡ್ರಾಪ್ 1 ಎಂದು ಕರೆಯಲ್ಪಡುವ ಮೊದಲ ಸಾಮಾನ್ಯ ಮಾರಾಟ ಸುತ್ತಿನಲ್ಲಿ ಖರೀದಿ ವಿಂಡೋಗೆ ಆಯ್ಕೆಯಾಗಿದೆಯೇ ಎಂದು ತಿಳಿಸುತ್ತದೆ. ಈ ವಾರ ಅಭಿಮಾನಿಗಳು ಎಲ್‌ಎ28 ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಥಾನವನ್ನು ಪಡೆಯಲು ಮೊದಲ ಅವಕಾಶವನ್ನು ಸೂಚಿಸುತ್ತದೆ ಎಂದು ಎಲ್‌ಎ28 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೆನಾಲ್ಡ್ ಹೂವರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭಯ್, ಅನಾಹತ್ ಸಿಂಗ್ ವರ್ಷದ ಸ್ಕ್ವ್ಯಾಷ್ ಆಟಗಾರರು

ಹೊಸದಿಲ್ಲಿ: ಭಾರತದ ಸ್ಕ್ವ್ಯಾಷ್ ಆಟಗಾರ ಅಭಯ್ ಸಿಂಗ್ ಅವರಿಗೆ 2025ನೇ ಸಾಲಿನ ಏಷ್ಯನ್ ಸ್ಕ್ವ್ಯಾಷ್ ಫೆಡರೇಷನ್ ಪುರುಷರ ವರ್ಷದ ಆಟಗಾರ ಪ್ರಶಸ್ತಿ ಲಭಿಸಿದೆ. ಇನ್ನು ಕಿರಿಯರ ವಿಭಾಗದಲ್ಲಿ ಯುವ ಪ್ರತಿಭೆ ಅನಾಹತ್ ಸಿಂಗ್ ಅತ್ಯುತ್ತಮ ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾರೆ.

ಈ ನಡುವೆ, ಈಜಿಪ್ಟ್‌ನಲ್ಲಿ ನಡೆದ 2025ರ ವಿಶ್ವ ಜೂನಿಯರ್ ತಂಡ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದ ಭಾರತೀಯ ಬಾಲಕರ ತಂಡಕ್ಕೂ ಪುರುಷರ ತಂಡ' ಪ್ರಶಸ್ತಿ ಲಭಿಸಿದೆ ಎಂದು ಫೆಡರೇಷನ್ ಪ್ರಕಟಿಸಿದೆ. ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ 25ನೇ ಸ್ಥಾನದಲ್ಲಿರುವ ಅಭಯ್ ಸಿಂಗ್, ಏಷ್ಯನ್ ಗೇಮ್ಸ್ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತರಾಗಿದ್ದು, ಕಳೆದ ವರ್ಷ ಭಾರತ ಗೆದ್ದ ವಿಶ್ವಕಪ್ ಮಿಶ್ರ ಟೀಮ್ ಪ್ರಶಸ್ತಿ ವಿಜೇತ ತಂಡದ ಭಾಗವಾಗಿದ್ದರು.

ವಿಶ್ವ 20ನೇ ಶ್ರೇಯಾಂಕದಲ್ಲಿರುವ ಅನಾಹತ್ ಸಿಂಗ್ ಕೂಡ ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತೆ. 2025ರಲ್ಲಿ ಕೈರೋದಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದಿದ್ದು, ವಿಶ್ವಕಪ್ ಮಿಶ್ರ ತಂಡ ಚಿನ್ನದ ಸಾಧನೆಯಲ್ಲೂ ಭಾಗಿಯಾಗಿದ್ದರು. ಇದಕ್ಕೂ ಮುನ್ನ 2022ರಲ್ಲಿ ಸೌರವ್ ಘೋಷಾಲ್ ಮತ್ತು ಜೋಷ್ನಾ ಚಿನಪ್ಪಾ ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗಗಳಲ್ಲಿ ಈ ಪ್ರಶಸ್ತಿಗಳನ್ನು ಪಡೆದಿದ್ದರು.

ಟಿಟಿ ವಿಶ್ವಕಪ್: ಮನಿಕಾ ಆಸೆ ಜೀವಂತ

ಹೊಸದಿಲ್ಲಿ: ಮನಿಕಾ ಬಾತ್ರಾ ಐಟಿಟಿಎಫ್ ಟೇಬಲ್ ಟೆನಿಸ್ ವರ್ಲ್ಡ್ ಕಪ್‌ನಲ್ಲಿ ನಾಕೌಟ್ ಹಂತದ ನಿರೀಕ್ಷೆ ಜೀವಂತವಾಗಿಟ್ಟುಕೊಂಡಿದ್ದಾರೆ.

ಚೀನಾದ ಮಕಾವಿನಲ್ಲಿ ನಡೆದ ಪಂದ್ಯದಲ್ಲಿ ಮನಿಕಾ ಅಮೆರಿಕದ ಲಿಲ್ಲಿ ಝಾಂಗ್ ವಿರುದ್ಧ 3–2 (11–7, 11–2, 14–16, 5–11, 11–6) ಅಂತರದಲ್ಲಿ ಕಠಿಣ ಜಯ ಸಾಧಿಸಿದರು. 43 ನಿಮಿಷಗಳ ಈ ಪಂದ್ಯದಲ್ಲಿ ಮಣಿಕಾ ತಾಳ್ಮೆಯ ಆಟ ಪ್ರದರ್ಶಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಜಪಾನ್‌ನ ಮಿವಾ ಹರಿಮೋಟೋ ವಿರುದ್ಧ 0–3 ಅಂತರದಲ್ಲಿ ಸೋತಿದ್ದರು.



ಇನ್ನೊಂದೆಡೆ, ವಿಶ್ವದ 43ಶ್ರೇಯಾಂಕದ ಹೊಂದಿರುವ ಶ್ರೀಜಾ ಅಕುಲಾ ತಮ್ಮ ಮೊದಲ ಪಂದ್ಯದಲ್ಲಿ ಪೋರ್ಚುಗಲ್‌ನ ಫು ಯು ವಿರುದ್ಧ 1–3 (11–8, 9–11, 13–15, 8–11) ಅಂತರದಲ್ಲಿ ಸೋಲು ಕಂಡರು. ಅವರು ಮುಂದಿನ ಗುಂಪು ಹಂತದ ಪಂದ್ಯದಲ್ಲಿ ವಿಶ್ವ ನಂ.2 ಚೀನಾದ ವಾಂಗ್ ಮಾನ್ಯು ವಿರುದ್ಧ ಬುಧವಾರ ಆಡಲಿದ್ದಾರೆ. ಪುರುಷರ ವಿಭಾಗದಲ್ಲಿ ಭಾರತದಿಂದ ಏಕೈಕ ಆಟಗಾರ ಮಾನವ್ ಠಕ್ಕರ್, ಕೊರಿಯಾದ ಪಾರ್ಕ್ ಗ್ಯಾಂಗ್ ಹ್ಯೋನ್ ವಿರುದ್ಧ 0–3 ಸೋಲಿನ ನಂತರ, ಸ್ವೀಡನ್‌ನ ಟ್ರುಲ್ಸ್ ಮೊರೆಗಾರ್ಡ್ ವಿರುದ್ಧ ನಡೆಯುವ ಮಹತ್ವದ ಪಂದ್ಯದಲ್ಲಿ ಗೆಲುವು ಸಾಧಿಸಲೇಬೇಕಾಗಿದೆ. ಒಟ್ಟು 16 ಗುಂಪುಗಳಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ, ಪ್ರತಿ ಗುಂಪಿನ ಅಗ್ರಸ್ಥಾನ ಪಡೆದ ಆಟಗಾರರು ಮಾತ್ರ ರೌಂಡ್ 16ರ ಸುತ್ತಿಗೆ ಪ್ರವೇಶ ಪಡೆಯುತ್ತಾರೆ.

ಬಾಲ್ ವಿರೂಪ: ಜಮಾನ್‌ಗೆ 2 ವರ್ಷ ನಿಷೇಧ

- ಪಿಎಸ್‌ಎಲ್ ಪಂದ್ಯದಲ್ಲಿ ಘಟನೆ
- ಪಂದ್ಯಾವಳಿಯಿಂದ 2 ವರ್ಷ ನಿಷೇಧ


ಕರಾಚಿ: ಐಪಿಎಲ್‌ನಲ್ಲಿ ಸೊಗಸಾದ ಪಂದ್ಯಗಳು ನಡೆಯುತ್ತಿರುವ ಸಮಯದಲ್ಲೇ ಅಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಬಾಲ್ ವಿರೂಪಗೊಳಿಸಿರುವ ಆರೋಪದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಪ್ರಮುಖ ಆಟಗಾರ ಫಕರ್ ಜಮಾನ್‌ಗೆ ಪಿಸಿಬಿ ಎರಡು ವರ್ಷದ ನಿಷೇಧ ಹೇರಿದೆ.



ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನವೇ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಹೀಗಿರುವಾಗ ಭಾನುವಾರ ಲಾಹೋರ್ ಹಾಗೂ ಕರಾಚಿ ತಂಡಗಳು ಎದುರಾಗಿದ್ದವು. ಕರಾಚಿ ತಂಡದ ನಾಯಕ ಶಾಹಿನ್ ಅಫ್ರಿದಿ ಹಾಗೂ ಹ್ಯಾರಿಸ್ ರೌಫ್ ಅವರೊಂದಿಗೆ ಗೇಮ್ ಪ್ಲಾನ್ ಮಾಡುವಾಗ ಅದೇ ತಂಡದ ಫಕರ್ ಜಮಾನ್ ಅವರು ಬಾಲನ್ನು ವಿರೂಪಗೊಳಿಸುವ ತುಣುಕುಗಳು ಹರಿದಾಡಿವೆ. ಖಾತರಿಗೊಂಡಂತೆ ಪಿಸಿಬಿ ಕಠಿಣ ನಿರ್ಧಾರಕ್ಕೆ ಮುಂದಾಯಿತು. ಮಂಗಳವಾರ ಈ ಬಗ್ಗೆ ಹೇಳಿರುವ ಪಿಸಿಬಿ, ಫಕರ್ ಜಮಾನ್ ಟೂರ್ನಮೆಂಟಿನ ಲೆವೆಲ್ ಮೂರರ ಮಾನದಂಡ ಉಲ್ಲಂಘನೆ ಮಾಡಿದ್ದಾರೆ. ನಮ್ಮ ನಿಯಮ ಪಟ್ಟಿಯ ವಿಧಿ 2.14ರ ಅಡಿಯಲ್ಲಿ ಅವರಿಗೆ ಸಜೆ ನೀಡಲಾಗುತ್ತದೆ. ಅಲ್ಲದೆ, ವಿಧಿ 41.3ರ ಅಡಿಯಲ್ಲಿ ಬಾಲ್ ವಿರೂಪಗೊಳಿಸಿರುವುದು ಖಾತರಿಯಾಗಿದೆ. ಇದಕ್ಕೆ ಕಠಿಣ ಕ್ರಮ ಕೈಗೊಳ್ಳಲಿರುವ ಪಿಸಿಬಿ ಜಮಾನ್ ಅವರನ್ನು ಪಿಎಸ್‌ಎಲ್‌ನಿಂದ 2 ವರ್ಷ ನಿಷೇಧ ಮಾಡುತ್ತದೆ ಎಂದು ಹೇಳಿದೆ. ಬಾಲ್ ವಿರೂಪಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮೈದಾನದಲ್ಲೇ ನಿರ್ಣಾಯಕರು ಹಾಗೂ ಆಟಗಾರರ ನಡುವೆ ಗೊಂದಲಗಳಾಗಿವೆ. ಇದಕ್ಕೂ ಅವರಿಗೆ ದಂಡ ವಿಧಿಸಲಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5940

ಎಡದಿಂದ ಬಲಕ್ಕೆ
1.ವಾರೆಯಾಗಿ ಕಂಡ ಮುಖ (2)
2.ತೆಂಗಿನ ಕಾಯಿಯಿಂದ ಮಾಡಿದ ಮೋದಕ (5)
4. ಕಾಯು–ರಕ್ಷಿಸು ಎಂಬರ್ಥದ ಶಬ್ದ (3)
5. ಓಟು ಚಲಾಯಿಸುವ ವ್ಯಕ್ತಿ (4)
7.ವಸ್ತು–ವಿಷಯವು ಸಾರದಿಂದ ಕೂಡಿದೆ (4)
9.ಶಬ್ದಗಳೊಂದಿಗೆ ಆಡುವ ಬೌದ್ಧಿಕ ಆಟ (4)
13.ಅಂಕುರ–ಮೊಳಕೆಯಿದು (4)
15.ಬರವನ್ನು ಹೋಗಲಾಡಿಸಲು ಮಾಡಿದ ಕಾಳಗ (3)
16.ಗೆಲುವಿನ ಹಬ್ಬ–ವಿಜಯೋತ್ಸವವಿದು (5)
17.ಮನೆಸಾಲುಗಳ ನಡುವಿನ ಹಾದಿ (2)

ಮೇಲಿನಿಂದ ಕೆಳಕ್ಕೆ
1.ಭೂಮಿಯನ್ನು ಅಳತೆ ಮಾಡುವವನು (5)
2.ಕಾನನದಲ್ಲಿರುವ ಸದನ (4)
3.ಮರದ ಕಾಂಡದ ಕೆಳಗಿನ ಭಾಗ (2)
4.ಸಾಹಿತಿಯ ಪರ್ಯಾಯ ಹೆಸರಿದು (4)
6.ಸುವರ್ಣವಿಲ್ಲಿ ತಲೆಕೆಳಗಾಗಿದೆ (3)
8.ತಕ್ಕಮಟ್ಟಿಗೆ ಒಂದೇ ಆಗಿರುವುದು (3)
10.ದರದ ಬಗ್ಗೆ ತಿಳಿದುಕೊಂಡ ಹಿರಿಯ ಪೇದೆ (4)
11.ಬಿಳಿಯ ಬಣ್ಣದ ಹಿಮಾಚ್ಛಾದಿತ ಪರ್ವತ (5)
12.ಅಸಾಧಾರಣವಾದ ಶಕ್ತಿ ಆಲದ ನಡುವೆ ಇದೆ (4)
14.ಗಿಡ–ಮರಗಳ ಹುಟ್ಟಿಗೆ ಕಾರಣವಾದುದು (2)

5939 ಉತ್ತರ

ಎಡದಿಂದ ಬಲಕ್ಕೆ:
3.ತಾಣದೀವಿಗೆ
5.ಗುಟುರು 6.ತಬಲ
7.ಕರಜ 9.ರಣರಂಗ
11.ಜಡತನ 14.ಈಚಲ
16.ಶಿಲ್ಪಿಗ 17.ದಕ್ಷಿಣ
18.ತೋರಣದ್ವಾರ

ಮೇಲಿನಿಂದ ಕೆಳಕ್ಕೆ :
1. ಸಂಗೀತಗಾರ
2.ಅಂಗುಲ
3.ತಾರುಮಾರು 4.ದೀಪಕ
8.ರಕುತ 10.ಚರಣ
12.ನಖಶಿಖಾಂತ
13.ಪುರಂದರ 15.ಲಕ್ಷಣ
16.ಗಣನೆ

ಕಿರುಸುದ್ದಿ

ಪುಣ್ಯಸ್ಮರಣೋತ್ಸವ ನಾಳೆ

ಮುಂಡರಗಿ: ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಏ.2ರಂದು ಶ್ರೀಜಂಗಮ ಪುಂಗವ ಅಲ್ಲಮ ಪ್ರಭುಗಳ ಹಾಗೂ ಮಹಾದೇವಿ ಅಕ್ಕನವರ ಜಯಂತಿ ಮತ್ತು ಶ್ರೀಮಠದ 9ನೇ ಪೀಠಾಧಿಪತಿ ವೆಂಕಟಾಪೂರ ಪೂಜ್ಯರ 59ನೇ ಪುಣ್ಯಸ್ಮರಣೋತ್ಸವ ಜರುಗಲಿದೆ. ಬೆಳಗ್ಗೆ 8:30ಗಂಟೆಗೆ ಷಟ್‌ಸ್ಥಲ ಧ್ವಜಾರೋಹಣ, 9:30ಗಂಟೆಗೆ 9ನೇ ಪೀಠಾಧಿಪತಿ ವೆಂಕಟಾಪೂರ ಪೂಜ್ಯರ ಹಾಗೂ ಅಕ್ಕನ ಭಾವಚಿತ್ರ ಉತ್ಸವ ನಡೆಯುವುದು. ನಂತರ ಧರ್ಮಸಭೆ ನಡೆಯಲಿದ್ದು, ನಾಡೋಜ ಡಾ.ಅನ್ನದಾನೀಶ್ವರ ಶಿವಯೋಗಿಗಳವರು ಸಾನ್ನಿಧ್ಯ ವಹಿಸುವರು. ದುಧನಿ ವಿರಕ್ತಮಠದ ಡಾ.ಶಾಂತಲಿಂಗ ಸ್ವಾಮೀಜಿ ನೇತೃತ್ವ ವಹಿಸುವರು. ಉಪ ಆಯುಕ್ತೆ ಚಿತ್ರಾ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಸುನೀತಾ ಅಂಗಡಿ, ಡಾ.ಸಂತೋಷ ಹಿರೇಮಠ ಉಪನ್ಯಾಸ ನೀಡುವರು. ಜ.ಅ.ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಗೀತಗಾಯನ ಮಾಡುವರು. ಆರ್.ಬಿ.ಡಂಬಳಮಠ ಭಕ್ತಿಸೇವೆ ವಹಿಸುವರು. ಜಗದ್ಗುರು ಅನ್ನದಾನೀಶ್ವರ ಅಕ್ಕನ ಬಳಗದವರಿಂದ ಉಡಿತುಂಬುವ ಮತ್ತು ಸಂಗೀತ ಕಾರ್ಯಕ್ರಮ ನಡೆಯುವುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಗ್ರಂಥ ಬಿಡುಗಡೆ

ಗದಗ : ನಗರದ ಜಗದ್ಗುರು ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಪ್ರಾರಂಭೋತ್ಸವ ಕಾರ್ಯಕ್ರಮವು ಏ.1 ರಂದು ಸಂಜೆ 6.30ಕ್ಕೆ ನಗರದ ಶ್ರೀಮಠದಲ್ಲಿ ಜರುಗಲಿದೆ. ಕಾರ್ಯಕ್ರಮ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸುವರು. ಸಾನ್ನಿಧ್ಯ ಶಿವಮೊಗ್ಗ ಆನಂದಪುರ ಮುರುಘಾಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ವಹಿಸುವರು. ಸಾನ್ನಿಧ್ಯ ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಮುಂಡರಗಿಯ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಆಡಿ-ಹಂದಿಗುಂದದ ಶಿವಾನಂದ ಸ್ವಾಮೀಜಿ, ಶಿರೋಳ-ಭೈರನಟ್ಟಿಯ ಶಾಂತಲಿಂಗ ಸ್ವಾಮೀಜಿ, ರುದ್ರೂರಿನ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ, ಸಿರಸಂಗಿಯ ಬಸವಮಹಾಂತ ಸ್ವಾಮೀಜಿ ವಹಿಸುವರು. ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಹಣತೆ ಹಚ್ಚಿದವರು, ತಾರಕಗುರೂಪದೇಶ ಗ್ರಂಥಗಳು ಲೋಕಾರ್ಪಣೆಗೊಳ್ಳುವವು, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಗ್ರಂಥ ಬಿಡುಗಡೆ ನೆರವೇರಿಸುವರು. ಧಾರವಾಡದ ಆಕಾಶವಾಣಿ ಕಲಾವಿದ ಸ್ಥಾಯಿ ನಾಕೋಡ ಹಾಗೂ ಬಾಲಚಂದ್ರ ನಾಕೋಡ ಅವರಿಂದ ವಚನ ಸಂಗೀತ ಜರುಗುವುದು ಎಂದು ಜಾತ್ರಾ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಯಾಳುಗಳಿಗೆ ಸಾಂತ್ವನ

ಮುಂಡರಗಿ: ಇತ್ತೀಚೆಗೆ ಮುಂಡರಗಿ ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ಗುಂಪು ಘರ್ಷಣೆ ಜರುಗಿ ಎರಡು ಸಮುದಾಯವರು ಗಾಯಗೊಂಡು ಮುಂಡರಗಿ ಗದಗ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು ಮುಂಡರಗಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಮಂಗಳವಾರ ಭೇಟಿ ಮಾಡಿದ ರೋಣ ಮಾಜಿ ಶಾಸಕ, ಮಾಜಿ ಸಚಿವ ಕಳಕಪ್ಪ ಬಂಡಿ ಸಾಂತ್ವನ ಹೇಳಿದರು. ನಂತರ ವೈದ್ಯಾಧಿಕಾರಿ ಡಾ.ಲಕ್ಷ್ಮಣ ಪೂಜಾರ ಜತೆ ಚರ್ಚಿಸಿದರು. ನಂತರ ಅವರು ಇಂತಹ ಘಟನೆ ನಡೆಯಬಾರದಿತ್ತು, ಎಲ್ಲವೂ ಸರಿಹೋಗಲಿ, ಈಗಾಗಲೇ ಗದಗ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳಿಗೂ ಕೂಡಾ ಭೇಟಿ ನೀಡಿ ಸಂತೈಸಲಾಗಿದೆ ಎಂದರು. ಮುತ್ತಣ್ಣ ಕಡಗದ, ಡಂಬಳ ಮಂಡಲ ಬಿಜೆಪಿ ಅಧ್ಯಕ್ಷ ಅಂದಪ್ಪ ಹಾರೋಗೇರಿ, ಮಾಜಿ ಅಧ್ಯಕ್ಷ ರವಿ ಕರಿಗಾರ, ಮುದ್ದಿಂಗಪ್ಪ ಕೊರ್ಲಹಳ್ಳಿ, ರಜನಿಕಾಂತ ದೇಸಾಯಿ, ವೆಂಕನಗೌಡ ಪಾಟೀಲ, ಪುರಸಭೆ ಮಾಜಿ ಉಪಾಧ್ಯಕ್ಷ ನಾಗೇಶ ಹುಬ್ಬಳ್ಳಿ, ಕೃಷ್ಣ ಬಂಡಿ, ಪ್ರಭು ಕೊರ್ಲಹಳ್ಳಿ, ನಾಗರಾಜ ಕಾತ್ರಹಳ್ಳಿ, ಬಸವರಾಜ ಸಂಗನಾಳ, ದ್ಯಾಮಣ್ಣ ತಳವಾರ, ಮುತ್ತು ಆಳವಂಡಿ, ಸೋಮು ಹಕ್ಕಂಡಿ ಸೇರಿದಂತೆ ಇತರರಿದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	3719-7021
ಅಜವಾನ	7014-8700
ಅಲಸಂದಿ	3011-6096
ಕಡಲೆ	3759-5419
ಉದ್ದು	3009-3009
ಗೋವಿನಜೋಳ	1425-1669
ಹೆಸರು	4250-4410
ಜೋಳ	2602-4731
ಸಾಸವಿ	4112-4889
ಕುಸಬಿ	4519-5339
ಸೂರ್ಯಕಾಂತಿ	4009-5309
ತೊಗರಿ	4344-4744
ಗೋಧಿ	1530-4621
ಔಡಲ	4100-4100
ನವಣೆ	4750-4900



ಗದಗ: ಇಲ್ಲಿನ ಇತಿಹಾಸ ಪ್ರಸಿದ್ಧ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಕಳಸಾರೋಹಣ ನೆರವೇರಿತು. ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಬಸವ ಪ್ರಭು ಸ್ವಾಮೀಜಿ, ಬಸವ ಕಿರಣ ಸ್ವಾಮೀಜಿ, ಜಾತ್ರಾ ಸಮಿತಿಯ ಅಧ್ಯಕ್ಷ ವಿನಾಯಕ ಮಾನ್ವಿ, ಉಪಾಧ್ಯಕ್ಷ ಶಿವಯ್ಯ ನಾಲ್ವತ್‌ವಾಡಮಠ, ಸುಭಾಷ ಚನ್ನಪ್ಪನವರ, ಸುಧಾ ಹುಚ್ಚಣ್ಣವರ, ಕೋಶಾಧ್ಯಕ್ಷ ವೀರುಪಾಕ್ಷಪ್ಪ ದಲಾಲಿ, ಸಹ ಕೋಶಾಧ್ಯಕ್ಷ ವೀರಣ್ಣ ಗಡಗಿ, ಕಾರ್ಯದರ್ಶಿ ಚೇತನ ಅಂಗಡಿ, ಸಹ ಕಾರ್ಯದರ್ಶಿ ಎಂ.ಜಿ.ಹೂಗಾರ, ಚಂದ್ರಶೇಖರ ರಾಜೂರ, ಎಸ್.ವಿ.ಪವಾಡಿಗೌಡ್ರ, ಸಂಘಟನಾ ಕಾರ್ಯದರ್ಶಿ ಉಮೇಶಗೌಡ ಪಾಟೀಲ, ಯಲ್ಲೂಸಾ ಹಬೀಬ, ಎಂ.ಎಸ್. ಅಂಗಡಿ ಇದ್ದರು.

ವಿಶ್ವ ಜಲ ದಿನಾಚರಣೆ: ಜಾಗೃತಿ ಕಾರ್ಯಕ್ರಮ ಇಂದು

ಗದಗ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಹಯೋಗದೊಂದಿಗೆ ವಿಶ್ವ ಜಲ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮ ಏ.1 ರಂದು ಬೆಳಗ್ಗೆ 10ಕ್ಕೆ ಜಿಲ್ಲಾ ನ್ಯಾಯಾಲಯದ ಎರಡನೇ ಮಹಡಿಯ ವಿ.ಸಿ. ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ನಾಗವೇಣಿ ಉದ್ಘಾಟಿಸಲಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಆರ್.ಜಿ. ಕಲ್ಲೂರ ಅಧ್ಯಕ್ಷತೆ ವಹಿಸಲಿದ್ದಾರೆ. ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಗಂಗಾಧರ ಸಿ.ಎಂ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಗೀತಾ ಶಿಂಧೆ, ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸಿಜೆಎಂ ಗಿರಿಮಲ್ಲಪ್ಪ ಶೆಟ್ಟರ್, ಸಿವಿಲ್ ನ್ಯಾಯಾಧೀಶ ಸಿ.ಎಸ್.ಶಿವನಗೌಡ್ರ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶೆ ಪದ್ಮಶ್ರೀ ಪಾಟೀಲ, ಪ್ರಥಮ ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಶಿಲ್ಪಾ ತಿಮ್ಮಾಪುರ ಹಾಗೂ ದ್ವಿತೀಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಬೀರಪ್ಪ ಕಾಂಬಳೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಂಸ್ಥಾಪಕ ಜೈನ್ ಸನ್ನಿ ಹಸ್ತಿಮಲ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಖಿಮಿ ಸನ್ನಿ ಜೈನ್, ಅರಿಹಂತ ಸುರೇಶ ಕುಮಾರ್ ಜೈನ್ ಆಗಮಿಸಲಿದ್ದಾರೆ.



ಮುಂಡರಗಿ: ಇತ್ತೀಚೆಗೆ ಮುಂಡರಗಿ ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ಗುಂಪು ಘರ್ಷಣೆ ಜರುಗಿ ಎರಡು ಸಮುದಾಯವರು ಗಾಯಗೊಂಡು ಮುಂಡರಗಿ ಗದಗ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು ಮುಂಡರಗಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಮಂಗಳವಾರ ಭೇಟಿ ಮಾಡಿದ ರೋಣ ಮಾಜಿ ಶಾಸಕ, ಮಾಜಿ ಸಚಿವ ಕಳಕಪ್ಪ ಬಂಡಿ ಸಾಂತ್ವನ ಹೇಳಿದರು.

ಶ್ರದ್ಧಾ ಭಕ್ತಿಯ ಗುಗ್ಗಳೋತ್ಸವ, ಅಗ್ನಿಕುಂಡ ಹಾಯ್ದ ನೂರಾರು ಭಕ್ತರು

ಗದಗ: ವೀರಭದ್ರ ದೇವರ ಚರಿತ್ರೆ ವಿವಿಧ ಅವತಾರಗಳ ಕುರಿತು ವೀರಾವೇಷದಿಂದ ಹೇಳುವ ಒಡಪುಗಳು, 108 ಗಂಟು ಹಾಕಿದ 50 ಮೀಟರ ಉದ್ದದ ದಾರವನ್ನು ಶಸ್ತ್ರದ ಮೂಲಕ ಗಲ್ಲದಲ್ಲಿ ಹಾಕಿಕೊಂಡ ಭಕ್ತರು, ಮಕ್ಕಳಿಂದ ವೃದ್ದರವರೆಗೆ ಅಗ್ನಿ ಕುಂಡದಲ್ಲಿ ಹಾಯ್ದ ಭಕ್ತ ಸಮೂಹ, ಸಮ್ಮಾಳ ಮೇಳದ ತಾಳಕ್ಕೆ ತಕ್ಕಂತೆ ಕುಣಿದ ಯುವಕರು, ಹಲವು ಪವಾಡ ಸದೃಶಗಳನ್ನು ಮಾಡಿದ ಪುರವಂತರು ಈ ದೃಶ್ಯಗಳು ಕಂಡು ಬಂದಿದ್ದು ತಾಲೂಕಿನ ಐತಿಹಾಸಿಕ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ಜಾತ್ರೆಯ ಅಂಗವಾಗಿ ಎರಡನೇ ದಿನದ ಗುಗ್ಗಳೋತ್ಸವದಲ್ಲಿ.

ಕೋಟೆ ವೀರಭದ್ರೇಶ್ವರ ಜಾತ್ರೆ

ಐತಿಹಾಸಿಕ ಕೋಟೆ ವೀರಭದ್ರೇಶ್ವರ ಮತ್ತು ಸಿದ್ದರಭಾವಿಯ ಮದ್ಯೆ ಭೂ ಒಡಲಲ್ಲಿ ಅಡಗಿದ ಪ್ರಾಚ್ಯಾವಶೇಷಗಳನ್ನು ಪತ್ತೆ ಹಚ್ಚಲು 47 ದಿನ ನಡೆದ ಉತ್ಖನನದಿಂದ ದೇಶ ವಿದೇಶದ ಗಮನ ಸೆಳೆದ ಕೋಟೆ ವೀರಭದ್ರೇಶ್ವರ ದೇವಸ್ಥಾನದ 48ನೇ ವರ್ಷದ ಜಾತ್ರಾ ಮಹೋತ್ಸವ ಗುಗ್ಗಳೋತ್ಸವವು ಮಂಗಳವಾರ ಬೆಳಗ್ಗೆ 8ಕ್ಕೆ ಪ್ಯಾಟಿ ಹನುಮಂತ ದೇವರ ದೇವಸ್ಥಾನದಿಂದ ಆರಂಭವಾಯಿತು.

ಗಮನ ಸೆಳೆದ ಪುರವಂತರು: ಗ್ರಾಮ ಹಾಗೂ ನಾಡಿನ ವಿವಿಧ ಕಡೆಯಿಂದ ಆಗಮಿಸಿದ್ದ ಪುರವಂತರು, ವೀರಭದ್ರ ದೇವರ ವಿವಿಧ ಅವತಾರಗಳ ವೇಷ ಭೂಷಣಗಳನ್ನು ಧರಿಸಿದ್ದ ಪುರವಂತರು ವೀರಾವೇಷದ ವೀರಭದ್ರೇಶ್ವರ, ದಕ್ಷ ಬ್ರಹ್ಮನ ಚರಿತ್ರೆಯ ಕುರಿತಾದ ಒಡಪುಗಳು ಆಕರ್ಷಿಸಿದವು. ಇದರೊಂದಿಗೆ ಸಮ್ಮಾಳ ಮೇಳದ ತಾಳಕ್ಕೆ ಕುಣಿದ ಪುರವಂತರ ಹೆಜ್ಜೆಯ ನಾದ ಮನರಂಜಿಸಿತು.



ಗುಗ್ಗಳೋತ್ಸವದ ಮೆರವಣಿಗೆಯುದ್ದಕ್ಕೂ ? ಈರಣ್ಣ ದೊರೆಯೇ ನಿನಗಾರು ಸರಿಯೇ, ಸರಿ ಎಂದವರ ಹಲ್ಲು ಮುರಿಯೇ ಭೋ ಪರಾಕ? ಎಂಬ ಘೋಷಣೆಗಳು ಮೊಳಗಿದವು.

108 ಗಂಟಿನ ದಾರದ ಶಸ್ತ್ರ: ಮಹಿಳೆಯರು, ಮಕ್ಕಳು ಪುರವಂತರಿಂದ ತಮ್ಮ ಗಲ್ಲ ಮತ್ತು ಕೈಗಳಿಗೆ ಶಸ್ತ್ರ ಹಾಕಿಸಿಕೊಂಡು ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಯುವ ಭಕ್ತ ಸಮೂಹವು 108 ಗಂಟಿನ 50 ಮೀಟರಿಗೂ ಹೆಚ್ಚು ಇರುವ ದಾರವನ್ನು 50ಕ್ಕೂ ಹೆಚ್ಚು ಯುವಕರು ತಮ್ಮ ಗಲ್ಲದಲ್ಲಿ ಸೇರಿಸಿಕೊಳ್ಳುತ್ತಿರುವ ದೃಶ್ಯ ಸೇರಿದ ಭಕ್ತರನ್ನು ರೋಮಾಂಚನಗೊಳಿಸಿತು.

ಅಗ್ನಿ ಹಾಯ್ದು ನೂರಾರು ಭಕ್ತರು: ದೇಶ, ವಿದೇಶದ ಗಮನ ಸೆಳೆದ ಉತ್ಖನನ ಸ್ಥಳದ ಪಕ್ಕದಲ್ಲಿ ರಚನೆ ಮಾಡಿದ 20★10 ರ ಅಳತೆಯ ಅಗ್ನಿ ಕುಂಡದಲ್ಲಿ ನೂರಾರು ಭಕ್ತರು ಹಾಯ್ದು ವೀರಭದ್ರ ದೇವರ ದರ್ಶನ ಪಡೆದರು. ಮಕ್ಕಳು, ಯುವಕರು, ವೃದ್ದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಭಾರವಾದ ಫಲ್ಲಕ್ಕಿ ಮತ್ತು ಸಮ್ಮಾಳ ಮೇಳದ ವಾದ್ಯಗಳನ್ನು ಹೊತ್ತುಕೊಂಡು ಅಗ್ನಿಕುಂಡದಲ್ಲಿ ಹಾಯ್ದು ದೃಶ್ಯ ಭಕ್ತರ ಭಕ್ತಿಯನ್ನು ಇಮ್ಮಡಿಗೊಳಿಸಿತು. ಈ ಸ್ಥಳದಲ್ಲಿ ಸೇರಿದ್ದ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು.

ನಾಲಿಗೆ ಮೇಲೆ ದೀಪ

ಇಬ್ಬರು ಬಾಲ ಪುರವಂತರು ಒಡಪುಗಳನ್ನು ಹೇಳುತ್ತಾ ಕರ್ಪೂರದ ದೀಪವನ್ನು ತಮ್ಮ ನಾಲಿಗೆ ಮೇಲೆ ಇಟ್ಟು ಪವಾಡ ಸದೃಶ್ಯಗಳನ್ನು ಮಾಡಿ ತಮ್ಮ ಭಕ್ತಿಯೊಂದಿಗೆ ವೀರಭದ್ರ ದೇವರಿಗೆ ತಮ್ಮ ಸಂಕಲ್ಪವನ್ನು ಅರ್ಪಿಸಿದ್ದು ನೋಡುಗರನ್ನು ಭಕ್ತಿ ಪರವಶರನ್ನಾಗಿಸಿತು. ಇನ್ನೂ ಅಂಧ ವಿಕಲಚೇತನ ಗ್ರಾಮದ ಕಲ್ಲಪ್ಪ ಬಣವಿ ಹೇಳಿದ ವೀರಭದ್ರ ದೇವರ ಚರಿತ್ರೆಯ ಒಡಪು ಮಂತ್ರಮುಗ್ಧರನ್ನಾಗಿಸಿತು.

ಧರ್ಮ ಪರಿಪಾಲನೆಯಿಂದ ಸದ್ಗತಿ: ಸೂರೀಶ್ವರ್ಜಿ

ಗದಗ: ಸತ್ಯ, ಶಾಂತಿ, ಅಹಿಂಸಾ ಧರ್ಮ ಪಾಲನೆಯ ಮೂಲಕ ಮನುಷ್ಯ ಸದ್ಗತಿಯನ್ನು ಹೊಂದಬೇಕೆಂದು ಆಚಾರ್ಯ ಭಗವಾನ್ ಶ್ರೀಮದ್ ವಿಜಯ್ ಚಂದ್ರಭೂಷಣ ಸೂರೀಶ್ವರ್ಜಿ ಹೇಳಿದರು.

ಮಂಗಳವಾರ ನಗರದ ಪಂಜರಪೋಳದ ಗೋಶಾಲಾದಲ್ಲಿ ಮಹಾವೀರ ಗೋ ಸೇವಾ ಸಮಿತಿ ಏರ್ಪಡಿಸಿದ್ದ ಭಗವಾನ ಮಹಾವೀರ ಸ್ವಾಮಿಯವರ ಜನ್ಮಕಲ್ಯಾಣಕ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿ, ಶ್ರದ್ಧೆ, ನಿಷ್ಠೆಯಿಂದ ಧರ್ಮದ ಹಾದಿಯಲ್ಲಿ ಮುನ್ನಡೆದರೆ ಧರ್ಮವು ನಮ್ಮನ್ನು ಸನ್ಮಾರ್ಗದೆಡೆಗೆ ಮುನ್ನಡೆಸುವದು. ಮಾಡುವ ಕಾಯಕದಲ್ಲಿ ಸತ್ಯ, ಪ್ರಾಮಾಣಿಕತೆ ಇದ್ದರೆ ಅದು ಪರಿಶುದ್ಧ ಫಲ ನೀಡಬಲ್ಲದು ಅಂತಹ ಪರಿಶುದ್ಧ ಕಾಯಕ ನಡೆಸಿ ಎಂದರು.

ಸಂಯಮ ಭೂಷಣ ವಿಜಯರಾಜಜೀ ಮಾತನಾಡಿ, ಧರ್ಮಾಭಿಮಾನಿಗಳು ಅಹಿಂಸಾ ಪರಮೋಧರ್ಮ ತತ್ವವನ್ನು ಪರಿಪಾಲಿಸಬೇಕಲ್ಲದೆ ಧರ್ಮದ ಪಥದಲ್ಲಿ ಮುನ್ನಡೆದು ಮಾನವ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದರು.ಮಹಾವೀರ ಗೋ ಸೇವಾ ಸಮಿತಿಯ ಅಧ್ಯಕ್ಷ ಅಶೋಕ ಘುಲಾಮುಥಾ ಮಾತನಾಡಿದರು.

ಶ್ವೇತಾಂಬರ ಜೈನ ಮೂರ್ತಿ ಆರಾಧಕರ ಸಂಘದ ಅಧ್ಯಕ್ಷ ಪಂಕಜ್ ಬಾಫಣಾ, ವರ್ಧಮಾನ್ ಸ್ಥಾನಕ್ವಾಸಿ ಜೈನ ಸಂಘದ ಅಧ್ಯಕ್ಷ ರೂಪಚಂದಜಿ ಪಾಲರೇಚಾ, ಜೈನ ತೇರಾಪಂಥ್ ಸಭಾದ ಅಧ್ಯಕ್ಷ ಸುರೇಶ ಕೊಠಾರಿ, ಕಚ್ಚಿ ದಾಸ ಓಸ್ವಾಲ್ ಜೈನ ಸಂಘದ ಅಧ್ಯಕ್ಷ ವಿಜಯಜಿ ಲೂಥಿಯಾ, ಜಿಲ್ಲಾ ದಿಗಂಬರ ಜೈನ ಸಂಘದ ಅಧ್ಯಕ್ಷ ಪದ್ಮರಾಜ ಕುಲಕರ್ಣಿ, ಗುಜರಾತಿ



ಸಮಾಜದ ಅಧ್ಯಕ್ಷ ಭಗರಾಜ ಪಟೇಲ್, ವಿಷ್ಣು ಸಮಾಜದ ಅಧ್ಯಕ್ಷ ಬಾಬುಲಾಲಜ್ ಪರಮಾರ್ ಹಾಗೂ ವಿಜಯರಾಜ ಬಾಗಮಾರ ಇದ್ದರು. ಗೋ ಶಾಲೆಗೆ ದೇಣಿಗೆ ನೀಡಿದ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಚಿನ್ ಜೈನ್ ಸ್ವಾಗತಿಸಿ, ನಿರೂಪಿಸಿದರು. ನರೇಶ್ ಪಾಲರೇಚಾ ದಾನಿಗಳನ್ನು ಪರಿಚಯಿಸಿ ಸನ್ಮಾನ ಕಾರ್ಯಕ್ರಮ ನಿರೂಪಿಸಿ, ಮಹಾವೀರ ಗೋ ಸೇವಾ ಸಮಿತಿಯ ಕಾರ್ಯದರ್ಶಿ ಭರತ್ ಬನ್ಸಾಲಿ ವಂದಿಸಿದರು. ಮಹಾಪ್ರಸಾದದ ಭಕ್ತಿಸೇವೆಯನ್ನು ಸಂತೋಷ ಮಾರ್ಕೆಟಿಂಗ್‌ನವರು ವಹಿಸಿಕೊಂಡಿದ್ದರು.

ಮೆರವಣಿಗೆ: ಗದುಗಿನ ಮುಳಗುಂದ ನಾಕಾದ ಮಹಾವೀರ ಸರ್ಕಲ್‌ದಿಂದ ಅಲಂಕೃತ ವಾಹನದಲ್ಲಿರಿಸಿದ ಭಗವಾನ ಮಹಾವೀರರ ಭಾವಚಿತ್ರದ ಮೆರವಣಿಗೆಯು ಪ್ರಾರಂಭಗೊಂಡು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಗೋಶಾಲಾ ಆವರಣಕ್ಕೆ ಆಗಮಿಸಿ ಧರ್ಮ ಸಮಾರಂಭವಾಗಿ ಮಾರ್ಪಟ್ಟಿತು. ಕಾರ್ಯಕ್ರಮದಲ್ಲಿ ಸಮಸ್ತ ಜೈನ್ ಸಮಾಜಬಾಂಧವರು, ಮಹಿಳಾ ಮಂಡಳ ಹಾಗೂ ಯುವಕ ಮಂಡಳದವರು ಪಾಲ್ಗೊಂಡಿದ್ದರು.

ಭಗವಾನ್ ಮಹಾವೀರ ಜಯಂತ್ಯುತ್ಸವ ಆಚರಣೆ

ಲಕ್ಷ್ಮೇಶ್ವರ: ಅಹಿಂಸಾ ಪರಮೋಧರ್ಮ, ಬದುಕು ಬದುಕಲು ಬಿಡು ಎಂಬ ಸತ್ಯ ಸಂದೇಶವನ್ನು ಜಗತ್ತಿಗೆ ನೀಡಿದ ಭಗವಾನ್ ಮಹಾವೀರರ ಜಯಂತೋತ್ಸವವನ್ನು ಸೋಮವಾರ ಪಟ್ಟಣದಲ್ಲಿ ಜೈನ ಧರ್ಮೀಯರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ನೂತನ ಮಹಾವೀರರ ಮೂರ್ತಿ ಅನಾವರಣ, ಪೂಜೆಯೊಂದಿಗೆ ಮಹಾವೀರರ 2625ನೇ ಜನ್ಮ ಕಲ್ಯಾಣಕ ಕಾರ್ಯಕ್ರಮದಲ್ಲಿ ಜೈನ ಸಮಾಜದ ಅಧ್ಯಕ್ಷ ಭರತರಾಜ ಬರಿಗಾಲಿ ಮಾತನಾಡಿ, ಭಗವಾನ್ ಮಹಾವೀರರು ಜಗತ್ತಿನ ಜೀವರಾಶಿಗಳಿಗೆ ಸತ್ಯ, ಅಹಿಂಸೆ, ಕಳ್ಳತನ ಮಾಡದಿರುವುದು, ಪವಿತ್ರತೆ, ಅನುಬಂಧಗಳಿಂದ ಕೂಡಿದ ಧರ್ಮ ಮಾರ್ಗಗಳನ್ನು ಅರುಹಿ ಜೀವನ್ಮುಕ್ತಿ ಮಾರ್ಗ ತೋರಿದ್ದಾರೆ. ಅವರು ಮಾನವ ಕುಲಕೋಟಿಯ ಉದ್ಧಾರಕ್ಕಾಗಿ ತೋರಿದ ಜೀವನ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಶಾಂತಿ ನೆಮ್ಮದಿಯ ಬದುಕನ್ನು ನಮ್ಮೆಲ್ಲರದ್ದಾಗಿಸಿಕೊಳ್ಳೋಣ ಎಂದರು. ಗ್ರೇಡ್ 2 ತಹಶೀಲ್ದಾರ ಮಂಜುನಾಥ ಅಮಾಸಿ ಮಾತನಾಡಿ, ಭಗವಾನ್ ಮಹಾವೀರರು ಮನುಕುಲಕ್ಕೆ ಸಾರಿದ ಸತ್ಯ, ಅಹಿಂಸೆಯಂತಹ ಮೌಲ್ಯಿಕ ತತ್ವಗಳು ಸಾರ್ವಕಾಲಿಕವಾಗಿದ್ದು, ಅವರ ಸಂದೇಶಗಳನ್ನು ಯುವಕರು ಅರ್ಥೈಸಿಕೊಂಡು ಆದರ್ಶ ಜೀವನ ನಡೆಸಬೇಕೆಂದರು ಎಂದರು.

ಸಂಜೆ ಪಟ್ಟಣದ ಅನಂತನಾಥ ಬಸದಿಯಿಂದ ಭಗವಾನ್ ಮಹಾವೀರ ಭಾವಚಿತ್ರ ಮೆರವಣಿಗೆ ಹೊರಟು ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಶಂಖ ಬಸದಿಗೆ ತಲುಪಿತು. ಈ ಸಂದರ್ಭದಲ್ಲಿ ಶ್ರಾವಕಶ್ರಾವಕಿಯರು ಭಕ್ತಿಯಿಂದ ಮಹಾವೀರರ ಕುರಿತ ಹಾಡು ಹೇಳುತ್ತ, ಕುಣಿಯುತ್ತ ಸಾಗುತ್ತಿದ್ದ ಸಾಗಿದರು. ಬೆಳಿಗ್ಗೆ ಪಟ್ಟಣದ ಶಂಖ ಬಸದಿ ಮತ್ತು ಅನಂತನಾಥ ಬಸದಿಯಲ್ಲಿ ಭಗವಾನ್ ಮಹಾವೀರ ಸ್ವಾಮಿಯ ತೊಟ್ಟಿಲೋತ್ಸವ ಮತ್ತು 24 ತೀರ್ಥಂಕರರ ನಾಮಗಳನ್ನು ಸ್ತುತಿಸಲಾಯಿತು. ಜೈನ ಸಮಾಜದಿಂದ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು-ಹಣ್ಣು ವಿತರಿಸಲಾಯಿತು.

ಈ ವೇಳೆ ಸಮ್ಮೇದ ಗೋಗಿ, ಸಂತೋಷ ಗೋಗಿ, ವೈಭವ ಗೋಗಿ, ಸುಕೇನ್ ಗೋಗಿ, ನಂದಕುಮಾರ್ ಪಾಟೀಲ, ಭರತ್ ಪಾಟೀಲ, ಮಹಾವೀರ ಪಂಡಿತ, ಸನ್ಮತಿ ಗೋಗಿ, ಪ್ರಮೋದ ಘೋಂಗಡಿ, ಆಕಾಶ ಗೋಗಿ, ಪ್ರಜ್ವಲ್ ಕಾಟಗಲ್, ವೃಷಭ ಬರಿಗಾಲಿ, ಇಂದ್ರಜೀತ ಒಣಕುದರಿ, ಆದಿನಾಥ ಘೋಂಗಡಿ, ಯಶಪಾಲ್ ಗೋಗಿ, ಅನಂತರಾಜ ಮಿಣಜಗಿ ಸೇರಿ ಜೈನ ಸಮಾಜದ ಶ್ರಾವಕ ಶ್ರಾವಕಿಯರು ಪಾಲ್ಗೊಂಡಿದ್ದರು.



ಮೇ 6ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ: ಎಸ್.ವಿ.ಸಂಕನೂರ

ಗದಗ: ಜಿಲ್ಲೆಯ ಗಜೇಂದ್ರಗಡ ತಾಲೂಕು ಸೂಡಿ ಗ್ರಾಮದಲ್ಲಿ ಪ್ರಪ್ರಥಮ ಬಾರಿಗೆ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ, 50ನೇ ವರ್ಷದ ರಥೋತ್ಸವದ ನಿಮಿತ್ತ ನೂತನ ರಥ ಲೋಕಾರ್ಪಣೆ ಹಾಗೂ ಧರ್ಮ ಸಮಾರಂಭ ಮೇ 6 ರಿಂದ 10 ರವರೆಗೆ ಬೃಹತ್ ಪ್ರಮಾಣದಲ್ಲಿ ಶ್ರೀ ಸೂಡಿ ಜುಕ್ತಿಹಿರೇಮಠ ಆಯೋಜಿಸುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹೇಳಿದರು.

ನಗರದ ಎಪಿಎಂಸಿ ಬಳಿಯ ಶರಣಬಸವ (ರಾಜು) ಗುಡಿಮನಿ ಅವರ ಕಚೇರಿಯಲ್ಲಿ ನಡೆದ ಭಕ್ತರ ಪೂರ್ವಭಾವಿ ಸಿದ್ಧತೆ ಸಭೆಯಲ್ಲಿ ಮಾತನಾಡಿ, ವೀರಶೈವ ಧರ್ಮ ಪರಂಪರೆಯ ಮೂಲ ಆಚಾರ್ಯರೇ ಪಂಚಪೀಠದ ಪರಮಾಚಾರ್ಯರು. ಈಗ ನೂತನ ರಥ ಲೋಕಾರ್ಪಣೆಯ ಕಾರ್ಯ ನಡೆಯುತ್ತಿರುವುದು ಸಂತಸದ ಸಂಗತಿ. ಘಟದಿಂದ ಮಠ ಎಂಬುದಕ್ಕೆ ನಮ್ಮ ಜುಕ್ತಿಹಿರೇಮಠವೇ ಸಾಕ್ಷಿ ಎಂದರು. ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯರ ಸಾನ್ನಿಧ್ಯವಹಿಸಿದ್ದರು. ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಹಿರಿಯ ಗಣ್ಯ ಉದ್ಯಮಿದಾರ ಎಸ್.ಪಿ.ಸಂಶಿಮಠ, ಸಿದ್ದಣ್ಣ ಮಾರನಬಸರಿ, ಎಚ್.ಎಸ್. ಶಿವನಗೌಡರ, ರಾಜು ಕುರಡಗಿ, ಶರಣಪ್ಪ ಕುರಡಗಿ, ಸದಾಶಿವಯ್ಯ ಮದರಿಮಠ, ರಾಜು ಗುಡಿಮನಿ, ಚಂದ್ರು ಬಾಳಿಹಳ್ಳಿಮಠ, ಮಲ್ಲಿಕಾರ್ಜುನ ಸಂತೋಜಿ, ಸೇರಿದಂತೆ ಹಲವಾರು ಜನ ಗಣ್ಯ ಉದ್ದಿಮೆದಾರರನೊಳಗೊಂಡ ಸೂಡಿ ಜುಕ್ತಿಹಿರೇಮಠದ ಬಳಗ ಅದ್ದೂರಿಯಿಂದ ಕಾರ್ಯಕ್ರಮ ನೆರವೇರಿಸಲು ನಿರ್ಧರಿಸಿದರು. ವಿಜಯಲಕ್ಷ್ಮೀ ಮಾನ್ವಿ, ಜಯಶ್ರೀ ತಾತನಗೌಡ ಕಾರ್ಯಕ್ರಮಗಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು. ಸೂಡಿ ಗ್ರಾಮದಲ್ಲಿ ಜರುಗುವ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ, ನೂತನ ರಥ ಲೋಕಾರ್ಪಣೆ ಸಮಾರಂಭದ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಎಸ್.ಎಂ ಮಾರನಬಸರಿ ಅವರನ್ನು ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ಸನ್ಮಾನಿಸಿ ಆಶೀರ್ವದಿಸಿದರು.



ವೃತ್ತಿನಿರತ ಛಾಯಾಗ್ರಾಹಕರ ಮೇಲೆ ಹಲ್ಲೆ: ಕಾನೂನು ಕ್ರಮಕ್ಕೆ ಮನವಿ

ನರಗುಂದ: ಸಕಲೇಶಪುರದಲ್ಲಿ ವೃತ್ತಿನಿರತ ಛಾಯಾಗ್ರಾಹಕರು ಪ್ರೀವೆಡ್ಡಿಂಗ್ ಶೂಟ್ ಮಾಡುತ್ತಿರುವಾಗ ಕೆಲವು ಕಿಡಿಗೇಡಿಗಳು ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಛಾಯಾಗ್ರಹಣಕ್ಕೆ ಬಳಸುವ ಉಪಕರಣಗಳನ್ನು ಧ್ವಂಸ ಮಾಡಿದ್ದಾರೆ. ಈ ಪ್ರಕರಣಕ್ಕೆ ಸಂಭಂದಪಟ್ಟವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ತಾಲೂಕಾಧ್ಯಕ್ಷ ಮಹೇಶ ಬಡಿಗೇರ ಸರಕಾರವನ್ನು ಆಗ್ರಹಿಸಿದ್ದಾರೆ.

ಮಂಗಳವಾರ ತಹಶೀಲ್ದಾರ ಕಾರ್ಯಾಲಯ ಹಾಗೂ ಪೊಲೀಸ ಠಾಣೆಯ ಅಧಿಕಾರಿಗಳಿಗೆ ತಾಲೂಕ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಹಾಗೂ ವಿವಿಧೋದ್ದೇಶಗಳ ಸಂಘದಿಂದ ಮನವಿ ಅರ್ಪಿಸಿ ಮಾತನಾಡಿದರು.



ಮದುವೆ ಸಿಸನ್‌ಗಳಲ್ಲಿ ಕಲ್ಯಾಣ ಮಂಟಪ, ಮನೆ ಆವರಣ ಹಾಗೂ ದೇವಸ್ಥಾನಗಳಲ್ಲಿ ಮಧ್ಯರಾತ್ರಿ 2 ರಿಂದ 3 ಗಂಟೆಗಳವರೆಗೆ ಮದುವೆಗಳು ಜರಗುತ್ತವೆ. ಕಾರ್ಯಕ್ರಮಗಳನ್ನು ಮುಗಿಸಿ ಮರಳಿ ಮನೆಗೆ ಬರುವಾಗ ಅನೇಕ ರೀತಿಯ ಕಳ್ಳತನ, ದರೋಡೆಯಂತಹ ಘಟನೆಗಳು ಜರುಗಬಹುದು. ಇಂತಹ ಕಾರ್ಯಕ್ರಮಗಳ ಸಮಯವನ್ನು ರಾತ್ರಿ10.30 ರವರೆಗೆ ಹಾಗೂ ಮದುವೆ ದಿನ ಸಂಜೆ 4.00 ಗಂಟೆ ವರೆಗೆ ಸಮಯವನ್ನು ನಿಗದಿಗೊಳಿಸುಂತೆ ಪೊಲೀಸ ಇಲಾಖೆ ನಿರ್ದೇಶಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಅಂದಾನಯ್ಯ ಹಿರೇಮಠ, ಕಾರ್ಯದರ್ಶಿ ನಜೀರ ರೋಣದ, ಮುತ್ತು ಕುಮ್ಮಿ, ಪ್ರಕಾಶ ನಂದಿ, ಶಿವರಾಜ ಕಲ್ಲಾಪೂರ, ಗಣೇಶ ನಾಗನೂರ, ಶಿವು ದಿಬ್ಬದಮನಿ, ಸಂಗಯ್ಯ ಚರಂತಿಮಠ, ಗಿರೀಶ ಬೆಳವಟಿಗಿ, ವಿಜಯ ಪಲ್ಲೇದ, ಮಾರುತಿ ದೊಡ್ಡಮನಿ, ಪ್ರಕಾಶ ಪೂಜಾರ, ರಾಘು ಸಿಂಪಿ, ಬಸವರಾಜ ಮೂಲಿಮನಿ, ಸುರೇಶ ನರಸಾಪುರ, ಮುತ್ತು ಹೂಗಾರ ಇತರರಿದ್ದರು.

ಮುಂಡರಗಿ ತಾಲೂಕು ಆಸ್ಪತ್ರೆಯಲ್ಲಿ ಎಲ್ಲ ಸೌಲಭ್ಯ ಲಭ್ಯ

ಮುಂಡರಗಿ: ಮುಂಡರಗಿ ತಾಲೂಕಾ ಆಸ್ಪತ್ರೆ ತುಂಬಾ ಸುಸಜ್ಜಿತವಾದ ಆಸ್ಪತ್ರೆಯಾಗಿದ್ದು, ಗದಗ ಜಿಲ್ಲೆಯಲ್ಲಿಯೇ ಪ್ರತಿಯೊಂದು ಸೌಲಭ್ಯಗಳನ್ನು ರೋಗಿಗಳಿಗೆ ನೀಡುವ ಏಕೈಕ ಆಸ್ಪತ್ರೆಯೆಂದು ಹೆಸರು ಮಾಡಿದೆ ಎಂದು ಆಡಳಿತ ವೈದ್ಯಾಧಿಕಾರಿ ಡಾ.ಲಕ್ಷ್ಮಣ ಪೂಜಾರ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ,



ತಾಲೂಕಾ ಆಸ್ಪತ್ರೆ 100 ಹಾಸಿಗೆ ಸೌಲಭ್ಯಗಳನ್ನು ಹೊಂದಿದ್ದು, ಇಲ್ಲಿ ಪೀಜಿಸಿಯನ್, ಚಿಕ್ಕಮಕ್ಕಳ ತಜ್ಞರು, ಎಲುಬು ಕೀಲುಗಳ ತಜ್ಞರು, ಡೆಂಟಿಸ್ಟ, ಕಣ್ಣಿನ ತಜ್ಞರು, ಗೈನಾಕಾಲಾಜಿಸ್ಟ ಮುಂತಾದ ಎಲ್ಲ ತಜ್ಞ ವೈದ್ಯರು ಲಭ್ಯವಿದ್ದು, ಇನ್ನು ಎಪ್ರಿಲ್ ತಿಂಗಳಲ್ಲಿ ಅರವಳಿಕೆ ತಜ್ಞರೂ ಬರುವುದರಿಂದ ತಾಲೂಕಾ ಆಸ್ಪತ್ರೆ ಎಲ್ಲ ತಜ್ಞ ವೈದ್ಯರು ಮತ್ತು ಎಲ್ಲ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಆಸ್ಪತ್ರೆಯಾಗಿದೆ ಎಂದರು.

ತಾಲೂಕಾ ಆಸ್ಪತ್ರೆಗೆ ಕೊಪ್ಪಳ, ಶಿರಹಟ್ಟಿ, ಹೂವಿನ ಹಡಗಲಿ ಮುಂತಾದ ತಾಲೂಕುಗಳಿಂದಲೂ



ರೋಗಿಗಳು ಬರುವುದರಿಂದ ತಿಂಗಳಿಗೆ 14000 ರೋಗಿಗಳು ಈ ಆಸ್ಪತ್ರೆಯ ಉಪಯೋಗವನ್ನು ಪಡೆಯುತ್ತಿದ್ದಾರೆ. ತಿಂಗಳಿಗೆ 1500 ರೋಗಿಗಳು ಒಳರೋಗಿಗಳಾಗಿ ದಾಖಲಾಗುತ್ತಿದ್ದಾರೆ. ತಿಂಗಳಿಗೆ 40 ರಿಂದ 50 ಸಹಜ ಹೆರಿಗೆ ಮಾಡಿಸುತ್ತಿರುವುದರಿಂದ ಇದು ಸಹಜ ಹೆರಿಗೆಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದು, ತಾಯಿ-ಮಗು ಸುರಕ್ಷತೆಯ ದೃಷ್ಟಿಯಿಂದ ಇಲ್ಲಿನ ನರ್ಸಗಳು ಹಾಗೂ ವೈದ್ಯರು ಸಹಜ ಹೆರಿಗೆಗೆ ಆದ್ಯತೆ ನೀಡುತ್ತಿರುವುದರಿಂದ ಗರ್ಭಿಣಿಯರು ಖುಷಿ ಪಡುವಂತಾಗಿದೆ ಎಂದರು.

ಬಾಣಂತಿಯರಿಗೆ ತಿಂಡಿ ಊಟದ ವ್ಯವಸ್ಥೆ ಎಲ್ಲ ಸರಕಾರಿ ಆಸ್ಪತ್ರೆಯಲ್ಲಿ ಇರುವುದು ಸಹಜ ಆದರೆ ಇಲ್ಲಿಯ ತಾಲೂಕಾ ಆಸ್ಪತ್ರೆಯಲ್ಲಿ ಬಾಣಂತಿಯರ ಜೊತೆಗೆ ಒಳರೋಗಿಗಳೆಂದು ದಾಖಲಾದ ಎಲ್ಲರಿಗೂ ತಿಂಡಿ ಊಟದ ವ್ಯವಸ್ಥೆ ಇರುವುದು ಜಿಲ್ಲೆಗೆ ಪ್ರಥಮ ಆಸ್ಪತ್ರೆ ಇದಾಗಿದೆ. ಆಸ್ಪತ್ರೆಯಲ್ಲಿ ರಕ್ತ ಶೇಖರಣಾ ಘಟಕ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ತಿಂಗಳ 14-15 ರಕ್ತಹೀನತೆ ಇರುವ ರೋಗಿಗಳಿಗೆ ಈ ಘಟಕದಿಂದ ರಕ್ತದ ವ್ಯಸ್ಥೆಯನ್ನು ಮಾಡಲಾಗುತ್ತಿದೆ. ಆಸ್ಪತ್ರೆಯಲ್ಲಿ ಎರಡು ಡೈಯಲಾಸಿಸ್ ಘಟಕಗಳಿದ್ದು, ಇದರಿಂದ ಪ್ರತಿ ತಿಂಗಳು 11 ರೋಗಿಗಳು ಪ್ರತಿವಾರ ಎರಡು ಬಾರಿಯಂತೆ ಡೈಯಲಾಸಿಸ್ ಪಡೆದುಕೊಳ್ಳುತ್ತಿದ್ದಾರೆ. ಒಂದು ನಯಾಪೈಸೆ ಖರ್ಚ ಇಲ್ಲದೆ ಇದರ ಉಪಯೋಗವನ್ನು ರೋಗಿಗಳು ಪಡೆಯುತ್ತಿದ್ದು ಖುಷಿಯ ವಿಚಾರ ಎಂದರು.

ಈ ಭಾಗದ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಆರೋಗ್ಯ ರಕ್ಷಾ ಸಮಿತಿಯ ಸಹಾಯ ಸಹಕಾರದಿಂದ ಈ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ರೋಗಿಗಳಿಗೆ ಉತ್ತಮ ಸೇವೆ ನೀಡುತ್ತಿದೆ. ಎಲ್ಲರೂ ಈ ಆಸ್ಪತ್ರೆಯ ಸದುಪಯೋಗ ಪಡೆದುಕೊಳ್ಳಲು ಅವರು ವಿನಂತಿಸಿದರು. ರೋಗಿಗಳು ಆಸ್ಪತ್ರೆಗೆ ಬರುವಾಗ ಖಡ್ಡಾಯವಾಗಿ ಆಧಾರ ಇಲ್ಲ ರೇಷನ್ ಕಾರ್ಡ್ ತರಬೇಕೆಂದು ತಿಳಿಸಿದರು.

ಭಾವೆ ಅರಮನೆ ಪುರಾತತ್ವ ಸಂಗ್ರಹಾಲಯಕ್ಕೆ ಹಸ್ತಾಂತರ

ನರಗುಂದ: ಭಾರತ ಸ್ವಾತಂತ್ರ್ಯ ಹೋರಾಟದ ಅರಸ ಭಾಸ್ಕರರಾವ್ ಭಾವೆಯವರ ಅರಮನೆ ಹಾಗೂ ಅವಶೇಷಗಳನ್ನು ಶಾಸಕ ಸಿ.ಸಿ.ಪಾಟೀಲ ನೇತೃತ್ವದಲ್ಲಿ ಪುರಾತತ್ವ ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ನಿರ್ದೇಶಕಿ ಡಾ.ಸ್ಮಿತಾ ರಡ್ಡಿ, ಇಂಜನೀಯರ ಸುವರ್ಣಾ, ವಿಪ ಸದಸ್ಯ ಎಸ್ ವ್ಹಿ ಸಂಕನೂರ ಮಂಗಳವಾರ ವೀಕ್ಷಣೆ ಮಾಡಿದರು.

ಈ ವೇಳೆ ಶಾಸಕ ಸಿ.ಸಿ.ಪಾಟೀಲ ಮಾತನಾಡಿ, ಹಲವು ದಶಕಗಳ ಕಾಲ ಬಾಸ್ಕರರಾವ ಭಾವೆ ಅರಮನೆಯನ್ನು ಪುರಸಭೆ ಕಾರ್ಯಾಲಯವನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಪುರಸಭೆ ಕಾರ್ಯಾಲಯವು ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಖಾಲಿಯಾಗಿದ್ದ ಅರಮನೆ ಕಟ್ಟಡವನ್ನು ಹಾಗೆಯೇ ಬಿಟ್ಟರೆ ಅನ್ಯ ಚಟುವಟಿಕೆಗಳ ತಾಣವಾಗಿ ಹಾಳಾಗಲಿದೆ. ಸ್ವಾತಂತ್ರ್ಯ ಹೋರಾಟದ ನೆಲೆಯಾದ ಭಾವೆ ಅರಮನೆ, ಪುಷ್ಕರಣೆಗಳು, ಕೆಂಪಗಸಿ, ಕುರುಹು ಮುಂದಿನ ಪೀಳಿಗೆಗೆ ಉಳಿಸುವ ಸಲುವಾಗಿ ಹಿಂದೆ ನಿರ್ಣಯ ಮಾಡಿದಂತೆ ಅರಮನೆ ಹಾಗೂ ಇನ್ನಿತರೇ ಬಾಬಾಸಾಹೇಬರ ಅವಶೇಷಗಳನ್ನು ಪುರಾತತ್ವ



ಇಲಾಖೆಗೆ ವಹಿಸಲಾಗುತ್ತಿದೆ. ಇದಕ್ಕಾಗಿ ಜಿಲ್ಲಾ ಉಸ್ತುವಾರಿ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರಿಗೆ ಮನವಿ ಮಾಡಲಾಗಿತ್ತು. ಅವರ ಸೂಚನೆಯಂತೆ ಪುರಾತತ್ವ ಇಲಾಖೆ ಅಧಿಕಾರಿಗಳು ಮಂಗಳವಾರ ವೀಕ್ಷಣೆಗೆ ಬಂದಿದ್ದಾರೆ. ಅವರು ಸಂಪೂರ್ಣ ವೀಕ್ಷಿಸಿ, ಮಾಹಿತಿ ಪಡೆದು ಸಂಪೂರ್ಣ ವರದಿಯನ್ನು ಸಂಬಂಧಿಸಿದ ಇಲಾಖೆ ಹಾಗೂ ಸರ್ಕಾರಕ್ಕೆ ಸಲ್ಲಿಸಲಿದ್ದಾರೆ. ನಂತರ ಇದನ್ನು ಪುರಾತತ್ವ ಇಲಾಖೆ ಸುಪರ್ದಿಗೆ ವಹಿಸಲು ಬೇಕಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಡಾ.ಸ್ಮಿತಾ ರಡ್ಡಿ ಮಾತನಾಡಿ, ಈಗಾಗಲೇ ಸಚಿವ ಎಚ್.ಕೆ.ಪಾಟೀಲರ ಸೂಚನೆಯಂತೆ ಇಲ್ಲಿಗೆ ಬಂದಿದ್ದೇವೆ. ಈ ಅರಮನೆಯನ್ನು ವೀಕ್ಷಿಸಿದಾಗ ಬಹು ಅಮೂಲ್ಯವಾದ ಸುಸಜ್ಜಿತ ಅರಮನೆ ಕಟ್ಟಡವಿದೆ. ಅರಮನೆ ಮೇಲ್ಭಾಗದಲ್ಲಿ ವಿಶಿಷ್ಟವಾದ ಬೆಲೆಬಾಳುವ ತೈಲವರ್ಣ ಚಿತ್ರಕಲೆಗಳಿವೆ. ಇದರಲ್ಲಿ ರಾಮಾಯಣ, ಭಾಗವತ ಪುರಾಣ, ,ವಿಷ್ಣು ಪುರಾಣ ಸಾರುವ ಧಾರ್ಮಿಕ, ಸಾಮಾಜಿಕ ಸಂದೇಶ ನೀಡುವ ಅಪರೂಪದ ಚಿತ್ರಕಲೆ ಇದೆ. ಸಮಗ್ರ ವರದಿಯನ್ನು ನಮ್ಮ ಇಲಾಖೆ ಆಯುಕ್ತರಿಗೆ ಸಲ್ಲಿಸಲಾಗುತ್ತದೆ ಎಂದರು.

ನಿವೃತ್ತ ಕನ್ನಡ ಉಪನ್ಯಾಸಕ ಎಂ.ಎಸ್ .ಯಾವಗಲ್ ನರಗುಂದ ಬಾಬಾಸಾಹೇಬರ ಬಗ್ಗೆ ಸಂಪೂರ್ಣ ಮಾಹಿತಿ ವಿವರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಬ್ಯಾಳಿ, ಪುರಾತತ್ವ ಇಲಾಖೆ ಎಂಜನೀಯರ್ ಸುವರ್ಣಾ, ರಾಚನಗೌಡ ಪಾಟೀಲ, ಮಾರುತಿ ಅರ್ಭಾಣದ, ಸಿದ್ದು ಹೂಗಾರ, ಪ್ರಶಾಂತ ಜೋಶಿ, ಪವಾಡೆಪ್ಪ ವಡ್ಡಿಗೇರಿ, ಸಿ.ಕೆ. ಪಾಟೀಲ, ಸಿದ್ದಪ್ಪ ಯಲಿಗಾರ, ರಾಚನಗೌಡ ಪಾಟೀಲ, ಎಸ್.ಎಸ್. ಪಾಟೀಲ, ಮಾರುತಿ ಗೊಂದಿ, ಸಿದ್ದೇಶ ಹೂಗಾರ ಇತರರಿದ್ದರು.

ಕಿರುಸುದ್ದಿ

ಸರ್ಕಾರ ಯಾವುದೇ ಆದೇಶ ಹೊರಡಿಸಿಲ್ಲ: ಸ್ಪಷ್ಟೀಕರಣ

ಕಾರವಾರ: ಸರ್ಕಾರದಲ್ಲಿ ಹೊರಗುತ್ತಿಗೆ ಆಧಾರಿತ ಸಿಬ್ಬಂದಿಯ ಸೇವೆಯನ್ನು ಮುಂದುವರೆಸುವ ಬಗ್ಗೆ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನದ ಮಾದರಿಯಲ್ಲಿ ನಕಲಿಯಾಗಿ ಸಂ.ಆಇ/ಸೇನಿ/08/2026 ದಿನಾಂಕ:24-03-2026 ಸಂಖ್ಯೆಯಲ್ಲಿ ಅನಧಿಕೃತವಾಗಿ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಕೆಲವು ಮಾಧ್ಯಮಗಳು,ಆನ್‌ಲೈನ್ ಆವೃತ್ತಿಗಳು ಹಾಗೂ ಸಾಮಾಜಿಕ ಮಾಧ್ಯಮಗಳು ನೈಜತೆ ಪರಿಶೀಲಿಸದೆ ಈ ಸುದ್ದಿಯನ್ನು ಪ್ರಕಟಿಸಿವೆ. ಸರ್ಕಾರದ ಇಂತಹ ಯಾವುದೇ ಆದೇಶ ಅಥವಾ ಅಧಿಕೃತ ಜ್ಞಾಪನ ಪತ್ರ ಹೊರಡಿಸಿಲ್ಲ, ಈ ನಕಲಿ ಜ್ಞಾಪನಪತ್ರ ಅಧಿಕೃತವಲ್ಲ ಎಂದು ಆರ್ಥಿಕ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ರಾಜಮ್ಮ ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಹೊರಗುತ್ತಿಗೆ ಆಧಾರಿತ ಸೇವೆ

ನೀತಿ ಸಂಹಿತೆ ಉಲ್ಲಂಘನೆ: 106 ಪ್ರಕರಣ ದಾಖಲು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಒಟ್ಟು 115 ಅಬಕಾರಿ ದಾಳಿಗಳನ್ನು ಜರುಗಿಸಿ 106 ಪ್ರಕರಣಗಳನ್ನು ದಾಖಲಿ, 92 ಜನ ಆರೋಪಿಗಳನ್ನು ಬಂಧಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ. ಪ್ರಕರಣಗಳಲ್ಲಿ 295.550 ಲೀ. ಮದ್ಯ, 16.500 ಲೀ. ಗೋವಾ ರಾಜ್ಯದ ಮದ್ಯ, 11326.500 ಲೀ ಬಿಯರ್, 50 ಲೀ. ಕಳ್ಳಬಟ್ಟಿ ಸಾರಾಯಿ, 500 ಲೀ. ಕೊಳೆ, 5 ದ್ವಿಚಕ್ರವಾಹನ, 2 ಕಾರಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವರುಗ ಅಂದಾಜು ಒಟ್ಟು ಮೌಲ್ಯ ರೂ.41.87 ಲಕ್ಷಗಳಾಗಿದೆ. ಈ ಪ್ರಕ್ರಿಯೆಯು ನಿರಂತರವಾಗಿದ್ದು, ಜಿಲ್ಲೆಯ ಯಾವುದೇ ಸ್ಥಳದಲ್ಲಿ ಅಬಕಾರಿ ಅಕ್ರಮಗಳು ಕಂಡುಬಂದಲ್ಲಿ ಆಯಾ ಕಾರ್ಯವ್ಯಾಪ್ತಿಯ ಅಬಕಾರಿ ಅಧಿಕಾರಿಗಳ ಸಂಚಾರಿ ದೂರವಾಣಿ ಸಂಖ್ಯೆಗೆ ಸಾರ್ವಜನಿಕರು ಮಾಹಿತಿ ನೀಡಬಹುದಾಗಿದೆ. ಮಾಹಿತಿ ನೀಡಿರುವಂತಹ ವ್ಯಕ್ತಿಗಳ ವಿವರವನ್ನು ಗೌಪ್ಯವಾಗಿಡುವುದಲ್ಲದೇ ಸರ್ಕಾರದಿಂದ ದೊರೆಯುವಂತಹ ರಹಸ್ಯ ಸೇವಾನಿಧಿಯನ್ನು ಸಹ ಗೌಪ್ಯತೆಯ ಮೂಲಕ ಪಾವತಿಸಲಾಗುವುದೆಂದು ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ.

ಕರ್ನಾಟಕ ಕಬಡ್ಡಿ ತಂಡಕ್ಕೆ ಆಯ್ಕೆ





ಅಡಹಳ್ಳಿ: ಚಂಡಿಗಡದಲ್ಲಿ ನಡೆಯಲಿರುವ ಪ್ರಥಮ ಸೀನಿಯರ್ ಪ್ಯಾರಾ ನ್ಯಾಷನಲ್ ಕಬಡ್ಡಿ ಚಾಂಪಿಯನ್ ಶಿಪ್ 2026ರ ಕಬಡ್ಡಿ ಪಂದ್ಯಾವಳಿಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೋಹಳ್ಳಿ ಗ್ರಾಮದ ವಿಶೇಷಚೇತನ ಪ್ಯಾರಾ ನ್ಯಾಷನಲ್ ಕಬಡ್ಡಿ ಆಟಗಾರರಾದ ರಾಹುಲ ಕಾಳೆ ಹಾಗೂ ಚೈತನ ಪುಂಡಿಪಲ್ಲೆ ಅವರು ಕರ್ನಾಟಕ ತಂಡದಿಂದ ಪ್ರತಿನಿಧಿಸಲಿದ್ದಾರೆ. ಮಾ.29ರಿಂದ 31 ರವರೆಗೆ ಪಂಜಾಬ್‌ನ ಚಂಡಿಗಡದಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಬಲಿಷ್ಠ ಉತ್ತರ ಪ್ರದೇಶದ ವಿರುದ್ಧ 41-36 ಅಂಕಗಳಿಂದ ಜಯಗಳಿಸಿ ಸೆಮಿಫೈನಲ್ ಪ್ರವೇಶಿಸುವ ಮೂಲಕ ಪದಕ ಖಚಿತ ಪಡಿಸಿದೆ. ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಬಲಿಷ್ಠ ಡೆಲ್ಲಿ ವಿರುದ್ಧ ಸೆಣಸಲಿದೆ ಎಂದು ಕೋಹಳ್ಳಿ ಗ್ರಾಮದ ಆಟಗಾರ ಮತ್ತು ಕರ್ನಾಟಕ ತಂಡ ನಾಯಕ ರಾಹುಲ್ ಕಾಳೆ ತಿಳಿಸಿದ್ದಾರೆ. ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಬೈಕ್‌ಗಳ ಮಧ್ಯೆ ಡಿಕ್ಕಿ: ಸವಾರರಿಬ್ಬರ ಸಾವು

ವಿಜಯಪುರ: ಬೈಕ್‌ಗಳೆರಡು ಮುಖಾಮುಖಿ ಡಿಕ್ಕಿಯಾಗಿ ಸವಾರರಿಬ್ಬರು ಸ್ಥಳದಲ್ಲಿ ಸಾವಿಗೀಡಾದ ಘಟನೆ ಜಿಲ್ಲೆಯ ಬಸವನಬಾಗೇವಾಡಿಯ ತಾಲೂಕಿನ ಮಸಬಿನಾಳ ಬಳಿ ನಡೆದಿದೆ. ಇಂಗಳೇಶ್ವರ ತಾಂಡಾದ ಸಂತೋಷ ಲಾಲು ಚವ್ಹಾಣ (32). ದೇಗಿನಾಳ ಗ್ರಾಮದ ಭೀಮನಗೌಡ ಪಾಟೀಲ (45) ಮೃತ ದುರ್ದೈವಿಗಳು. ಇನ್ನೂ ಈ ಅಪಘಾತದಲ್ಲಿ ಓರ್ವ ಗಂಭೀರ ಗಾಯಗೊಂಡಿದ್ದು ಗಾಯಾಳುಗಳನ್ನು ಚಿಕಿತ್ಸೆಗಾಗಿ ಬಸವನಬಾಗೇವಾಡಿ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನಾ ಸ್ಥಳಕ್ಕೆ ಮನಗೂಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮನಗೂಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸಹನೆ ಕಳೆದುಕೊಂಡ ಕಿತ್ತೂರು ಚನ್ನಮ್ಮ ಅಭಿಮಾನಿಗಳು

ಚಕ್ಕಡಿ, ಟ್ರ್ಯಾಕ್ಟರ್, ಬೈಕ್ ರ್‍ಯಾಲಿ

ಬೈಲಹೊಂಗಲ: ವೀರರಾಣಿ ಕಿತ್ತೂರು ಚನ್ನಮ್ಮ ಸಮಾಧಿ ಅಭಿವೃದ್ಧಿಗೊಳಿಸಿ ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಣೆ ಮಾಡಬೇಕು. ನವೀಕೃತ ಕಿತ್ತೂರು ಚನ್ನಮ್ಮ ಸಮಾಧಿ ಸ್ಥಳವನ್ನು ಅದ್ದೂರಿಯಿಂದ ಮರು ಉದ್ಘಾಟನೆ ಮಾಡಬೇಕು. ಕಿತ್ತೂರು ಚನ್ನಮ್ಮ ಅಭಿವೃದ್ಧಿ ಪ್ರಾಧಿಕಾರಕ್ಕೆ 200 ಕೋಟಿ ರೂ.ಅನುದಾನ ನೀಡಬೇಕು ಎಂದು ಒತ್ತಾಯಿಸಿ ನಡೆದಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ 22ನೇ ದಿನಕ್ಕೆ ಕಾಲಿಟ್ಟಿದ್ದು, ಸಹನೆ ಕಳೆದುಕೊಂಡ ಹೋರಾಟಗಾರರು ಮಂಗಳವಾರ ಚಕ್ಕಡಿ, ಟ್ರ್ಯಾಕ್ಟರ್, ಬೈಕ್ ರ್‍ಯಾಲಿ ನಡೆಸಿ ಸರ್ಕಾರ ಮತ್ತು ಸ್ಥಳೀಯ ಶಾಸಕರ ವಿರುದ್ಧ ಉಗ್ರ ಪ್ರತಿಭಟನೆ ನಡೆಸಿದರು.

ಚೆನ್ನಮ್ಮನ ಸಮಾಧಿ ಅಭಿವೃದ್ಧಿ ಸೇರಿ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹ

ನಗರದ ಕಿತ್ತೂರು ಚನ್ನಮ್ಮ ಐಕ್ಯ ಸ್ಥಳ ಎದುರು ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಹೋರಾಟಗಾರರು ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಶಾಸಕ ಮಹಾಂತೇಶ ಕೌಜಲಗಿ ವಿರುದ್ಧ ಘೋಷಣೆ ಕೂಗಿದರು. ವೀರರಾಣಿ ಕಿತ್ತೂರು ಚನ್ನಮ್ಮ, ರಾಣಿ ಬೆಳವಡಿ ಮಲ್ಲಮ್ಮ ಹೆಸರಿನಲ್ಲಿ ಧೋರಣೆ ತಾಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಲಘುವಾಗಿ ಕುಟುಕಿದರು.

ನಂದಗಡದಲ್ಲಿ ರಾಯಣ್ಣನ ರಾಕ್ ಗಾರ್ಡನ್ ಹೇಗೆ ಅದ್ದೂರಿಯಿಂದ ಉದ್ಘಾಟನೆ ಮಾಡಿದರೋ ಅದೇ ಮಾದರಿಯಲ್ಲಿ ಕಿತ್ತೂರು ಚನ್ನಮ್ಮನ ಸಮಾಧಿ ಸ್ಥಳವನ್ನು ಅದ್ದೂರಿಯಿಂದ ಮರು ಉದ್ಘಾಟನೆ ಮಾಡಬೇಕೆಂದು ಆಗ್ರಹಿಸಿದರು.

ಕಿತ್ತೂರು ಚನ್ನಮ್ಮ ಸಮಾಧಿ ಸ್ಥಳದಿಂದ ಆರಂಭವಾದ ಬೈಕ್ ರ್‍ಯಾಲಿ ಸಂಗೊಳ್ಳಿ ರಾಯಣ್ಣ ವೃತ್ತ, ಬಜಾರ ರಸ್ತೆ, ಮೇದಾರ ಗಲ್ಲಿ, ಬಸವ ಸರ್ಕಲ್, ಇಂಚಲ ಕ್ರಾಸ್, ಎಪಿಎಂಸಿ ಗಣೇಶ ದೇವಸ್ಥಾನ ಮಾರ್ಗವಾಗಿ ಚನ್ನಮ್ಮನ ವೃತ್ತಕ್ಕೆ ತೆರಳಿತು



ಶಾಸಕರ ಮನೆಗೆ ಬಂದೋಬಸ್ತ್

ಹೋರಾಟದ ಮುಖ್ಯ ರಸ್ತೆ ಪಕ್ಕದಲ್ಲಿರುವ ಶಾಸಕರ ಮನೆಗೆ ಮುಂಜಾಗ್ರತ ಕ್ರಮವಾಗಿ ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಿದ್ದರು. ಶಾಸಕರ ಮನೆಯ ಎರಡು ಬದಿಯಲ್ಲಿ ಪೊಲೀಸ್ ಬ್ಯಾರಿಗೇಟ್ ಹಾಕಲಾಗಿತ್ತು. ಶಾಸಕರ ಮನೆ ಎದುರು ನಿಂತು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು.

ಬೃಹತ್ ಚಕ್ಕಡಿ, ಟ್ರ್ಯಾಕ್ಟರ್‌ಗಳ ರ್‍ಯಾಲಿ: ಸರ್ಕಾರ, ಶಾಸಕರ ನಡೆ ಖಂಡಿಸಿದ ಹೋರಾಟಗಾರರು ಚಕ್ಕಡಿ, ಟ್ರ್ಯಾಕ್ಟರ್‌ಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ಸೇರಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಎಪಿಎಂಸಿ ಗಣೇಶ ದೇವಸ್ಥಾನ ಆವರಣದಲ್ಲಿ ಚಕ್ಕಡಿ, ಟ್ರ್ಯಾಕ್ಟರ್‌ಗಳನ್ನು ಸೇರಿಸಿದ ಹೋರಾಟಗಾರರು ಇಂಚಲ ಕ್ರಾಸ್, ಬಸ್ ನಿಲ್ದಾಣ ಮಾರ್ಗವಾಗಿ ಹೋರಾಟದ ಮುಖ್ಯ ವೇದಿಕೆವರೆಗೆ ಬೃಹತ್ ಮೆರವಣಿಗೆ ನಡೆಸಿದರು. ಈ ವೇಳೆ ಸರದಿ ಸಾಲಿನಲ್ಲಿ ವಾಹನಗಳನ್ನು ನಿಂತಿದ್ದವು. ಪಾದಚಾರಿಗಳು, ಪ್ರಯಾಣಿಕರು ಸುಗಮ ರಸ್ತೆ ಸಂಚಾರ ಇಲ್ಲದೆ ಪರದಾಡಿದರು.

ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ಕಲಾವಿದ ಸಿ.ಕೆ.ಮೆಕ್ಕೇದ, ಸಾಮಾಜಿಕ ಹೋರಾಟಗಾರ ರಫೀಕ ಬಡೆಘರ, ಕಿತ್ತೂರು ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ, ವಕೀಲ ಎಫ್.ಎಸ್. ಸಿದ್ದನಗೌಡರ, ಮಲ್ಲಿಕಾರ್ಜುನ ಹುಂಬಿ, ಬೀರಪ್ಪ ದೇಶನೂರ ಸೇರಿದಂತೆ ಇತರರು ಇದ್ದರು.

ಕಳಪೆ ಕಾಮಗಾರಿ ಆರೋಪ | ಸಿಬಿಐ ತನಿಖೆಗೆ ಆಗ್ರಹ

ಸಚಿವ ಖರ್ಗೆ ಕಚೇರಿ ಎದುರು ಪ್ರತಿಭಟನೆ

ಕಲಬುರಗಿ: ಜಿಲ್ಲೆಯಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆ ಕಾರ್ಯ ನಡೆದಿದೆ ಎಂಬ ಗಂಭೀರ ಆರೋಪ ಮಾಡಿದ್ದು, ಈ ಸಂಬಂಧ ಸಿಬಿಐ ತನಿಖೆ ನಡೆಸುವಂತೆ ಒತ್ತಾಯಿಸಿ ಕಲ್ಯಾಣ ಕರ್ನಾಟಕ ಪ್ರತ್ಯೇಕ ಹೋರಾಟ ಸಮಿತಿ,ಸಮಾನ ಮನಸ್ಕ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಲಬುರಗಿ ಉಸ್ತುವಾರಿ ಸಚಿವರ ಕಚೇರಿ ಎದುರಿಗೆ ಪ್ರತಿಭಟನೆ ಮಾತನಾಡಿದ ಎಂ.ಎಸ್.ಪಾಟೀಲ್ ನರಿಬೋಳ, ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗಾಗಿ ಸುಮಾರು 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಪ್ರಬುದ್ಧ ಅಕಾಡೆಮಿ ಕಟ್ಟಡದ ಕಾಮಗಾರಿಯಲ್ಲಿ ಭಾರೀ ಅವ್ಯವಸ್ಥೆ ನಡೆದಿದೆ ಎಂದರು.

ಉದ್ಘಾಟನೆಯಾದ ಕೇವಲ ಒಂದು ತಿಂಗಳಲ್ಲೇ ಕಟ್ಟಡದ ಮೇಲ್ಛಾವಣಿ ಕುಸಿದಿದ್ದು, ಇತ್ತೀಚೆಗೆ ಪಾರ್ಕಿಂಗ್ ಶೆಡ್ ಕೂಡ ಕುಸಿದು ಬಿದ್ದಿರುವುದು ಕಳಪೆ ಕಾಮಗಾರಿಗೆ ಉದಾಹರಣೆಯಾಗಿದೆ. ಇದಲ್ಲದೆ,ಲ್ಯಾಂಡ್ ಆರ್ಮಿ ವತಿಯಿಂದ ಜಿಲ್ಲೆಯಾದ್ಯಂತ ಕೈಗೊಳ್ಳಲಾದ ಇತರೆ ಕಾಮಗಾರಿಗಳಲ್ಲಿಯೂ ಗುಣಮಟ್ಟದ ಕೊರತೆ ಇರುವುದಾಗಿ ತಿಳಿದು ಬಂದಿದ್ದು, ಕೆಲವು ಕಡೆಗಳಲ್ಲಿ ಈ ಆರೋಪಗಳು ಸಾಬೀತಾಗಿವೆ ಎಂದು ತಿಳಿಸಿದರು.

ಆದ್ದರಿಂದ, ಪ್ರಬುದ್ಧ ಅಕಾಡೆಮಿ ಸೇರಿ ಲ್ಯಾಂಡ್ ಆರ್ಮಿ ಮೂಲಕ ಕೈಗೊಂಡ ಎಲ್ಲಾ ಕಾಮಗಾರಿಗಳ ಸಮಗ್ರ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ಜೊತೆಗೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ದೂರು ದಾಖಲಿಸುವುದರೊಂದಿಗೆ ಸಂಬಂಧಿತ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಕ್ರಮ ಕೈಗೊಳ್ಳದಿದ್ದರೆ, ಬೆಂಗಳೂರಿನ ವಿಧಾನಸೌಧದವರೆಗೆ ಪಾದಯಾತ್ರೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ಸ್ವಾದಿ, ಹುಚ್ಚೇಶ್ವರ ವಠಾರ, ಪದ್ಮಾಜಿ ಗೌಳಿ, ಶಂಕರ್ ವಡಿಗೇರಿ,ಶರಣಿ ಅಂವಟಗಿ, ಆನಂದ ಭಜಂತ್ರಿ, ರವಿ ಭಜಂತ್ರಿ, ಚನ್ನು ಸಿಗಿ, ಪ್ರಶಾಂತ್ ಸಿರೂರು ಸೇರಿದಂತೆ ಹಲವರಿದ್ದರು.



ಮಹಾಬಲೇಶ್ವರ ಮಂದಿರಕ್ಕೆ ಭೇಟಿ: ಪೂಜೆ


ಗೋಕರ್ಣ: ಮಹಾಬಲೇಶ್ವರ ಮಂದಿರದ ಮೇಲುಸ್ತುವಾರಿ ಸಮಿತಿ ಅಧ್ಯಕ್ಷರಾದ ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಮಂಗಳವಾರ ಮಂದಿರಕ್ಕೆ ಭೇಟಿ ನೀಡಿ ದೇವಾಲಯದ ಹಲವು ಅಭಿವೃದ್ಧಿ ಕಾರ್ಯವನ್ನ ವೀಕ್ಷಿಸಿದರು.

ಮಂದಿರದ ಹೊರಾಂಗಣದಲ್ಲಿ ಗ್ರಾನೈಟ್ ಕಲ್ಲು ಹಾಕಿದ್ದನ್ನು ಪರಿಕ್ಷಿಸಿದರು. ಜೀರ್ಣಾವಸ್ಥೆ ತಲುಪಿದ್ದ ಇಂದ್ರೇಶ್ವರ ಮತ್ತು ಶಾಸ್ತ್ರೇಶ್ವರದ ಪುನರ್ ನಿರ್ಮಾಣ, ದೇವಸ್ಥಾನದ ಒಳಾಂಗಣ ಆವಾರಕ್ಕೆ ಗ್ರಾನೈಟ್ ಕಲ್ಲು ಹಾಕಿದ್ದಕ್ಕೆ, ದೇವಸ್ಥಾನದ ದಕ್ಷಿಣದ್ವಾರದ ನವೀಕರಣ ಮುಂತಾದ ಕಾರ್ಯಗಳನ್ನ ಪರಿಶೀಲನೆ ನಡೆಸಿದರು.

ಬಳಿಕ ಮುಂದೆ ಕೈಗೊಳ್ಳ ಬೇಕಾದ ಅಭಿವೃದ್ಧಿ ಕಾರ್ಯಗಳ ಕುರಿತು ಸಭೆ ನಡೆಸಿದರು. ಭಕ್ತರಿಗೆ ವಿವಿಧ ಅನುಕೂಲತೆಗಳು ಹಾಗೂ ಇಲ್ಲಿಯವರೆಗಿನ ಕಾರ್ಯಗಳ ಪ್ರಗತಿ ಕುರಿತು ಮಾಹಿತಿ ಪಡೆದಿದ್ದು ಹಲವು ಸಲಹೆ ಸೂಚನೆ ನೀಡಿ, ಅಭಿವೃದ್ಧಿ ಕಾರ್ಯಗಳಿಗೆ ಅಡೆ ತಡೆ ಸಹಜ ಆದರೆ ಕೆಲಸ ಮುಂದುವರಿಸಲು ತಿಳಿಸಿದ್ದಾರೆ ಎಂದು ತಿಳಿದು ಬಂದಿದೆ.

ಈ ವೇಳೆ ಮಂದಿರದ ಮೇಲುಸ್ತುವಾರಿ ಸಮಿತಿ ಕಾರ್ಯದರ್ಶಿ ಕುಮಟಾ ಉಪವಿಭಾಗಾಧಿಕಾರಿ ಶ್ರವಣಕುಮಾರ, ಸದಸ್ಯರಾದ ವೇ. ಗಣಪತಿ ಹಿರೇ ವೇ. ಪರಮೇಶ್ವರ ರಮಣಪ್ರಸಾದ, ವೇ. ಸುಬ್ರಹ್ಮಣ್ಯ ಅಡಿ, ಮಹೇಶ ಹಿರೇಗಂಗೆ, ಡಿವೈಎಸ್‌ಪಿ ಗಿರೀಶ, ಮಂದಿರದ ವ್ಯವಸ್ಥಾಪಕರು ಸ್ಥಳೀಯ ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಂತರ ಬಿ.ಎನ್. ಶ್ರೀಕೃಷ್ಣರವರು ಆತ್ಮಲಿಂಗಕ್ಕೆ ಪೂಜೆ ಸಲ್ಲಿಸಿದರು. ಮಂದಿರದ ಅರ್ಚಕ ವೇ. ಅನಂತರಾಜ ಅಡಿ ಪೂಜಾ ಕೈಂಕರ್ಯ ನೆರವೇರಿಸಿದರು.



---

510 ಕೋಟಿ ರೂ. ವಹಿವಾಟು: ಬಾಲಚಂದ್ರ ಜಾರಕಿಹೊಳಿ

ಬೆಳಗಾವಿ ಹಾಲು ಸಂಘಕ್ಕೆ ₹12.59 ಕೋಟಿ ಲಾಭ

ಬೆಳಗಾವಿ: ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘ (ಕೆಎಂಎಫ್) 2025-26 ಆರ್ಥಿಕ ವರ್ಷದಲ್ಲಿ 12.59 ಕೋಟಿ ರೂ. ಲಾಭ ಗಳಿಸಿದ್ದು, 510 ಕೋಟಿ ರೂ. ವಹಿವಾಟು ನಡೆಸುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ ಎಂದು ಸಂಘದ ಅಧ್ಯಕ್ಷರು ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.



ಮಂಗಳವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷ ಸಂಘದ ವಿಸ್ತರಣೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, 100 ಹೊಸ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಒಟ್ಟು ಕಾರ್ಯ ನಿರ್ವಹಣೆಯಲ್ಲಿರುವ ಸಂಘಗಳ ಸಂಖ್ಯೆ 685ಕ್ಕೆ ಏರಿಕೆಯಾಗಿದೆ ಎಂದರು.

ಹಾಲು ಸಂಗ್ರಹಣೆಯಲ್ಲಿಯೂ ಗಮನಾರ್ಹ ಪ್ರಗತಿ ಕಂಡುಬಂದಿದ್ದು, ಪ್ರತಿದಿನ ಸರಾಸರಿ 2.50 ಲಕ್ಷ ಕಿಲೋ ಹಾಲು ಸಂಗ್ರಹಿಸಲಾಗುತ್ತಿದೆ. ವರ್ಷ ಪೂರ್ತಿ ಒಟ್ಟು 8.20 ಕೋಟಿ ಕಿಲೋ ಹಾಲು ಸಂಗ್ರಹವಾಗಿದ್ದು, ಇದರಲ್ಲಿ ಹಸುವಿನ ಹಾಲಿನ ಪ್ರಮಾಣವೇ ಹೆಚ್ಚು ಇದೆ ಎಂದು ಮಾಹಿತಿ ನೀಡಿದರು.

ರಾಜ್ಯ ಸರ್ಕಾರದಿಂದ ಹಾಲು ಉತ್ಪಾದಕರಿಗೆ 32 ಕೋಟಿ ರೂ. ಪ್ರೋತ್ಸಾಹ ಧನ ವಿತರಣೆ ಮಾಡಲಾಗಿದೆ. ಇನ್ನೂ ಸುಮಾರು 7.50 ಕೋಟಿ ರೂ.ಬಾಕಿ ಉಳಿದಿದ್ದು, ಅದನ್ನು ಶೀಘ್ರವೇ ಬಿಡುಗಡೆ ಮಾಡುವಂತೆ ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಸಂಘವು ಹಾಲು ಸಂಗ್ರಹಣೆಯೊಂದಿಗೆ ತುಪ್ಪ, ಪನ್ನೀರ್ ಮತ್ತು ಪೇಡಾ ಉತ್ಪಾದನೆಯಲ್ಲಿ ಸಹ ಗಮನಾರ್ಹ ಬೆಳವಣಿಗೆ ಕಂಡಿದೆ. ಮಾರುಕಟ್ಟೆ ವಿಸ್ತರಣೆಗೆ ಬೆಳಗಾವಿ ಸೇರಿದಂತೆ ಗೋವಾ ಮತ್ತು ಪುಣೆ ನಗರಗಳಲ್ಲಿ ಒಟ್ಟು 55 ಫ್ರಾಂಚೈಸಿಗಳನ್ನು ಆರಂಭಿಸಲಾಗಿದೆ ಎಂದರು. ವಿಶೇಷವಾಗಿ ಆಂಧ್ರ ಪ್ರದೇಶದ 'ಅಕ್ಷರ ದಾಸೋಹ' ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ದಿನಕ್ಕೆ 25 ಸಾವಿರ ಲೀಟರ್ ಹಾಲು ಸರಬರಾಜು ಮಾಡಲಾಗುತ್ತಿದೆ ಎಂಬುದು ಸಂಘದ ಮತ್ತೊಂದು ಸಾಧನೆ ಎಂದು ಜಾರಕಿಹೊಳಿ ತಿಳಿಸಿದ್ದಾರೆ.

ಆರ್ಥಿಕ ವ್ಯವಹಾರಗಳ ಕುರಿತು ಮಾಹಿತಿ ನೀಡಿದ ಅವರು, ಸಂಘವು ರೈತರಿಗೆ 331 ಕೋಟಿ ರೂ. ಪಾವತಿಸಿದೆ. ಜೊತೆಗೆ ಲಾಭದ ಹಂಚಿಕೆಯಾಗಿ ಮೇವು ಕಟರ್, ರಬ್ಬರ್ ಮ್ಯಾಟ್ ಮತ್ತು ಹಾಲು ಹೀರುವ ಯಂತ್ರಗಳಿಗೆ ಸುಮಾರು 7 ಕೋಟಿ ರೂ. ಸಹಾಯ ನೀಡಲಾಗಿದೆ. ಸಂಘದ ಈ ಪ್ರಗತಿ ರೈತರ ಹಿತಾಸಕ್ತಿಗೆ ಸಮರ್ಪಿತವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಸಾಧಿಸುವತ್ತ ಕ್ರಮ ಕೈಗೊಳ್ಳಲಾಗುವುದು ಎಂದು ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.

ಹಿಂದು ಕಾರ್ಯಕರ್ತರ ಮನೆಗೆ ಬಿವೈವಿ ಭೇಟಿ



ಬಾಗಲಕೋಟೆ: ಕಳೆದ ತಿಂಗಳು ಶಿವಾಜಿ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಮತ್ತು ಗಲಭೆ ಸಂಬಂಧ ಬಂಧಿತರಾಗಿರುವ ಹಿಂದು ಕಾರ್ಯಕರ್ತರ ಪೋಷಕರನ್ನು ಕಿಲ್ಲಾಗಲ್ಲಿಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ ಭೇಟಿ ಮಾಡಿದರು.

ನಂತರ, ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಶೋಕ್ ಬಾರಕೇರ ಅವರ ಆರೋಗ್ಯ ವಿಚಾರಿಸಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ತಮ್ಮ ಓಟ್ ಬ್ಯಾಂಕ್ ತುಷ್ಟೀಕರಣವೊಂದೇ ಆದ್ಯತೆಯಾಗಿದ್ದು, ಹಿಂದು ಕಾರ್ಯಕರ್ತರ ಪರವಾಗಿ ಬಿಜೆಪಿ ಸದಾ ನಿಲ್ಲಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಶಾಸಕರುಗಳಾದ ಶೈಲೇಂದ್ರ ಬೆಲ್ದಾಳೆ, ಪಿ.ಎಚ್.ಪೂಜಾರ್, ಹನುಮಂತ ನಿರಾಣಿ, ಮಾಜಿ ಶಾಸಕರುಗಳಾದ ಎಂ.ಡಿ.ಲಕ್ಷ್ಮೀನಾರಾಯಣ, ಅರುಣ್ ಶಹಾಪುರ, ಪಕ್ಷದ ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಸೇರಿದಂತೆ ಮುಖಂಡರು, ಪ್ರಮುಖರು ಉಪಸ್ಥಿತರಿದ್ದರು.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲು ನಿರ್ಧಾರ

ಕೊಪ್ಪಳ: ತುಂಗಭದ್ರಾ ಜಲಾಶಯದಲ್ಲಿ 2025-26ನೇ ಜಲವರ್ಷದಲ್ಲಿ ನೀರಿನ ಲಭ್ಯತೆ ಆಧರಿಸಿ ಪ್ರಾದೇಶಿಕ ಆಯುಕ್ತರು ಕಲಬುರಗಿ ಇವರ ಆದೇಶದ ಮೇರೆಗೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ತುಂಗಭದ್ರಾ ಜಲಾಶಯದಿಂದ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಲಯ ಕಲಬುರಗಿ ರವರು ನಿಗದಿ ಪಡಿಸಿದ ವೇಳಾಪಟ್ಟಿಯಂತೆ ನೀರಿನ್ನು ಹರಿಸಲು ನಿರ್ಧಾರಿಸಲಾಗಿದೆ.

ಅದರಂತೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ವ್ಯಾಪ್ತಿಯಲ್ಲಿನ ತೂಬುಗಳ ಗೇಟ್‌ಗಳ ಮುಖಾಂತರ ಕೆರೆಕಟ್ಟೆಗಳಲ್ಲಿ ಕುಡಿಯುವ ಸಲುವಾಗಿ ನೀರು ಶೇಖರಣೆ ಮಾಡಲು ಹಾಗೂ ನಿಗದಿತ ಪ್ರಮಾಣದ ನೀರನ್ನು 104 ಮೈಲ್ ವರೆಗೆ ಹರಿಸಿ ಮತ್ತು ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಹಾಗೂ ಪೊಲೀಸ್ ಸಿಬ್ಬಂದಿ ಸಹಯೋಗದೊಂದಿಗೆ ಸಮರ್ಪಕ ನೀರು ನಿರ್ವಹಣೆ ಮಾಡಬೇಕು.

ನಿಗದಿತ ವೇಳಾಪಟ್ಟಿ: ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ (0 ರಿಂದ 104 ಮೈಲ್ ವರೆಗೆ) ಗೆ ಕುಡಿಯುವ ನೀರಿಗಾಗಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ಮಾರ್ಚ್ 31 (ಬೆಳಗ್ಗೆ 8 ಗಂಟೆ)ರಿಂದ ಏಪ್ರಿಲ್ 15ರ (ಬುಧವಾರ ಬೆಳಗ್ಗೆ 8 ಗಂಟೆ) ವರೆಗೆ 1500 ಕ್ಯೂಸೆಕ್ಸ್ ನಂತೆ ಕುಡಿಯುವ ನೀರು ಹರಿಸಲಾಗುವುದು.

ಅದರಂತೆ, ಯರಮರಸ್ ವಿಭಾಗ ಏಪ್ರಿಲ್ 2 ರಿಂದ ಏ. 6ರ ವರೆಗೆ, ಸಿರವಾರ ವಿಭಾಗ ಏ.7ರಿಂದ ಏ.9 ರವರೆಗೆ, ಸಿಂದನೂರು ವಿಭಾಗ ಏ.10ರಿಂದ ಏ.12ರ ವರೆಗೆ ಹಾಗೂ ವಡ್ಡರಹಟ್ಟಿ ವಿಭಾಗದ ಏ.13ರಿಂದ ಏ.15ರ ವರೆಗೆ ನೀರು ಹರಿಸಲು ವೇಳಾಪಟ್ಟಿ ನಿಗದಿಪಡಿಸಲಾಗಿದೆ.

ರೈತರಲ್ಲಿ ಮನವಿ: ತುಂಗಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲಾಗುತ್ತಿದ್ದು, ಸಾರ್ವಜನಿಕ ಹಿತ ದೃಷ್ಟಿಯಿಂದ ಎಲ್ಲಾ ಜನಸಾಮಾನ್ಯರಿಗೂ ಹಾಗೂ ರೈತ ಭಾಂದವರಿಗೆ ಈ ಪ್ರಕಟಣೆಯ ಮೂಲಕ ವಿನಂತಿಸುವುದೇನೆಂದರೆ, ಕಾಲುವೆಯಲ್ಲಿ ಮತ್ತು ಕಾಲುವೆಯ ಅಂಚಿನಲ್ಲಿ ಓಡಾಡುವುದು, ಕಾಲುವೆಯಿಂದ ನೀರನ್ನು ಜನಸಾಮಾನ್ಯರು ಅಥವಾ ರೈತರು ಬಳಸುವುದನ್ನು ಮತ್ತು ಎತ್ತಿಕೊಳ್ಳುವುದನ್ನು ನಿಷೇಧಗೊಳಿಸಲಾಗಿರುತ್ತದೆ. ಕಾರಣ ತಾವುಗಳು ಸಮರ್ಪಕ ನೀರು ನಿರ್ವಹಣೆಗೆ ಇಲಾಖೆಯೊಡನೆ ಸಹಕರಿಸುವಂತೆ ಕನೀನಿನಿ, ತುಂಗಭದ್ರಾ ಯೋಜನಾ ವೃತ್ತ ಮುನಿರಾಬಾದ್ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿ ಎಸ್.ಬಿ ಮಲ್ಲಿಗವಾಡ ತಿಳಿಸಿದ್ದಾರೆ.

ಬಂಜಾರ ಶಕ್ತಿ ಪೀಠಾಧ್ಯಕ್ಷ ಕುಮಾರ ಮಹಾರಾಜರ ಹೇಳಿಕೆ

ಒಳಮೀಸಲಾತಿ ವಿಚಾರದಲ್ಲಿ ಅನ್ಯಾಯ ಮಾಡಬೇಡಿ

ಬಾಗಲಕೋಟೆ: ಒಳಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯಕ್ಕೆ ಒಳ್ಳೆಯದನ್ನು ಮಾಡಿದರೆ ಬಂಜಾರ ಸಮಾಜ ಜೀವನ ಪೂರ್ತಿ ಕಾಂಗ್ರೆಸ್ ಪಕ್ಷಕ್ಕೆ ಜೀವವನ್ನು ಕೊಡಲಿದೆ. ಸ್ವಾಭಿಮಾನಿ ಸಮಾಜವಾಗಿರುವ ಬಂಜಾರ ಸಮಾಜಕ್ಕೆ ಅನ್ಯಾಯವಾದರೆ ತುಳಿಯುವ ಶಕ್ತಿಯೂ ಇದೆ. ನ್ಯಾಯ ಕೊಟ್ಟರೆ ತಲೆಯ ಮೇಲೆ ಹೊತ್ತು ಮೆರವಣಿಗೆ ಮಾಡುತ್ತೇವೆ ಎಂದು ನೀಲಾನಗರದ ಬಂಜಾರ ಶಕ್ತಿ ಪೀಠಾಧ್ಯಕ್ಷ ಕುಮಾರ ಮಹಾರಾಜರು ಖಡಕ್ ಎಚ್ಚರಿಕೆ ನೀಡಿದರು.



ನೀಲಾನಗರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಏರ್ಪಡಿಸಿದ್ದ ಬಹಿರಂಗ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸ್ವಾಮೀಜಿಯವರು ಎಚ್ಚರಿಕೆ ನೀಡಿ ಒಳಮೀಸಲಾತಿ ವಿಚಾರದಲ್ಲಿ ನಮ್ಮ ಸಮುದಾಯಕ್ಕೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದು. ಹಿಂದೆ ಬಿಜೆಪಿಯವರು ಅನ್ಯಾಯ ಮಾಡಿದಾಗ ಆ ಪಕ್ಷವನ್ನು ಅಧಿಕಾರಕ್ಕೆ ಬರದಂತೆ ಮಾಡಿದ್ದು ಬಂಜಾರ ಸಮುದಾಯ ಆ ಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ಬರಬಾರದು ಎಂದರೆ ನಮ್ಮ ಸಮಸ್ಯೆಗೆ ಸರ್ಕಾರ ಸ್ಪಂದಿಸಬೇಕು ಎಂದು ಹೇಳಿದರು.

ಲಂಬಾಣಿ ಸಮುದಾಯದವರ ಹಿತವನ್ನು ಸರ್ಕಾರ ಕಾಯಬೇಕು. ಹಿಂದೆ ಉಳುವವನೇ ಹೊಲದ ಒಡೆಯ ಎಂದು ಕಾಯ್ದೆಯನ್ನು ಮಾಡಲಾಗಿತ್ತು. ಅದೇ ರೀತಿ ವಾಸಿಸುವವನೇ ಮನೆಯ ಒಡೆಯ ಎಂದು ಕಾಯ್ದೆಯನ್ನು ಜಾರಿ ಮಾಡಿ ಅನೇಕ ತಾಂಡಾಗಳು ಅರಣ್ಯ ಜಾಗದಲ್ಲಿ ವಾಸ ಮಾಡಿದ್ದರಿಂದ ಹಕ್ಕು ಪತ್ರ ಸಿಗುತ್ತಿಲ್ಲ, ಅದನ್ನು ನೆರವೇರಿಸಿ ಕೊಡಬೇಕು ಎಂದು ಮುಖ್ಯಮಂತ್ರಿಗಳಿಗೆ ತಿಳಿಸಿದರು.

ಇದೇ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಒಳಮೀಸಲಾತಿ ವಿಚಾರದಲ್ಲಿ ಯಾವುದೇ ಅನ್ಯಾಯ ಬಂಜಾರ ಸಮುದಾಯಕ್ಕೆ ಆಗುವುದಿಲ್ಲ. ಸಂವಿಧಾನ ಇರುವವರೆಗೆ ಎಸ್ಸಿ ಪಟ್ಟಿಯಿಂದ ಲಂಬಾಣಿ ಸಮಾಜವನ್ನು ತೆಗೆದು ಹಾಕುವುದಿಲ್ಲ ಎಂದು ಹೇಳಿದರು. ಉಪಸಭಾಪತಿ ರುದ್ರಪ್ಪ ಲಮಾಣಿ ಮಾತನಾಡಿದರು.

ಏ.17ರಿಂದ 'ಹುಬ್ಬಳ್ಳಿ-ಬೆಂಗಳೂರು-ಹೈದರಾಬಾದ್' ನಡುವೆ ವಿಮಾನ ಸೇವೆ

ಹುಬ್ಬಳ್ಳಿ: ವಾಣಿಜ್ಯ ನಗರಿ ಹುಬ್ಬಳ್ಳಿ-ಧಾರವಾಡ ಸೇರಿದಂತೆ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ತ್ವರಿತ ಸಂಪರ್ಕಕ್ಕೆ ಅನುಕೂಲ ಆಗುವಂತೆ 'ಹುಬ್ಬಳ್ಳಿ-ಬೆಂಗಳೂರು-ಹೈದರಾಬಾದ್' ನಡುವೆ ಏ.17 ರಿಂದ ಹೊಸದೊಂದು ವಿಮಾನ ಸೇವೆ ಲಭ್ಯವಾಗಲಿದೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಪ್ರಯತ್ನದ ಫಲವಾಗಿ ಏಪ್ರಿಲ್ ಎರಡನೇ ವಾರ fly91 ವಿಮಾನಯಾನ ಆರಂಭವಾಗಲಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಸಂಸ್ಥೆಗೆ ಕಾರ್ಯಕ್ಕೆ ಸ್ಥಳಾವಕಾಶ ನೀಡಲಾಗಿದೆ. ಬುಕ್ಕಿಂಗ್ ಕೂಡ ಆರಂಭಿಸಲಾಗಿದೆ.

ಹುಬ್ಬಳ್ಳಿಯಿಂದ ಬೆಂಗಳೂರು ಮತ್ತು ಹೈದರಾಬಾದ್ ತೆರಳುವ ನಾಗರಿಕರಿಗೆ ತ್ವರಿತ ಪ್ರಯಾಣಕ್ಕೆ ಅನುಕೂಲ ಆಗುವಂತೆ ವಿಮಾನ ಸೇವೆ ಆರಂಭಿಸುವಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಈ ಹಿಂದೆ ಏರ್‌ಲೈನ್ಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಗಮನ ಸೆಳೆದಿದ್ದರು. ಅದರಂತೆ ಸಂಸ್ಥೆ ಇದೀಗ ಈ ಮಾರ್ಗದಲ್ಲಿ ವಿಮಾನಯಾನಕ್ಕೆ ಅಣಿಯಾಗಿದೆ.

ಸಚಿವ ಜೋಶಿ ಅವರ ಮನವಿ ಪುರಸ್ಕರಿಸಿದ ಸಂಸ್ಥೆ ಹುಬ್ಬಳ್ಳಿ- ಬೆಂಗಳೂರು -ಹೈದರಾಬಾದ್ ಮಧ್ಯೆ ವಿಮಾನ ಹಾರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, HYD to HBX: IC3401; 3:00 PM - 4:30 PM HBX to BLR: IC3411; 4:55 PM - 6:15 PM BLR to HBX: IC3412; 6:45 PM - 8:15 PM HBX to HYD: IC3402; 8:35 PM - 9:55 PM ವಿಮಾನಯಾನ ಸೇವೆಯ ವೇಳಾಪಟ್ಟಿ ಸಹ ಬಿಡುಗಡೆ ಮಾಡಿದೆ.

ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಈಗಾಗಲೇ ಈ ಸಂಸ್ಥೆಗೆ ಕಾರ್ಯ ನಿರ್ವಹಿಸಲು ಸ್ಥಳ ಸಹ ಮೀಸಲಿಡಲಾಗಿದೆ. ಸಂಸ್ಥೆಯು ಅವಶ್ಯಕ ಕಾರ್ಯಗಳನ್ನು ಪ್ರಾರಂಭಿಸಿದೆ. ಇದಕ್ಕಾಗಿ ಸಚಿವ ಜೋಶಿ ಅವರು ಸಂಸ್ಥೆಯ ಆಡಳಿತ ಮಂಡಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಮನೆಗೆ ನುಗ್ಗಿದ ಬೃಹತ್ ಕಾಳಿಂಗ ಸರ್ಪ ರಕ್ಷಣೆ

ಅಂಕೋಲಾ: ತಾಲೂಕಿನ ಗ್ರಾಮೀಣ ಗುಡ್ಡಗಾಡು ಪ್ರದೇಶವಾದ ಕಾಚಿನಬಟ್ಟಿಯಲ್ಲಿ ರಸ್ತೆ ಬದಿಯ ಮನೆಯೊಂದಕ್ಕೆ ನುಗ್ಗಿದ ಬೃಹತ್ ಕಾಳಿಂಗ ಸರ್ಪವೊಂದನ್ನು ಉರಗರಕ್ಷಕ ಮಹೇಶ ನಾಯ್ಕ ಅವರ ತಂಡ ಅತ್ಯಂತ ಪ್ರಯಾಸದಿಂದ ಸುರಕ್ಷಿತವಾಗಿ ಹಿಡಿದು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು.



ಕಾಚಿಬಟ್ಟಿಯಲ್ಲಿ ರಸ್ತೆ ದಾಟುತ್ತಿದ್ದ ಸುಮಾರು 14 ಅಡಿ ಉದ್ದದ ಕಾಳಿಂಗ ಸರ್ಪಕ್ಕೆ ವಾಹನವೊಂದು ಬಡಿದ ಕಾರಣ ಕಾಳಿಂಗ ಸರ್ಪ ರಸ್ತೆ ಪಕ್ಕದಲ್ಲಿರುವ ಕೃಷಿಕ ರಾಜು ನಾಯಕ ಎನ್ನುವವರ ಮನೆಗೆ ನುಗ್ಗಿ ಅಡುಗೆ ಮನೆಯಲ್ಲಿ ಮಲಗಿದ್ದರಿಂದ ಭೀತಿಗೊಂಡ ಮನೆಯವರು ಹೊಸಕಂಬಿ ವಲಯ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಇಲಾಖೆಯವರು ಉರಗರಕ್ಷಕ ಮಹೇಶ ನಾಯ್ಕ ಅವರಿಗೆ ಕರೆ ಮಾಡಿ ಸಹಕಾರ ಕೋರಿದ್ದರು.

ಸ್ಥಳಕ್ಕೆ ಆಗಮಿಸಿದ ಮಹೇಶ ನಾಯ್ಕ ಮತ್ತು ಅವರ ಮಗ ಗಗನ ನಾಯ್ಕ ಕಾಳಿಂಗ ಸರ್ಪವನ್ನು ಅಡುಗೆ ಮನೆಯಿಂದ ಹೊರಗೆ ತರುವ ಪ್ರಯತ್ನದಲ್ಲಿದ್ದಾಗ ಸರ್ಪ ಪಕ್ಕದಲ್ಲಿರುವ ಬಿಲವೊಂದರಲ್ಲಿ ಸೇರಿಕೊಂಡಿದ್ದು ಆತಂಕಕ್ಕೆ ಕಾರಣವಾಯಿತು.

ಸ್ಥಳೀಯ ಸಹಕಾರದಲ್ಲಿ ಬಿಲವನ್ನು ಅಗೆಯುವ ಕೆಲಸ ನಡೆಸಲಾದರೂ ಬಿಲ ಅಗೆದಷ್ಟು ಆಳಕ್ಕೆ ಹೋಗುತ್ತಿರುವುದು ಕಾಳಿಂಗ ಸರ್ಪವನ್ನು ಪತ್ತೆ ಹಚ್ಚುವುದು ಸವಾಲಿನ ಕೆಲಸವಾಗಿತ್ತು. ಬಿಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಬಿಟ್ಟು ಸುಮಾರು ಮೂರು ತಾಸುಗಳಿಂತ ಹೆಚ್ಚಿನ ಸಮಯ ಕಾರ್ಯಾಚರಣೆ ನಡೆಸಿದ ನಂತರ ಕಾಳಿಂಗ ಸರ್ಪ ಬಿಲದಿಂದ ಹೊರಗೆ ಬಂದಿದ್ದು ಭಾರೀ ಗಾತ್ರದ ಸರ್ಪವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ.

ಕಾರ್ಯಾಚರಣೆಗೆ ಮಹೇಶ ನಾಯ್ಕ ಅವರ ಸಂಬಂಧಿ ಅನುಷಾ, ಅರಣ್ಯ ಇಲಾಖೆಯ ಗಸ್ತು ಸಿಬ್ಬಂದಿ ಸಿದ್ಧಲಿಂಗ,ಹರ್ಷ ನಾಯ್ಕ್, ಶಿವರಾಜ ನಾಯ್ಕ, ಚಂದ್ರಕಾಂತ, ಕಾಚಿನಬಟ್ಟಿ ಸುತ್ತ ಮುತ್ತಲಿನ ಗ್ರಾಮಸ್ಥರು ಅರಣ್ಯ ಇಲಾಖೆಯ ಸಿಬ್ಬಂದಿಗಳು ಸಹಕರಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ ಗೋಕರ್ಣ ಶಾಖೆಯ ಮಾದನಗೇರಿ 11ಕೆ.ವಿ ಕೇಬಲ್ ಬಿಚ್ಚಿ ಅಳವಡಿಸುವ ಕಾಮಗಾರಿಯು ಬಳಲೆ ಗ್ರಾಮದಲ್ಲಿ ಇರುವುದರಿಂದ ಅಂಕೋಲಾ ಉಪ-ವಿಭಾಗ ವ್ಯಾಪ್ತಿಯ ಬಳಲೆ, ದೇವಿಗದ್ದೆ, ಉಳವರೆ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ಏ.1 ಬೆಳಗ್ಗೆ 10 ಗಂಟೆಯಿಂದ ಸಂಜೆ 5 0ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ



ಅಂಕೋಲಾ: ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ ನಡೆಸುವ ಕೇಂದ್ರೀಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಸ್ಥಳೀಯ ಕೆಎಲ್ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಬಿ.ಎನ್ ನಿರಂಜನ ಕುಮಾರ, ಕಾರ್ತಿಕ ಶೆಟ್ಟಿ ಹಾಗೂ ಸ್ಮಿತಾ ಅಂಬಿಗ ಅವರು ಅರ್ಹತೆಗಳಿಸಿ ಸಾಧನೆ ಮಾಡಿದ್ದಾರೆ. ಅತ್ಯಂತ ಕಠಿಣ ಪರೀಕ್ಷೆಯಾದ ಇದರಲ್ಲಿ ಉತ್ತೀರ್ಣರಾಗಿ ದೇಶಮಟ್ಟದ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹತೆ ಗಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿಯ ಪದಾಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ಹರ್ಷ ವ್ಯಕ್ತ ಪಡಿಸಿದ್ದಾರೆ ಎಂದು ಪ್ರಾಚಾರ್ಯರಾದ ಡಾ. ವಿನಾಯಕ ಜಿ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿಗೆ ಶಾಸಕ ಹೆಬ್ಬಾರ್ ಭೂಮಿಪೂಜೆ



ಬನವಾಸಿ: ಶಾಸಕ ಶಿವರಾಮ ಹೆಬ್ಬಾರ್ ಅವರು ಬನವಾಸಿ ಹೋಬಳಿ ಉಂಚಳ್ಳಿ ಗ್ರಾಪಂ ವ್ಯಾಪ್ತಿಯ ಕೋಗೋಡ ಗ್ರಾಮದಲ್ಲಿ ಸುಮಾರು 1 ಕೋಟಿ ರೂಪಾಯಿ ವೆಚ್ಚದಲ್ಲಿ ಕೋಗೋಡ ಬ್ರಿಡ್ಜ್‌ನಿಂದ ಸಹಸ್ರಳ್ಳಿವರೆಗೆ ನೂತನ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.ನಂತರ ಸಹಸ್ರಳ್ಳಿ ದೇವಾಲಯದ ಆವರಣದಲ್ಲಿ ಆಯೋಜಿಸಲಾದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರನ್ನು ಸನ್ಮಾನಿಸಿದರು. ಕೆಪಿಸಿಸಿ ಸದಸ್ಯ ವಿವೇಕ್ ಹೆಬ್ಬಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಣಪತಿ ನಾಯ್ಕ, ಜಿಪಂ ಮಾಜಿ ಸದಸ್ಯ ಬಸವರಾಜ ದೊಡ್ಮನಿ, ಗ್ರಾಪಂ ಮಾಜಿ ಸದಸ್ಯ ದೇವೇಂದ್ರ ನಾಯ್ಕ, ಎ.ಕೆ. ನಾಯ್ಕ, ಹುಲಿಯಾ ಗೌಡ, ಅರುಣ ನಾಯ್ಕ ಸೇರಿದಂತೆ ಮತ್ತಿತರರಿದ್ದರು.



ಸಿದ್ದಾಪುರ: ತಾಲೂಕಿನ ಅವರಗುಪ್ಪದ ವೀರಭದ್ರೇಶ್ವರ ದೇವರ ವಾರ್ಷಿಕೋತ್ಸವ ಹಾಗೂ ಬಸವನಮೂರ್ತಿ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ಬ್ರಹ್ಮಶ್ರೀ ನಾರಾಯಣಗುರು ಮಹಾಸಂಸ್ಥಾನ ನಿಟ್ಟೂರ ಇದರ ಪೀಠಾಧಿಪತಿ ರೇಣುಕಾನಂದ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61399	68899
ಬಿಳಿಗೋಟು	25899	40500
ಕೆಂಪುಗೋಟು	23900	37611
ಬೆಟ್ಟೆ	40699	49040
ರಾಶಿ	49399	54690
ಚಾಲಿ	44039	49611
ಬಿ.ಕಾಳುಮೆಣಸು	78099	89199



ಶಿರಸಿ: ನಗರದ ನಟರಾಜ ಟಾಕೀಸ್ ಸಮೀಪವಿರುವ ಚೌಡೇಶ್ವರಿ ಸನ್ನಿಧಾನದಲ್ಲಿ ಚೌಡೇಶ್ವರಿ, ನಾಗದೇವತೆ, ಸನ್ಯಾಸಿ ಹಾಗೂ ರಾಹುದೇವತೆಯ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಿತು.ಮಾಜಿ ಶಾಸಕ ವಿವೇಕಾನಂದ ವೈದ್ಯ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಲ್ಕೂ ದೇವತೆಗಳ ನೂತನ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.

ಗೋಪಾಲಕೃಷ್ಣ ನಾಯಕ ಕೊಲೆ ಯತ್ನ: ಆರೋಪಿಗಳ ಬಂಧನ

ಅಂಕೋಲಾ: ಕೆಪಿಸಿಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಅವರ ಮೇಲೆ ಹಲ್ಲೆ ನಡೆದು ಒಂದು ವಾರ ಕಳೆಯುತ್ತಿದ್ದು ಘಟನೆಗೆ ಸಂಬಂಧಿಸಿದಂತೆ ಒಟ್ಟು 9 ಜನ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿದು ಬಂದಿದೆ.ಮಾರ್ಚ್ 25 ಬುಧವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ನಡೆದ ಹಲ್ಲೆ ಮತ್ತು ಹತ್ಯೆ ಯತ್ನದ ಸಂದರ್ಭದಲ್ಲಿ ಆರು ಜನ ದುಷ್ಕರ್ಮಿಗಳು ಪಾಲ್ಗೊಂಡಿದ್ದರು ಎಂದು ತಿಳಿದು ಬಂದಿತ್ತಾದರೂ ಇದೀಗ ಅವರ ಸಂಖ್ಯೆ ಹೆಚ್ಚಿರುವುದಾಗಿ ಕೇಳಿ ಬರುತ್ತಿದೆ.ಘಟನೆ ಸಂಭವಿಸಿದ ದಿನದಂದೇ ಕಾರವಾರ ಗೋವಾ ಗಡಿಯಲ್ಲಿ ನಾಲ್ಕು ಜನ ಗೋವಾ ಮೂಲದ ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು ನಂತರ ಬೆಳಗಾವಿಯಲ್ಲಿ ನಾಲ್ಕು ಜನರನ್ನು ಬಂಧಿಸಿರುವುದಾಗಿ ತಿಳಿದು ಬಂದಿದೆ.ಅದೇ ರೀತಿ ಅಂಕೋಲಾದಲ್ಲಿ ಸಹ ದಕ್ಷಿಣ ಕನ್ನಡ ಮೂಲದ ವ್ಯಕ್ತಿಯೋರ್ವನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎನ್ನಲಾಗುತ್ತಿದ್ದು ಈ ಘಟನೆಯ ಪ್ರಮುಖ ಆರೋಪಿ ಎಂದು ಹೇಳಲಾಗುವ ಇಮಾಮ್ ಎಂಬಾತನ ಬಂಧನ ಆಗಿದೆಯೋ ಇಲ್ಲವೋ ಎನ್ನುವ ಕುರಿತಂತೆ ಯಾವುದೇ ಖಚಿತ ಮಾಹಿತಿ ಇಲ್ಲ. ನಾಲ್ಕು ಜನ ಆರೋಪಿತರ ಬಂಧನ ನಡೆದಿರುವ ಕುರಿತಂತೆ ಮಾತ್ರ ಸ್ಥಳೀಯವಾಗಿ ಪೊಲೀಸರಿಂದ ಮಾಹಿತಿ ಲಭ್ಯವಾಗುತ್ತಿದ್ದು ತನಿಖೆ ಪ್ರಗತಿಯಲ್ಲಿದೆ ಎಂಬ ಉತ್ತರ ಮಾತ್ರ ಕೇಳಿ ಬರುತ್ತಿರುವುದರಿಂದ ನಿಖರವಾದ ಮಾಹಿತಿ ತಿಳಿದು ಬರಬೇಕಿದೆ.



ಸಿದ್ದಾಪುರ: ಸಿದ್ದಾಪುರ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯದಲ್ಲಿ ಯೋಗ ಮಹೋತ್ಸವನ್ನು ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ಉದ್ಘಾಟಿಸಿದರು.

ಐಡಿ ಕಾರ್ಡ್ ವಿಚಾರಕ್ಕೆ ವಿದ್ಯಾರ್ಥಿಗಳ ಪ್ರತಿಭಟನೆ | ಹಲವರ ಬೆಂಬಲ

ಪ್ರಾಂಶುಪಾಲರ ವರ್ಗಾವಣೆಗೆ ಪಟ್ಟು

ಕುಮಟಾ: ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಪ್ರಾಂಶುಪಾಲರ ನಡುವೆ ನಡೆದ ಕೆಲವು ಘಟನಾವಳಿಗಳಿಂದಾಗಿ ಪರಿಸ್ಥಿತಿ ಉದ್ವಿಗ್ನಗೊಂಡು ಕಾಲೇಜು ಆವರಣದಲ್ಲಿಯೇ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾದ ಘಟನೆ ಮಂಗಳವಾರ ಕುಮಟಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವಾರಣದಲ್ಲಿ ನಡೆದಿದೆ.

ಈ ಪ್ರತಿಭಟನೆಗೆ ಎಬಿವಿಪಿ ಸಂಘಟನೆ ಬೆಂಬಲ ವ್ಯಕ್ತಪಡಿಸಿದ್ದು, ಜೆಡಿಎಸ್ ಮುಖಂಡ ಸೂರಜ್ ನಾಯ್ಕ ಸೋನಿ ಹಾಗೂ ಕಾಂಗ್ರೆಸ್ ಮುಖಂಡ ಭಾಸ್ಕರ್ ಪಟಗಾರ ಸೇರಿದಂತೆ ಹಲವರು ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಬೆಂಬಲವಾಗಿ ನಿಂತರು.

ಪ್ರತಿಭಟನಾಕಾರರು ಪ್ರಾಚಾರ್ಯರನ್ನು ಅಮಾನತು ಮಾಡಬೇಕು ಅಥವಾ ತಕ್ಷಣ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು. ಈ ವೇಳೆ ವಿದ್ಯಾರ್ಥಿ ಮುಖಂಡರು ಸ್ಥಳಕ್ಕೆ ಶಾಸಕ ದಿನಕರ ಶೆಟ್ಟಿ ಅವರು ಆಗಮಿಸುವಂತೆ ಆಗ್ರಹಿಸಿದರು.

ಶಾಸಕ ದಿನಕರ ಶೆಟ್ಟಿ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳು ಮತ್ತು ಪ್ರಾಚಾರ್ಯರ ನಡುವೆ ಸೌಹಾರ್ದಯುತ ಬಾಂಧವ್ಯ ಇರಬೇಕು ಎಂದು ಸಲಹೆ ನೀಡಿದರು. ಪ್ರಾಚಾರ್ಯರ ವರ್ಗಾವಣೆ ಮಾತ್ರ ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ ಎಂದು ತಿಳಿಸಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ವಿಷಯದ ಬಗ್ಗೆ ಚರ್ಚಿಸಿದರು.

ಉಸ್ತುವಾರಿ ಸಚಿವರು ವಿದ್ಯಾರ್ಥಿ ಮುಖಂಡರೊಂದಿಗೆ ಮಾತುಕತೆ ನಡೆಸಿ ಸಮಸ್ಯೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಇದಾದ ನಂತರ ವಿದ್ಯಾರ್ಥಿಗಳು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಘಟನೆ ಬಗ್ಗೆ ಸಿಕ್ಕ ಮಾಹಿತಿಗಳೇನು? ಸರ್ಕಾರದ ನಿಯಮದ ಪ್ರಕಾರ 53ರೂ. ಹಣ ಸಂಗ್ರಹಿಸಿ ಕಾಲೇಜು



- ವಿದ್ಯಾರ್ಥಿಗಳ ಮೇಲೆನ ಪ್ರಕರಣವನ್ನು ವಾಪಸ್ ಪಡೆಯಲು ಒತ್ತಾಯ.
- ಯಾವ ಯಾವ ವಿದ್ಯಾರ್ಥಿಯಿಂದ ತಪ್ಪೊಪ್ಪಿಗೆ ಪತ್ರವನ್ನು ಒತ್ತಾಯದಿಂದ ಬರೆಸಿಕೊಂಡಿರುವುದನ್ನು ವಾಪಸ್ ನೀಡಬೇಕು
- ಪ್ರತಿ ತಿಂಗಳ ಆಡಿಟ್‌ನ್ನು ನೋಟೀಸ್ ಬೋರ್ಡ್‌ಗೆ ಹಾಕಬೇಕು

ವಿದ್ಯಾರ್ಥಿಗಳಿಗೆ ಐಡಿ ಕಾರ್ಡ್ ಮಾಡಿಕೊಡುವ ವಿಚಾರ ನಡೆದು, ಈ ಸಂದರ್ಭದಲ್ಲಿ ಕೆಲ ವಿದ್ಯಾರ್ಥಿಗಳು ಐಡಿ ಕಾರ್ಡ್ ಬೇಡ ಎಂದು ಹಣ ವಾಪಾಸ್ ನೀಡುವಂತೆ ಆಗ್ರಹಿಸಿದ್ದರು ಎನ್ನಲಾಗಿದೆ.

ಈ ಸಂದರ್ಭದಲ್ಲಿ ಹಣ ವಾಪಾಸ್ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿತ್ತಾದರೂ ಪ್ರತೀ ವಿದ್ಯಾರ್ಥಿಗಳಿಗೆ ಐಡಿ ಕಾರ್ಡ್ ಕಡ್ಡಾಯ, ಪ್ರತೀ ವರ್ಷ ಹೊಸ ಐಡಿ ಕಾರ್ಡ್ ಕೊಡಲೇಬೇಕು ಎಂಬ ನಿಯಮ ಇರುವುದರಿಂದ ಈ ಪ್ರಸ್ತಾಪ ಮುಂದುವರೆಸಲಾಗಿತ್ತೆನ್ನಲಾಗಿದೆ.

ಈ ವಿಚಾರ ಪಾಲಕರಿಗೂ ಹೋಗಿದ್ದು, ಕಾಲೇಜಿನ ಕಚೇರಿಗೆ ಆಗಮಿಸಿದ ವಿದ್ಯಾರ್ಥಿಯ ಪಾಲಕರು ಪ್ರಾಂಶುಪಾಲರು ಹಾಗು ಸಿಬ್ಬಂದಿಗಳ ನಡುವೆ ನಡೆದ ಮಾತುಕತೆ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಪ್ರಾಂಶುಪಾಲರರು ಸೇರಿ ಐವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಜಾತಿನಿಂದನೆ ಪ್ರಕರಣ ದಾಖಲಾಗಿದ್ದು, ದೂರಿಗೆ ಪ್ರತಿದೂರು ದಾಖಲಾಗಿತ್ತು. ಇದೇ ವಿಚಾರಕ್ಕೆ ಎಬಿವಿಪಿ ನೇತೃತ್ವದಲ್ಲಿ ಕಾಲೇಜು ಮುಂಭಾಗ ವಿದ್ಯಾಥಿಗಳು ಪ್ರತಿಭಟನೆ ನಡೆಸಿ ಪ್ರಾಂಶುಪಾಲರು ಕ್ಷಮೆ ಯಾಚಿಸಬೇಕು ಮತ್ತು ಅವರನ್ನು ವರ್ಗಾವಣೆಮಾಡಬೇಕು ಎಂದು ಪಟ್ಟು ಹಿಡಿದರು. ಮಧ್ಯೆ ಪ್ರವೇಶಿಸಿದ ಶಾಸಕ ದಿನಕರ ಶೆಟ್ಟಿ ಹಾಗು ಜೆಡಿಎಸ್ ಮುಖಂಡ ಸೂರಜ್ ಸೋನಿ ವಿದ್ಯಾರ್ಥಿಗಳ ಮನವೊಲಿಸಿ ಪ್ರತಿಭಟನೆ ತಿಳಿಗೊಳಿಸಿದರು. ಪ್ರಾಂಶುಪಾಲರು, ಸಿಬ್ಬಂದಿ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಕ್ಷಮೆಯಾಚಿಸಿದ ಬಳಿಕ ಪ್ರತಿಭಟನೆ ಹಿಂಪಡೆದರು. ಇನ್ನು ಪ್ರತಿಭಟನಾ ಸ್ಥಳಕ್ಕೆ ತಹಶೀಲ್ದಾರ್ ಶ್ರೀಕೃಷ್ಣ ಕಾಮಕರ್, ಕುಮಟಾ ಠಾಣೆಯ ಪಿಐ ಯೋಗೀಶ, ಪಿಎಸ್ಐ ಸಾವಿತ್ರಿ ನಾಯಕ ಹಾಗು ಸಿಬ್ಬಂದಿಗಳು ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು. ಈ ವೇಳೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಸ್ವಚ್ಛತಾ ಅಭಿಯಾನಕ್ಕೆ ಶಾಸಕ ಚಾಲನೆ

ದಾಂಡೇಲಿ: ತಾಲೂಕಾಡಳಿತ, ನಗರ ಸಭೆ, ತಾಲೂಕಿನ 4 ಗ್ರಾಪಂ ಹಾಗೂ ವಿವಿಧ ಸಂಘ ಸಂಸ್ಥೆಗಳು ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ದಾಂಡೇಲಿ ನಗರ ಸೇರಿದಂತೆ ತಾಲೂಕಿನೆಲ್ಲೆಡೆ ಏಕಕಾಲದಲ್ಲಿ ಮೂರು ದಿನಗಳ ಸ್ವಚ್ಛತಾ ಅಭಿಯಾನಕ್ಕೆ ಮಂಗಳವಾರ ಶಾಸಕ ಆರ್ .ವಿ.ದೇಶಪಾಂಡೆ ಚಾಲನೆ ನೀಡಿದರು.

ನಗರ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾದ ಸ್ವಚ್ಛತಾ ಅಭಿಯಾನಕ್ಕೆ ನಗರದ ಕೆ.ಸಿ ವೃತ್ತದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಸ್ವಚ್ಛತೆ ಇದ್ದಲ್ಲಿ ಆರೋಗ್ಯ. ಆರೋಗ್ಯವಂತ ಸಮಾಜದಿಂದ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಸ್ವಚ್ಛತೆಯ ಕಡೆಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕೆಂದು ಕರೆ ನೀಡಿದರು.

ಸ್ವಚ್ಛ ಭಾರತ ನಿರ್ಮಾಣದ ಮಹಾತ್ಮ ಗಾಂಧೀಜಿಯವರಕನಸುನನಸುಮಾಡಲು ನಾವೆಲ್ಲ ಕಟ್ಟಿ ಬದ್ಧರಾಗಬೇಕು. ಸ್ವಚ್ಛತೆಯ ಕುರಿತಂತೆ ಪ್ರತಿಯೊಬ್ಬ ನಾಗರಿಕನು ಜಾಗೃತನಾಗಬೇಕು. ಸ್ವಚ್ಛತೆಯ ಬಗ್ಗೆ ಜನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದ ಅವರು ಇಡೀ ರಾಜ್ಯದಲ್ಲೆ ಈ ಮೂರು ದಿನಗಳ ನಿರಂತರ ಸ್ವಚ್ಛತಾ ಅಭಿಯಾನ ನಡೆಯುತ್ತಿರುವುದು ಹಳಿಯಾಳ, ದಾಂಡೇಲಿ, ಜೋಯಿಡಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಾತ್ರ ಎಂದರು. ಈ ರೀತಿಯ ಸ್ವಚ್ಛತಾ ಅಭಿಯಾನ ಇಡೀ ರಾಜ್ಯ ವ್ಯಾಪಿ ನಡೆಯುವಂತಾಗಬೇಕು. ಸ್ವಚ್ಛತೆಯ ವಿಚಾರದಲ್ಲಿ ಅವರಿವರೆನ್ನದೆ ಎಲ್ಲರೂ ಸಕ್ರಿಯರಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಹೇಳಿದರು.

ದೇಶಪಾಂಡೆಯವರ ಧರ್ಮಪತ್ನಿ ರಾಧಾಬಾಯಿದೇಶಪಾಂಡೆ,ತಹಶೀಲ್ದಾರ್ ಶೈಲೇಶಪರಮಾನಂದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಡಾ.ಸಂತೋಷ್ ಚೌವ್ಹಾಣ್, ಸಿಪಿಐ ಶಿವಾನಂದ ಅಂಬಿಗೇರ, ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ, ಪೌರಾಯುಕ್ತ ವಿವೇಕ ಬನ್ನೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ನಗರಸಭೆಯ ನಿಕಟ ಪೂರ್ವ ಅಧ್ಯಕ್ಷ ಅಷ್ಪಾಕ್ ಶೇಖ, ನಿಕಟಪೂರ್ವ ಉಪಾಧ್ಯಕ್ಷೆ ಶಿಲ್ಪಾ ಕೋಡೆ ಹಾಗೂ ನಗರಸಭೆಯ ನಿಕಟಪೂರ್ವ ಸದ್ಯರು, ನಗರಸಭೆಯ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಸದ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ನಗರಸಭೆಯ ಪೌರಾಯುಕ್ತ ವಿವೇಕ್ ಬನ್ನೆ ಸ್ವಾಗತಿಸಿ ವಂದಿಸಿದರು.



ಏ.4ರಂದು ಸಂಸ್ಮರಣೆ ಕಾರ್ಯಕ್ರಮ

ಯಲ್ಲಾಪುರ: ವಿದ್ವಾಂಸ, ಕಲಾವಿದ ದಿ.ಮಹಾಬಲೇಶ್ವರ ಭಟ್ಟ ನೇರಲಮನೆ ಹಾಗೂ ಕಲಾವಿದ ದಿ. ಚಿದಂಬರ ಭಟ್ಟ ಸೂಳಗಾರ ಅವರ ಸಂಸ್ಮರಣೆ ಕಾರ್ಯಕ್ರಮ ಸೂಳಗಾರಿನಲ್ಲಿ ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಜಿ.ಎಸ್ .ಭಟ್ಟ ತಟ್ಟಿಗದ್ದೆ ಹೇಳಿದರು.

ಅವರು ಸೋಮವಾರ ನೌಕರರ ಭವನದಲ್ಲಿ ಆಮಂತ್ರಣಪತ್ರಿಕೆಬಿಡುಗಡೆಗೊಳಿಸಿಮಾತನಾಡಿ, ಏ.4ರಂದು ತಾಲೂಕಿನ ಸೂಳಗಾರ ಸರ್ಕಾರಿ ಪ್ರಾಥಮಿಕ ಶಾಲೆ ಆವಾರಣದಲ್ಲಿ ಮಧ್ಯಾಹ್ನ 3ಕ್ಕೆ ಕಾರ್ಯಕ್ರಮವನ್ನು ವೈದಿಕ ವೆಂಕಟ್ರಮಣ ಭಟ್ಟ ಗುರ್ತೆಗದ್ದೆ ಉದ್ಘಾಟಿಸಲಿದ್ದಾರೆ. ಸಂಜೆ 4 ಕ್ಕೆ ಚಂದನ ಆಂಗ್ಲಮಾಧ್ಯಮ ಶಾಲೆ ನರೇಬೈಲ್ ಶಿರಸಿಯ ಮಕ್ಕಳಿಂದ ಚಕ್ರವ್ಯೂಹ ತಾಳಮದ್ದಲೆ ನಡೆಯಲಿದೆ. ನಂತರ ವೈದಿಕರ ಕರ್ತವ್ಯಗಳು ಕುರಿತು ರಾಮಕೃಷ್ಣ ಭಟ್ಟ ಮಾಗೋಡ ಹಾಗೂ ಹವ್ಯಕರಲ್ಲಿರ ಬೇಕಾದ ಆಚಾರಗಳ ಕುರಿತಾಗಿ ಮಂಜುನಾಥ ಭಟ್ಟ ಭಟ್ರಕೇರಿ ಉಪನ್ಯಾಸ ನೀಡಲಿದ್ದಾರೆ.

ಡಾ. ಶಂಕರ ಭಟ್ಟ ಬಾಲಿಗದ್ದೆ ಅಧ್ಯಕ್ಷತೆ ವಹಿಸಲಿದ್ದಾರೆ. ಗಣೇಶ ಹೆಗಡೆ ನೇರ್ಲಮನೆ ಅವರಿಂದ ಸಂಗೀತ ಸಂಜೆ ನಡೆಯಲಿದೆ. ಅರ್ಪಿತಾ ಅಂಕೋಲಾ ಇವರಿಂದ ಯಕ್ಷ ನೃತ್ಯ, ವಿದುಷಿ ಸುಮಾ ಹೆಗಡೆ ತೊಂಡೆಕೆರೆ ಅವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ ಎಂದರು.

ಅನಂತ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ನಾರಾಯಣ ಭಟ್ಟ ಸೂಳಗಾರ ಮಾತನಾಡಿ, ರಾತ್ರಿ 8 ಕ್ಕೆನಡೆಯುವ ಸಭಾ ಕಾರ್ಯಕ್ರಮವನ್ನು ಶಾಸಹ ಶಿವರಾಮ ಹೆಬ್ಬಾರ್ ಉದ್ಘಾಟಿಸಲಿದ್ದಾರೆ. ಪ್ರಣವ ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಅಧ್ಯಕ್ಷತೆ ವಹಿಸಲಿದ್ದಾರೆ.

ಸಿರಿಕಲಾ ಬಳಗದ ಅಧ್ಯಕ್ಷ ರವೀಂದ್ರ ಭಟ್ಟ ಅಣಲಗಾರ ಮಾತನಾಡಿ, ಸಿರಿ ಕಲಾ ಬಳಗ, ದಿ ಮಹಾಬಲೇಶ್ವರ ಭಟ್ಟ, ದಿ ಚಿದಂಬರ ಭಟ್ಟ ಸೂಳಗಾರ ಅಭಿಮಾನಿ ಬಳಗದಿಂದ ರಕ್ತರಾತ್ರಿ ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ. ಸಾಮಾಜಿಕ ನಾಟಕಗಳೇ ಹೆಚ್ಚಾಗಿರುವ ಕಾಲದಲ್ಲಿ ಪೌರಾಣಿಕ ನಾಟಕ ಪ್ರದರ್ಶನ ನಡೆಯುತ್ತಿರುವುದು ಅಪರೂಪವಾಗಿದೆ ಎಂದರು.

ರಂಗದಲ್ಲಿ ರವೀಂದ್ರ ಭಟ್ಟ, ಜಿ ಎಸ್ ಭಟ್ಟ, ನರಸಿಂಹ ಕುಂಕಿಮನೆ, ಶ್ರೀಧರ ಅಣಲಗಾರ, ನರಸಿಂಹ ಮೆಲಿನಕುಂಕಿ, ಸುಬ್ಬಣ್ಣ ಕಂಚಗಲ್, ಪ್ರಸನ್ನ ಭಟ್ಟ, ಮಾದೇವ ನಾಯ್ಕ, ಮಂಜುನಾಥ ನಾಯ್ಕ, ತಿಮ್ಮಣ್ಣ ಭಟ್ಟ ಸೂಳಗಾರ, ಗಂಗಾಧರ ಗುಮ್ಮಾನಿ, ನಾರಾಯಣ ಭಟ್ಟ ತೆಂಗಿನಜಡ್ಡಿ, ಸುಮಾ ಭಟ್ಟ, ಮೀನಾಕ್ಷಿ ಭಟ್ಟ, ಹೇಮಾ ಹೆಗಡೆ, ವಿ ಟಿ ಭಟ್ಟ ಕನಕನಹಳ್ಳಿ ಭಾಗವಹಿಸುತ್ತಾರೆ ಎಂದರು.ಸಂಘಟನೆಯ ಪ್ರಮುಖರಾದ ವಿ.ಟಿ.ಹೆಗಡೆ, ತಿಮ್ಮಣ್ಣ ಭಟ್ಟ, ಮಂಜುನಾಥ ನಾಯ್ಕ ಇದ್ದರು.



ಸ್ವಚ್ಛತೆಗೆ ಆದ್ಯತೆ ನೀಡಿ: ಶಾಸಕ ದೇಶಪಾಂಡೆ

ಜೋಯಿಡಾ: ಸ್ವಚ್ಛತಾ ಕಾರ್ಯಕ್ರಮ ರಾಷ್ಟಪಿತ ಮಹಾತ್ಮ ಗಾಂಧಿಜೀ ಅವರ ಕನಸು, ದೇಶವನ್ನು ಸ್ವಚ್ಛವಾಗಿಡಬೇಕು. ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರಬೇಕು. ಎಲ್ಲಾ ಜನತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ, ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ಅವರು ಜೋಯಿಡಾ ಶಿವಾಜಿ ವೃತ್ತದ ಬಳಿ ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸಾರ್ವಜನಿಕರು ಎಲ್ಲಂದರಲ್ಲಿ ಕಸ ಎಸೆಯಬಾರದು, ಜನರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮೊದಲೆಲ್ಲ ಶ್ರಮಾದಾನ ಮಾಡಲಾಗುತ್ತಿತ್ತು, ಅವರವರ ಊರು, ಹಳ್ಳಿಯನ್ನು ಜನರೆ ಸ್ವಚ್ಛ ಮಾಡುತ್ತಿದ್ದರು, ಈಗಿನ ಜನತೆ ಸ್ವಚ್ಛತೆಯನ್ನು ಮರೆತಿದೆ.

ಸಮಾಜವನ್ನು ಸ್ವಚ್ಛವಾಗಿಡಲು ಎಲ್ಲರು ಕೈಜೋಡಿಸಬೇಕು, ಎಲ್ಲಾ ಅಧಿಕಾರಿಗಳು ತಮ್ಮ ಇಲಾಖೆಯ ಕಟ್ಟಡಕ್ಕೆ ಸುಣ್ಣ-ಬಣ್ಣಹಚ್ಚಿ ಸ್ವಚ್ಛಮಾಡಿ ಮತ್ತು ಇಕ್ಕೆಲಗಳನ್ನು ಸ್ವಚ್ಛವಾಗಿಡಬೇಕು. ಆಯಾ ಗ್ರಾಮ ಪಂಚಾಯತನವರು ತಮ್ಮ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಜೋಯಿಡಾ ತಹಶೀಲ್ದಾರ್ ಮಂಜುನಾಥ ಮೊನ್ನೋಳಿ, ಇಒಭಾರತಿ ಎಂ, ಜೋಯಿಡಾ ವಲಯ ಅರಣ್ಯಾಧಿಕಾರಿ ಪ್ರವೀಣ ಚಲವಾದಿ, ಸಿಡಿಪಿಒ ಸಿದ್ದಲಿಂಗಪ್ಪ ಕೆ, ಕಾಂಗ್ರೆಸ್ ಪಕ್ಷದ ವಿನಯ ದೇಸಾಯಿ, ಕೆಪಿಸಿಸಿ ಸದಸ್ಯ ಸದಾನಂದ ದಬ್ಗಾರ, ಮಾಜಿ ಗ್ರಾಪಂ ಉಪಾಧ್ಯಕ್ಷ ಸಂತೋಷ ಮಂಥೆರೋ ಹಾಗೂ ಅಧಿಕಾರಿಗಳು ಸಾರ್ವಜನಿಕರು ಭಾಗವಹಿಸಿದ್ದರು. ಹಳಿಯಾಳ ದಾಂಡೇಲಿ, ಜೋಯಿಡಾ ಕ್ಷೇತ್ರ ವ್ಯಾಪ್ತಿ ನಡೆಯುತ್ತಿರುವ ಸ್ವಚ್ಛತಾ ಅಭಿಯಾನ ತಾಲೂಕಿನ ಎಲ್ಲಾ ಗ್ರಾಪಂ ವ್ಯಾಪ್ತಿಯಲ್ಲೂ ಮೂರು ದಿನಗಳಕಾಲ ನಡೆಯಲಿದೆ.



ಇಂದು ಕಲ್ಮೇಶ್ವರ ದೇವರ ಮಹಾರಥೋತ್ಸವ

ಮುಂಡಗೋಡ: ಮೂರು ತಲೆಮಾರಿನ ಪೂರ್ವಜರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಯುವಕರೆಲ್ಲ ಸೇರಿ ಜಾತ್ರೆ ಜೊತೆಗೆ ಕಲ್ಯಾಣ ಕಾರ್ಯ ಮಾಡುತ್ತಾ ಬಂದಿದ್ದಾರೆ ಎಂದು ಮಾಜಿ ಶಾಸಕ ವಿ.ಎಸ್.ಪಾಟೀಲ ಹೇಳಿದರು.

ತಾಲೂಕಿನ ಇಂದೂರ ಗ್ರಾಮದ ಕಲ್ಮೇಶ್ವರ ಜಾತ್ರಾ ಮಹೋತ್ಸವ, ಸಾಮೂಹಿಕ ವಿವಾಹ ಹಾಗೂ ಧರ್ಮ ಸಮಾರಂಭದ ಉದ್ಘಾಟನೆಯನ್ನು ಮಂಗಳವಾರ ನೆರವೇರಿಸಿ ಅವರು ಮಾತನಾಡಿ, ಈ ಹಿಂದೆ ಆರ್.ವಿ.ದೇಶಪಾಂಡೆ ಶಾಸಕರಾಗಿದ್ದಾಗ ಸಾಮಾನ್ಯ, ಬಡವರ್ಗದವರಿಗೆ ದುಂದು ವೆಚ್ಚತಗಲುವುದು ಬೇಡ ಎಂದು ಸುಮಾರು 300 ಜೋಡಿ ಸಾಮೂಹಿಕ ವಿವಾಹ ನಡೆಯುತ್ತಿದ್ದವು. ಈಗ 3 ಜೋಡಿ ಸಾಮೂಹಿಕ ವಿವಾಹ ನಡೆದಿದ್ದು ವಧು, ಅತ್ತೆ-ಮಾವಂದಿರ ಮನೆ ಬೆಳಗಬೇಕು ಎಂದರು.ಸಾನಿಧ್ಯ ವಹಿಸಿದ್ದ ಹುಬ್ಬಳ್ಳಿ ಎರಡೆತ್ತಿನಮಠದ ಸಿದ್ದಲಿಂಗ ಶ್ರೀಗಳು ಆಶೀರ್ವಚನ ನೀಡಿ ಪ್ರತಿ ವರ್ಷ ಈ ಕಾರ್ಯಕ್ರಮದೊಂದಿಗೆ ರೂಪುರೇಷೆ ಹಾಕಿಕೊಂಡು ದೀಕ್ಷಾ ಸಂಸ್ಕಾರ, ಲಿಂಗ ಧಾರಣ ಅಥವಾ ವಿಭೂತಿ ಧಾರಣ ವಿಶೇಷ ಕಾರ್ಯಕ್ರಮ ಮಾಡುವ ಮೂಲಕ ಆದರ್ಶ ಗ್ರಾಮ ಎನಿಸಿಕೊಳ್ಳಬೇಕು ಎಂದರು.

ಮಂಟೂರ ಅಡವಿ ಸಿದ್ದೇಶ್ವರ ಮಠದ ಇಂದುಧರ ದೇವರು, ಬೊಮ್ಮನಹಳ್ಳಿ ವಿರಕ್ತಮಠದ ಶಿವಯೋಗೀಶ್ವರ ಶ್ರೀಗಳು ಆಶೀರ್ವಚನ ನೀಡಿದರು. ಜಿಪಂ ಮಾಜಿ ಸದಸ್ಯ ಎಲ್.ಟಿ.ಪಾಟೀಲ ಮಾತನಾಡಿದರು.ಹುಬ್ಬಳ್ಳಿ ಎರಡೆತ್ತಿನಮಠದ ಸಿದ್ದಲಿಂಗ ಶ್ರೀಗಳ ಸಮ್ಮುಖದಲ್ಲಿ 3 ಜೋಡಿ ಸಾಮೂಹಿಕ ವಿವಾಹ ಜರುಗಿದವು.

ಈ ಸಂದರ್ಭದಲ್ಲಿ ಶಾಸಕ ಶಿವರಾಮ ಹೆಬ್ಬಾರ ಆಗಮಿಸಿ ಕಲ್ಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನೂತನ ವಧು-ವರರಿಗೆ ಶುಭ ಕೋರಿದರು. ಎಚ್.ಎಮ್ .ನಾಯ್ಕ, ಕೃಷ್ಣ ಹಿರೇಹಳ್ಳಿ, ರವಿಗೌಡ ಪಾಟೀಲ, ಕೆ.ಸಿ.ಗಲಬಿ, ಧರ್ಮರಾಜ ನಡಿಗೇರ ಇದ್ದರು. ಮಂಜುನಾಥ ನಡಿಗೇರ ಪ್ರಾಸ್ತಾವಿಕ ಮಾತನಾಡಿದರು. ಇಂದೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಪ್ರಾರ್ಥಿಸಿದರು. ಬಸನಗೌಡ ಪಾಟೀಲ ಸ್ವಾಗತಿಸಿದರು. ಸಂತೋಷ ಅಂಗಡಿ ನಿರೂಪಿಸಿದರು.



ಉಮಾಮಧುಕೇಶ್ವರ ಜಾತ್ರೆ: ಭಕ್ತಿಯಲ್ಲಿ ಮಿಂದೆದ್ದ ಭಕ್ತಗಣ

ಬನವಾಸಿ: ಇಲ್ಲಿಯ ಐತಿಹಾಸಿಕ ಮಹತೋಭಾರ ಶ್ರೀ ಉಮಾಮಧುಕೇಶ್ವರ ದೇವಸ್ಥಾನದಲ್ಲಿನ ಉಮಾಮಧುಕೇಶ್ವರ ದೇವರ ಜಾತ್ರಾ ಮಹೋತ್ಸವ ಹಾಗೂ ವಾರ್ಷಿಕ ಮಹಾರಥೋತ್ಸವು ಸೋಮವಾರ ರಾತ್ರಿ ಭಕ್ತರ ಹರ್ಷೋದ್ಗಾರದ ನಡುವೆ ಸಡಗರ ಸಂಭ್ರಮದಿಂದ ನೆರವೇರಿತು.

ಸೋಮವಾರ ಬೆಳಗ್ಗೆ ಶ್ರೀ ಉಮಾಮಧುಕೇಶ್ವರ ದೇವರಿಗೆ ವಿಶೇಶ ಅಲಂಕಾರ, ಪೂಜೆ ನೆರವೇರಿಸಿ, ಬಲಿ, ಜಪ, ಹವನದ ಬಳಿಕ ಉಮಾ ಮಧುಕೇಶ್ವರ ದೇವರ ಉತ್ಸವ ಮೂರ್ತಿಗಳನ್ನು ಅಲಂಕೃತ ಪಲ್ಲಕ್ಕಿಯಲ್ಲಿಟ್ಟು, ವಾದ್ಯ ಮೇಳದೊಂದಿಗೆ ಪಲ್ಲಕ್ಕಿ ಉತ್ಸವ ಮಾಡಲಾಯಿತು.

ಮನ್ಮಹಾಸ್ಯಂದನ ರಥಕ್ಕೆ ಪೂಜೆ ಸಲ್ಲಿಸಿದ ಬಳಿಕ ಶ್ರೀ ಉಮಾಮಧುಕೇಶ್ವರ ದೇವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.



ಪ್ರತಿಷ್ಠಾಪನೆಯ ನಂತರ ಭಕ್ತರ ದರ್ಶನಕ್ಕಾಗಿ ಅವಕಾಶ ನೀಡಲಾಯಿತು. ಬೆಳಗ್ಗೆಯಿಂದ ಸಾವಿರಾರು ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು, ಹೂ, ಹಣ್ಣು ಕಾಯಿ ಸಮರ್ಪಿಸಿ ಭಕ್ತಿ ಮೆರೆದರು. ರಾತ್ರಿ 12.30ರವರೆಗೆ 30 ಸಾವಿರಕ್ಕೂ ಅಧಿಕ ಭಕ್ತರು ದರ್ಶನ ಪಡೆದರು. ಮಹಾಮಂಗಳಾರತಿ ನೆರವೇರಿದ ಬಳಿಕ ಭಕ್ತರ ಹರ್ಷೋದ್ಗಾರದ ನಡುವೆ ಶ್ರೀ ಉಮಾಮಧುಕೇಶ್ವರ ದೇವರ ಮನ್ಮಹಾಸ್ಯಂದನೋತ್ಸವ ಆರಂಭಗೊಂಡಿತು.

ಬಣ್ಣ ಬಣ್ಣದ ಪತಾಕೆ, ಬೃಹತ್ ರುದ್ರಾಕ್ಷಿ ಮಾಲೆ, ವಿವಿಧ ಫಲ ಪುಷ್ಪ, ವಿದ್ಯುತ್ ದೀಪಗಳಿಂದ ಅಲಂಕರಿಸಿದ ಮಹಾರಥವನ್ನು ಭಕ್ತ ಸಮೂಹ ಹರಹರ ಮಹಾದೇವ ಎಂಬ ಜಯ ಘೋಷ ಮೊಳಗಿಸುತ್ತ ಎಳೆಯುತ್ತ ಸಾಗಿದರು. ವಿವಿಧ ವಾದ್ಯ ಮೇಳಗಳು ಮಹಾರಥೋತ್ಸವಕ್ಕೆ ಭಕ್ತಿಯ ಮೆರಗು ನೀಡಿತು. ನೆರೆದಿದ್ದ ಸಾವಿರಾರು ಭಕ್ತರು ಹೂ, ಬಾಳೆಹಣ್ಣು ರಥಕ್ಕೆ ಎಸೆದು ಭಕ್ತಿ ಸಮರ್ಪಿಸಿದರು. ವಯಸ್ಕರು, ಪುರುಷರು, ಮಹಿಳೆಯರು, ಮಕ್ಕಳು ಜಾತಿ ಭೇದವನ್ನು ಮರೆತು ಜಾತ್ರೆಯ ಸಂಭ್ರಮದಲ್ಲಿ ಪಾಲ್ಗೊಂಡರು. ಸುಮಾರು 5 ಗಂಟೆಗಳ ಕಾಲ ಜರುಗಿದ ಮಹಾ ರಥೋತ್ಸವ ಮಂಗಳವಾರ ಬೆಳಗ್ಗೆ 5 ಗಂಟೆಗೆ ಮಹಾ ರಥೋತ್ಸವ ಸಂಪನ್ನಗೊಂಡಿತು. ಬುಧವಾರ ಅವಭೃತ ತೀರ್ಥಸ್ನಾನದ ಬಳಿಕ ಕಳೆದ ಒಂದು ವಾರದಿಂದ ನಡೆಯುತ್ತಿರುವ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಪೊಲೀಸ್ ಬಂದೋಬಸ್ತ್

ಬನವಾಸಿಯ ಐತಿಹಾಸಿಕ ಶ್ರೀ ಉಮಾ ಮಧುಕೇಶ್ವರ ದೇವರ ವಾರ್ಷಿಕ ಮಹಾ ರಥೋತ್ಸವದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು. ಡಿವೈಎಸ್‌ಪಿ ಗೀತಾ ಪಾಟೀಲ್, ಸಿಪಿಐ ಶಶಿಕಾಂತ್ ವರ್ಮಾ ಅವರ ಮಾರ್ಗದರ್ಶನದಲ್ಲಿ ಬನವಾಸಿ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಮಾಂತೇಶ ಕುಂಬಾರ, ರವೀಂದ್ರ ಬಿರಾದಾರ ನೇತೃತ್ವದಲ್ಲಿ ಹಾಗೂ ಬೇರೆ ಬೇರೆ ಠಾಣೆಗಳಿಂದ ಆಗಮಿಸಿದ ಪೊಲೀಸ್ ಇಲಾಖೆಯ ಪಿಎಸ್‌ಐಗಳು, ಆರಕ್ಷಕ ಸಿಬ್ಬಂದಿ ಸುಗಮ ವಾಹನ ಸಂಚಾರ ಹಾಗೂ ಶಾಂತಿ ಸುವ್ಯವಸ್ಥೆ ಕೈಗೊಂಡಿದ್ದರು.

ಅಧಿಕಾರಿಗಳ ಬೇಜವಾಬ್ದಾರಿ

ಬನವಾಸಿಯ ಶ್ರೀ ಉಮಾ ಮಧುಕೇಶ್ವರ ದೇವರ ವಾರ್ಷಿಕ ಮಹಾ ರಥೋತ್ಸವಕ್ಕೆ ರಾಜ್ಯದ ಬೇರೆ ಬೇರೆ ಕಡೆಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಆದರೆ ಮಹಾರಥೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ಸರಿಯಾದ ಸಾರಿಗೆ ವ್ಯವಸ್ಥೆಯನ್ನು ಸಾರಿಗೆ ಇಲಾಖೆಯವರು ಕಲ್ಪಿಸದೇ ಜಾತ್ರೆ ಬಂದ ಭಕ್ತರು ಪರದಾಡುವ ಸ್ಥಿತಿ ಎದುರಾಯಿತು. ಬೇರೆ ಕಡೆಗಳಿಂದ ಜಾತ್ರೆಗೆ ಬಂದ ಭಕ್ತರು ರಾತ್ರಿ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾದು ಕಾದು ಹೈರಾಣದರು.

ಇಂದಿನಿಂದ ಒಕ್ಕಲಿಗ ಸಮಾಜದ ಸುಗ್ಗಿ ಹಬ್ಬ

ಗೋಕರ್ಣ: ಇಲ್ಲಿನ ಹುಳಸೇಕೇರಿ ಹಾಲಕ್ಕಿ ಒಕ್ಕಲಿಗ ಸಮಾಜದವರ ಸುಗ್ಗಿ ಹಬ್ಬ ಸೋಮವಾರ ಪ್ರಾರಂಭವಾಯಿತು. ಸಂಜೆ ಅಶೋಕೆಯ ಅರಸು ಗೌಡರ ಮನೆಯ ಆವಾರದಲ್ಲಿರುವ ಕರಿದೇವರಿಗೆ ಪೂಜೆ ಸಲ್ಲಿಸಿ ತುರಾಯಿ ಕಟ್ಟಿದ ಸುಗ್ಗಿ ತಂಡ ಹಾಗೂ ತಾರಮಕ್ಕಿ ಕೇತಕಿ ವಿನಾಯಕ ಮಂದಿರದ ಬಳಿ ಕರಿದೇವರಲ್ಲಿ ಪೂಜೆ ಸಲ್ಲಿಸಿದ ಮೊತ್ತೊಂದು ಸುಗ್ಗಿ ತಂಡ ಗಂಜೀಗದ್ದೆಯ ಜೀವೋತ್ತಮ ಮಠದ ಬಳಿ ಜೊತೆಯಾಗಿ ಮಹಾಬಲೇಶ್ವರ ಮಂದಿರಕ್ಕೆ ಆಗಮಿಸಿತು.

ಬಳಿಕ ಸಾರ್ವಭೌಮ ಮಹಾಬಲೇಶ್ವರನಿಗೆ ಪ್ರಥಮ ಸುಗ್ಗಿ ಕುಣಿತ ಸೇವೆ ಸಮರ್ಪಿಸಿ, ಉತ್ಸವಕ್ಕೆ ಆಮಂತ್ರಣ ನೀಡಲಾಯಿತು.

ದೇವರ ಉತ್ಸವದ ಜೊತೆ ಸುಗ್ಗಿ ತಂಡ ಕೋಟಿತೀರ್ಥ ಕಟ್ಟೆಯ ಪಟ್ಟೆ ವಿನಾಯಕ ಮಂದಿರಕ್ಕೆ ತೆರಳಿ ಅಲ್ಲಿ ಪೂಜೆ ಸ್ವೀಕರಿಸಿದ ಬಳಿಕ ಹಿಲಾಲು ದೀವಟಿಕೆಯೊಂದಿಗೆ ಸುಗ್ಗಿ ತಂಡ ತೋಟಗೇರಿಗೆ ತೆರಳಿ ಅಲ್ಲಿ ನಿಗದಿ ಪಡಿಸಿದ ಸ್ಥಳದಲ್ಲಿನ ಅಡಿಕೆ ಮರಕ್ಕೆ ಪೂಜೆ ಸಲ್ಲಿಸಿ ಆ ಮರವನ್ನ ಕಡಿದು ತಂದು, ದೇವರ ಉತ್ಸವದ ಜೊತೆ ಮಹಾಗಣಪತಿ ಮಂದಿರಕ್ಕೆ ಆಗಮಿಸಿತು.

ದೇವರು ಮಹಾಗಣಪತಿ ಮಂದಿರದಲ್ಲಿ ಚಿತ್ರೈಸಿ ರಾಜೋಪಚಾರವ ಪೂಜೆ ಸ್ವೀಕರಿಸಿದ ಬಳಿಕ ದೇವರಿಗೆ ಬೆಳಗಿದ ಆರತಿಯಿಂದ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಿದ ಅಡಿಕೆ ಮರಕ್ಕೆ ಅಗ್ನಿ ಸ್ಪರ್ಶಿಸುವ ಮೂಲಕ ಕಾಮದನ ನೆರವೇರಿತು.

ಅರಸು ಗೌಡರು ದೇವರ ಪ್ರಸಾದ ಸ್ವೀಕರಿಸಿದ ಬಳಿಕ ಸುಗ್ಗಿ ತಂಡ ತಾರಮಕ್ಕಿಗೆ ತೆರಳಿತು. ಇದರೊಂದಿಗೆ ಬಹು ವಿಶೇಷ ವಿಶಿಷ್ಟ ಸುಗ್ಗಿ ಹಬ್ಬಕ್ಕೆ ಚಾಲನೆ ದೊರೆಯಿತು. ಮಂದಿರದ ಮೇಲುಸ್ತುವಾರಿ ಸಮಿತಿ ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿ, ಹಾಲಕ್ಕಿ ಸಮಾಜದವರು ಮತ್ತಿತರರಿದ್ದರು.



ಆಕರ್ಷಿಸಲಿದೆ ಸುಗ್ಗಿ ಕುಣಿತ

ಇನ್ನೂ ನಾಲ್ಕು ದಿನ ಇಲ್ಲಿನ ವಿವಿದೆಡೆ ತೆರಳು ಆಕರ್ಷಕ ಸುಗ್ಗಿ ಕುಣಿತ ಪ್ರದರ್ಶನ ಸ್ಥಳೀಯರಿಗೆ ಹಾಗೂ ಪ್ರವಾಸಿಗರಿಗೆ ಮನರಂಜನೆಯ ರಸದೌತಣ ನೀಡಲಿದ್ದು, ಎಲ್ಲೆಡೆ ಹೋ ಚೋ, ಸದ್ದು ಮೊಳಗಲಿದೆ. ಮೂರನೆ ದಿನ ನಡೆಯು ಹಗಣ ಈ ವರ್ಷದ ಆಗು ಹೋಗುಗಳ ಬಿತ್ತರಿಸುವ ಅಣಕು ಪ್ರದರ್ಶನಕ್ಕೆ ಸ್ಥಳೀಯರು ಕಾತರರಾಗಿದ್ದಾರೆ.

ಕಿರುಸುದ್ದಿ

ನಾಳೆ ಪೊಲೀಸ್ ಧ್ವಜ ದಿನಾಚರಣೆ

ಹಾವೇರಿ: ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ಏ.2ರಂದು ಬೆಳಗ್ಗೆ 8ಗಂಟೆಗೆ ಕೆರಿಮತ್ತಿಹಳ್ಳಿ ಪೊಲೀಸ್ ಕವಾಯತು ಮೈದಾನದಲ್ಲಿ ಜರುಗಲಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕಿ ಯಶೋಧಾ ವಂಟಗೋಡಿ ಅವರು ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಾವೇರಿ ಉಪವಿಭಾಗ ಕಚೇರಿಯ ನಿವೃತ್ತ ಮಹಿಳಾ ಎ.ಎಸ್.ಐ. ಸುರೇಖಾ ರಾಯ್ಕರ್ ಭಾಗವಹಿಸಲಿದ್ದಾರೆ.

ಏ.10ರಂದು ತ್ರೈಮಾಸಿಕ ಕೆಡಿಪಿ ಸಭೆ

ಹಾವೇರಿ: ಏ.13ರಂದು ನಿಗಧಿಯಾಗಿದ್ದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕುರಿತು ತ್ರೈಮಾಸಿಕ ಕೆಡಿಪಿ ಸಭೆ, ಏಪ್ರಿಲ್ 10 ರಂದು ಬೆಳಗ್ಗೆ 10ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಇಲಾಖೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕೆಡಿಪಿ ತ್ರೈಮಾಸಿಕ ಸಭೆ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಇಂದು 83ನೇ ಹುತಾತ್ಮ ದಿನಾಚರಣೆ

ಹಾವೇರಿ: ಹುತಾತ್ಮ ಮೈಲಾರ ಮಹದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಮೋಟೆಬೆನ್ನೂರು ಬಳ್ಳಾರಿ ರುದ್ರಪ್ಪ ಕಾಲೇಜು ಹಾಗೂ ಟಿ.ಎಂ.ಎ.ಇ.ಎಸ್. ಮಹಾವಿದ್ಯಾಲಯದ ಸಹಯೋಗದಲ್ಲಿ ಹುತಾತ್ಮ ಮೈಲಾರ ಮಹದೇವಪ್ಪ, ವೀರಯ್ಯ ಹಿರೇಮಠ ಹಾಗೂ ತಿರಕಪ್ಪ ಮಡಿವಾಳರ ಅವರುಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ 1943 ಏ.1ರಂದು ಜೀವ ಬಲಿದಾನ ಮಾಡಿದ ಸ್ಮರಣೆಯ 83ನೇ ಹುತಾತ್ಮ ದಿನಾಚರಣೆ ಕಾರ್ಯಕ್ರಮ ಏ.1ರಂದು ಬೆಳಗ್ಗೆ 11ಕ್ಕೆ ಹುತಾತ್ಮರ ವೀರಸೌಧದಲ್ಲಿ ಜರುಗಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಅಜೀಮಪೀರ್ ಖಾದ್ರಿ, ಗ್ಯಾರಂಟಿ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್. ಎನ್. ಗಾಜಿಗೌಡ್ರ, ಜಿಲ್ಲಾಮಟ್ಟದ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಭಾಗವಹಿಸಲಿದ್ದಾರೆ.

ನಾಳೆಯಿಂದ ಕಬಡ್ಡಿ ಪಂದ್ಯ

ಬ್ಯಾಡಗಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏ.1 ಮತ್ತು 2ರಂದು ಎರಡು ದಿನಗಳ ಕಾಲ ಅಂತರ್ ಕಾಲೇಜು ಮಟ್ಟದ ಪುರುಷರ ಮತ್ತು ಮಹಿಳೆಯರ ಕಬಡ್ಡಿ ಪಂದ್ಯಾವಳಿ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಮಲ್ಲಿಕಾರ್ಜುನ್ ಕಡ್ಡಿಮುಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಗ್ರಂಥ ಬಿಡುಗಡೆ

ಗದಗ : ನಗರದ ಜಗದ್ಗುರು ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಪ್ರಾರಂಭೋತ್ಸವ ಕಾರ್ಯಕ್ರಮವು ಏ.1 ರಂದು ಸಂಜೆ 6.30ಕ್ಕೆ ನಗರದ ಶ್ರೀಮಠದಲ್ಲಿ ಜರುಗಲಿದೆ. ಕಾರ್ಯಕ್ರಮ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸುವರು. ಸಾನ್ನಿಧ್ಯ ಶಿವಮೊಗ್ಗ ಆನಂದಪುರ ಮುರುಘಾಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ವಹಿಸುವರು. ಸಾನ್ನಿಧ್ಯ ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಮುಂಡರಗಿಯ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಆಡಿ-ಹಂದಿಗುಂದದ ಶಿವಾನಂದ ಸ್ವಾಮೀಜಿ, ಶಿರೋಳ-ಭೈರನಟ್ಟಿಯ ಶಾಂತಲಿಂಗ ಸ್ವಾಮೀಜಿ, ರುದ್ನೂರಿನ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ, ಸಿರಸಂಗಿಯ ಬಸವಮಹಾಂತ ಸ್ವಾಮೀಜಿ ವಹಿಸುವರು. ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಹಣತೆ ಹಚ್ಚಿದವರು, ತಾರಕಗುರೂಪದೇಶ ಗ್ರಂಥಗಳು ಲೋಕಾರ್ಪಣೆಗೊಳ್ಳುವವು, ಎಂದು ಜಾತ್ರಾ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ತಿಳಿಸಿದ್ದಾರೆ.



ರಾಣೇಬೆನ್ನೂರ: ನಗರದ ಎಪಿಎಂಸಿ ಸಭಾಭವನದಲ್ಲಿ ಪೊಲೀಸ್ ಇಲಾಖೆ ವತಿಯಿಂದ ಏರ್ಪಡಿಸಿದ್ದ ಮನೆ ಮನೆಗೂ ಸಿಸಿ ಕ್ಯಾಮರಾ ಅಭಿಯಾನದಲ್ಲಿ ಮಾದಕ ವಸ್ತುಗಳ ವಿರುದ್ಧ ಅರಿವು ಕುರಿತು ಬಿತ್ತಿಪತ್ರ, ಬಿಡುಗಡೆಗೊಳಿಸಲಾಯಿತು.

ಗ್ರಾಮಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಹೊಸದಾಗಿ ಗ್ರೇಡ್-1 ಗ್ರಾಮ ಪಂಚಾಯತಿಯಾಗಿ ಮಾರ್ಪಟ್ಟ ಹಲವು ಪಂಚಾಯತಿಗಳಲ್ಲಿ ಹೆಚ್ಚುವರಿಯಾಗಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹಾನಗಲ್ ತಾಲೂಕು ನರೇಗಲ್, ತಿಳವಳ್ಳಿ, ಅರಳೇಶ್ವರ, ಆಡೂರ, ಹಾವೇರಿ ತಾಲೂಕು ನೆಲೋಗಲ್, ಹನಸಗಿ, ಹಾಲಗಿ, ಯಲಗಚ್ಚ, ರಾಣೇಬೆನ್ನೂರ ತಾಲೂಕು ಕಜ್ಜರಿ, ಅರೇಮಲ್ಲಾಪೂರ, ಗುಡ್ಡದ ಗುಡ್ಡಾಪೂರ, ಸೋಮಾಪೂರ ಹಾಗೂ ಹಿರೇಕೆರೂರು ತಾಲೂಕು ಮಡ್ಲೂರು ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ https//sevasindhuervices.karnataka.gov.in/dierctApply.do?serviceld+2631+2631ನಲ್ಲಿ ಏ.15ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ಒದಗಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಮೂಲಕ ಗ್ರಾಮೀಣ ಭಾಗದ ಜನರಿಗೆ ತಮ್ಮ ಸಮೀಪದಲ್ಲಿ ಸರ್ಕಾರದ ಹಲವು ಸೇವೆಗಳು ತಮ್ಮ ಮನೆಯ ಬಾಗಿಲಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.



ಗದಗ: ಇಲ್ಲಿನ ಇತಿಹಾಸ ಪ್ರಸಿದ್ಧ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಕಳಸಾರೋಹಣ ನೆರವೇರಿತು. ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಬಸವ ಪ್ರಭು ಸ್ವಾಮೀಜಿ, ಬಸವ ಕಿರಣ ಸ್ವಾಮೀಜಿ, ಜಾತ್ರಾ ಸಮಿತಿಯ ಅಧ್ಯಕ್ಷ ವಿನಾಯಕ ಮಾನ್ವಿ, ಉಪಾಧ್ಯಕ್ಷ ಶಿವಯ್ಯ ನಾಲ್ವತ್‌ವಾಡಮಠ, ಸುಭಾಷ ಚನ್ನಪ್ಪನವರ, ಸುಧಾ ಹುಚ್ಚಣ್ಣವರ, ಕೋಶಾಧ್ಯಕ್ಷ ವೀರುಪಾಕ್ಷಪ್ಪ ದಲಾಲಿ, ಸಹ ಕೋಶಾಧ್ಯಕ್ಷ ವೀರಣ್ಣ ಗಡಗಿ, ಕಾರ್ಯದರ್ಶಿ ಚೇತನ ಅಂಗಡಿ, ಸಹ ಕಾರ್ಯದರ್ಶಿ ಎಂ.ಜಿ.ಹೂಗಾರ, ಚಂದ್ರಶೇಖರ ರಾಜೂರ, ಎಸ್.ವಿ.ಪವಾಡಿಗೌಡ್ರ, ಸಂಘಟನಾ ಕಾರ್ಯದರ್ಶಿ ಉಮೇಶಗೌಡ ಪಾಟೀಲ, ಯಲ್ಲೂಸಾ ಹಬೀಬ, ಎಂ.ಎಸ್. ಅಂಗಡಿ ಇದ್ದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿಕೆ

ಇಂದಿನಿಂದ ಜನಗಣತಿ ಆರಂಭ

ಹಾವೇರಿ: ಜಿಲ್ಲೆಯಲ್ಲಿ ಮೊದಲ ಹಂತದ ಜನಗಣತಿ ಏ.1ರಿಂದ ಮೇ15ರವರೆಗೆ ಜರುಗಲಿದೆ. ಸಾರ್ವಜನಿಕರು ನೀಡಿದ ಮಾಹಿತಿ ಗೌಪ್ಯವಾಗಿರುತ್ತದೆ ಹಾಗೂ ಯಾವುದೇ ಸೌಲಭ್ಯ ಕಡಿತವಾಗಲ್ಲ. ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ ನಿಖರ ಮಾಹಿತಿ ನೀಡಿ ಎಂದು ಡಿಸಿ ಹಾಗೂ ಜಿಲ್ಲಾ ಪ್ರಧಾನ ಜನಗಣತಿ ಅಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ 1872ರಿಂದ ಇದು 16ನೇ ಜನಗಣತಿ, ದೇಶದ ಮೊದಲ ಡಿಜಿಟಲ್ ರೂಪದ ಜನಗಣತಿ. ಸ್ವಾತಂತ್ರ್ಯ ನಂತರದ 8ನೇ ಜನಗಣತಿ ಇದಾಗಿದೆ ಎಂದು ತಿಳಿಸಿದರು.

ಡಿಜಿಟಲ್ ವಿಧಾನ: ಇದೇ ಮೊದಲ ಬಾರಿಗೆ ಮೊಬೈಲ್ ಆ್ಯಪ್ ಮತ್ತು ಡಿಜಿಟಲ್ ವಿಧಾನಗಳ ಮೂಲಕ ಸಮಗ್ರವಾಗಿ ಜನಗಣತಿ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಮೊದಲ ಹಂತವಾಗಿ ಮನೆಪಟ್ಟಿ ಮತ್ತು ಮನೆಗಣತಿ (HLO) ಏ.1 ರಿಂದ ಮೇ 15 ರವರೆಗೆ ನಡೆಯಲಿದೆ. ಎರಡನೇ ಹಂತ ಜನಸಂಖ್ಯೆ ಎಣಿಕೆ 2027 ಫೆ.1ರಿಂದ ಮಾರ್ಚ್ 1 ರವರೆಗೆ ನಡೆಯಲಿದೆ. ಈ ಎರಡು ಹಂತಗಳನ್ನು ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿದ CMMS (Census Monitoring and Management System) ತಂತ್ರಾಂಶದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ ಹಾಗೂ ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆಗಣತಿಯ ಸ್ವಯಂಗಣತಿ (Self-Enumeration) ಯನ್ನು https://se.census.gov.in ಲಿಂಕ್ ಮೂಲಕ ಏ.1ರಿಂದ 15ರವರೆಗೆ ಅಂದರೆ 15ದಿನ ನಡೆಸಲಾಗುತ್ತಿದೆ ಎಂದು ತಿಳಿಸಿದರು.



ಸ್ವಯಂ ಗಣತಿ ವಿಧಾನ: ಜನಗಣತಿ 2027 ಸ್ವಯಂಗಣತಿ (Self Enumeration) ಕಾರ್ಯ ವಿಧಾನ ಏಪ್ರಿಲ್ 1ರಿಂದ ಏಪ್ರಿಲ್ 15ರವರೆಗೆ ನಿಮ್ಮ ಜನಗಣತಿ ವಿವರಗಳನ್ನು ಆನ್‌ಲೈನ್‌ನಲ್ಲಿ ವೇಗವಾಗಿ ಮತ್ತು ಸುರಕ್ಷಿತವಾಗಿ ಭರ್ತಿ ಮಾಡಿ. https://se.census.gov.in ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಮಾಡಿ, ನಿಮ್ಮ ಸ್ಥಳವನ್ನು ಆಯ್ಕೆಮಾಡಿ, ನಕ್ಷೆಯಲ್ಲಿ ನಿಮ್ಮ ಮನೆಯನ್ನು ಗುರುತಿಸಿ, ಮನೆಯ/ಕುಟುಂಬದ ವಿವರಗಳನ್ನು ಭರ್ತಿಮಾಡಿ ಸಲ್ಲಿಸಿ ಮತ್ತು ನಿಮ್ಮ SE Reference ID ಪಡೆಯಿರಿ. ಎಲ್ಲ ಮಾಹಿತಿ ದಾಖಲಿಸಲು 10ರಿಂದ 15ನಿಮಿಷಗಳು ಆಗಬಹುದು. ನಿಮ್ಮ SE ID ಅನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು, ಜನಗಣತಿ ಅಧಿಕಾರಿಗಳು (Enumerator) ಮನೆಗೆ ಬಂದಾಗ ಅದನ್ನು ಹಂಚಿಕೊಳ್ಳಬೇಕು ಎಂದರು.

ಕ್ಷೇತ್ರ ಪರಿಶೀಲನೆ: ಏ.16ರಿಂದ ಮೇ15ರವರೆಗೆ ಗಣತಿದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ. ಜಿಲ್ಲೆಯಲ್ಲಿ ಒಟ್ಟು 8 ತಾಲೂಕುಗಳ ಪೈಕಿ ಗ್ರಾಮೀಣ ವಿಭಾಗಕ್ಕೆ ಎಂಟು ಹಾಗೂ ನಗರ ಸ್ಥಳೀಯ ಪ್ರದೇಶದಲ್ಲಿ 10 ಸೇರಿ ಒಟ್ಟು 18 ಚಾರ್ಜ ಅಧಿಕಾರಿಗಳನ್ನು, ಅವರಿಗೆ 18ತಾಂತ್ರಿಕ ಸಹಾಯಕರನ್ನು ನಿಯೋಜಿಸಿ, ಈ ಎಲ್ಲರಿಗೂ ಈಗಾಗಲೇ ತರಬೇತಿ ನೀಡಲಾಗಿದೆ. ಚಾರ್ಜ್ ಅಧಿಕಾರಿಗಳು ತಮಗೆ ಸಂಬಂಧಿಸಿದ ಗ್ರಾಮ, ಶಹರಗಳಲ್ಲಿ ಅಂದಾಜು 650ರಿಂದ 800 ಜನಸಂಖ್ಯೆಗೆ ಅನುಗುಣವಾಗಿ ಅಥವಾ 150ರಿಂದ 180 ಜನಗಣತಿ ಮನೆಗಳು ಬರುವಂತೆ ಒಂದು ಬ್ಲಾಕ್‌ನ್ನು ರಚಿಸಿ ಗುರುತಿಸಿದ್ದು, 800ಕ್ಕಿಂತ ಕಡಿಮೆ ಇರುವ ಗ್ರಾಮವಿದ್ದರೂ ಕೂಡ ಅದನ್ನು ಒಂದು ಬ್ಲಾಕ್ ಎಂದು ಪರಿಗಣಿಸಲಾಗುವುದು ಎಂದರು.

ಜಿಪಂ ಸಿಇಒ ರುಚಿ ಬಿಂದಲ್, ಎಡಿಸಿ ಡಾ.ನಾಗರಾಜ, ಎಎಸ್ಪಿ ಲಕ್ಷ್ಮಣ ಶಿರಕೋಳ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

2935 ಬ್ಲಾಕ್‌ಗಳು

ಜಿಲ್ಲೆಯ ಎಂಟು ತಾಲೂಕುಗಳ ಗ್ರಾಮೀಣ 2,193 ಹಾಗೂ ನಗರದ ಪ್ರದೇಶದ 732 ಸೇರಿ 2,935 ಬ್ಲಾಕ್‌ಗಳನ್ನು ರಚಿಸಲಾಗಿದೆ. ಗ್ರಾಮೀಣ 2,413 ಹಾಗೂ ನಗರದ ಪ್ರದೇಶದ 806 ಸೇರಿ 3,218 ಗಣತಿದಾರರು ಹಾಗೂ ಗ್ರಾಮೀಣ 425 ಹಾಗೂ ನಗರದ ಪ್ರದೇಶದ 146 ಸೇರಿ 571 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಈ ಮೇಲ್ವಿಚಾರಕರಿಗೆ ಹಾಗೂ ಗಣತಿದಾರರಿಗೆ ಏ.3ರಿಂದ ಏ.5ರವರೆಗೆ ಮೊದಲ ಹಂತ ಹಾಗೂ ಏ.6ರಿಂದ ಏ.8ರವರೆಗೆ 2ನೇ ಹಂತದ ತರಬೇತಿಯನ್ನು ಆಯಾ ತಾಲೂಕಿನಲ್ಲಿ ನಡೆಸಲಾಗುತ್ತದೆ ಎಂದರು.

ಅಂಬಿಗರ ಚೌಡಯ್ಯರ ತತ್ವಾದರ್ಶ ಪಾಲಿಸಿ

ರಾಣೇಬೆನ್ನೂರ: 12ನೇ ಶತಮಾನದ ಬಸವಣ್ಣನವರ ಸಮಕಾಲಿನವರಾದ ನಿಜ ಶರಣ ಅಂಬಿಗರ ಚೌಡಯ್ಯನವರು ತಮ್ಮ ವಚನಗಳ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದಿದವರು. ಅಂದಿನ ಎಲ್ಲ ವಚನಕಾರರು ಒಂದಿಲ್ಲೊಂದು ದೈವಕ್ಕೆ ಋಣಿಯಾಗಿದ್ದರು ಆದರೆ ಚೌಡಯ್ಯನವರು ಯಾರಿಗೂ ಋಣಿಯಾಗದೆ ವಚನಗಳಿಗೆ ತಮ್ಮ ನಾಮವನ್ನೇ ನಿಜ ಶರಣ ಅಂಬಿಗರ ಚೌಡಯ್ಯ ಎಂಬ ಅಂಕಿತವನ್ನು ಇಟ್ಟುಕೊಂಡವರು ಇದು ಅವರ ಗಾಂಭೀರವನ್ನು ತೋರಿಸಿದೆ ಎಂದು ಮಾಜಿ ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಮಂಗಳವಾರ ಇಲ್ಲಿನ ಎರೆಕುಪ್ಪಿ ರಸ್ತೆಯ ನೀಲಕಂಠೇಶ್ವರ ದೇವಸ್ಥಾನದ ಕಾಕಿ ಜನಸೇವಾ ಸಂಸ್ಥೆಯ ಗಣೇಶೋತ್ಸವ ಅರಮನೆಯಲಿ ತಾಲೂಕ ಗಂಗಾಮತಸ್ಥರ ಸಂಘದ ವತಿಯಿಂದ ನಿಜ ಶರಣ ಅಂಬಿಗರ ಚೌಡಯ್ಯನವರ 906 ನೇ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದರು.

ಸರ್ವರೂ ಅವರ ಆದರ್ಶವನ್ನು ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದಾಗ ಮಾತ್ರ ಜಯಂತ್ಯೋತ್ಸವಕ್ಕೆ ಅರ್ಥ ಬರಲಿದೆ. ಜೊತೆಗೆ ಸಮಾಜ ಆರ್ಥಿಕ, ಸಮಾಜಿಕ ರಾಜಕೀಯವಾಗಿ ಬೆಳೆಯಲು ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ರಾಜಕೀಯ ಸ್ಥಾನ ಮಾನ ಸಿಗಬೇಕಾದರೆ ಸಮಾಜ ಬಾಂಧವರು ಭಿನ್ನಾಭಿಪ್ರಾಯ ಬಿಟ್ಟು ಸಂಘಟಿತರಾಗಬೇಕು ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ನ್ಯಾಯವಾದಿ ಎಂ.ಬಿ. ಚೆನ್ನಪ್ಪನವರ ಮಾತನಾಡಿದರು. ಡಾ. ಕಾಂತೇಶ ಅಂಬಿಗೇರ ಉಪನ್ಯಾಸ ನೀಡಿದರು. ಸಾನಿಧ್ಯ ವಹಿಸಿದ್ದ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಪೀಠಾಧ್ಯಕ್ಷ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಶ್ರೀಗಳು ಆಶೀರ್ವಚನ ನೀಡಿದರು.

ತಾಲೂಕ ಗಂಗಾಮತಸ್ಥರ ಸಂಘ ಅಧ್ಯಕ್ಷ ರಾಜು ಜಡಮಲಿ ಅಧ್ಯಕ್ಷತೆ ವಹಿಸಿದ್ದರು. ಪುಟ್ಟಪ್ಪ ಮರಿಯಮ್ಮನವರ, ರಮೇಶ ಬಿಸಲಳ್ಳಿ, ಫಕ್ಕೀರಪ್ಪ ತುಮ್ಮಿನಕಟ್ಟಿ, ಆಂಜನೇಯ ಬಾಳಿಕಾಯಿ, ಮಾಲತೇಶ ಬಣಗಾರ, ಹೊನ್ನಪ್ಪ ಐರಣಿ, ಕಾಳಪ್ಪ ಅಂಬಿಗೇರ, ಹನುಮಂತಪ್ಪ ಸುಣಗಾರ, ರವಿ ಸುಣಗಾರ, ಮಾರುತಿ ಬಾಳಿಕಾಯಿ ಸೇರಿದಂತೆ ಮತ್ತಿತರರು ಇದ್ದರು.

ಇದಕ್ಕೂ ಮುನ್ನ ಬೆಳಗ್ಗೆ 10 ಗಂಟೆಗೆ ಇಲ್ಲಿನ ಸುಣಗಾರ ಓಣಿ ಗಂಗಾ ಪರಮೇಶ್ವರಿ ದೇವಸ್ಥಾನದಿಂದ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರ ಮೆರವಣಿಗೆಯು ಸಕಲ ಮಂಗಲ ವಾದ್ಯ ಮತ್ತು ಕುಂಭಾರತಿಯೊಂದಿಗೆ ಗೌಳಿ ಗಲ್ಲಿ, ದೊಡ್ಡಪೇಟೆ, ದುರ್ಗಾ ವೃತ್ತ, ಕುರಬಗೇರಿ ಕ್ರಾಸ್, ಪಿಬಿ ರಸ್ತೆ ಮೂಲಕ ಸಂಚರಿಸಿ ಕಾಕಿ ಜನಸೇವಾ ಸಂಸ್ಥೆಯ ಗಣೇಶೋತ್ಸವ ಅರಮನೆಯ ಸಭಾ ಕಾರ್ಯಕ್ರಮಕ್ಕೆ ಬಂದು ತಲುಪಿತು.



ಅಹಿಂಸೆ ತತ್ವ ಬೋಧಿಸಿದ ಭಗವಾನ್ ಮಹಾವೀರ

ಬ್ಯಾಡಗಿ: ತ್ಯಾಗ ಎಂದರೆ ಏನೆಂದು ತೋರಿಸಿದ ಭಗವಾನ್ ಮಹಾವೀರರು ಅಹಿಂಸೆ ಮತ್ತು ಸತ್ಯದ ಮಾರ್ಗವನ್ನು ಜಗತ್ತಿಗೆ ಸಾರಿದ್ದ ಮಹಾನ್ ಜ್ಞಾನಿ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕು ಜೈನ ಸಮಾಜದ ವತಿಯಿಂದ ಕಳಗೊಂಡ ಗ್ರಾಮದಲ್ಲಿ ಮಹಾವೀರ ತೀರ್ಥಂಕರರ ಜಯಂತಿಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಾರಾಜರಾಗಿದ್ದ ವ್ಯಕ್ತಿ, ತ್ಯಾಗಮಯಿಯಾಗಿ ಜೀವನದ ಪರಮೋಚ್ಚ ಮೌಲ್ಯಗಳನ್ನು ಸಮಾಜಕ್ಕೆ ನೀಡಿದರು. ತಮ್ಮ 30ನೇ ವಯಸ್ಸಿನಲ್ಲಿ ಸಂಸಾರ ಸುಖ ತ್ಯಜಿಸಿ ಸನ್ಯಾಸಿಯಾದ ಅವರು 12 ವರ್ಷ ಕಠಿಣ ತಪಸ್ಸು ಮಾಡಿದರು. ನಂತರ ಅವರಿಗೆ ಪರಿಪೂರ್ಣ ಜ್ಞಾನ ಪ್ರಾಪ್ತಿಯಾಗಿತ್ತು. ಇಂದ್ರಿಯಗಳನ್ನು ಗೆದ್ದಿದ್ದರಿಂದ ಅವರನ್ನು ಜಿನ ಮತ್ತು ಮಹಾವೀರ ಎಂದು ಕರೆಯಲಾಗುತ್ತದೆ ಎಂದರು.

ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ ಮಹಾವೀರರು ಆಸ್ತಿ ಮಾಡುವುದಕ್ಕಿಂತ ನಮ್ಮ ಮಕ್ಕಳನ್ನೇ ಸಮಾಜದ ಆಸ್ತಿ ಮಾಡುವಂತೆ ತಿಳಿಸಿ ಹೋದ ಇವರೇ ಸಮಾಜಕ್ಕೆ ಒಂದು ಸಂದೇಶವಾಗಿದ್ದಾರೆ. ಜೈನ ಸಮಾಜಕ್ಕೆ ಕೇಳಿದ್ದನ್ನು ಕೊಡುವಂತಹ ಶಕ್ತಿ ಇದ್ದು, ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದೆ ಎಂದರು.

ಮಹಾವೀರ ತೀರ್ಥಂಕರರ ಭಾವಚಿತ್ರವನ್ನು ಜೈನಮಂದಿರದಿಂದ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸಮಾಜದ ಎಲ್ಲ ಮಹಿಳೆಯರು ಮತ್ತು ಮಕ್ಕಳು ಪಾಲ್ಗೊಂಡಿದ್ದರು.

ಗಣ್ಯವರ್ತಕರಾದ ಆರ್ ಜಿ ಪಾಟೀಲ್, ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ತಾಲೂಕು ಗ್ಯಾರಂಟಿ ಅಧ್ಯಕ್ಷ ಶಂಭನಗೌಡ ಪಾಟೀಲ, ಚನ್ನಬಸಪ್ಪ ಹುಲ್ಲತ್ತಿ, ಜೈನ ಸಮುದಾಯದ ತಾಲೂಕು ಅಧ್ಯಕ್ಷ ರಾಮಣ್ಣ ಮಾಸಣಗಿ, ಜಿಲ್ಲಾ ಉಪಾಧ್ಯಕ್ಷ ಶಿವ ರಾಯಪ್ಪ ಅಪ್ಪಣ್ಣನವರ್, ಹೈಕೋರ್ಟ್ ನ್ಯಾಯವಾದಿ ನಾಗರಾಜ್ ಅಪ್ಪಣ್ಣನವರ್, ಶಾಂತಕುಮಾರ ಕಡೂರ, ಶ್ರೇಣಿಕರಾಜ ಯಳವತ್ತಿ, ಜಯಪ್ಪ ಕಡೂರ, ಅಣ್ಣಪ್ಪ ಜೈನರ, ಮಹೇಶ ಜೈನರ, ಗುಣಪಾಲ ತವನಪ್ಪನವರ, ಸಂಜೀವ ದುಂಡಶಿ, ಮಹಾವೀರ ಕಾಡಣ್ಣನವರ, ಬಾಹುಬಲಿ ಜೈನರ, ಜಯಪ್ಪ ಮಾಸಣಗಿ, ಮಹಾವೀರಪ್ಪ ಮಾಸಣಗಿ, ರಮೇಶ ಜಿವಣ್ಣನವರ, ರಮೇಶ ಬಿದರಗೇರಿ ಹಾಗೂ ತಾಲೂಕಿನ ಎಲ್ಲಾ ಸಮಾಜದವರು ಉಪಸ್ಥಿತರಿದ್ದರು.



ಅಲ್ಲಮಪ್ರಭು, ಜೇಡರ ದಾಸಿಮಯ್ಯನವರ ಜಯಂತಿ ಆಚರಣೆ

ಹಾವೇರಿ: ಶರೀರ ಅಳಿದರೂ, ಶತಮಾನ ಕಳೆದರೂ ಶರಣರ ಜೀವನ ಮತ್ತು ಅವರ ಸಂದೇಶ ಸದಾ ಶಾಶ್ವತ. ಅಲ್ಲಮಪ್ರಭು ಪ್ರಸಿದ್ಧ ಕವಿಗಳಲ್ಲಿ ಒಬ್ಬರು, ಇಡೀ ಜಗತ್ತನ್ನು ಸುತ್ತಿ ಬಯಲು ಕಲ್ಪನೆಯನ್ನು ಕಟ್ಟಿಕೊಟ್ಟ ಅಲ್ಲಮಪ್ರಭುಗಳು ಸದಾಸ್ಮರಣೀಯರು ಎಂದು ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ ಹೇಳಿದರು.

ನಗರದ ಕಾಗಿನೆಲೆ ರಸ್ತೆಯ ಮುರುಘಾ ಮಠದಲ್ಲಿ ಬಸವಕೇಂದ್ರ ಶ್ರೀಹೊಸಮಠ, ಶೂನ್ಯ ಪ್ರತಿಷ್ಠಾನಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಅಲ್ಲಮಪ್ರಭು ಹಾಗೂ ಜೇಡರ ದಾಸಿಮಯ್ಯನವರ ಜಯಂತಿಯನ್ನು ಅಲ್ಲಮಪ್ರಭು ಹಾಗೂ ಜೇಡರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ಅದೇ ರೀತಿ ಶಿವನ ಮೇಲಿನ ಭಕ್ತಿ ಮತ್ತು ವೈರಾಗ್ಯ, ಅಚಲ ನಿಷ್ಠೆ ಮೂಲಕ ಗಮನ ಸೆಳೆಯುವ ವಚನ ಬರೆದ ದಾಸಿಮಯ್ಯ ಅನುಭವ ಮಂಟಪದಲ್ಲಿ ಯಜಮಾನಿಕೆ ಸ್ಥಾನದಲ್ಲಿದ್ದವರು. ಜೊತೆಗೆ ಕಾಯಕಕ್ಕೆ ಮಾನ್ಯತೆ ನೀಡಿದವರು. ಉಭಯ ಶರಣರ ವಚನಗಳು ಬದುಕಿನ ಮೌಲ್ಯವನ್ನು ತಿಳಿಸುತ್ತವೆ. ಕನ್ನಡ ಸಾಹಿತ್ಯದ ಶಿವಶರಣರ ಪರಂಪರೆಯಲ್ಲಿ ಕಾಯಕದ ಮೂಲಕ ಭಕ್ತಿ ಮತ್ತು ಮುಕ್ತಿಯ ಮಾರ್ಗ ತೋರಿಸಿದವರು ಎಂದರು.

ಮುಖಂಡ ಡಾ.ಬಸವರಾಜ ಕೇಲಗಾರ ಮಾತನಾಡಿ, ದೇವರ ದಾಸಿಮಯ್ಯನವರ ವಚನಗಳು ಜೀವನಕ್ಕೆ ಮಾರ್ಗದರ್ಶಕವಾಗಿದ್ದು, ಅವುಗಳನ್ನು ಅಳವಡಿಸಿ ಕೊಳ್ಳಬೇಕು ಎಂದರು. ಸಾಹಿತಿ ಹನುಮಂತಗೌಡ ಗೊಲ್ಲರ ಮಾತನಾಡಿದರು.

ಈ ವೇಳೆ ಬಸಯ್ಯ ಹಿರೇಮಠ, ಪರಸಪ್ಪ ಕರಿದ್ಯಾಮಣ್ಣನವರ, ಸತೀಶ ಕಲಾಲ, ಪರಶುರಾಮ ಹರ್ಲಾಪುರ ಇದ್ದರು. ನಿಂಗಪ್ಪ ಆರೇರ ನಿರೂಪಿಸಿ, ಸ್ವಾಗತಿಸಿದರು. ಗೂಳಪ್ಪ ಅರಳಿಕಟ್ಟಿ ವಂದಿಸಿದರು.

ಯೋಜನೆಯ ಸದುಪಯೋಗಪಡಿಸಿಕೊಳ್ಳಿ: ಮಲ್ಲಿಕಾರ್ಜುನ

ಬ್ಯಾಡಗಿ: ಕೃಷಿ ಸುಸ್ಥಿರವಾಗಲು ಕೃಷಿಭಾಗ್ಯ ಯೋಜನೆಯಡಿ ಕೃಷಿಹೊಂಡ ನಿರ್ಮಾಣ ಮುಖ್ಯವಾಗಿದ್ದು, ಅನ್ನದಾತರಿಗೆ ವರದಾನವಾಗಿದೆ. ಎಲ್ಲ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೃಷಿ ಇಲಾಖೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ. ಕೆ.ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಕಾಗಿನೆಲಿ ಹೋಬಳಿಯ ಚಿಕ್ಕಳ್ಳಿ ಗ್ರಾಮದ ಪ್ರಗತಿಪರ ಕೃಷಿಕ ಇಮುಸಾಬ ಸೋಡಂಬಿ ಅವರ ಹೊಲದಲ್ಲಿ ಶುಕ್ರವಾರ ಬ್ಯಾಡಗಿ ಕೃಷಿ ಇಲಾಖೆ ಆಯೋಜಿಸಿದ್ದ ಕೃಷಿಹೊಂಡ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮದು ಕೃಷಿ ಪ್ರಧಾನ ದೇಶ. ರೈತರು ತಮ್ಮ ಬೆಳೆಗಳಿಗಾಗಿ ಮಳೆಯನ್ನೇ ಅವಲಂಬಿಸಿದ್ದಾರೆ. ಕೃಷಿಹೊಂಡ ಯೋಜನೆಯು ಮಳೆಯ ನೀರಿನ ಸಂಗ್ರಹಣೆ ಮತ್ತು ಪುನರ್ವಿನಿಯೋಗಕ್ಕೆ ಆದ್ಯತೆ ನೀಡುತ್ತಿದ್ದು, ರೈತರಿಗೆ ಕೃಷಿಹೊಂಡ ನಿರ್ಮಾಣ, ಪಾಲಿಥೀನ್ ಹೊದಿಕೆ ಅಳವಡಿಕೆ, ಡೀಸೆಲ್ ಪಂಪ್‌ಸೆಟ್‌ಗಳಿಗೆ ಸಹಾಯಧನ, ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆ ಮತ್ತು ತಂತಿಬೇಲಿ ನಿರ್ಮಾಣ ಸೇರಿದಂತೆ ವಿವಿಧ ಸೌಲಭ್ಯ ಒದಗಿಸುತ್ತದೆ ಎಂದರು.



ಸಹಾಯಕ ಕೃಷಿ ನಿರ್ದೇಶಕ ಗಣೇಶ ಕಮ್ಮಾರ ಮಾತನಾಡಿ, ರೈತರು ನಿರ್ಮಿಸಿರುವ ಕೃಷಿ ಹೊಂಡಗಳಲ್ಲಿ ಸುರಕ್ಷತಾ ಕ್ರಮ ಅಳವಡಿಸಬೇಕು. ಅಲ್ಲದೇ ಕೃಷಿಹೊಂಡದ ಮುಂದೆ ಸೂಚನಾಫಲಕವನ್ನು ಕಡ್ಡಾಯವಾಗಿ ಹಾಕಬೇಕು. ಕೃಷಿ ಹೊಂಡಗಳಲ್ಲಿ ಸುರಕ್ಷತಾ ಕ್ರಮವಾಗಿ ಹಗ್ಗದೊಂದಿಗೆ ಟ್ಯೂಬ್‌ಗಳನ್ನು ನಾಲ್ಕು ಮೂಲೆಗಳಲ್ಲಿ ಅಳವಡಿಸುವಂತೆ ರೈತರಲ್ಲಿ ಮನವಿ ಮಾಡಿದರು.

ಕೃಷಿ ಅಧಿಕಾರಿ ನಾಗರಾಜ ಬನ್ನಿಹಟ್ಟಿ, ಮೃತ್ಯುಂಜಯ್ಯ ಕೋಳೂರ, ಪ್ರಗತಿಪರ ಕೃಷಿಕರಾದ ಮಲ್ಲಿಕಾರ್ಜುನ ಕಚವಿ, ರೈತ ಮುಖಂಡರಾದ ರುದ್ರಗೌಡ ಕಾಡನಗೌಡ್ರ, ಷಣ್ಮುಖಪ್ಪ ಮೂಳತಳ್ಳಿ, ಮಂಜುನಾಥ ಲಕ್ಕಮ್ಮನವರ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಡಾ. ಗಂಗಯ್ಯ ಕುಲಕರ್ಣಿ ಸೇರಿದಂತೆ ಚಿಕ್ಕಬಾಸುರ, ಬೀರನಕೊಪ್ಪ, ಮತ್ತೂರ, ಸಿದ್ದಾಪುರ, ದಾಸನಕೊಪ್ಪ, ಸೋಡಂಬಿ, ಹಿರಳ್ಳಿ, ನೆಲ್ಲಿಕೊಪ್ಪ ಗ್ರಾಮದ ರೈತರು ಇದ್ದರು.

ಮನೆಗೆ ಸಿಸಿ ಕ್ಯಾಮೆರಾ ಅಳವಡಿಸಿಕೊಳ್ಳಿ: ಎಸ್ಪಿ ವಂಟಗೋಡಿ

ರಾಣೇಬೆನ್ನೂರ: ಅಪರಾಧ ಪ್ರಕರಣಗಳಲ್ಲಿ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಇಂದಿನ ದಿನಮಾನದಲ್ಲಿ ನ್ಯಾಯಾಲಯ ಕೂಡ ಸಾಕ್ಷ್ಯಾಧಾರವಾಗಿ ಪರಿಗಣಿಸುತ್ತಿರುವ ಹಿನ್ನೆಲೆಯಲ್ಲಿ ಸಿಸಿ ಕ್ಯಾಮೆರಾ ಬಹಳ ಮಹತ್ವ ಪಡೆದುಕೊಂಡಿದೆ. ಆದ್ದರಿಂದ ರಾಣೆಬೆನ್ನೂರ ಸೇರಿ ಜಿಲ್ಲೆಯ ನಿವಾಸಿಗಳು ತಮ್ಮ ಮನೆಗಳಿಗೆ ಸಿಸಿ ಕ್ಯಾಮರಾ ಅಳವಡಿಸಿಕೊಳ್ಳುವ ಮೂಲಕ ಸುರಕ್ಷಿತ ಜಿಲ್ಲೆಗೆ ಕೈಜೋಡಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಮನವಿ ಮಾಡಿದರು.

ಪೊಲೀಸ್ ಇಲಾಖೆ ವತಿಯಿಂದ ನಗರದ ಎಪಿಎಂಸಿ ಸಭಾಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಮನೆ ಮನೆಗೆ ಸಿಸಿ ಕ್ಯಾಮೆರಾ ಅಭಿಯಾನ, ಮಾದಕ ವಸ್ತುಗಳ ವಿರುದ್ಧ ಅರಿವು ಕಾರ್ಯಕ್ರಮ, ವಿಧ್ವಂಸಕ ತಪಾಸಣಾ ಉಪಕರಣಗಳ ಹಾಗೂ ಪೊಲೀಸ್ ಶ್ವಾನಗಳ ಪ್ರದರ್ಶನ ಸಮಾರಂಭದಲ್ಲಿ ಅವರು ಮಾತನಾಡಿದರು.

ಒಂದು ಸಿಸಿ ಕ್ಯಾಮೆರಾ ದಿನದ 24 ಗಂಟೆಗಳ ಕಾಲ ಕೆಲಸ ಮಾಡುತ್ತದೆ. ಮನೆ ಕಳ್ಳತನ, ಬೈಕ್ ಕಳ್ಳತನ ಸೇರಿ ಯಾವುದೇ ರೀತಿಯ ಘಟನೆಗಳು ನಡೆದರೂ ಆರೋಪಿಗಳ ಪತ್ತೆ ಸುಲಭವಾಗಲಿದೆ. ಅಲ್ಲದೆ ಸಿಸಿ ಕ್ಯಾಮೆರಾ ಅಳವಡಿಕೆಯಿಂದ ಕಳ್ಳರು ನಿಮ್ಮ ಮನೆ ಮುಂದೆ ಸುಳಿಯಲು ಹಿಂಜರಿಯುತ್ತಾರೆ. ರಾಜ್ಯದಲ್ಲಿ ಒಂದೂವರೆ ಲಕ್ಷ ಜನರಿಗೆ 116 ಜನ ಪೊಲೀಸರು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಎಲ್ಲವೂ ಪೊಲೀಸರಿಂದಲೇ ತಡೆಯಲು ಕಷ್ಟಸಾಧ್ಯ. ಜನರ ಸಹಭಾಗಿತ್ವದ ಮೂಲಕ ಅಪರಾಧ ಪ್ರಕರಣ ತಡೆಯಬೇಕಾದರೆ ಸಿಸಿ ಕ್ಯಾಮರಾ ಅಳವಡಿಕೆ ಬಹಳ ಅವಶ್ಯವಾಗಿದೆ. ಆದ್ದರಿಂದ ಎಲ್ಲರೂ ಮನೆ ಮನೆಗೆ ಸಿಸಿ ಕ್ಯಾಮೆರಾ ಅಳವಡಿಸಿಕೊಳ್ಳಬೇಕು ಎಂದರು.



ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿ, ರಾಣೆಬೆನ್ನೂರ ಸುಭದ್ರ ಹಾಗೂ ವ್ಯಸನಮುಕ್ತ ಆಗಿರಬೇಕು. ಕಳೆದ 10 ವರ್ಷದಿಂದ ರಾಣೆಬೆನ್ನೂರ ನಗರದಲ್ಲಿ ಡ್ರಗ್ಸ್ ಮಾರಾಟ ಮತ್ತು ಸೇವನೆ ನಡೆದಿದೆ. ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸೇರಿ ಎಲ್ಲ ಪಕ್ಷದವರ ಮಕ್ಕಳು ಇದಕ್ಕೆ ಬಲಿಯಾಗಬಹುದು. ಆದ್ದರಿಂದ ಇದರ ನಿಯಂತ್ರಣದ ವಿಚಾರದಲ್ಲಿ ಯಾರೂ ರಾಜಕಾರಣ ಮಾಡಬಾರದು. ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರ ಸಹಭಾಗಿತ್ವ ಇದ್ದರೆ ಖಂಡಿತವಾಗಿ ಡ್ರಗ್ಸ್ ಮಾರಾಟ ಬೇರು ಮಟ್ಟದಿಂದ ಕಿತ್ತುಹಾಕಬಹುದು ಎಂದರು.

ಡಿವೈಎಸ್ಪಿ ಲೋಕೇಶ ಜೆ., ಗ್ರಾಮೀಣ ಠಾಣೆ ಇನ್ಸಪೆಕ್ಟರ್ ನಾಗಯ್ಯ ಕಾಡದೇವರಮಠ, ಶಹರ ಠಾಣೆ ಸಿಪಿಐ ವೆಂಕಟೇಶ ಎನ್., ತಾಪಂ ಇಒ ಡಾ. ವೆಂಕಟೇಶ ಸಣ್ಣಬಿದರಿ ಹಾಗೂ ಸಿಬ್ಬಂದಿ ಇದ್ದರು.

ಗಮನ ಸೆಳೆದ ವಿಧ್ವಂಸಕ ತಪಾಸಣಾ ಉಪಕರಣಗಳು

ಪೊಲೀಸ್ ಇಲಾಖೆ ವತಿಯಿಂದ ನಗರದಲ್ಲಿ ಪ್ರಥಮ ಬಾರಿಗೆ ವಿಧ್ವಂಸಕ ತಪಾಸಣಾ ಉಪಕರಣಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಪೊಲೀಸರು ಬಳಸುವ ಬಂದೂಕು, ಪಿಸ್ತೂಲ್, ಶ್ವಾನದಳದ ಕಾರ್ಯಾಚರಣೆ, ಬಾಂಬ್ ಸ್ಕ್ವಾಡ್, ಅಗ್ನಿಶಾಮಕದ ಕಾರ್ಯಾಚರಣೆ ಸೇರಿ ವಿವಿಧ ಬಗೆಯ ರೈಫಲ್ ಹಾಗೂ ಪೊಲೀಸ್ ಇಲಾಖೆಯ ಎಲ್ಲ ರೀತಿಯ ಉಪಕರಣಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಏ. 1ರಂದು ಸಂಜೆಯವರೆಗೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ನೀಡಲಾಗಿದೆ.

ಹೆಸ್ಕಾಂ ಅಧ್ಯಕ್ಷ ಸೈಯದ್ ಅಜಿಮಪೀರ ಖಾದ್ರಿಗೆ ಸನ್ಮಾನ

ಶಿಗ್ಗಾವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹೆಸ್ಕಾಂ ಅಧ್ಯಕ್ಷ ಸೈಯದ್ ಅಜಿಮಪೀರ ಖಾದ್ರಿ ಅವರನ್ನ ಅಣ್ಣೀಗೇರಿ ತಾಲೂಕಿನ ಹಳ್ಳಿಕೇರಿ ಗ್ರಾಮದ ಗುರು ಕೊಟ್ಟೂರೇಶ್ವರ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕವಿಲ್ಲವೆಂದು ಜಾತ್ರಾ ಕಮಿಟಿಯ ಹಿರಿಯರು ಭೇಟಿ ಮಾಡಿ ಮನವಿ ಮಾಡಿದ ತಕ್ಷಣ ಅಧಿಕಾರಿಗಳ ಜೊತೆ ಮಾತನಾಡಿ ಸುಮಾರು 10 ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ಪರಿವರ್ತಕವನ್ನ ಅಳವಡಿಸಿ ಅನುಕೂಲ ಮಾಡಿದ ಹಿನ್ನೆಲೆ ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ ಹಳ್ಳಿಕೇರಿ ಗ್ರಾಮದ ಹಿರಿಯರಾದ ಸುರೇಶ ದೇಸಾಯಿ, ಅಮೃತಪ್ಪ ಅಂಕಲಿ, ಕೊಟ್ರಯ್ಯ ಪೂಜಾರ, ಮಾಂತೇಶ ಕೋಳಲ, ಆನಂದ ಶೆಟ್ಟರ, ಮುತ್ತಣ್ಣ ಜಾವೂರ, ಸಿದ್ದಪ್ಪ ದೇಶಗೌಡ್ರ, ಬಸಪ್ಪ ಕೋಳಲ, ನೀಲಪ್ಪ ಕೋಳಲ, ನಾಗಪ್ಪ ಕೊಳಲ, ರವಿ ಕೊಣಪ್ಪನವರ, ರುದ್ರೇಶ ಗುಡಗೇರಿ, ಬೀರೇಶಕುಮಾರ ಜಟ್ಟೆಪ್ಪನವರ ಇದ್ದರು.

ಮುಂಡರಗಿ: ನಾಳೆ ಪುಣ್ಯಸ್ಮರಣೋತ್ಸವ, ಧರ್ಮಸಭೆ

ಮುಂಡರಗಿ: ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಏ.2ರಂದು ಶ್ರೀಜಂಗಮ ಪುಂಗವ ಅಲ್ಲಮ ಪ್ರಭುಗಳ ಹಾಗೂ ಮಹಾದೇವಿ ಅಕ್ಕನವರ ಜಯಂತಿ ಮತ್ತು ಶ್ರೀಮಠದ 9ನೇ ಪೀಠಾಧಿಪತಿ ವೆಂಕಟಾಪೂರ ಪೂಜ್ಯರ 59ನೇ ಪುಣ್ಯಸ್ಮರಣೋತ್ಸವ ಜರುಗಲಿದೆ.

ಬೆಳಗ್ಗೆ 8.30ಗಂಟೆಗೆ ಷಟ್‌ಸ್ಥಲ ಧ್ವಜಾರೋಹಣ, 9.30ಗಂಟೆಗೆ 9ನೇ ಪೀಠಾಧಿಪತಿ ವೆಂಕಟಾಪೂರ ಪೂಜ್ಯರ ಹಾಗೂ ಅಕ್ಕನ ಭಾವಚಿತ್ರ ಉತ್ಸವ ನಡೆಯುವುದು. ನಂತರ ಧರ್ಮಸಭೆ ನಡೆಯಲಿದ್ದು, ನಾಡೋಜ ಡಾ.ಅನ್ನದಾನೀಶ್ವರ ಶಿವಯೋಗಿಗಳವರು ಸಾನ್ನಿಧ್ಯ ವಹಿಸುವರು. ದುಧನಿ ವಿರಕ್ತಮಠದ ಡಾ.ಶಾಂತಲಿಂಗ ಸ್ವಾಮೀಜಿ ನೇತೃತ್ವ ವಹಿಸುವರು. ಉಪ ಆಯುಕ್ತೆ ಚಿತ್ರಾ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕಿರುಸುದ್ದಿ

ಹನುಮ ಜಯಂತಿ ಉತ್ಸವ



ಹಳ್ಳೂರ: ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಹನುಮ ಜಯಂತಿ ಉತ್ಸವವು ಏ.2ರಂದು ಜರುಗಲಿದೆ. ಗುರುವಾರ ಬೆಳಿಗ್ಗೆ 6 ಗಂಟೆಗೆ ಅಭಿಷೇಕ ಪೂಜೆಯೊಂದಿಗೆ ಕಾರ್ಯಕ್ರಮಗಳು ಜರುಗುವುದು. ಬೆಳಿಗ್ಗೆ 6.45 ಕ್ಕೆ ಶ್ರೀ ಬಲಭೀಮನನ್ನು ತೊಟ್ಟಿಲಲ್ಲಿ ಹಾಕಿ ಹೆಸರಿಡುವುದು. 8 ಗಂಟೆಗೆ ಶ್ರೀ ಬಲಭೀಮ ದೇವರ ಪಲ್ಲಕ್ಕಿ ಉತ್ಸವವು ಆರತಿ ಮತ್ತು ಕುಂಭಗಳು ಹಾಗೂ ಭಾವ ಚಿತ್ರವನ್ನು ಸಕಲ ವಾದ್ಯ ವೃಂದದೊಂದಿಗೆ ಗ್ರಾಮದಲ್ಲಿ ಉತ್ಸವವು ಜರುಗುವುದು. ಮಧ್ಯಾಹ್ನ ಅನ್ನ ಪ್ರಸಾದ ನಂತರ ಶ್ರೀ ಹನುಮಾನ ತೊಟ್ಟಿಲಲ್ಲಿರುವ ಫಲ ಸವಾಲ ಮಾಡುವ ಕಾರ್ಯಕ್ರಮ ನಡೆಯುವುದು. ಎಂದು ಶ್ರೀ ಜೈ ಹನುಮಾನ ಮಿತ್ರ ಮಂಡಳಿಯ ಸಂಘಟಿಕರು ತಿಳಿಸಿದ್ದಾರೆ.

ಮಾತೆ ಸಾವಿತ್ರಿಭಾಯಿ ಫುಲೆ ಪುರಸ್ಕಾರ

ಯರಗಟ್ಟಿ : ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಭಾಗಿರತಿ ಹಲಗಲಿ ಇವರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ಯ ಜಿಲ್ಲಾ ಮಟ್ಟದ ಮಾತೆ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಮಾ. 29 ರಂದು ಬೆಳಗಾವಿಯ ಕುಮಾರ ಗಂಧರ್ವ ಕಲಾಮಂದಿರದಲ್ಲಿ ಕರ್ನಾಟಕ ಸಾವಿತ್ರಿಬಾಯಿ ಪುಲೆ ಶಿಕ್ಷಕರ ಸಂಘ ಧಾರವಾಡ ಘಟಕದ ವತಿಯಿಂದ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಸಹ ಶಿಕ್ಷಕಿ ಭಾಗಿರತಿ ಹಲಗಲಿ ಇವರಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ, ಗೌರವಿಸಲಾಗಿದ್ದು, ಅವರನ್ನು ಯರಗಟ್ಟಿ ತಾಲೂಕಾ ಶಿಕ್ಷಕರ ಸಂಘ, ಶಾಲೆಯ ಶಿಕ್ಷಕರು, ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಬಹುಮಾನ ವಿತರಣೆ ಇಂದು



ರಾಯಬಾಗ: ಪಟ್ಟಣದ ವಿಶ್ವಚೇತನ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಏ.1 ಮತ್ತು 2ರಂದು ಖುಷಿ ಹಬ್ಬ ಅಂಗವಾಗಿ ಬಹುಮಾನ ವಿತರಣೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಭವ್ಯವಾಗಿ ಆಯೋಜಿಸಲಾಗಿದೆ. ಏ.1ರಂದು ನಡೆಯುವ ಬಹುಮಾನ ವಿತರಣೆ ಸಮಾರಂಭದಲ್ಲಿ ತಾಲೂಕು ಸಮಾಜ ಕಲ್ಯಾಣಾಧಿಕಾರಿ ವಿಠ್ಠಲ ಚಂದರಗಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಶಿವಮೊಗ್ಗದ ಪ್ರೇರಣಾದಾಯಕ ಭಾಷಣಕಾರ, ಬರಹಗಾರ ಹಾಗೂ ವೈದ್ಯರಾದ ಡಾ. ರಾಹುಲ್ ದೇವರಾಜ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಚೈತನ ನಾಯಿಕ ಅವರು ಅಧ್ಯಕ್ಷತೆ ವಹಿಸಲಿದ್ದು, ಪ್ರಧಾನ ಗುರುಮಾತೆ ವಿದ್ಯಾ ನಾಯಿಕ ಅವರ ಉಪಸ್ಥಿತಿಯಲ್ಲಿ ಕೆಇಬಿ ರಸ್ತೆಯ ಮಧುಬನ ಕಾರ್ಯಾಲಯದಲ್ಲಿ ಕಾರ್ಯಕ್ರಮ ನಡೆಯಲಿದೆ.ಏ.2ರಂದು ನಡೆಯುವ ಖುಷಿ ಹಬ್ಬ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಗೌರವಾಧ್ಯಕ್ಷರು, ಯುವ ಸನ್ಯಾಸಿಗಳಾದ ಪರಮಪೂಜ್ಯ ಶಶಿಕಾಂತ ಗುರೂಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ ಆರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಚೈತನ ನಾಯಿಕ ಅವರ ಅಧ್ಯಕ್ಷತೆಯಲ್ಲಿ ಹಾಗೂ ವಿದ್ಯಾ ನಾಯಿಕ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದರ ಜೊತೆಗೆ ನಿವೃತ್ತ ಸೈನಿಕರನ್ನು ಗೌರವಿಸುವ ವಿಶೇಷ ಕಾರ್ಯಕ್ರಮವೂ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಚೈತನ ನಾಯಿಕ ಹಾಗೂ ಪ್ರಧಾನ ಗುರುಮಾತೆ ವಿದ್ಯಾ ನಾಯಿಕ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ



ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲೂಕಿನ ವಾಡಿಶಿಡ್ಲ್ಯಾಳ ಗ್ರಾಮದ 21 ವರ್ಷದ ಪರಪ್ಪ ಮಾರುತಿ ನಾಯಿಕ ಆಕ್ಟೋಬರ್ 8ರಂದು ಬೆಳಿಗ್ಗೆ 11 ಗಂಟೆಗೆ ಕುರಿ ಹಟ್ಟಿಯಲ್ಲಿಂದ ಎಲ್ಲಿಯೋ ಹೋಗಿ ಮರಳಿ ಮನೆಗೆ ಬಾರದೇ ಕಾಣೆಯಾಗಿದ್ದು, ಈ ಕುರಿತು ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ವ್ಯಕ್ತಿಯ ಚಹರೆ 5 ಪೂಟ್ 5 ಇಂಚ ಎತ್ತರ, ಸಾಧಾರಣ ಮೈಕಟ್ಟು, ಗೋಧಿ ಬಣ್ಣ, ಉದ್ದ ಮುಖ, ಸಣ್ಣ ಮೂಗು, ಗುಂಗುರ ಕೂದಲು, ಹಳದಿ ಮತ್ತು ಕೆಂಪು ಬಣ್ಣದ ಟೀಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ, ಬಲಗೈ ಮೇಲೆ ಓಔಔ ಅಂಆ ಮತ್ತು ದಿಲ್ ಆಕಾರದ ಹಚ್ಚೆ ಇದೆ ಹಾಗೂ ಕನ್ನಡ ಭಾಷೆ ಮಾತನಾಡುತ್ತಾನೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರತಲ್ಲಿ ಯಮಕನಮರಡಿ ಪೊಲೀಸ್ ಠಾಣೆ ಸಂಪರ್ಕಿಸಬಹುದು ಎಂದು ಯಮಕನಮರಡಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಮಕನಮರಡಿ: ಸ್ಥಳೀಯ ಯ.ವಿ. ಸಂಘದ ಸಯುಕ್ತಾಶ್ರಯದಲ್ಲಿ ಭಗವಾನ್ ಮಹಾವೀರರ 2624ನೇ ಜಯಂತಿಯನ್ನು ಭಕ್ತಿ ಪೂರ್ವಕ ಆಚರಿಸಲಾಯಿತು. ಭಗವಾನ್ ಮಹಾವೀರದ ಭಾವಚಿತ್ರಕ್ಕೆ ಪೂಜಿಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಎಲ್ಲಾ ಶಿಕ್ಷಕರ ಶಿಕ್ಷಕಿಯರ ಬಳಗ ಉಪಸ್ಥಿತರಿದ್ದು ಭಗವಾನ್ ಮಹಾವೀರರಿಗೆ ನಮನ ಸಲ್ಲಿಸಿದರು

ಏ.5ರಂದು ಗುರುವಂದನಾ ಕಾರ್ಯಕ್ರಮ

ನೇಸರಗಿ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ 1999-2002 ನೇ ಸಾಲಿನ ಬಿ ಎ ವ್ಯಾಸಂಗ ಮಾಡಿದ್ದ ವಿದ್ಯಾರ್ಥಿ- ವಿದ್ಯಾರ್ಥಿನೀಯರಿಂದ ಗುರುವಂದನೆ ಹಾಗೂ ಸ್ನೇಹಿತರ ಪುನರ್ ಮಿಲನ ಸಮಾರಂಭ ಹಾಗೂ ಪ್ರಥಮ ದರ್ಜೆ ಕಾಲೇಜಿನ ಪ್ರಾಂಸುಪಾಲರದ ಡಾ. ಎಫ್ ಡಿ ಗದ್ದಿಗೌಡರ ವಿರಚಿತ 'ಗುರು ನೀನು ಶಿಷ್ಯ ನಾನು ' ಧ್ವನಿ ಸುರುಳಿ ಬಿಡುಗಡೆ ಸಮಾರಂಭವು ಏ.5ರಂದು ಬೆಳಿಗ್ಗೆ 9 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ನೆರವೇರಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಚನ್ನಮ್ಮನ ಕಿತ್ತೂರು ಶಾಸಕರು, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಬಾಬಾಸಾಹೇಬ ಪಾಟೀಲ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಸುಪಾಲರದ ಡಾ. ಎಫ್ ಡಿ ಗದ್ದಿಗೌಡರ ವಹಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ನಿವೃತ್ತ ಜಂಟಿ ನಿರ್ದೇಶಕರಾದ ವ್ಹಿ ಎಸ್ ಪ್ರಕಾಶ, ಅತಿಥಿಗಳಾಗಿ ನಿವೃತ್ತ ಪ್ರಾಂಸುಪಾಲರದ ಡಾ. ವಾಯ್ ಎಮ್ ಯಾಕೊಳ್ಳಿ,ಕಾಲೇಜು ಸುಧಾರಣೆ ಸಮಿತಿ ಉಪಾಧ್ಯಕ್ಷರಾದ ಅಡಿವಪ್ಪ ಮಾಳಣ್ಣವರ, ಸುಧಾರಣೆ ಸಮಿತಿಯ ಎಲ್ಲ ಸದಸ್ಯರು,1999-2002 ರಲ್ಲಿ ಶಿಕ್ಷಣ ಕಲಿಸಿದ ಉಪನ್ಯಾಸಕರು , ಈಗಿನ ಉಪನ್ಯಾಸಕರು , ಭೋಧಕ - ಭೋಧಕೇತರ ಸಿಬ್ಬಂದಿ,ನಿವೃತ್ತ ಪ್ರಾಂಸುಪಾಲರು, ನಿವೃತ್ತ ಪ್ರಾಧ್ಯಾಪಕರು, ನಿವೃತ್ತ ಉಪನ್ಯಾಸಕರು, 1999-2002 ರಲ್ಲಿ ಬಿ ಎ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು, ವಿದ್ಯಾರ್ಥಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.



ಯಮಕನಮರಡಿ: ಸಮೀಪದ ಆನಂದಪುರ ಬಡಾವಣೆಯಲ್ಲಿ ಜೈನ ಸಮಾಜದ ವತಿಯಿಂದ ಭಗವಾನ್ ಮಹಾವೀರರ ಜಯಂತಿ ಆಚರಣೆ ಮಾಡಲಾಯಿತು. ಜೈನ ಧರ್ಮದ ಸಂಪ್ರದಾಯದಂತೆ ಮಹಾವೀರರ ಮೂರ್ತಿಗೆ ಪಂಚಾಮೃತ ವಿವಿಧ ದ್ರವ್ಯಗಳಿಂದ ಅಭಿಷೇಕ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಪಾರ ಶ್ರಾವಕ ಶ್ರಾವಕಿಯರು ಹಾಗೂ ಜೈನ ಕುಲಬಾಂಧವರ ಮುಖಂಡರು ಉಪಸ್ಥಿತರಿದ್ದು ಮಹಾವೀರರ ಕೃಪೆಗೆ ಪಾತ್ರರಾದರು.

ಭಗವಾನ್ ಮಹಾವೀರ ಜಯಂತಿ | ಬಸವರಾಜ ಹೆಗ್ಗನಾಯಕ ಹೇಳಿಕೆ

ಮಹಾವೀರರ ತತ್ವ ಪಾಲಿಸಿ

ಬೆಳಗಾವಿ : ಭಗವಾನ್ ಮಹಾವೀರರು ಮನುಕುಲಕ್ಕೆ ಸಾರಿದ ಸತ್ಯ, ಅಹಿಂಸೆಯಂತಹ ಮೌಲ್ವಿಕ ತತ್ವಗಳು ಸಾರ್ವಕಾಲಿಕವಾಗಿದ್ದು, ಅವರ ಸಂದೇಶಗಳನ್ನು ಯುವಕರು ಅರ್ಥೈಸಿಕೊಂಡು ಆದರ್ಶ ಜೀವನ ನಡೆಸುವಂತೆ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ರಂದು ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ನಡೆದ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಹಿಂಸೆಯ ಪಾಠ ಹೇಳಿಕೊಟ್ಟ ಭಗವಾನ್ ಮಹಾವೀರರು, ಅಹಿಂಸೆ ಆಚರಣೆಯ ಮಾರ್ಗದಲ್ಲಿ ಜೀವನದ ಸಾಕ್ಷಾತ್ಕಾರದ ಪಥ ತೋರಿಸಿದ ಮಹಾನ್ ಯುಗ ಪುರುಷ. ಭಗವಾನ್ ಮಹಾವೀರರು ಎಲ್ಲರಿಗೂ ಒಳಿತನ್ನು ಬಯಸುವ ಮೂಲಕ ಜಗತ್ತಿಗೆ ಉತ್ತಮ ಸಂದೇಶ ನೀಡಿದ್ದಾರೆ ಎಂದರು.

ಮಹಾವೀರರು ಬೋಧಿಸಿದ ಪ್ರತಿ ಸಂದೇಶದಲ್ಲಿ ಅಪಾರ ಅನುಭವವಿದೆ. ಶಾಂತಿಮಂತ್ರ ಅನುಸರಿಸುವ ಮೂಲಕ ಜೀವನದ ಔಚಿತ್ಯದ ಮಹತ್ವ ಸಾರಿದ್ದಾರೆ. ಹಾಗಾಗಿ ಮಹಾವೀರ ಅವರು ಅಹಿಂಸೆ, ತ್ಯಾಗ ಹಾಗೂ ವೈರಾಗ್ಯದ ಸಾಕಾರ ಮೂರ್ತಿಯಾಗುವ ಮೂಲಕ ತಮ್ಮ ಕೀರ್ತಿಯನ್ನು ಜಗತ್ತಿಗೆ ಸಾರಿದ್ದಾರೆ.

ಭಗವಾನ್ ಮಹಾವೀರರು, ನೀನು ಜೀವಿಸು, ಇತರರಿಗೂ ಜೀವಿಸಲು ಅವಕಾಶ ನೀಡು, ಸತ್ಯವನ್ನೇ ನುಡಿ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಅಹಿಂಸೆಯೇ ಪರಮೋಧರ್ಮ ಎಂಬ ವಿಚಾರಗಳನ್ನು ಪ್ರತಿಪಾದಿಸುವ ಮೂಲಕ ಈ ಜಗತ್ತಿಗೆ ನೀಡಿದ ಮೌಲಿಕ ಕೊಡುಗೆ ಅಪಾರವಾಗಿದೆ ಎಂದು ಭಗವಾನ್ ಮಹಾವೀರರ ವ್ಯಕ್ತಿತ್ವವನ್ನು ಬಣ್ಣಿಸಿ, ಭಗವಾನ್ ಮಹಾವೀರರು ಶಾಂತಿ ಪ್ರಿಯರಾಗಿದ್ದರು ಎಂದು ಬಸವರಾಜ ಹೆಗ್ಗನಾಯಕ ತಿಳಿಸಿದರು.



» ಜೈನ್ ಧರ್ಮದ ಕುರಿತು ನಾಟಕಗಳು ಪ್ರದರ್ಶನ

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ರತನಚಂದ ನೇಮಿನಾಥ ಕೋಟಿ ಮಾತನಾಡಿ, ಜೈನ ಧರ್ಮದ ಮೂಲಮಂತ್ರವಾದ ಅಹಿಂಸಾ ಪರಮೋ ಧರ್ಮ ಎಂಬಂತೆ ಜಗತ್ತಿನ ಯಾವುದೇ ಪ್ರಾಣಿಗಳಿಗೂ ಹಿಂಸೆ ನೀಡದೆ ಜೀವನ ಸಾಗಿಸುವುದು. ಸಮ್ಯಕ ದರ್ಶನದಿಂದ ಒಳ್ಳೆಯ ವಿಶ್ವಾಸ ಜ್ಞಾನ, ಉತ್ತಮ ನಡವಳಿಕೆ ಹೊಂದುವ ಮೂಲಕ ಅಮರ ತತ್ವದ ಕಡೆಗೆ ಹೋಗುವುದನ್ನು ಕಲಿಸುತ್ತದೆ. ಐದು ಪರಮ ತತ್ವಗಳನ್ನು ಮಹಾವೀರರು ನೀಡಿದ್ದು, ಅವರ ಆತ್ಮದಿಂದ ಹೇಳಿದ ನುಡಿಗಳಲ್ಲಿ ನಡೆದು ಸಾರ್ಥಕ ಜೀವನ ನಡೆಸೋಣ ಎಂದರು.

> ಮನಸ್ಸಿನ ಮಾತು ಕೇಳುವವರು ಸನ್ಯಾಸಿಗಳು, ಆತ್ಮದ ಮಾತು ಕೇಳುವವರು ಸಂಸಾರಿಗಳಾಗಿರುತ್ತಾರೆ. ತಪ್ಪು ನಂಬಿಕೆಗಳನ್ನು ಕೈ ಬಿಟ್ಟು ಆತ್ಮವನ್ನು ಹೊರತು ಪಡಿಸಿ ಬೇರೆ ಯಾವುದು ನನ್ನದಲ್ಲಾ ಎಂದು ಬದುಕಬೇಕು. ಪ್ರತಿಯೊಬ್ಬರು ಸತ್ಯ, ಅಹಿಂಸೆ, ಒಳ್ಳೆ ಜ್ಞಾನ, ನಂಬಿಕೆ, ನಡತೆಗಳನ್ನು ಅಳವಡಿಸಿಕೊಳ್ಳಬೇಕು. ಜೈನ ಧರ್ಮವು ಅಹಿಂಸೆಯಲ್ಲಿ ಅತ್ಯಂತ ನಂಬಿಕೆಯನ್ನು ಹೊಂದಿದೆ.
> ■ ರತನಚಂದ ನೇಮಿನಾಥ ಕೋಟಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಸಮಾಜದ ಮುಖಂಡರು, ಗಣ್ಯರು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ಚಾವಡಿ ಬೀದಿಯಲ್ಲಿ ತ್ಯಾಜ್ಯ: ಆಕ್ರೋಶ

ಹಿರೇಬಾಗೇವಾಡಿ: ಸ್ಥಳೀಯ ಪಂಚಾಯತಿ ನಿರ್ಲಕ್ಷದಿಂದ ಗ್ರಾಮದ ಗಟಾರುಗಳು ಗಬ್ಬೆದ್ದು ನಾರುತ್ತಿದ್ದು, ಗ್ರಾಮ ಹೃದಯ ಭಾಗವಾದ ಚಾವಡಿ ಬೀದಿಯಲ್ಲಿ ತ್ಯಾಜ್ಯವೆಲ್ಲ ಮಂಗಳವಾರದ ಸಂತೆಯಂದು ರಸ್ತೆಯ ಮೇಲೆ ಹರಿದಾಡುತ್ತಿದ್ದರಿಂದ ಗ್ರಾಮಸ್ಥರು, ವ್ಯಾಪಾರಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಆಕ್ರೋಶವ್ಯಕ್ತಪಡಿಸಿರುವ ಇಲ್ಲಿನ ಪ್ರಗತಿಪರ ರೈತ ಮುಖಂಡ ಬಸವಣ್ಣೆಪ್ಪ ಗಾಣಗಿ, ಇಲ್ಲಿನ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೆ ಏರಿಸಿದಾಗಿನಿಂದ ಇಲ್ಲಿನ ಗಟಾರ್‌ಗಳನ್ನು ಸ್ವಚ್ಚಗೊಳಿಸಲಾಗಿಲ್ಲ. ಈ ಬಗ್ಗೆ ಪಂಚಾಯ್ತಿಯಲ್ಲಿ ವಿಚಾರಿಸಿದಾಗ ಮೂರು ತಿಂಗಳಿಂದ ಸಿಬ್ಬಂದಿಯ ವೇತನ ಬಿಡುಗಡೆಯಾಗಿಲ್ಲ, ಕಾರ್ಮಿಕರು ಕೆಲಸ ನಿಲ್ಲಿಸಿದ್ದಾರೆಂದು ಹೇಳಲಾಗುತ್ತಿದೆ. ಅಲ್ಲದೇ ಗ್ರಾಮದ ಮನೆಗಳ ಕಸದ ವಿಲೇವಾರಿಯೂ ಆಗುತ್ತಿಲ್ಲ. ಹೀಗಾದರೆ ಇಲ್ಲಿ ಪಂಚಾಯತಿ ಇದ್ದು ಏನು ಪ್ರಯೋಜನ? ಪಂಚಾಯತಿಗೆ ಬೀಗ ಜಡಿದು ಪ್ರತಿಭಟಿಸಲಾಗುವುದು ಎಂದಿದ್ದಾರೆ.

ಕಳೆದ ನಾಲ್ಕು ತಿಂಗಳಿಂದ ಇಲ್ಲಿನ ಬ್ಲಾಕ್ ಆಗಿರುವ ಗಟಾರುಗಳನ್ನು ತೆರವುಗೊಳಿಸಲಾಗಿಲ್ಲ. ನಿರ್ವಹಣೆ ಇಲ್ಲದೇ ಗಟಾರಿನ ಕೊಳಚೆ, ಕಸ-ಕಡ್ಡಿಗಳು, ತ್ಯಾಜ್ಯಗಳೆಲ್ಲ ರಸ್ತೆಯ ಮೇಲೆ ಹರಿದು ಮಂಗಳವಾರದ ಸಂತೆಗೂ ತಡೆಯೊಡ್ಡಿದೆ. ಗಲೀಜಿನಲ್ಲಿ ಕುಳಿತು ವ್ಯಾಪಾರ ಮಾಡಲು ಹರಸಾಹಸ ಪಡಬೇಕಾಗಿದೆ. ಈ ಬಗ್ಗೆ ಆಕ್ರೋಶಗೊಂಡಿರುವ ಇಲ್ಲಿನ ವ್ಯಾಪಾರಸ್ತರು ಸಂತೆಯ ಕರಗಳನ್ನು ಪಂಚಾಯತಿಗೆ ತುಂಬದಿರಲು ನಿಶ್ಚಯಿಸಿದ್ದಾರೆ.



> ಜೆಸಿಬಿಯಿಂದ ಕಸ ತೆರವುಗೊಳಿಸಲು ಸಿಬ್ಬಂದಿಗೆ ತಿಳಿಸಲಾಗಿದೆ. ಪಟ್ಟಣ ಪಂಚಾಯತಿಯಾಗಿದ್ದರಿಂದ ಕೆಲವು ತಾಂತ್ರಿಕ ವ್ಯವಹಾಗಳು ಮುಗಿದ ಬಳಿಕ ಸಿಬ್ಬಂದಿ ಸಂಬಳ ಬಿಡಿಗಡೆಯಾಗಲಿದೆ.
> ■ ರವಿಶಂಕರ ಮಾಸ್ತಿಹೊಳಿಮಠ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ

ವ್ಯಾಪಾರಸ್ಥರಾದ ನೀಲಕಂಠ ಮಂಗಳಗಟ್ಟಿ, ಮಹಾಂತೇಶ ಈಳಿಗೇರ, ಗುಲ್ಜರ ಬಾಗೇವಾಡಿ, ಮೌಲಾಲಿ ವಿರಾಪೂರ, ತಸ್ಲೀಮ್ ಬಾಗವಾನ, ಯಾಸೀನ ಬಾಗವಾನ, ಗ್ರಾಮಸ್ಥರಾದ ಬಸವಣ್ಣೆಪ್ಪ ಗಾಣಗಿ, ಶಿವಾನಂದ ಸೋನಪ್ಪನವರ, ಎಲ್ಲಪ್ಪ ಸುಣಗಾರ, ಮಹಾಂತೇಶ ಮಂಗಳಗಟ್ಟಿ ಇತರರು ಇದ್ದರು.

ನಿಡಸೋಸಿ ರಸ್ತೆ ಅಗಲೀಕರಣ ಕಾಮಗಾರಿ 10 ದಿನಗಳಲ್ಲಿ ಸಮಸ್ಯೆ ನಿವಾರಣೆಗೆ ಕ್ರಮ: ಡಿಸಿ

ಸಂಕೇಶ್ವರ: ಪಟ್ಟಣದ ನಿಡಸೋಸಿ ರಸ್ತೆ ಅಗಲೀಕರಣ ಕಾಮಗಾರಿಯ ಅಳತೆಯಲ್ಲಿ ತಾರತಮ್ಯ ಉಂಟಾಗಿದೆ ಎಂದು ಕಳೆದ ಎರಡು ತಿಂಗಳಿನಿಂದ ಸ್ಥಗಿತಗೊಂಡಿರುವ ಕಾಮಗಾರಿಯ ಕುರಿತು ಮಾಹಿತಿ ಪಡೆದುಕೊಳ್ಳಲು ಸ್ಥಳಕ್ಕೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಂಗಳವಾರ ರಸ್ತೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ರಸ್ತೆ ಅಗಲಿಕರಣಕ್ಕೆ ಮುಸ್ಲಿಂ ಸಮುದಾಯದ ಸ್ಮಶಾನ ಭೂಮಿ ಹಾಗೂ ಕೆಲವು ವಾಣಿಜ್ಯ ಮಳಿಗೆಗಳ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಉದ್ಭವಿಸಿರುವ ಗೊಂದಲದ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಸಮಸ್ಯೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು, ಯಾರಿಗೂ ತೊಂದರೆಯಾಗದಂತೆ ಸರ್ವಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು, ಮುಂದಿನ ಹತ್ತು ದಿನಗಳಲ್ಲಿ ರಸ್ತೆ ಸಮಸ್ಯೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಮಾತನಾಡಿ, ಪಟ್ಟಣದ ಕೋಮು ಸೌಹಾರ್ದತೆ ಮತ್ತು ಶಾಂತಿ ವ್ಯವಸ್ಥೆಗೆ ಯಾವುದೇ ಭಂಗ ಬಾರದಂತೆ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು. ಶೀಘ್ರವೇ ಸಮಸ್ಯೆಯನ್ನು ಬಗೆಹರಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಬೆಳಗಾವಿ ಉಪವಿಭಾಗಾಧಿಕಾರಿ ಶ್ರವಣ ನಾಯಕ್, ಹುಕ್ಕೇರಿ ತಹಶೀಲ್ದಾರ್ ಬಲರಾಮ ಕಟ್ಟಿಮನಿ, ಸಂಕೇಶ್ವರ ಪುರಸಭೆ ಮುಖ್ಯಾಧಿಕಾರಿ ಪ್ರಕಾಶ ಮಠದ, ಲೋಕೋಪಯೋಗಿ ಇಲಾಖೆಯ ಪ್ರವೀಣ ಮಡ್ಯಾಳ, ನಾಡ ಕಛೇರಿಯ ಉಪತಹಸೀದ್ದಾರ ಸಿ.ಎ.ಪಾಟೀಲ,ಕಂದಾಯ ನಿರೀಕ್ಷಕರಾದ ಎ.ಎಮ್.ಕಮತನೂರ, ಸಿಪಿಐ ಶಿವಶರಣ ಅವಜಿ ಗ್ರಾಮ ಲೆಕ್ಕಾಧಿಕಾರಿಗಳಾದ ಎನ್. ಆರ್.ಪಾಟೀಲ ಸಿಪಿಐ ಹಾಜರಿದ್ದರು.



ಲಿಂಗಪೂಜೆ ಶ್ರೇಷ್ಠ: ಮುರುಘರಾಜೇಂದ್ರ ಶ್ರೀ

ಗೋಕಾಕ: ಇಷ್ಟಲಿಂಗ ಶ್ರೇಷ್ಠವಾಗಿದ್ದು, ಅದನ್ನು ಭಕ್ತಿಯಿಂದ ಪೂಜಿಸಿದರೆ ಇಷ್ಟಾರ್ಥ ನೆರವೇರುವುದೆಂದು ಇಲ್ಲಿಯ ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೇಳಿದರು.

ಅವರು, ಮಂಗಳವಾರದಂದು ನಗರದ ಬಸವ ಮಂದಿರದಲ್ಲಿ ಕರ್ನಾಟಕ ರಾಜ್ಯ ಬಣಜೀಗ ಸಮಾಜ ಕ್ಷೇಮಾಭಿವೃದ್ಧಿ ಸಂಘ ಮಹಿಳಾ ಘಟಕ ಗೋಕಾಕ ಇವರು ಹಮ್ಮಿಕೊಂಡ ಬಸವ ಧರ್ಮ ಸಂಸ್ಕಾರ ಶಿಬಿರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ನಾವೇ ಲಿಂಗವಾಗಿದ್ದು ಅದನ್ನು ತಿಳಿಸುವ ಸಾಧನ ಇಷ್ಟಲಿಂಗವಾಗಿದೆ. ಲಿಂಗ ಪೂಜೆ ಶ್ರೇಷ್ಠವಾದದ್ದು ಚಂಚಲವಾದ ಮನಸನ್ನು ಏಕಾಗ್ರತೆಗೆ ತಂದು ಒಳಗಿನ ಲಿಂಗವನ್ನು ಜಾಗೃತಗೊಳಿಸುತ್ತದೆ. ದೇವರು ಗುರು, ಲಿಂಗ, ಜಂಗಮರ ಸ್ವರೂಪನಾಗಿರುತ್ತಾನೆ. ಬಸವಾದಿ ಶರಣರು ನೀಡಿದ ವಚನ ಸಾಹಿತ್ಯ ಜೀವನಕ್ಕೆ ಮಾರ್ಗದರ್ಶಿಯಾಗಿದೆ. ಎಲ್ಲ ಯೋಗಕ್ಕಿಂತ ಶಿವಯೋಗ ಶ್ರೇಷ್ಠವಾಗಿದೆ. ಇದರಿಂದ ಆತ್ಮ ಮನಸ್ಸು ಪ್ರಭಲವಾಗುತ್ತದೆ. ಧರ್ಮಸಂಸ್ಕಾರವನ್ನು ಗುರುವಿನ ಮೂಲಕ ಅರಿತು. ಬಸವಣ್ಣನೇ ಸರ್ವಸ್ವವೆಂದು ತಿಳಿದು ಸಂಸ್ಕಾರವಂತರಾಗಿರೆಂದು ತಿಳಿಸಿದರು.



ಈ ಸಂದರ್ಭದಲ್ಲಿ ಬೆಂಗಳೂರಿನ ಬಸವ ಧರ್ಮ ಪೀಠದ ವಿಜಯಾಂಬಿಕಾ ಮಾತಾಜಿ, ಮಹಿಳಾ ಘಟಕದ ಅಧ್ಯಕ್ಷೆ ಮಹಾದೇವಿ ಉಪ್ಪಿನ, ಕಾರ್ಯದರ್ಶಿ ಹರ್ಷಿತಾ ಸವಣೂರ, ಶೈಲಾ ಬಿದರಿ, ದೀಪಾ ಬೆಲ್ಲದ, ಆರತಿ ಗುಗ್ಗವಾಡ, ವಿಮಲಾ ಮತ್ತೆನ್ನವರ, ಲೀಲಾ ನಂದಿ ಇದ್ದರು.

ಛಾಯಾ ಕುಲಕರ್ಣಿಗೆ ಜಿಲ್ಲಾ ಮಟ್ಟದ ವಿದ್ಯಾ ವಾರಿಧಿ ಪ್ರಶಸ್ತಿ

ಸುರೇಬಾನ: ಸಮೀಪದ ಮನಿಹಾಳ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯರಾದ ಛಾಯಾ ಕುಲಕರ್ಣಿ ಅವರಿಗೆ ಜಿಲ್ಲಾ ಮಟ್ಟದ ವಿದ್ಯಾ ವಾರಿಧಿ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ಘಟಕ, ಬೆಳಗಾವಿ ಮತ್ತು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ, ಜಿಲ್ಲಾ ಘಟಕ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಕುಮಾರ ಗಂಧರ್ವ ಹಾಲ್ ನಲ್ಲಿ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಗ್ರಾಮೀಣ ಭಾಗದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಪ್ರತಿಮ ಸೇವೆಯನ್ನು ಗಮನಿಸಿ ಛಾಯಾ ರವರಿಗೆ ಈ ಪ್ರಶಸ್ತಿ ನೀಡಲಾಯಿತು.



ಕಾರ್ಯಕ್ರಮ ದಲ್ಲಿ ಬೆಳಗಾವಿ ಡಿಡಿಪಿಐ ಲೀಲಾವತಿ ಹಿರೇಮಠ, ಬೆಳಗಾವಿ ಮಹಾನಗರ ಪಾಲಿಕೆಯ ಮಹಾಪೌರ ಪ್ರೀತಿ ಕಾಮಕರ, ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಜಿಲ್ಲಾ ಅಧ್ಯಕ್ಷ ಜಯಕುಮಾರ ಹೆಬಳಿ, ಪ್ರಧಾನ ಕಾರ್ಯದರ್ಶಿ ರಮೇಶ ಗೋಣಿ, ಜಿಲ್ಲಾ ಕಾರ್ಯದರ್ಶಿ ರಮೇಶ ಅಣ್ಣಿಗೇರಿ, ಎಂ ಎಫ್ ಸಿದ್ದನಗೌಡರ, ಮಲ್ಲಿಕಾರ್ಜುನ ಕೋಳಿ, ರಾಮದುರ್ಗ ತಾಲೂಕು ಅಧ್ಯಕ್ಷ ನಿಜಗುಲಿ, ಕಾರ್ಯದರ್ಶಿ ಎಸ್,ವಿ, ಪಾಟೀಲ, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರ ಸಂಘದ ಪದಾಧಿಕಾರಿಗಳು ಸಿಆರ್‌ಪಿಗಳಾದ ಆರ್.ಪಿ ಬೆಟಗೇರಿ, ವ್ಹಿ.ಡಿ.ಯಲಿಗೋಡ ಇದ್ದರು.

ಟೆಕ್ವಾಂಡೋ ಸ್ಪರ್ಧೆಯಲ್ಲಿ ವಿದ್ಯಾರ್ಥಿ ಸಾಧನೆ



ರಾಯಬಾಗ: ಪಟ್ಟಣದ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದ ಬಿಸಿಎ 6ನೇ ಸೆಮಿಸ್ಟರ್ ವಿದ್ಯಾರ್ಥಿ ಕರನಸೇನ ದೇಸಾಯಿ ಪಂಜಾಬನ ಜಲಂದರನಲ್ಲಿ ಮಾ.16ರಂದು ನಡೆದ ಅಂತರ ವಿಶ್ವವಿದ್ಯಾಲಯ ಟೆಕ್ವಾಂಡೋ

ಸ್ಪರ್ಧೆಯ 63ಕೆಜಿ ಪುರುಷರ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದು ಮಹಾವಿದ್ಯಾಲಯದ ಕೀರ್ತಿಯನ್ನು ಇಮ್ಮಡಿಗೊಳಿಸಿದ್ದಾನೆ. ಈ ವಿದ್ಯಾರ್ಥಿಯ ಸಾಧನೆಗೆ ಕೆಎಲ್ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷರಾದ ಪದ್ಮಶ್ರೀ ಪುರಸ್ಕೃತ ಡಾ. ಪ್ರಭಾಕರ ಕೋರೆ ಅವರು ಸನ್ಮಾನಿಸಿ ಪ್ರಶಂಸಿಸಿದರು. ಪ್ರಾಚಾರ್ಯರಾದ ಡಾ. ಜ್ಯೋತಿ ಎಸ್. ಕವಳೇಕರ, ಬಿಸಿಎ ಸಂಯೋಜಕರಾದ ರೋಹಿತ ದೇಶಪಾಂಡೆ, ಜಿಮಖಾನಾ ಉಪಾಧ್ಯಕ್ಷರಾದ ವಿ. ಕೆ. ಗಾಣಿಗೇರ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಶಿವಾನಂದ ಬುಲಬುಲಿ ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯ ಸದಸ್ಯರು, ಅಭಿನಂದಿಸಿದರು.

ಮಹಾವೀರ ಜಯಂತಿ ಆಚರಣೆ

ಯಮಕನಮರಡಿ: ಸ್ಥಳೀಯ ಸಾವಿರದ ಎಂಟು ಪರಿಶ್ವನಾಥ ದಿಗಂಬರ್ ಜೈನ ಮಂದಿರದಲ್ಲಿ ಭಗವಾನ್ ಮಹಾವೀರರ 2024ನೇ ಜಯಂತಿಯನ್ನು ಸ್ಥಳೀಯ ಎಲ್ಲಾ ಜೈನ ಕುಲಬಾಂಧವರು ಭಕ್ತಿ ಪೂರ್ವಕವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ಕುಂಭೋತ್ಸವ ಆಚರಿಸಲಾಯಿತು.

ಮೆರವಣಿಗೆಯಲ್ಲಿ ಅಪಾರ ಶ್ರಾವಕ ಶ್ರಾವಕಿಯರು ಉಪಸ್ಥಿತರಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾದ ದೇವೇಗೌಡ ಮ ಪಾಟೀಲ, ಅಶೋಕ್ ಚಿನ್ನಪ್ ಸಮಯ ರಾಮಪ್ಪ ಮಲಾಜಿ, ಅಶೋಕ್ ಮಲಾಜಿ, ರವೀಂದ್ರ ಪಾಟೀಲ್, ಪಾರಿಶ್ ಯಾದವಾಡಿ, ಮಹಾವೀರ ನಾಸಿಪುಡಿ, ರವೀಂದ್ರ ರಣದೇವಿ, ಪದ್ಮರಾಜ್ ಕಾ ಮಗದುಮ್, ಶ್ಯಾಮ್ ಮಲಾಜಿ, ಅಪ್ಪಾಸಾಬ ಜಿ ಮಗದುಮ್, ರಾಜು ಸಾತಗೌಡ ಮಲಾಜಿ ರಾಜೇಂದ್ರ, ಮಲಾಜಿ ನೇಮಿನಾಥ್, ಸಮಯ ವಿದ್ಯಾನಂದ ಭೂ ಯಾದವಾಡಿ, ಮಹಾವೀರ ನಾಶಿಪುಡಿ, ಮಹಾವೀರ ಪಾಟೀಲ್, ಸಂಜು ಹಟ್ಟಿ ಕಾಡಪ್ಪ ಜಗಳ ಹಾಗೂ ಪದ್ಮಾವತಿ ಮಹಿಳಾ ಮಂಡಲದ ಶ್ರಾವಕಿಯರು ಉಪಸ್ಥಿತರಿದ್ದರು.



ಸಹಬಾಳ್ವೆಯೊಂದಿಗೆ ಬದುಕಿ: ಬಳಿಗಾರ



ರಾಯಬಾಗ: ಪ್ರತಿಯೊಬ್ಬರು ತಮ್ಮ ಕುಟುಂಬದೊಂದಿಗೆ ಪ್ರೀತಿಯಿಂದ ಸಹಬಾಳ್ವೆ ಮಾಡಬೇಕೆಂದು ನಮ್ಮ ಜನಪದ ಸಾಹಿತ್ಯ ಹೇಳುತ್ತದೆ ಎಂದು ಜನಪದ ಸಾಹಿತಿ ಶಂಭು ಬಳಿಗಾರ ಹೇಳಿದರು.

ಸೋಮವಾರ ರಾತ್ರಿ ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದಲ್ಲಿ 39ನೇ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಜನಪದ ಜಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಾಶ್ಚಾತ್ಯ ಸಂಸ್ಕೃತಿಯಿಂದ ಇಂದು ದೊಡ್ಡ ದೊಡ್ಡ ನಗರಗಳಲ್ಲಿ ನಮ್ಮ ಜನಪದ ಸಂಸ್ಕೃತಿ ಕಣ್ಮರೆಯಾಗುತ್ತಿರುವುದು ಅತ್ಯಂತ ಶೋಚನೀಯ ಎಂದರು. ನಮ್ಮ ಜೀವನ ಅಲ್ಪಮಯವಾಗಿದ್ದು, ಸಂಸ್ಕಾರಯುತ ಒಳ್ಳೆಯ ನೆಮ್ಮದಿಯ ಜೀವನ ನಡೆಸಬೇಕೆಂದರು.

ಹಂಚಿನಾಳ ಭಕ್ತಿಯೋಗಾಶ್ರಮದ ಮಹೇಶಾನಂದ ಸ್ವಾಮಿಜೀ ಪ್ರವಚನ ನೀಡಿದರು. ವೀರಭದ್ರೇಶ್ವರ ಸ್ವಾಮಿಜೀ ಸಾನಿಧ್ಯ ವಹಿಸಿದ್ದರು. ಬೆಳವಿ ಸಿದ್ಧಾರೂಢ ಮಠದ ಮೃತ್ಯುಂಜಯ ಸ್ವಾಮಿಜೀ, ಶಿವಗೌಡ ಪಾಟೀಲ ಹಾಗೂ ಭಕ್ತಾದಿಗಳು ಇದ್ದರು.

ಕೃಷಿ ಮೇಳದ ಲಾಭ ಪಡೆಯಿರಿ

ರಾಯಬಾಗ: ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗಲು ಕೃಷಿ ಮೇಳ ಆಯೋಜಿಸಿದ್ದು ರೈತರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ ಹೇಳಿದರು.

ಭಾನುವಾರ ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದಲ್ಲಿ 39ನೇ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಬೃಹತ್ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಕೃಷಿಗೆ ಬೇಕಾಗಿರುವ ಸಲಕರಣೆ ಕೃಷಿ ಮೇಳದಲ್ಲಿ ಲಭ್ಯವಿದ್ದು, ಅವುಗಳನ್ನು ಖರೀದಿಸಿ, ವ್ಯಾಪಾರಸ್ಥರಿಗೆ ಪ್ರೋತ್ಸಾಹ ನೀಡಬೇಕೆಂದರು.

ಪಂಚಲಿಂಗೇಶ್ವರ ಮಠದ ವೀರಭದ್ರೇಶ್ವರ ಸ್ವಾಮಿಜೀ, ಸುನೀಲ ಜಾಧವ, ರಾಜು ಕೋಟಗಿ, ಡಾ.ಸಂತೋಷ ಸಾಂವತ, ಕೇದಾರಿ ಮಾಳಿ, ದತ್ತಾ ಮೋರೆ, ಯಮನಪ್ಪ ಮಾಳಿ, ನಾರಾಯಣ ಸಾವಂತ, ಬಾಬುರಾವ ವಂಜೀರೆ, ಸಂಗಣ್ಣ ದತ್ತವಾಡೆ, ಅಜೀತ ಕಾಂಬಳೆ, ಮಹಾದೇವ ಬಾನಕರಿ ಸೇರಿ ಅನೇಕರು ಇದ್ದರು.ಬೆಳಿಗ್ಗೆ ಗ್ರಾಮದಲ್ಲಿ ಬುತ್ತಿ ಮೆರವಣಿಗೆ ನಡೆಯಿತು.



ಕಿರುಸುದ್ದಿ

ವಾತ್ಸಲ್ಯ ಮನೆ ಹಸ್ತಾಂತರ

ಸವದತ್ತಿ: ಸಮಾಜದಲ್ಲಿ ನಿರಾಶ್ರಿತ ಹಾಗೂ ಆರ್ಥಿಕವಾಗಿ ನಿರ್ಗತಿಕ ವೃದ್ಧರು ದೀರ್ಘಕಾಲಿಕ ರೋಗಿಗಳಿಗೆ ತಾವು ಅಸಾಯಕರು ಎಂದು ಭಾವನೆ ಹೋಗಲಾಡಿಸುವ ಉದ್ದೇಶದಿಂದ ಧರ್ಮಸ್ಥಳ ಸಂಸ್ಥೆಯ ಮೂಲಕ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಹಾಗೂ ಡಾ. ಹೇಮಾವತಿ ಹೆಗ್ಗಡೆಯವರು ಜ್ಞಾನವಿಕಾಸದ ಕಾರ್ಯಕ್ರಮದಡಿಯಲ್ಲಿ ವಾತ್ಸಲ್ಯ ಮನೆ ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದು ರಾಜ್ಯದಲ್ಲಿ ಸುಮಾರು 850 ವಾತ್ಸಲ್ಯ ಮನೆ ನಿರ್ಮಿಸಿಕೊಡಲಾಗಿದೆ ಎಂದು ಸಂಸ್ಥೆಯ ಜಿಲ್ಲಾ ನಿರ್ದೇಶಕರಾದ ಲವಕುಮಾರ ಎಚ್ .ಆರ್ ಹೇಳಿದರು.
ವಾತ್ಸಲ್ಯ ಮನೆ ಹಸ್ತಾಂತರ ಮಾಡಿ ಮಾತನಾಡಿದ ಜಿಲ್ಲಾ ಜನಜಾಗೃತಿ ಸದಸ್ಯರಾದ ಮಹಾಂತೇಶ ಕಾಜಗಾರ ರವರು ವೀರೇಂದ್ರ ಹೆಗ್ಗಡೆಯವರ ಜನಪರ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸವದತ್ತಿ ತಾಲೂಕಿನ ಹನುಮಗೇರಿ ಓಣಿಯ ಗಿರಿಜಮ್ಮ ಅರಗಂಜಿ ಯವರಿಗೆ ರೂ. 1.35 ಲಕ್ಷ ವೆಚ್ಚದಲ್ಲಿ ವಾತ್ಸಲ್ಯ ಮನೆ ನಿರ್ಮಾನಿಸಿ ಕೊಡಲಾಗಿದೆ.
ಕಾರ್ಯಕ್ರಮದಲ್ಲಿ ಸವದತ್ತಿ ಯಲ್ಲಮ್ಮ ನಗರಸಭೆಯ ಉಪಾಧ್ಯಕ್ಷರಾದ ಕೌಶಲ್ಯ ನಾರಾಯಣ ಮೋಟೆಕರ ಯೋಜನಾಧಿಕಾರಿ ಸುಬ್ರಾಯ ನಾಯ್ಕ , ಒಕ್ಕೂಟದ ಅಧ್ಯಕ್ಷರಾದ ಸರಸ್ವತಿ ಸಿಂಗಾಡಿ, ಜ್ಞಾನವಿಕಾಸ ಸಮನ್ವಯಧಿಕಾರಿ ನಿರ್ಮಲ ಕಳಸಗೌಡರ, ಆಡಳಿತ ಸಹಾಯಕ ಪ್ರಭಂದಕ ಶಶಿಕಾಂತ ಮಾಳಿ ಸೇವಾಪ್ರತಿನಿಧಿಗಳಾದ ಕಸ್ತೂರಿ ಮುತಗಿ , ಶಕುಂತಲಾ ಪಾಟೀಲ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಬೆಳಗಾವಿ : ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ 5 ಗ್ರಾಮ ಪಂಚಾಯತಿಗಳಾದ ಮರಡಿನಾಗಲಾಪೂರ, ಬೆಳವಡಿ, ಮಲ್ಲಾಪೂರ ಕೆ.ಎನ್, ನಾಗನೂರ, ಮುರಕಿಭಾಂವಿ ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ(ವ್ಹಿ. ಆರ್. ಡಬ್ಲ್ಯೂ.) ಹುದ್ದೆಗಳನ್ನು ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮಾಸಿಕ ರೂ.10,000ಗಳ ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬರದೇ ಇರುವುದರಿಂದ ಮರು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಏ. 30 2026 ರ ಸಂಜೆ 5 ಗಂಟೆಯೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ ಕಾರ್ಯಾಲಯ, ಬೈಲಹೊಂಗಲ ಇಲ್ಲಿಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲೂಕಿನ ಎಂ.ಆರ್.ಡಬ್ಲ್ಯೂ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮುದಾಯ ಕಲಿಕಾ ಕೇಂದ್ರ ಆರಂಭ

ಯಮಕನಮರಡಿ : ವಿಹಾನ ಸಂಸ್ಥೆ ಬೆಂಗಳೂರು ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ ಇವರ ಸಹಕಾರದೊಂದಿಗೆ ಹುಕ್ಕೇರಿ ತಾಲೂಕಿನ ಬಸ್ಸಾಪೂರ ಹಾಗೂ ಕರಗುಪ್ಪಿ ಗ್ರಾಮಗಳಲ್ಲಿ ಏಪ್ರಿಲ್ 1ರಂದು ಸಂಜೆ 4.30 ಕ್ಕೆ ಶಾಲೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸಮುದಾಯ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ.ಕಾರ್ಯಕ್ರಮದ ಉದ್ಘಾಟಕರಾಗಿ ಹುಕ್ಕೇರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಹೆಚ್ ಹೊಳೆಪ್ಪ ಆಗಮಿಸುವರು. ಅಧ್ಯಕ್ಷತೆಯನ್ನು ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಎಂ ಚೌಗಲಾ ವಹಿಸುವರು. ಕರಗುಪ್ಪಿ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎ ಜಿ ಮುನ್ನೋಳ್ಳಿ ಹಾಗೂ ಬಸ್ಸಾಪೂರ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಮೊಮಿನ ಉಪಸ್ಥಿತರಿರುವರು ಎಂದು ವಿಹಾನ್ ಸಂಸ್ಥೆಯ ಸಂಯೊಜಕರಾದ ರೇಖಾ ಬೆನಿವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಜನಗಣತಿ ಆರಂಭ

ಬೆಳಗಾವಿ:: ಸರ್ಕಾರದ ಆದೇಶದಂತೆ ಜನಗಣತಿ 2027ರ ಅಂಗವಾಗಿ ಸ್ವಯಂ ಗಣನೆ ಪ್ರಕ್ರಿಯೆ ಏ.1ರಿಂದ 15ರ ವರೆಗೆ ನಡೆಸಲಾಗುತ್ತದೆ. ಈ ಸಮಯದಲ್ಲಿ ಸಕರರದ ಅಂತರ್ಜಾಲದಲ್ಲಿ ಸ್ವಯಂ ಆಗಿ ಜನರು ತಮ್ಮ ವಿವರವನ್ನು ನೀಡಬಹುದು. ಈ ಅವಧಿಯಲ್ಲಿ ಪ್ರತಿಯೊಬ್ಬ ಕುಟುಂಬವೂ ತಮ್ಮ ಮನೆಯ ಮಾಹಿತಿ ನಿಖರವಾಗಿ ಮತ್ತು ಸಂಪೂರ್ಣವಾಗಿ ಸ್ವಯಂ ಗಣನ ವ್ಯವಸ್ಥೆಯ ಮೂಲಕ ಸಲ್ಲಿಸಬೇಕು. ಈ ಪ್ರಕ್ರಿಯೆ ಸರಿಯಾದ, ಪಾರದರ್ಶಕ ಹಾಗೂ ಸಮಯೋಚಿತ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿಯಾಗುತ್ತದೆ, ಇದು ಭವಿಷ್ಯದ ಯೋಜನೆ ಮತ್ತು ಅಭಿವೃದ್ಧಿಗೆ ಬಹಳ ಮುಖ್ಯವಾಗಿದೆ. ನಿಗದಿ ಮಾಡಿದ ಅವಧಿಯೊಳಗೆ https://se.census.gov.in ಈ ಅಂತರ್ಜಾಲವನ್ನು ಬಳಿಸಿ ಸ್ವಯಂ ಗಣನೆ ಪ್ರಕ್ರಿಯೆ ಪೂರ್ಣಗೊಳಿಸಲು ವಿನಂತಿಸಿಕೊಳ್ಳಲಾಗುತ್ತದೆ. ಏ.15ರಿಂದ ಮೇ 16ರ ವರೆಗೆ ಗಣತಿದಾರರು ಮನೆಗೆ ಬಂದಾಗ ನೀವು ನೀಡಿದ ಅಂತರ್ಜಾಲ ಮೂಲಕ ಮಾಡಿದ ಮಾಹಿತಿ ನೀಡಬೇಕು. ಈ ಐಡಿಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು.



ಸವದತ್ತಿ: ತಾಲೂಕಿನ ಹನುಮಗೇರಿ ಓಣಿಯ ಗಿರಿಜಮ್ಮ ಅರಗಂಜಿ ಯವರಿಗೆ ರೂ. 1.35 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ವಾತ್ಸಲ್ಯ ಮನೆಯನ್ನು ಹಸ್ತಾಂತರ ಮಾಡಲಾಯಿತು.

ಟಿವಿ, ಮೊಬೈಲ್‌ನಿಂದ ದೂರವಿರಿ: ಪಾಟೀಲ

ಕುಡಚಿ: ನಿತ್ಯ ಧರ್ಮದ ಕುರಿತು ಎರಡು ಪುಟ ಓದುವುದರಿಂದ ಧರ್ಮದ ಕುರಿತು ಚಿಂತನೆ ಮಾಡಬೇಕು. ಟಿವಿ ಹಾಗೂ ಮೊಬೈಲ್‌ನಿಂದ ದೂರವಿರಿ ಎಂದು ಹಿರಿಯ ಸಾಹಿತಿ ಮಹಾವೀರ ಪಾಟೀಲ್ ಹೇಳಿದರು. ಪಟ್ಟಣದ ಶ್ರೀ ಮಹಾವೀರ ಜೈನ ದಿಗಂಬರ ಜೈನ ಮಂದಿರ ಕುಡಚಿ ಇವರು ಹಮ್ಮಿಕೊಂಡಿದ್ದ 2625ನೇ ಭಗವಾನ್ ಮಹಾವೀರ ಜನ್ಮಕಲ್ಯಾಣ ಮಹೋತ್ಸವ ಹಾಗೂ ಚರಿತ್ರ ಚೋಡಾಮನಿ ಆಚಾರ್ಯ ಶ್ರೀ 108ನೇಮಿಸಾಗರ ಮುನಿ ಮಹಾರಾಜರ ಜೀವನ ಚರಿತ್ರೆ ಶಾಸ್ತ್ರದಳ ಬಿಡುಗಡೆ ಕಾರ್ಯಕ್ರಮದ ವೇದಿಕೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ನಂತರ ಚೇತನಾಮತಿ ಮಾತಾ ಅವರಿಂದ ಜೈನರ ಧ್ವಜಾರೋಹಣ ನೆರವೇರಿಸಲಾಯಿತು.ಸಾಹಿತಿ ಮಹಾವೀರ ಪಾಟೀಲ್ ರಚಿತ, ಚೋಡಾಮನಿ ಆಚಾರ ಶ್ರೀ 108 ನೇಮಿಸಾಗರ ಮುನಿ ಮಹಾರಾಜರ ಚರಿತ್ರೆ ಶಾಸ್ತ್ರವನ್ನು ಬಿಡುಗಡೆಗೊಳಿಸಲಾಯಿತು.ಈ ಸಂದರ್ಭದಲ್ಲಿ ವಿನೋದ್ ಮಗದುಮ, ಡಾ.ಸುಮಂಗಲಾ ಕಾರಂಜೆ, ಸಾಹಿತಿ ಮಹಾವೀರ ಸಪ್ತಮಿ ಪಾಟೀಲ ದಂಪತಿ, ಕರುಣಾ ಕಲ್ಲೋಳ್ಕರ, ಡಾ.ಬಾಬಾಸಾಹೇಬ ತಮದಡ್ಡಿ, ಡಾ.ಚೇತನ ಕಾರಂಜೆ, ಧನಂಜಯ ಕಲಘಟಗಿ, ಡಾ.ನಿಶಾ ಕಾರಂಜೆ, ಸುಮನ ರೋಟೆ, ಪ್ರಭಾ ಗುಂಡುರಾವ್ ವಡಗಾಂವ, ಅಭಯ ವಿದ್ಯಾಧರ ಕಬ್ಬೂರೆ, ರತ್ನಂಜಯ ಕದ್ದು, ಜಯವೀರ ಹುಣಸಿಮೋರೆ, ಪ್ರೇಮಕುಮಾರ ಬಾಲೋಜಿ, ಮಲ್ಲಪ್ಪ ಕದ್ದು, ರವೀಂದ್ರ ರತ್ತು, ಮಹಾವೀರ ಶೆಟ್ಟಿ , ಪ್ರಣೀತ ಪಂಡಿತರು ಉಪಸ್ಥಿತರಿದ್ದರು. ವಿಪೂಲ ಹವಲೆ ಭಕ್ತಿ ಗೀತೆ ಸೇವೆ, ಅಜೀತ ಕೇಸ್ತೆ ಸ್ವಾಗತಿಸಿದರು, ಶಿಕ್ಷಕ ರಾಜೇಂದ್ರ ಸಾಂಗಾವೆ ನಿರೂಪಿಸಿದರು.



ಕುಡಚಿ:ಪಟ್ಟಣದ ಶ್ರೀ ಮಹಾವೀರ ಜೈನ ದಿಗಂಬರ ಜೈನ ಮಂದಿರ ಕುಡಚಿ ಇವರು ಹಮ್ಮಿಕೊಂಡಿದ್ದ 2625ನೇ ಭಗವಾನ್ ಮಹಾವೀರ ಜನ್ಮಕಲ್ಯಾಣ ಮಹೋತ್ಸವ ಹಾಗೂ ಚರಿತ್ರ ಚೋಡಾಮನಿ ಆಚಾರ್ಯ ಶ್ರೀ 108ನೇಮಿಸಾಗರ ಮುನಿ ಮಹಾರಾಜರ ಜೀವನ ಚರಿತ್ರೆ ಶಾಸ್ತ್ರದಳ ಬಿಡುಗಡೆ ಕಾರ್ಯಕ್ರಮದ ವೇದಿಕೆ ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಿದ್ದರು.

ಬಿಮ್ಸ್ ನರ್ಸಿಂಗ್ ಕಾಲೇಜ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮ

ವೃತ್ತಿ ಜೀವನದಲ್ಲಿ ಯಶಸ್ವಿಯಾಗಿ

ಬೆಳಗಾವಿ: ಬೆಳಗಾವಿ ವೈದ್ಯಕೀಯ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ಶ್ಲಾಘನೀಯವಾಗಿದ್ದು, ವಿದ್ಯಾರ್ಥಿ ಜೀವನದಲ್ಲಿ ಸಾಧನೆ ಮಾಡಿ, ಪದವಿ ಪಡೆಯುತ್ತಿರುವ ನಮ್ಮ ವಿದ್ಯಾರ್ಥಿಗಳು ಮುಂದಿನ ತಮ್ಮ ವೃತ್ತಿ ಜೀವನದಲ್ಲಿಯೂ ಯಶಸ್ವಿಯಾಗಲಿ ಎಂದು ಬಿಮ್ಸನ ನಿರ್ದೇಶಕರಾದ ಅಶೋಕ ಕುಮಾರ ಶೆಟ್ಟಿ ಹೇಳಿದರು.
ನಗರದ ಹೊರ ವಲಯದಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಸಭಾಭವನದಲ್ಲಿ ಜರುಗಿದ ಬಿಮ್ಸ್ ನ ನರ್ಸಿಂಗ್ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಬಿಮ್ಸ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಈಗಾಗಲೇ ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರತಿಷ್ಠಿತ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ತುಂಬಾ ಪ್ರಾಮುಖ್ಯಯತೆಯನ್ನು ಪಡೆದಿದ್ದಾರೆ.
ಶೈಕ್ಷಣಿಕ ಹಾಗೂ ಇತರೆ ವಿಭಾಗಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮಾಡಲು ಮುಖ್ಯ ಕಾರಣ ಎಂದರೆ, ನಮ್ಮ ನರ್ಸಿಂಗ್ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಇಂತಹ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಂದಲೇ ಬಿಮ್ಸ್ ಕಾಲೇಜು ದೇಶದಲ್ಲಿಯೇ 31ನೇ ಸ್ಥಾನ ಹಾಗೂ ರಾಜ್ಯದಲ್ಲಿಯೇ 2ನೇ ಸ್ಥಾನವನ್ನು ಪಡೆದಿದೆ, ನಮ್ಮಲ್ಲಿ 1100 ಹಾಸಿಗೆಯ ಆಸ್ಪತ್ರೆ ಹಾಗೂ 300 ಹಾಸಿಗೆಯ ಸೂಪರ ಸ್ಪೆಷಯಾಲಿಟಿ ಆಸ್ಪತ್ರೆ ಇರುವುದರಿಂದ ನಮ್ಮಲ್ಲಿ ಉತ್ತಮ ಕೌಶಲ್ಯದೊಂದಿಗೆ ತರಬೇತಿ ಹೊಂದಿ ತಯಾರಾದ ವಿದ್ಯಾರ್ಥಿಗಳು ಇರುತ್ತಾರೆ ಎಂದು ತಿಳಿಸಿದರು.
ಈ ವರ್ಷ ಪ್ರಪ್ರಥಮವಾಗಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಕಾರ್ಯಕ್ರಮ ಮಾಡುತ್ತಿರುವುದು ತುಂಬಾ ಸಂತಸದ ವಿಷಯವಾಗಿದೆ ಎಂದರು.
ಈ ವೇಳೆ ಪದವಿ ಪಡೆದ ವಿದ್ಯಾರ್ಥಿಗಳು ಅತೀ ಸಂತಸದಿಂದ ಸಂಭ್ರಮಿಸುತ್ತಿದ್ದು ಅವರ ಪಾಲಕರ ಮೊಗದಲ್ಲಿಯೂ ಮಂದಹಾಸ ಮೂಡಿದ್ದ ಈ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಡಾ.ಶ್ರೀಕಾಂತ ಪುಲಾರಿ, ಅಧ್ಯಕ್ಷರಾಗಿ ಡಾ.ಅಶೋಕ ಕುಮಾರ ಶೆಟ್ಟಿ, ಡಾ ನಾಮದೇವ ಕೆ ಮಾಳಗಿ, ಡಾ ಸರೋಜ ತಿಗಡಿ, ಕಾಂಚನಮಾಲ ಸೂರ್ಯವಂಷಿ, ಡಾ ಪ್ರಕಾಶ್ ಕೊಡ್ಲಿ, ಪಂಗಣವರ ಸೇರಿದಂತೆ ಹಲವಾರು ವಿದ್ಯಾರ್ಥಿಗಳು, ಪಾಲಕರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಉತ್ತಮ ಶ್ರೇಣಿ: ಉತ್ತೀರ್ಣ
ಸ್ನಾತಕೋತ್ತರದಲ್ಲಿ ಒಟ್ಟು 21 ವಿದ್ಯಾರ್ಥಿಗಳಿದ್ದು ಎಲ್ಲರೂ ಡಿಸ್ಟಿಂಕ್ಷನ್ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ, ಇನ್ನು ಪದವಿ ಹಂತದಲ್ಲಿ ಒಟ್ಟು 94 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅದರಲ್ಲಿ 92 ಜನ ಡಿಸ್ಟಿಂಗನೇಷನ ಶ್ರೇಣಿಯಲ್ಲಿ ಪಾಸಾಗಿದ್ದು ಉಳಿದ 2 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಎಂದು ಬಿಮ್ಸನ ನಿರ್ದೇಶಕರಾದ ಅಶೋಕ ಕುಮಾರ ಶೆಟ್ಟಿ ಹೇಳಿದರು.

ಪಾರಮಾರ್ಥ, ಪ್ರಾಪಂಚಿಕ ನೆಲೆಯಲ್ಲಿ ಕಾವ್ಯ ಸೃಷ್ಟಿ

ಮೂಡಲಗಿ: ಕವಿ ಮನೆ ಒಳಗೆ ಕಾವ್ಯವನ್ನು ಅವಲೋಕನ ಮಾಡುವ ಕಾರ್ಯ ನಿಜಕ್ಕೂ ಶ್ಲಾಘನೀಯ. ಸಮಕಾಲೀನ ಕವಿಗಳಲ್ಲಿ ಇವತ್ತಿಗೂ ಹಳೆಗನ್ನಡ ಸಾಹಿತ್ಯ ಹಾಗೂ ಷಟ್ಪದಿಗಳ ಲಕ್ಷಣಗಳನ್ನು ಒಳಗೊಂಡ ಕಾವ್ಯ ಮೂಡಿ ಬಂದಿರುವುದು ನಿಜಕ್ಕೂ ಅಭಿನಂದನೀಯ. ಭಟ್ಟನೀಯ ಭ್ರಾಂತಿ ಚಿತ್ತ ಕವನ ಸಂಕಲನ ಓದುಗರಿಗೆ ಒಂದು ಕ್ಷಣ ಚಿಂತನೆಗೆ ಹಚ್ಚುವ ಮೂಲಕ ಆಧ್ಯಾತ್ಮಿಕ ಜ್ಞಾನ ನೀಡುವಲ್ಲಿ ಯಶಸ್ವಿಯಾಗಿದೆ. ಎಂದು ಕಲ್ಲೋಳಿಯ ರಾಮಲಿಂಗೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಹೇಳಿದರು.
ಚುಟುಕು ಸಾಹಿತ್ಯ ಪರಿಷತ್ತು ತಾಲೂಕು ಘಟಕದಕವಿಮನೆಚಿದಾನಂದಮಹೂಗಾರ ಇವರ ಕವಿ ಮನೆಯೊಳ್ ಕಾವ್ಯಾವಲೋಕನ ಎಂಬ ಕಾರ್ಯಕ್ರಮದಲ್ಲಿ ಇವರ ಭಟ್ಟನೀಯ ಭ್ರಾಂತಿ ಚಿತ್ತ ಕಾವ್ಯ ಕೃತಿಯ ಕಾವ್ಯಾವಲೋಕನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು
ಕಾವ್ಯ ಕೃತಿಯನ್ನು ಅವಲೋಕಿಸಿದ ಕಲ್ಲಪ್ಪ ಪಿ ಡೋಣಿ ಇವರು ಭಟ್ಟನೀಯ ಭ್ರಾಂತಿ ಚಿತ್ತ ಕವನ ಸಂಕಲನ ಓದುಗರಿಗೆ ಪಾರಮಾರ್ಥ ಮತ್ತು ಪ್ರಾಪಂಚಿಕ ಬದುಕಿನ ಕುರಿತು ಹೇಳಿ ಕೊಡುತ್ತದೆ. ಜೊತೆಗೆ ಸಹೃದಯರ ಮನವನ್ನು ತಣಿಸಲು ಅನುಕೂಲ ಮಾಡಿಕೊಡುವ ಕವನಗಳಿವೆ. ಎಂದು ಮಾರ್ಮಿಕವಾಗಿ ಹೇಳಿದರು. ಚು.ಸಾ.ಪ ಅಧ್ಯಕ್ಷ ಚಿದಾನಂದ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು.
ಕವಿ ಪರಿಚಯವನ್ನೂ ಪ್ರಕಾಶ ಮೇತ್ರಿ ನಡೆಸಿಕೊಟ್ಟರು.ಹಿರಿಯ ಸಾಹಿತಿಗಳಾದ ಸಿದ್ರಾಮು ದ್ಯಾಗಾನಟ್ಟಿ, ಸಿದ್ದು ಮಹಾರಾಜ,ದುರ್ಗಪ್ಪ ದಾಸನ್ನವರ, ನಿಂಗಪ್ಪ ಸಂಗ್ರೇಜಿಕೊಪ್ಪ, ಶಿವರಾಜ ಕಾಂಬಳೆ,ಸಿದ್ದಣ್ಣ ನಡಗಡ್ಡಿ , ಶಿವಾನಂದ ಮಧರಕಂಡಿ,ಶೈಲಜಾ ಬಡಿಗೇರ , ಗೋದಾವರಿ ದೇಶಪಾಂಡೆ, ಡಾ.ಪಂಚಾಕ್ಷರಿ ದೇಸಾರಟ್ಟಿ, ಲಕ್ಕಪ್ಪ ಕಬ್ಬೂರ, ರೇವಪ್ಪ ಬಿಳ್ಳೂರ ಹಾಗೂ ಶಿವಾಪೂರ ಹ ಗ್ರಾಮದ ಗುರು ಹಿರಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
ವಿಶ್ವನಾಥ ಹೂಗಾರ ಪ್ರಾರ್ಥಿಸಿದರು,ಯಲ್ಲಪ್ಪ ಗದಾಡಿ ನಿರೂಪಿಸಿದರು.ವಿವೇಕಾನಂದ ಹೂಗಾರ ವಂದಿಸಿದರು.



ಮಹಾವೀರರ ಜನ್ಮ ಕಲ್ಯಾಣೋತ್ಸವ

ಮುಗಳಖೋಡ: ಅಹಿಂಸೆ, ಸತ್ಯ, ಮತ್ತು ಅಪರಿಗ್ರಹದ ತತ್ವಗಳನ್ನು ಸಾರಿದ ಮಹಾವೀರರ ಜಯಂತಿಯ ಅಂಗವಾಗಿ ಮುಗಳಖೋಡ ಜೈನ ಹಳೆಯ ದೇವಾಲಯದಲ್ಲಿ ಸೋಮವಾರ ವಿಶೇಷ ಪೂಜೆ ಮತ್ತು ಪ್ರಾರ್ಥನೆಗಳ ಮೂಲಕ ಅದ್ದೂರಿಯಾಗಿ ಭಗವಾನ್ ಮಹಾವೀರರ ಜನ್ಮ ಕಲ್ಯಾಣಕವನ್ನು ಆಚರಿಸಲಾಯಿತು.
ಸೋಮವಾರ ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ, 10 ಗಂಟೆಗೆ ಪಲ್ಲಕ್ಕಿ ಉತ್ಸವ, 11 ಗಂಟೆಗೆ ವಿವಿಧ ಪ್ರಾರ್ಥನೆಯೊಂದಿಗೆ ಮಾಹಾವೀರ ಮೂರ್ತಿಗೆ ಪಂಚಾಮೃತ ಅಭಿಷೇಕ ನಡೆಯಿತು. ನಂತರ ಸಾಯಂಕಾಲ 5 ಗಂಟೆಗೆ ಮಹಾವೀರ ಭಗವಾನರ ಭಾವ ಚಿತ್ರ ತೊಟ್ಟಿಲಿನಲ್ಲಿ ಇಟ್ಟು ಮುತ್ತೈದೆಯರು ಜೋಗುಳ ಹಾಡುತ್ತಾ ತೊಟ್ಟಿಲು ತೂಗುತ್ತಾ ಮಹಾವೀರ ಎಂದು ನಾಮಕರಣ ಮಾಡಿದರು.
ಫೋಟೋ ಪೂಜೆಯನ್ನು ಮುಖಂಡ ಸಂಜಯ ಬಾಬಣ್ಣವರ, ವಿನೋದ ಬಾಬಣ್ಣವರ ನೆರವೇರಿಸಿದರು.
ಉಪನ್ಯಾಸಕ ಗೋಕಾಕದ ರಾಮಚಂದ್ರ ಕಾಕಡೆ ಮಾತನಾಡಿ, ಮಹಾವೀರ ಜೈನ ಧರ್ಮದ ಮಹಾನ್ ಚಿಂತಕ, ಸಂಸ್ಥಾಪಕ, ಸಮಾಜ ಸುಧಾರಕರಾಗಿ ಧರ್ಮ ಬೆಳವಣಿಗೆಗೆ ತಮ್ಮ ಜೀವನುದ್ದಕ್ಕೂ ಶ್ರಮಿಸಿದ ಏಕೈಕ ವ್ಯಕ್ತಿ ಮಹಾವೀರರು ಎಂದರು.
ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಚವಿವ ಸಂಘದ ಅಧ್ಯಕ್ಷ ಹಾಗೂ ಪುರಸಭೆ ಸದಸ್ಯ ಸಂಜಯ್ ಕುಲಿಗೋಡ ಮಾತನಾಡಿ, ಧರ್ಮ ಸುಧಾರಣೆಯ ಜೊತೆಗೆ ಶಾಂತಿ ಸೌಹಾರ್ದತೆಯ ಉಪದೇಶಗಳನ್ನು ಸಾರಿದ ಮಹಾತ ಭಗವಾನರ ಆದರ್ಶ ಪಾಲಿಸೋಣ ಎಂದರು. ಜೈಪಾಲ ಹುಲ್ಲೋಳ್ಳಿ, ಸುರೇಶ ಬಾಬಣ್ಣವರ, ಸಂಜಯ ಕುಲಿಗೋಡ, ಕುಮಾರ ಬಾಬಣ್ಣವರ, ವಿನೋದ ಬಾಬಣ್ಣವರ, ರವೀಂದ್ರ ಬಾಬಣ್ಣವರ, ಮಹಾವೀರ ಬಾಬಣ್ಣವರ ಸರ್, ಅನೀಲ ಬಾಬಣ್ಣವರ, ಪರಾಪಾಸಾಬ ಪಾಟೀಲ, ಸಂಜು ಶ್ರೀಮಂತ ಬಾಬಣ್ಣವರ, ಪಂಡಿತ ಕುಲಭೂಷನ ಉಪಾದ್ಯಾಯ, ಸುಕುಮಾರ ಬಾಬಣ್ಣವರ , ನೇಮಣ್ಣ ಬಾಬಣ್ಣವರ ಸೇರಿದಂತೆ ಇತರರು ಇದ್ದರು.



ರಜಾ ಅವಧಿಗೆ ಮನೆಗೆಲಸ ಸಹಕಾರಿ: ಡಾ.ಈಶ್ವರ ಉಳ್ಳಾಗಡ್ಡಿ

ಸವದತ್ತಿ: ತಾಲೂಕಿನ ವಿವಿಧ ಎಸ್ ಎಸ್ ಎಲ್ ಸಿ ಪರೀಕ್ಷಾ ಕೇಂದ್ರಗಳಿಗೆ ಶಿಕ್ಷಣ ಇಲಾಖೆ ಧಾರವಾಡ ಅಪರ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ನೇತೃತ್ವದಲ್ಲಿ ಉಪ ನಿರ್ದೇಶಕ ಗಿರೀಶ್ ಪದಕಿ, ಅಶೋಕ್ ಕುಂಬಾರ ಅವರು ಭೇಟಿ ನೀಡಿ ವ್ಯವಸ್ಥೆಯನ್ನು ಅವಲೋಕಿಸಿದರು.
ನಂತರ ಪ್ರವಾಸಿ ಮಂದಿರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸವದತ್ತಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಸವದತ್ತಿ ಕಚೇರಿಯಿಂದ ರಚಿಸಿದ 6ಮತ್ತು7ನೇ ತರಗತಿಯ ಮಕ್ಕಳಿಗೆ ಬೇಸಿಗೆ ರಜಾ ಅವಧಿಯ ಸಾಹಿತ್ಯವನ್ನು ವೀಕ್ಷಿಸಿ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ರಜಾ ಅವಧಿಯಲ್ಲಿ ಮಕ್ಕಳ ಕಲಿಕೆಗೆ ಇದು ಉತ್ತಮ ಮಾರ್ಗದರ್ಶಿಯಾಗಲಿದೆ ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ , ನಗರ ಸಭೆ ಆಯುಕ್ತ ಗದಗಿಮಠ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ, ಕ್ಷೇತ್ರ ಸಮನ್ವಯ ಅಧಿಕಾರಿ ಹಾಗೂ ಅನುಷ್ಠಾನ ಅಧಿಕಾರಿ ಬಿ ಎನ್ ಬ್ಯಾಳಿ ಹಾಗು ಅಧಿಕಾರಿಗಳು,ಶಿಕ್ಷಕರು ಉಪಸ್ಥಿತರಿದ್ದರು.



ಆನಂದ ಯರಡತ್ತಿಗೆ ಕನ್ನಡ ರತ್ನ ಪ್ರಶಸ್ತಿ

ಮುಗಳಖೋಡ: ಬೆಳಗಾವಿ ನಗರದ ಅಮ್ಮಾ ಪ್ರತಿಷ್ಠಾನದ ವತಿಯಿಂದ ಇತ್ತೀಚಿಗೆ ಆಯೋಜಿಸಿದ ವಿವಿಧ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಕರ್ನಾಟಕ ಚಾಲಕರ ಒಕ್ಕೂಟದ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷರಾದ ಮುಗಳಖೋಡ ಪಟ್ಟಣದ ಶ್ರೀ ಆನಂದ ಯರಡತ್ತಿ ಅವರ ಚಾಲಕರ ಹಾಗೂ ಕನ್ನಡಪರ ಸೇವೆಗಳನ್ನು ಗಮನಿಸಿ ಕನ್ನಡ ರತ್ನ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಅಮ್ಮಾ ಪ್ರತಿಷ್ಠಾನದ ಅಧ್ಯಕ್ಷ ಬಾಳಾಸಾಹೇಬ ಉದಗಟ್ಟಿ ಅವರ ನೇತೃತ್ವದಲ್ಲಿ ಹಾಗೂ ಹಲವಾರು ಗಣ್ಯಮಾನ್ಯರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.
ಈ ಸಂದರ್ಭದಲ್ಲಿ ಶಾಸಕ ವಿನಯ್ ಕುಲಕರ್ಣಿ, ಕರ್ನಾಟಕ ಚಾಲಕರ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯಕ್ಷ ಅರುಣ್ ಪಾಟೀಲ, ಅಮ್ಮಾ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಎಂ ಎಲ್ ಪಿರ್ಜಾದೆ, ಒಕ್ಕೂಟದ ಅಥಣಿ ತಾಲೂಕಾ ಅಧ್ಯಕ್ಷರಾದ ಯಾಸೀನ್ ಇನಾಮ್ದಾರ ಅಮ್ಮಾ ಪ್ರತಿಷ್ಠಾನದ ಸರ್ವ ಸದಸ್ಯರು, ಕನ್ನಡಪರ ಸಂಘಟಕರು ಇದ್ದರು.



ಕಿತ್ತೂರು ಚನ್ನಮ್ಮ ಸಮಾಧಿ ಸಮಗ್ರ ಅಭಿವೃದ್ಧಿಗೊಳಿಸಿ

ಬೈಲಹೊಂಗಲ: ರಾಜ್ಯದಲ್ಲಿಯೇ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಅನೇಕ ಹಗರಣಗಳು ನಡೆದರೂ ಕೂಡ ಯಾವುದೇ ಕ್ರಮವಹಿಸಿಲ್ಲ. ಕಿತ್ತೂರು ಚನ್ನಮ್ಮ ಅಭಿವೃದ್ಧಿ ಕಾಮಗಾರಿ ಹೆಸರಿನಲ್ಲಿ ಭ್ರಷ್ಟಾಚಾರ ಕೇಳಿ ಬಂದಿದೆ. ಚನ್ನಮ್ಮ ಸಮಾಧಿ ರಾಷ್ಟ್ರೀಯ ಸ್ಮಾರಕ ಕುರಿತು ಕಳೆದ 23ದಿನಗಳಿಂದ ಹೋರಾಟ ನಡೆದರೂ ವಿಧಾನ ಮಂಡಲದಲ್ಲಿ ಈ ಭಾಗದ ಶಾಸಕರು ಯಾವುದೇ ಚರ್ಚೆ ಮಾಡದೆ ಈ ನಾಡಿಗೆ ಅಗೌರವ ತೋರಿದ್ದಾರೆ ಎಂದು ಶಾಸಕ ಅರವಿಂದ ಬೆಲ್ಲದ ಹೇಳಿದರು.
ಅವರು ವೀರರಾಣಿ ಕಿತ್ತೂರು ಚನ್ನಮ್ಮ ಸಮಾಧಿ ಸಮಗ್ರ ಅಭಿವೃದ್ಧಿಗೊಳಿಸಿ ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಣೆ ಮಾಡಬೇಕು ಎಂದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಡೆದಿರುವ 22ನೇ ದಿನದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದಲ್ಲಿ ಮಾತನಾಡಿದರು.
ಬರುವ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆ ಮಾಡಿ ನ್ಯಾಯ ಒದಗಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅವರು ತಿಳಿಸಿದರು.
ಮುಖ್ಯಮಂತ್ರಿಗಳು ಕಾಟಾಚಾರಕ್ಕೆ ಕಿತ್ತೂರು ಚನ್ನಮ್ಮ ಸಮಾಧಿ ಸ್ಥಳ ರಾಷ್ಟ್ರೀಯ ಸ್ಮಾರಕವನ್ನಾಗಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಸರ್ಕಾರದ ಯಾವುದೇ ಶಿಷ್ಟಾಚಾರ ಪಾಲನೆ ಮಾಡಿಲ್ಲ. ಶಿಷ್ಟಾಚಾರ ಪಾಲಿಸಿ ಸದನದಲ್ಲಿ ಅಂಗಿಕರಿಸಿದರೆ ನಾವು ಬಿಜೆಪಿ ನಾಯಕರು ಕೇಂದ್ರ ಸರ್ಕಾರ ಮೇಲೆ ಒತ್ತಡ ತಂದು ಚನ್ನಮ್ಮ ಸಮಾಧಿ ರಾಷ್ಟ್ರೀಯ ಸ್ಮಾರಕವನ್ನಾಗಿಸಲು ಒತ್ತಡ ಹೇರಲಾಗುವುದು ಎಂದರು.
ಕೂಡಲ ಸಂಗಮ ಲಿಂಗಾಯತ ಪಂಚಮಸಾಲ ಮಹಾಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಚನ್ನಮ್ಮಾಜಿಗೆ ಅವಮಾನ ಮಾಡಿದರೆ ಅದು ಭಾರತ ಮಾತೆಗೆ ಅವಮಾನ ಮಾಡಿದ್ದಂತಾಗುತ್ತದೆ. ಸರ್ಕಾರ, ಶಾಸಕರು ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸದೆ ಹೋದರೆ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಲಾಗುವುದು ಎಂದರು.
ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ಕಲಾವಿದ ಸಿ.ಕೆ.ಮೆಕ್ಕೇದ, ಸಾಮಾಜಿಕ ಹೋರಾಟಗಾರ ರಫೀಕ ಬಡೆಘರ, ಕಿತ್ತೂರು ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ, ವಕೀಲ ಎಫ್.ಎಸ್.ಸಿದ್ದನಗೌಡರ, ಮಲ್ಲಿಕಾರ್ಜುನ ಹುಂಬಿ, ಬೀರಪ್ಪ ದೇಶನೂರ ಮಾತನಾಡಿದರು.
ಹಿರಿಯ ರೈತ ಮುಖಂಡ ಅಪ್ಪಾಸಾಹೇಬ ಲಕ್ಕುಂಡಿ, ಹಿರಿಯ ನ್ಯಾಯವಾದಿ ಎಂ.ವೈ.ಸೋಮಣ್ಣವರ, ಮಡಿವಾಳಪ್ಪ ಹೋಟಿ, ಶ್ರೀಶೈಲ ಯಡಳ್ಳಿ, ಸೋಮನಾಥ ಸೊಪ್ಪಿಮಠ, ರಾಜು ಕುಡಸೋಮಣ್ಣವರ, ಮಹೇಶ ಹರಕುಣಿ, ಈಶ್ವರ ಕೊಪ್ಪದ, ರಿತೇಶ ಪಾಟೀಲ, ಸುಭಾಷ ಬಾಗೇವಾಡಿ, ಮುರುಗೇಶ ಗುಂಡ್ಲೂರ, ನಿಂಗಪ್ಪ ಚೌಡನ್ನವರ, ಮಹಾಂತೇಶ ಗುಂಡ್ಲೂರ, ಆನಂದ ಮೂಗಿ, ಆನಂದಗೌಡ ಪಾಟೀಲ, ದುಂಡೇಶ ಗರಗದ, ಚನ್ನಪ್ಪ ಹಾದಿಮನಿ, ಮಹಾಂತೇಶ ಕಮತ, ಉದಯ ಕೊಟಬಾಗಿ, ಆಶಾ ಕಸಮಳಗಿ, ಶಾಂತಾ ಮಡ್ಡಿಕರ, ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು, ರೈತರು, ಕನ್ನಡಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು. ತಹಶೀಲ್ದಾರ ಹೆಚ್.ಎನ್.ಶಿರಹಟ್ಟಿ ಮನವಿ ಸ್ವೀಕರಿಸಿದರು.



ನಡು ರಸ್ತೆಯಲ್ಲಿಯೇ ಅಡುಗೆ ಮಾಡಿ ಊಟ
ಮುಂಜಾಗ್ರತ ಕ್ರಮವಾಗಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಒಬ್ಬರು ಡಿವೈಎಸ್ಪಿ, ಇಬ್ಬರು ಸಿಪಿಐ, ಐದು ಪಿಎಸ್ಐ ಸೇರಿದಂತೆ 200 ಪೊಲೀಸ್ ಸಿಬ್ಬಂದಿ, ಎರಡು ಕೆ.ಎಸ್.ಆರ್.ಪಿ. ತುಕಡಿ ನಿಯೋಜನೆ ಮಾಡಲಾಗಿತ್ತು. ಹೋರಾಟಗಾರರು ನಡು ರಸ್ತೆಯಲ್ಲಿಯೇ ಅಡುಗೆ ಮಾಡಿ ಊಟ ಮಾಡಿದರು.

ಪಾಲಿಕೆ ಆಯುಕ್ತರ ಕಚೇರಿ ಎದುರು ಕಾರ್ಪೊರೇಟರ್ ನಾಶಿಪುಡಿ ಧರಣಿ

ಬೆಳಗಾವಿ: ಸರ್ಕಾರದಿಂದ ನಾಮನಿರ್ದೇಶಿತ ಕಾರ್ಪೊರೇಟರ್ ದಿನೇಶ್ ನಾಶಿಪುಡಿ ಅವರು ಮಹಾನಗರ ಪಾಲಿಕೆ ಆಯುಕ್ತರ ಕಚೇರಿ ಎದುರು ಧರಣಿ ಪ್ರತಿಭಟನೆ ನಡೆಸಿದರು. ಅನಧಿಕೃತ ಕಟ್ಟಡಗಳ ಕುರಿತ ಹೊಸ ಸರ್ಕಾರಿ ಆದೇಶವನ್ನು ತಕ್ಷಣ ಜಾರಿಗೆ ತರಬೇಕೆಂದು ಒತ್ತಾಯಿಸಿದರು.
ಮಂಗಳವಾರ ಬೆಳಿಗ್ಗೆ ಮಹಾನಗರ ಪಾಲಿಕೆಯ ಆಯುಕ್ತ ಕಾರ್ತಿಕ್ ಎಂ ಅವರ ಕಚೇರಿ ಹೊರಗೆ ನೆಲದ ಮೇಲೆ ಕುಳಿತು ಪ್ರತಿಭಟಿಸಿದ ನಾಶಿಪುಡಿ ಅವರು, ಕಟ್ಟಡ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ನಾಗರಿಕರಿಗೆ ಹಳೆಯ ನಿಯಮದಂತೆ ವರ್ಷಾವರ್ಷ ಡಬಲ್ ತೆರಿಗೆ ವಿಧಿಸಲಾಗುತ್ತಿದೆ ಎಂದು ಪಾಲಿಕೆಯ ಅಧಿಕಾರಿಗಳ ವಿರುದ್ಧ ಆರೋಪ ಹೊರ ಹಾಕಿದರು.
2024ರ ಸೆಪ್ಟೆಂಬರ್ 10ರಂದು ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶದಲ್ಲಿ ಅನಧಿಕೃತ ಕಟ್ಟಡಗಳಿಗೆ ಮೊದಲ ವರ್ಷಕ್ಕೆ ಮಾತ್ರ ಪ್ರಮಾಣಿತ ತೆರಿಗೆಯ ದುಪ್ಪಟ್ಟು ವಿಧಿಸಿ, ನಂತರದ ವರ್ಷಗಳಲ್ಲಿ ಸಾಮಾನ್ಯ ಏಕ ತೆರಿಗೆ ವಿಧಿಸಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ ಎಂದು ವಿವರಿಸಿದರು.
ಈ ಪ್ರತಿಭಟನೆ ನಗರದಲ್ಲಿ ಚರ್ಚೆಗೆ ಕಾರಣವಾಗಿದ್ದು, ಮಹಾನಗರ ಪಾಲಿಕೆಯ ಆಡಳಿತ ಕ್ರಮಗಳ ವಿರುದ್ಧ ಮತ್ತೊಮ್ಮೆ ಪ್ರಶ್ನೆಗಳು ಎದ್ದಿವೆ.



ಸರ್ಕಾರದ ಹೊಸ ಆದೇಶ ಜಾರಿಗೆ ಒತ್ತಾಯ

ಕಿರುಸುದ್ದಿ

ಇಂದು ಬಾಗಲಕೋಟೆಗೆ ಡಿಕೆಶಿ, ಸುರ್ಜೆವಾಲ



◆ **ಬಾಗಲಕೋಟೆ:** ಉಪಚುನಾವಣೆಯಲ್ಲಿ ಕಾಂಗ್ರೆಸ್ ಮತದಾರರ ಮನಸ್ಸು ಗೆಲ್ಲುವಲ್ಲಿ ಶ್ರಮ ವಹಿಸಿದೆ. ನಾವು ಮಾಡಿದ ಕೆಲಸ ಜನರಿಗೆ ತಿಳಿಸುವ ಕೆಲಸವಾಗಿದ್ದು, ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ ಸುರ್ಜೆವಾಲ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ಏ.1ರಂದು ಬಾಗಲಕೋಟೆ ನಗರಕ್ಕೆ ಆಗಮಿಸಲಿದ್ದಾರೆ ಎಂದು ಚುನಾವಣಾ ಉಸ್ತುವಾರಿ ವಸಂತಕುಮಾರ ಹೇಳಿದರು. ನವನಗರದ ಕಾಂಗ್ರೆಸ್ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಈಗಾಗಲೇ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ಕೈಗೊಂಡಿದ್ದು ಆಯಾ ವಿಭಾಗಗಳಲ್ಲಿ ಪ್ರತ್ಯೇಕ ತಂಡಗಳನ್ನು ನಿಯೋಜಿಸಿ ಕೆಲಸ ಮಾಡಲಾಗುತ್ತಿದೆ. ಪ್ರಚಾರದ ಅಬ್ಬರ ನೋಡಿದರೆ ನಮ್ಮ ಪಕ್ಷದ ಅಭ್ಯರ್ಥಿ ಭಾರೀ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದರು. ಚುನಾವಣೆ ಹಿನ್ನೆಲೆಯಲ್ಲಿ ಏ.1ರಂದು ಕಂಠಿ ರೇಸಾರ್ಟ್‌ನಲ್ಲಿ ಬೆಳಗ್ಗೆ 10 ಗಂಟೆಗೆ ರಣದೀಪಸಿಂಗ್ ಸುರ್ಜೆವಾಲ ಹಾಗೂ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ಪಕ್ಷದ ಹಾಲಿ ಶಾಸಕರು, ಮಾಜಿ ಶಾಸಕರು, ವಿಧಾನ ಪರಿಷತ್ ಶಾಸಕರು, ಮುಖಂಡರು, ಪದಾಧಿಕಾರಿಗಳ ಸರಣಿ ಸಭೆ ನಡೆಸಲಿದ್ದಾರೆ ಎಂದರು. ಶಾಸಕರಾದ ಜೆ.ಟಿ.ಪಾಟೀಲ, ಹಂಪನಗೌಡ ಬಾದರ್ಲಿ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ನಾಗರಾಜ ಹದ್ಲಿ, ಸಿಕಂದರ ಅಥಣಿ ಇದ್ದರು.

ಇಂದಿನಿಂದ ಜನಗಣತಿ ಆರಂಭ

◆ **ಜಮಖಂಡಿ:** ಸರ್ಕಾರದ ಆದೇಶದಂತೆ ಜನಗಣತಿ 2027ರ ಅಂಗವಾಗಿ ಸ್ವಯಂ ಗಣನೆ ಪ್ರಕ್ರಿಯೆ ಏ.1ರಿಂದ 15ರ ವರೆಗೆ ನಡೆಸಲಾಗುತ್ತದೆ. ಈ ಸಮಯದಲ್ಲಿ ಸಕರರದ ಅಂತರ್ಜಾಲದಲ್ಲಿ ಸ್ವಯಂ ಆಗಿ ಜನರು ತಮ್ಮ ವಿವರವನ್ನು ನೀಡಬಹುದು ಎಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಹೇಳಿದರು. ಈ ಅವಧಿಯಲ್ಲಿ ಪ್ರತಿಯೊಬ್ಬ ಕುಟುಂಬವೂ ತಮ್ಮ ಮನೆಯ ಮಾಹಿತಿ ನಿಖರವಾಗಿ ಮತ್ತು ಸಂಪೂರ್ಣವಾಗಿ ಸ್ವಯಂ ಗಣನ ವ್ಯವಸ್ಥೆಯ ಮೂಲಕ ಸಲ್ಲಿಸಬೇಕು. ಈ ಪ್ರಕ್ರಿಯೆ ಸರಿಯಾದ, ಪಾರದರ್ಶಕ ಹಾಗೂ ಸಮಯೋಚಿತ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿಯಾಗುತ್ತದೆ, ಇದು ಭವಿಷ್ಯದ ಯೋಜನೆ ಮತ್ತು ಅಭಿವೃದ್ಧಿಗೆ ಬಹಳ ಮುಖ್ಯವಾಗಿದೆ. ನಿಗದಿ ಮಾಡಿದ ಅವಧಿಯೊಳಗೆ https://se.census.gov.in ಈ ಅಂತರ್ಜಾಲವನ್ನು ಬಳಿಸಿ ಸ್ವಯಂ ಗಣನೆ ಪ್ರಕ್ರಿಯೆ ಪೂರ್ಣಗೊಳಿಸಲು ವಿನಂತಿಸಿಕೊಳ್ಳಲಾಗುತ್ತದೆ. ಏ.15ರಿಂದ ಮೇ 16ರ ವರೆಗೆ ಗಣತಿದಾರರು ಮನೆಗೆ ಬಂದಾಗ ನೀವು ನೀಡಿದ ಅಂತರ್ಜಾಲ ಮೂಲಕ ಮಾಡಿದ ಮಾಹಿತಿ ನೀಡಬೇಕು. ಈ ಐಡಿಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕೆಂದರು.

ನಾಳೆ ಹನುಮ ಜಯಂತಿ

◆ **ಮಹಾಲಿಂಗಪುರ:** ಸ್ಥಳೀಯ ಜಿಎಲ್‌ಬಿಸಿ ಆವರಣದಲ್ಲಿರುವ ಹನುಮಂತೇಶ್ವರ ದೇವಸ್ಥಾನಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಾ.2ರಂ ದು ಗುರುವಾರ ಹನುಮ ಜಯಂತಿಯ ಪ್ರಯುಕ್ತ ಸುವರ್ಣ ಮಹೋತ್ಸವದ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅರ್ಚಕ ಮಹಾಲಿಂಗ ಪೂಜಾರಿ ತಿಳಿಸಿದ್ದಾರೆ. ಬೆಳಗ್ಗೆ 5 ಗಂಟೆಗೆ ರುದ್ರಾಭಿಷೇಕ, 6.30ಕ್ಕೆ ನಾಮಕರಣ, 7 ಗಂಟೆಗೆ ಪವಮಾನ ಹೋಮ ಹಾಗೂ ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ಸೇರಿದಂತೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ತಿಳಿಸಿದ್ದಾರೆ.



ಇಳಕಲ್: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟೆ, ತಾಲೂಕು ಕಾನೂನು ಸೇವೆಗಳ ಸಮಿತಿ ಹುನಗುಂದ ಹಾಗೂ ವಕೀಲರ ಸಂಘ ಇಳಕಲ್ ಹುನಗುಂದ ಸಹಯೋಗದಲ್ಲಿ ಕಾಯಂ ಜನತಾ ನ್ಯಾಯಾಲಯದ ಮಹತ್ವ ಹಾಗೂ ಕಾರ್ಯವೈಖರಿ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಇಳಕಲ್ ನಗರದ ನ್ಯಾಯಾಲಯದಲ್ಲಿ ನಡೆಯಿತು.



ಗುಳೇದಗುಡ್ಡ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಭಗವಾನ ಮಹಾವೀರರ 2625 ಜಯಂತಿ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಉಪತಹಶೀಲ್ದಾರ್ ಜಿ.ವಿ ರಜಪೂತ್ ಪೂಜೆ ಸಲ್ಲಿಸಿದರು.

ಅಹಿಂಸೆ ಸಾರಿದವರು ಮಹಾವೀರರು

◆ **ಗುಳೇದಗುಡ್ಡ:** ಜೈನ ಧರ್ಮ ಭಾರತದ ಅತ್ಯಂತ ಪುರಾತನ ಧರ್ಮಗಳಲ್ಲಿ ಒಂದಾಗಿದೆ. 24ನೇ ತೀರ್ಥಂಕರಾದ ಭಗವಾನ ಮಹಾವೀರರು ಅಹಿಂಸೆಯೇ ಪರಮೋಧರ್ಮ ಎಂಬ ಸರ್ವಕಾಲಿಕ ಸತ್ಯದ ಸಂದೇಶವನ್ನು ಜಗತ್ತಿಗೆ ನೀಡಿದ ಮಹಾಪುರುಷರು. ಜಗತ್ತಿನ ಎಲ್ಲ ಜೀವರಾಶಿಗಳಿಗೂ ಬದುಕುವ ಸಮಾನ ಹಕ್ಕು ಇದೆ ಎಂದು ಅವರು ಪ್ರತಿಪಾದಿಸಿದರು ಎಂದು ಉಪತಹಶೀಲ್ದಾರ ಜಿ.ವಿ ರಜಪೂತ್ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಭಗವಾನ ಮಹಾವೀರರ 2625 ಜಯಂತಿ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ವರ್ಧಮಾನ ಶ್ವೇತಾಂಬರ ಸ್ಥಾನಿಕವಾಸಿ ಜೈನ ಸಂಘದ ಅಧ್ಯಕ್ಷ ರಾಹುಲ್ ಗುಂದೇಚಾ ಮಾತನಾಡಿ, ಭಗವಾನ ಮಹಾವೀರರು ಈ ದೇಶದ ಮಹಾನ್ ಧಾರ್ಮಿಕ ಪುರುಷರು. ಅಹಿಂಸೆ ಹಾಗೂ ಬದುಕು, ಬದುಕಲು ಬಿಡು ಎಂಬ ತತ್ವದ ಮೇಲೆ ನಿಂತಿರುವ ಜೈನ ಧರ್ಮದ ತತ್ವಸಿದ್ಧಾಂತಗಳನ್ನು ಬೋಧಿಸಿದರು. ಮಹಾವೀರರ ಸತ್ಯ, ಅಹಿಂಸೆ ಸಿದ್ಧಾಂತಗಳನ್ನು ಎಲ್ಲರೂ ಅನುಸರಿಸಿ, ಶಾಂತಿ, ಸಹಬಾಳ್ವೆಯಿಂದ ಬದುಕುಬೇಕು ಎಂದರು. ಮಹಾವೀರ ಕಠಾರಿಯಾ, ಓಂಪ್ರಕಾಶ ಕಠಾರಿಯಾ, ನರೇಂದ್ರ ಗುಗಲೇ, ಸುರೇಶ ಕಠಾರಿಯಾ, ರಿಷಬ್ ಕಠಾರಿಯಾ, ವಿನಯ ಕಠಾರಿಯಾ, ವಿಕ್ರಮ ಕಠಾರಿಯಾ, ಜೈಮಲ್ ಶ್ರಮನಿ ಸಂಘದ ಅಧ್ಯಕ್ಷೆ ಪ್ರತಿಭಾ ಕಠಾರಿಯಾ, ಆಶಾ ಗುಂದೇಚಾ, ಸುನೀತಾ ಕಠಾರಿಯಾ, ನಂಬ್ರತಾ ಕಠಾರಿಯಾ, ವೀನಾಬಾಯಿ ಕಠಾರಿಯಾ, ಶಾಲು ಕಠಾರಿಯಾ, ಸಂಗೀತಾ ಗುಗಳೇ, ಸಿಬ್ಬಂದಿ ಎಂ.ಎಂ.ತುಪ್ಪದ ಮತ್ತಿತರರು ಇದ್ದರು.



ಕೆರೂರ: ಪಟ್ಟಣದ ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಸೋಮವಾರ ಭಗವಾನ ಮಹಾವೀರ ಜಯಂತಿ ಆಚರಿಸಲಾಯಿತು. ಪಟ್ಟಣ ಪಂಚಾಯತಿ ಕಾರ್ಯಾಲಯದ ಸಭಾಭವನದಲ್ಲಿ ಭಗವಾನ ಮಹಾವೀರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ರಮೇಶ ಮಾಡಬಾಳ ಪೂಜೆ ಮಾಡಿ ಪುಷ್ಪಾರ್ಚನೆ ಸಲ್ಲಿಸಿದರು. ಪಪಂ ಸಿಬ್ಬಂದಿಗಳಾದ ಮಹಾಂತೇಶ ಅಣ್ಣೆಣ್ಣವರ, ಅಶ್ವಥ ರಂಗನಗೌಡ್ರ, ದುರಗಪ್ಪ ಮಾದರ, ಪತ್ರಕರ್ತ ಮಾಂತೇಶ ಅಂಬಿಗೇರ ಇದ್ದರು.

ಕಬ್ಬಿನ ಬಿಲ್ ಪಾವತಿಗೆ ಅಹೋರಾತ್ರಿ ಧರಣಿ | ಆಕ್ರೋಶ

ರೈತರ ಹಿತ ಕಾಪಾಡಲು ಆಗ್ರಹ



▸ **ಗೋಪಾಲ ಪಾಟೀಲ**

◆ **ಜಮಖಂಡಿ:** ಕಬ್ಬಿನ ಬಿಲ್ ಪಾವತಿಗಾಗಿ ಕಳೆದೆರಡು ದಿನದಿಂದ ರೈತರು ತಾಲೂಕಾಡಳಿತ ಸೌಧದಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಧರಣಿಗೆ ಅನೇಕ ಸಂಘಟನೆಗಳು ಬೆಂಬಲ ನೀಡಿದ್ದಾರೆ. ಆದರೆ ಜನಪ್ರತಿನಿಧಿಗಳು ಮಾತ್ರ ಮುಂದೆ ಬಂದಿಲ್ಲ.

ಜಿಲ್ಲೆಯ ಬಾಗಲಕೋಟೆಯಲ್ಲಿ ಉಪಚುನಾವಣೆ ನಡೆದಿದೆ ಆದರೆ ಯಾರೂ ಸ್ಪಂದಿಸಿಲ್ಲ. ಸರ್ಕಾರದ ನಮ್ಮ ತಾತ್ಸಾರ ಭಾವನೆ ಹೊಂದಿದೆ ಎಂದು ಪ್ರತಿಭಟನಾಕಾರರ ಆಕ್ರೋಶ. ಬಾಕಿ ಬಿಲ್ ಬರುವವರೆಗೆ ತಮ್ಮ ಹೋರಾಟ ನಿರಂತರವೆಂದು ತಾಲೂಕಾಡಳಿತ ಭವನದಲ್ಲಿಯೇ ಅನ್ನ ಬೇಯಿಸಿಕೊಂಡು ಹಗಲು ರಾತ್ರಿ ಮನೆ ಮಠ ಬಿಟ್ಟು ಪ್ರತಿಭಟನೆಗೆ ಇಳಿದರೆ ನಮ್ಮನ್ನು ಯಾರೂ ಕೇಳುತ್ತಿಲ್ಲ, ನಮ್ಮ ಸಮಸ್ಯೆಗೆ ಯಾರೂ ಸ್ಪಂದಿಸಲು ತಯಾರಿಲ್ಲ. ಮೊದಲೇ ನಾವೆಲ್ಲ ಕೃಷ್ಣೆಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡಿದ್ದೇವೆ. ಆದರೆ ಸರಕಾವು ನಮ್ಮ ಮತ್ತೆ ಬರೆಯೆಳೆಯುತ್ತದೆ ಎಂದು ಆಕ್ರೋಶ ಹೊರಹಾಕಿದರು.

ಸಕ್ಕರೆಯ ಇತಿಹಾಸ ಸರ್ಕಾರದ ಉಲ್ಲೇಖದಂತೆ ರಾಜ್ಯದಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು 590660 ಟಿಸಿಎಲ್, ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದ್ದು ಅದರಲ್ಲಿ5.68.80694 ಮೆಟ್ರಿಕಟನ್ ಕಬ್ಬಯ ನುರಿಸಿದ್ದು 4.90.280 ಮೆಟ್ರಿಕ ಟನ ಸಕ್ಕರೆಯನ್ನು ಉತ್ಪಾದಿಸಿ ಸರಾಸರಿ 8.5 ಇಳುವರಿ ಹೊಂದಿದೆ. ಕಬ್ಬು ನುರಿಸಿದ ಸಾಗಾಟ ವೆಚ್ಚ ಸೇರಿ ರೈತರಿಗೆ ಸಂದಾಯವಾಗಬೇಕಿದ್ದ ಹಣ 22.93.177 ಲಕ್ಷ ರೂ.ಗಳು ಅದರಲ್ಲಿ ಸಂದಾಯವಾಗಿದ್ದು 18.56.571 ಲಕ್ಷ ರೂ.ಗಳು ಬಾಕಿ ಉಳಿದ ಹಣ 4.36.607 ಲಕ್ಷ ರೂ.ಗಳು ಜಿಲ್ಲೆಯಲ್ಲಿ ಎಲ್ಲ ಸಕ್ಕರೆ ಕಾರ್ಖನೆಗಳು ಸಹಿತವಾಗಿ 158000 ಟಿ.ಸಿ.ಎಲ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದ್ದು ಅದರಲ್ಲಿ 1.60.65.952 ಮೆಟ್ರಿಕ ಟನ ಕಬ್ಬು ನುರಿಸಿದ್ದು 13.65.720 ಮೆಟ್ರಿಕ್ ಟನ ಸಕ್ಕರೆ ಉತ್ಪಾದನೆಯಾಗಿ ಸರಾಸರಿ 8.5 ಇಳುವರಿಯನ್ನು ಹೊಂದಿದೆ. ಇದರಲ್ಲಿ ಸಕ್ಕರೆ ಕಾರ್ಖಾನೆಯವರು ರೈತರಿಗೆ ನೀಡಬೇಕಿದ್ದ ಒಟ್ಟು ಹಣ 6.67.995 ಲಕ್ಷ ರೂ.ಗಳು ಅದರಲ್ಲಿ ರೈತರಿಗೆ ನೀಡಿದ್ದು 4.99.120 ಲಕ್ಷ ರೂ.ಗಳು ಇನೂ ರೈತರಿಗೆ ನೀಡಬೇಕಾಗಿದ್ದು ಒಟ್ಟು 1.68.875 ಲಕ್ಷ ರೂಗಳು ಈ ಹಣಕ್ಕಾಗಿಯೇ ಪ್ರತಿಭಟನೆ ಮಾಡುವ ಸ್ಥಿತಿ ಬಂದಿದೆ. ರಾಜ್ಯದಲ್ಲಿ 4.36.607 ಲಕ್ಷ ರೂ.ಗಳು ಬಾಕಿಯಿದ್ದರೆ ಜಿಲ್ಲೆಯಲ್ಲಿ 1.68.875 ಲಕ್ಷ ರೂಗಳು ರೈತರಿಗೆ ಸಂದಾಯವಾಗಬೇಕಿದೆ. ಸಮಯ ಮೀರಿದ್ದರಿಂದ ಮತ್ತೇ ರೈತರು ಪ್ರತಿಭಟನೆಯ ಮಾರ್ಗವನ್ನು ಅನುಸರಿಸಿದ್ದಾರೆ. ಇಷ್ಟಾದರೂ ಸರಕಾರವು ಕಣ್ಣು ತೆರೆದು ರೈತರ ಹಿತದೃಷ್ಟಿ ಕಾಪಾಡಬೇಕು ಎಂದು ಅವರ ಆಶಯವಾಗಿದೆ

> **ಮಾ.30ರಿಂದ ರೈತರು ಕಬ್ಬು ಬೆಳೆ ಬಾಕಿ ಬಿಲ್‌ಗೆ ಪ್ರತಿಭಟನೆ ಮಾಡುತ್ತಿದ್ದು ರಾಜ್ಯ ಸಕ್ಕರೆ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಬಾಕಿಯಿರುವ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಬಾಕಿ ಬಿಲ್ ಪಾವತಿಸಲು 10 ದಿನದ ಕಾಲಾವಕಾಶ ನೀಡಿ ನೋಟಿಸ್ ನೀಡಲಾಗಿದೆ. ಅಷ್ಟರೊಳಗೆ ಅವರು ಸ್ಪಂದಿಸದಿದ್ದರೆ ಜಿಲ್ಲಾಧಿಕಾರಿಗಳ ಆದೇಶದಂತೆ ಮುಂದಿನ ಕ್ರಮ ಜರುಗಿಸುತ್ತೇವೆ ಎಂದು ಹೇಳಿದರು.**
> ■ **ಶ್ವೇತಾ ಬೀಡಕರ, ಉಪವಿಭಾಗಾಧಿಕಾರಿ**

> **ಜಿಲ್ಲೆಯಲ್ಲಿ 1.68.875 ಲಕ್ಷ ರೂ.ಗಳು ರೈತರಿಗೆ ಸಂದಾಯವಾಗಬೇಕಿದೆ. ಖಾರ್ಖಾನೆಯವರು ನೀಡಿದ ಸಮಯ ಮೀರಿದ್ದರಿಂದ ಮತ್ತೆ ರೈತರು ಪ್ರತಿಭಟನೆಯ ಮಾರ್ಗ ಅನುಸರಿಸಿದ್ದಾರೆ. ರೈತರಿಗೂ ಸಹ ಕಾಲಾವಕಾಶ ಕೇಳಿದ್ದೇವೆ. ಎಸಿ ಮತ್ತು ಜಿಲ್ಲಾಧಿಕಾರಿಗಳ ಆದೇಶದಂತೆ ಕ್ರಮಜರುಗಿಸಲಾಗುವು.**
> ■ **ಅನೀಲ ಬಡಿಗೇರ, ತಹಶೀಲ್ದಾರ್**

ಗೃಹಬಳಕೆ ಸಿಲಿಂಡರ್ ಸಮರ್ಪಕ ಸರಬರಾಜು

◆ **ಬಾಗಲಕೋಟೆ:** ಜಿಲ್ಲೆಯಲ್ಲಿ ಗೃಹಬಳಕೆ ಸಿಲೆಂಡರಗಳ ಸರಬರಾಜು ಸಮರ್ಪಕವಾಗಿ ಸಾಗುತ್ತಿದ್ದು, ಸಾರ್ವಜನಿಕರು ಅನಗತ್ಯವಾಗಿ ಗ್ಯಾಸ ಏಜನ್ಸಿಗಳ ಮುಂದೆ ಜನಸಂದಣಿ ಸೇರುವಂತಹ ಸನ್ನಿವೇಶವನ್ನು ಗ್ಯಾಸ್ ಏಜನ್ಸಿಗಳು ಕೂಡ ಸೃಷ್ಟಿಸಬಾರದೆಂದು ಎಂದು ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಂಗಣದಲ್ಲಿ ಮಂಗಳವಾರ ಸಂಜೆ ಐಓಸಿ, ಬಿಪಿಸಿ ಹಾಗೂ ಹೆಚ್‌ಪಿಸಿ ಕಂಪನಿಗಳ ಸೇಲ್ಸ್ ಆಫಿಸರ್ಸ, ಎಲ್‌ಪಿಜಿ ಡೀಲರ್ಸ ಹಾಗೂ ಆಹಾರ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿ ಮಾತನಾಡಿದ ಅವರು, ಗೃಹಬಳಕೆಯ ಸಿಲೆಂಡರಗಳನ್ನು ನಗರ ಪ್ರದೇಶಗಳಲ್ಲಿ 25 ದಿನಗಳ ನಂತರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 45 ದಿನಗಳ ಬಳಿಕವೇ ಬುಕ್ ಮಾಡಲು ಅವಕಾಶ ಕಲ್ಪಿಸಿರಲಾಗಿರುತ್ತದೆ ಇದರಂತೆಯೇ ಎಲ್ಲವೂ ನಡೆಯಬೇಕು ಅನಗತ್ಯ ಗೊಂದಲ ಸೃಷ್ಟಿಸಬಾರದು ಎಂದರು.

ಜಿಲ್ಲಾಡಳಿತವು ಐಓಸಿ, ಬಿಪಿಸಿ ಹಾಗೂ ಹೆಚ್‌ಪಿಸಿ ಮೂರು ಕಂಪನಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು ಬೇಡಿಕೆ ಅನುಸಾರವಾಗಿ ಈ ಮೂರು ಕಂಪನಿಗಳು ಪೂರೈಸಲು ಸಿದ್ದವಿರುತ್ತವೆ. ಪ್ರತಿದಿನ ಅಂದಾಜು 9 ಸಾವಿರ ಸಿಲೆಂಡರ್‌ಗಳು ಪೂರೈಕೆಯಾಗುತ್ತಿದ್ದು, ಗೃಹಬಳಕೆಯ ಸಿಲೆಂಡರುಗಳಿಗೆ ಸಮಸ್ಯೆ ಇರುವದಿಲ್ಲ, ಅಧಿಕೃತ ನೊಂದಾಯಿತ ವಾಣಿಜ್ಯ ಕಂಜುಮರ್ಸ ಬೇಡಿಕೆ ಇಟ್ಟಲ್ಲಿ ಅಂತವರಿಗೆ ಮಾತ್ರ ಸಿಲೆಂಡರ್ ಗಳನ್ನು ಪೂರೈಸಲು ಕ್ರಮಕೈಗೊಳ್ಳಲಾಗುವುದು, ಮಧ್ಯಾಹ್ನ ಬಿಸಿ ಊಟ, ಹಾಸ್ಟೇಲ್ ಹಾಗೂ ಇತರೆ ಸರಕಾರಿ ಯೋಜನೆಯಡಿ ಅನೀಲ ಸಂಪರ್ಕ ಹೊಂದಿದಂತಲ್ಲಿ ಆಧ್ಯತೆಯ ಮೇಲೆ ಪೂರೈಸಲಾಗುವುದು ಎಂದು ತಿಳಿಸಿದರು.

ಅನಧಿಕೃತವಾಗಿ ಎಲ್.ಪಿ.ಜಿ ಸಿಲೆಂಡರ್ ದಾಸ್ತಾನು ಮಾಡುವ ಮತ್ತು ರಿಫಲಿಂಗ್ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ. ಸಾರ್ವಜನಿಕರು ಸಿಲೇಂಡರ್ ರಶೀದಿ ಮೇಲೆ ಇರುವಂತಹ ಮೊತ್ತವನ್ನೇ ಪಾವತಿಸಬೇಕು ಎಂದರು.

ಜಿಪಂ ಸಿಇಓ ಶಶಿಧರ ಕುರೇರ ಮಾತನಾಡಿ, ಜಿಲ್ಲೆಯಲ್ಲಿ ಇಂಧನದ ಅಬಾವ ಇರುವದಿಲ್ಲ, ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ಜಿಲ್ಲೆಯಲ್ಲಿ 478596 ಗೃಹ ಬಳಕೆಯ ಸಿಲೆಂಡರ ಕನೆಕ್ಷನ್‌ಗಳಿದ್ದು, ಗ್ರಾಹಕರು ಮಿತವಾಗಿ ಬಳಕೆ ಮಾಡಲು ತಿಳಿಸಿದರು. ಸಭೆಯಲ್ಲಿ ಜಿಪಂ ಸಿಇಓ ಅಧಿಕಾರಿ ಶಶಿಧರ ಕುರೇರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಇತರರು ಇದ್ದರು.



ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಜಾಗೃತಿ



◆ **ಜಮಖಂಡಿ:** ಯುವಕರಲ್ಲಿ ಉತ್ತಮ ವಿಚಾರ, ಒಳ್ಳೆಯ ಚಿಂತನೆ ಹಾಗೂ ಧಾರ್ಮಿಕ ಭಾವನೆ ಬೆಳೆಸುವ ಉದ್ದೇಶದಿಂದ ಓಲೆಮಠ ಎಲ್ಲ ಗ್ರಾಮಗಳಲ್ಲಿ ಧಾರ್ಮಿಕ ಕಾರ್ಯಕ್ರಮ ಆಯೋಜಿಸುತ್ತಿರುವುದು ಸ್ವಾಗತಾರ್ಹ. ಧಾರ್ಮಿಕ ಭಾವನೆ ಬೆಳೆಸಿಕೊಂಡ ಯುವಕರು ದಾರಿ ತಪ್ಪುವುದಿಲ್ಲ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ತಾಲೂಕಿನ ತುಂಗಳ ಗ್ರಾಮದಲ್ಲಿ ಓಲೆ ಮಠದ ಆಶ್ಯದಲ್ಲಿ ನಡೆದ ಸದ್ಗುಣ ದೀಕ್ಷೆ ದುಶ್ಚಟ ಭಿಕ್ಷೆ ವ್ಯಸನಮುಕ್ತ ಸಮಾಜದ ನಿರ್ಮಾಣದ ಜನಜಾಗೃತಿ ಯಾತ್ರೆಯ ಏಳನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರಿಯಾದ ರೀತಿಯಲ್ಲಿ ಕುಟುಂಬ ನಿರ್ವಹಣೆಯಲ್ಲಿ ಅವಿಭಕ್ತ ಕುಟುಂಬಗಳ ಪಾತ್ರ ಮತ್ತು ಮಹತ್ವ ಕುರಿತು ಇಂದಿನ ಯುವಕರಲ್ಲಿ ಅರಿವು ಮೂಡಿಸಬೇಕಾಗಿದೆ. ಹಾಗಾಗಿ ಅವಿಭಕ್ತ ಕುಟುಂಬಗಳನ್ನು ಪರಿಚಯಿಸಿ ಸನ್ಮಾನಿಸುವ ಕಾರ್ಯ ಓಲೆಮಠದಿಂದ ಜರುಗಲಿ ಎಂದು ಸಲಹೆ ನೀಡಿದರು.

ಓಲೆಮಠದ ಆನಂದ ದೇವರು ಶ್ರೀಗಳು, ಪಿಕೆಪಿಎಸ್ ಸಾವಳಗಿ-2ರ ಅಧ್ಯಕ್ಷ ಸುಶೀಲಕುಮಾರ ಬೆಳಗಲಿ, ಝುಂಜರವಾಡದ ಬಸವರಾಜ ಶರಣರು ಮಾತನಾಡಿದರು. ತಾಲೂಕಿನ ಸುಮಾರು 25 ಪಿಕೆಪಿಎಸ್ ಬ್ಯಾಂಕುಗಳ ಅಧ್ಯಕ್ಷರುಗಳನ್ನು ಸನ್ಮಾನಿಸಲಾಯಿತು. ಆನಂದ ಬ್ಯಾಳಿ, ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಸಂತೋಷ ಕಲಶೆಟ್ಟಿ ನಿರೂಪಿಸಿದರು.

ಕಾನೂನು ಅರಿವು ನೆರವು ಕಾರ್ಯಕ್ರಮ

◆ **ಇಳಕಲ್:** ಜಿಲ್ಲಾ ಕಾನೂನು ಸೇವೆಗಳ ಪ್ರಾಃಕಾರ ಬಾಗಲಕೋಟೆ, ತಾಲೂಕು ಕಾನೂನು ಸೇವೆಗಳ ಸಮಿತಿ ಹುನಗುಂದ ಹಾಗೂ ವಕೀಲರ ಸಂಘ ಇಳಕಲ್ ಹುನಗುಂದ ಸಹಯೋಗದಲ್ಲಿ ಕಾಯಂ ಜನತಾ ನ್ಯಾಯಾಲಯದ ಮಹತ್ವ ಹಾಗೂ ಕಾರ್ಯವೈಖರಿ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಇಳಕಲ್ ನಗರದ ನ್ಯಾಯಾಲಯದಲ್ಲಿ ನಡೆಯಿತು.

ಜಿಲ್ಲಾ ನ್ಯಾಯಾಧೀಶ ರವೀಂದ್ರ ಪಲ್ಲೆದ ಉದ್ಘಾಟಿಸಿದರು. ಇಳಕಲ್ ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಂಎಸ್ ಹೊಸೂರ ಅಧ್ಯಕ್ಷತೆ ವಹಿಸಿದ್ದರು. ಹುನಗುಂದ ದಿವಾನಿ ನ್ಯಾಯಾಃಶ ಮಹಾಂತೇಶ ಮಠದ, ಹುನಗುಂದ ವಕೀಲರ ಸಂಘದ ಅಧ್ಯಕ್ಷ ಎಂ.ಬಿ.ದೇಶಪಾಂಡೆ, ಉಪಾಧ್ಯಕ್ಷ ಎ.ಪಿ.ಗಾಣಿಗೇರ, ಕಾರ್ಯದರ್ಶಿ ಎಂ.ಎನ್.ಬಮ್ಮಸಾಗರ, ಆರ್.ಎಚ್.ಕೊಕಾಟಿ, ಬಿ.ಎಚ್.ಗೌಡರ, ಬಿ.ಭಾರತಿ, ಕೆ.ಆರ್.ಜಲರಡ್ಡಿ , ಸಾರ್ವಜನಿಕರು ಉಪಸ್ಥಿತರಿದ್ದರು.

ಕಮಲ ಅರಳಿಸಲು ಕಂಕಣಬದ್ಧರಾಗಿ: ಸಂಸದ ಗದ್ದಿಗೌಡರ

◆ **ಬಾಗಲಕೋಟೆ:** ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಗತಿಪರವಾದ ಬಿಜೆಪಿಯನ್ನು ಗೆಲ್ಲಿಸಿ. ಮೊಸಳೆ ಕಣ್ಣೀರು ಸುರಿಸಿ ಬಡವರ ಬದುಕನ್ನು ಬೀದಿಗೆ ತರುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಿ ಎಂದು ಸಂಸ ಪಿ.ಸಿ ಗದ್ದಿಗೌಡರ ಹೇಳಿದರು.



ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಹಿನ್ನೆಲೆ ವೀರಣ್ಣ ಚರಂತಿಮಠ ಅವರ ಪರವಾಗಿ ಗುಂಡುನಪಲ್ಲೆ, ಮಲ್ಲಾಪೂರ, ಬೇವಿನಮಟ್ಟಿ, ನೀರಲಕೇರಿ ಗ್ರಾಮಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿ ಮಾತನಾಡಿದ ಅವರು, ಮೂರು ವರ್ಷಗಳ ಹುಸಿ ಭರವಸೆಗಳಿಂದ ಸೋತು ಹೋದ ಮತದಾರರ ಏಳಿಗೆಗೆ ಉಪಚುನಾವಣೆಯಲ್ಲಿ ಕಮಲಕ್ಕೆ ಮತ ನೀಡಿ. ದೇಶದ ಹಿತಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸಲು ವೀರಣ್ಣ ಚರಂತಿಮಠ ಅವರ ಗೆಲುವು ಅವಶ್ಯಕ. ಗ್ರಾಮಸ್ಥರ ಅಭೂತಪೂರ್ವ ಬೆಂಬಲ ಮತ್ತು ಬಿಜೆಪಿಯ ಮೇಲಿಟ್ಟಿರುವ ನಂಬಿಕೆಯು ನಮ್ಮ ಗೆಲುವಿನ ಸಂಕೇತವಾಗಿದೆ ಎಂದರು.

ಕದಾಂಪುರ, ನೀರಲಕೇರಿ ಸೇರಿ ಗ್ರಾಮೀಣ ಪ್ರದೇಶದಲ್ಲಿ ಮತಯಾಚಿಸಿದ ಮಾಜಿ ಸಂಸದ ಪ್ರತಾಪ ಸಿಂಹ ಮಾತನಾಡಿ, ಜನರ ಬಗ್ಗೆ ಸದಾ ಕಾಳಜಿ ಇರುವ ವ್ಯಕ್ತಿ ಚರಂತಿಮಠರು, ಅಲ್ಲದೆ ಬಾಗಲಕೋಟೆಯಲ್ಲಿ ಒಂದು ಸಂಪೂರ್ಣ ಶೈಕ್ಷಣಿಕ ವ್ಯವಸ್ಥೆಯನ್ನು ಮಾಡಿದ್ದಾರೆ. ಉಚಿತ ಅಕ್ಕಿ ಕೊಡುವ ವ್ಯವಸ್ಥೆ ಆಗಿದ್ದು ವಾಜಪೇಯಿ ಸರ್ಕಾರದಿಂದ ಸಿದ್ದರಾಮಯ್ಯ ಕೊಟ್ಟಿದಲ್ಲ. ಸರ್ಕಾರ ಜಾರಿಗೆ ತಂದಿರುವ ಮಹಿಳೆಯರ ಉಚಿತಸಾರಿಗೆ ಇಂದಾಗಿ ಬಸ್ ರಿಪೇರಿಗೆ ಹಣವಿಲ್ಲದಂತಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡ ದೇವರಾಜ ಪಾಟೀಲ್, ಜಿ.ಎನ್ ಪಾಟೀಲ್ ಸೇರಿದಂತೆ ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು.

ಮತದಾನ ಜಾಗೃತಿ ಅಭಿಯಾನಕ್ಕೆ ಡಿಸಿ, ಜಿಪಂ ಸಿಇಓ ಚಾಲನೆ

◆ **ಬಾಗಲಕೋಟೆ:** ಜನರಲ್ಲಿ ಮತದಾನದ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳು, ಜಿಲ್ಲಾಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು ಬೈಕ್ ರ್‍ಯಾಲಿ ಮೂಲಕ ಸಂಚರಿಸಿ ಗಮನ ಸೆಳೆದರು.



ಜಿಲ್ಲಾ ಸ್ವೀಪ್ ಹಾಗೂ ನಗರಸಭೆ ಸಹಯೋಗದಲ್ಲಿ ನಗರಸಭೆಯ ಮುಖ್ಯ ಆವರಣದಲ್ಲಿಂದು ಬೈಕ್ ರ್‍ಯಾಲಿ ಮೂಲಕ ಮತದಾರರ ಜಾಗೃತಿ ಅಭಿಯಾನಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಸಿಇಓ ಶಶಿಧರ ಕುರೇರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ನಂತರ ಅವರು ಬೈಕ್‌ನಲ್ಲಿ ಸಂಚರಿಸಿ ಸಾರ್ವಜನಿಕರ ಗಮನ ಸೆಳೆದರು. ಬೈಕ್ ರ್‍ಯಾಲಿ ನಗರಸಭೆಯಿಂದ ಪ್ರಾರಂಭವಾಗಿ ಕೋರ್ಟ್, ತಹಶೀಲ್ದಾರ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ನವನಗರ ಬಸ್ ನಿಲ್ದಾಣ, ಪೊಲೀಸ್ ಪ್ಯಾಲೇಸ, ಎಲ್ಐಸಿ ಸರ್ಕಲ್, ನಗರಸಭೆ ಮೂಲಕ ವಿದ್ಯಾಗಿರಿ ಸರ್ಕಲ್‌ವರೆಗೆ ಸಂಚರಿಸಿತು.

ನಗರಸಭೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಬೈಕ್‌ಗಳಿಗೆ ಮತದಾನದ ಜಾಗೃತಿ ಫಲಕಗಳನ್ನು ಪ್ರದರ್ಶಿಸಿದರು. ನಿಮ್ಮ ಮತ ನಿಮ್ಮ ಹಕ್ಕು, ಆಮಿಷಕ್ಕೆ ಒಳಗಾಗದೇ ಮತ ಚಲಾಯಿಸಿ, ನಿಮ್ಮ ಮತ ನಿಮ್ಮ ಭವಿಷ್ಯ, ಓಟ್ ಮಾಡಿದವನೇ ಹಿರೋ, ನಿಮ್ಮ ನಡೆ ಮತಗಟ್ಟೆಯ ಕಡೆ ತಪ್ಪದೇ ಮತ ಚಲಾಯಿಸಿ ಎಂಬ ಘೋಷಣೆಗಳನ್ನು ಕೂಗಿದರು. ನಗರಸಭೆ ಪೌರಾಯುಕ್ತ ವಾಸಣ್ಣ ಆರ್ ಸೇರಿದಂತೆ ಇತರೆ ಅಧಿಕಾರಿಗಳು ಪಾಲ್ಗೊಂಡಿದ್ದರು. ಬೈಕ್ ರ್‍ಯಾಲಿಯುದ್ದಕ್ಕೂ ವಾಹನದಲ್ಲಿ ಧ್ವನಿವರ್ಧಕ ಅಳವಡಿಸುವ ಮೂಲಕ ಮತದಾನ ಜಾಗೃತಿ ಹಾಡುಗಳನ್ನು ಹಾಕಲಾಗಿತ್ತು.

ಅಧಿಕಾರದ ಜಪ ಬಿಟ್ಟರೆ ಅಭಿವೃದ್ಧಿ ಕಾಣುತ್ತದೆ: ಚರಂತಿಮಠ

◆ **ಬಾಗಲಕೋಟೆ:** ಮತಕ್ಷೇತ್ರದಲ್ಲಿ ಬಿಜೆಪಿ ಮಾಡಿದ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಸಾರ್ವಜನಿಕರಿಗೆ ಗೊತ್ತಿದೆ. ತಮಗೂ ತಿಳಿದುಕೊಳ್ಳುವ ಕುತೂಹಲವಿದ್ದರೆ ಬಾಗಲಕೋಟೆಯನ್ನು ಒಮ್ಮೆ ಸಂಚರಿಸಿ ಬನ್ನಿ, ತಾವು ನಡೆಯುವ ರಸ್ತೆ, ಸಭಾಂಗಣ, ದೇವಸ್ಥಾನಗಳೆಲ್ಲವು ಕಮಲ ಸಾಕ್ಷಿಗಳೇ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳುವುದರ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಟಾಂಗ್ ಕೊಟ್ಟಿದ್ದಾರೆ.

ನಗರದಲ್ಲಿ ಬಿಜೆಪಿ ಮತಪ್ರಚಾರಕ್ಕೆ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ನಗರದ ಕೆರೂಡಿ ಆಸ್ಪತ್ರೆಯ ಬಳಿ ನಾಗಪ್ಪನ ಕಟ್ಟೆಗೆ ಪೂಜೆ ಸಲ್ಲಿಸಿ ವಾರ್ಡ್ ನಂ. 3ರಲ್ಲಿ ಮತಯಾಚನೆ ಮಾಡಿ ಮಾತನಾಡಿದರು. ಸಮಾಜ ಮತ್ತು ಸಮುದಾಯಗಳನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಚುನಾವಣೆ ಎದುರಿಸಲು ಪ್ರಯತ್ನಿಸುತ್ತಿದೆ. ಮುಖ್ಯಮಂತ್ರಿಗಳು ಬಾಗಲಕೋಟೆಯಲ್ಲಿ ಚರಂತಿಮಠರು ಏನು ಮಾಡಿದ್ದಾರೆ ಎಂದು ಕೇಳುವ ಮೊದಲು ತಮ್ಮ ಪಕ್ಷ ಮತ್ತು ತಮ್ಮ ಶಾಸಕರು ಈ ಕ್ಷೇತ್ರಕ್ಕೆ ಏನು ಕೊಟ್ಟಿದ್ದಾರೆ ಎಂದು ಹುಡುಕಿದರೆ ಒಂದು ಸಣ್ಣ ಕೆಲಸವೂ ಸಿಗುವುದಿಲ್ಲ. ಬಿಜೆಪಿ ಆಡಳಿತದಲ್ಲಿ ಜಾರಿಯಾದ ಕಾಮಗಾರಿಗಳನ್ನು, ಗುತ್ತಿಗೆ ಕಾರ್ಯಗಳನ್ನೂ



ಕೂಡ ಪೂರ್ಣಗೊಳಿಸಲಾಗದ ಕಾಂಗ್ರೆಸ್ ಬಿಜೆಪಿಯ ಕೆಲಸಗಳಿಗೆ ತಮ್ಮ ಲೇಬಲ್ ಹಚ್ಚಿ ಜನರ ಮುಂದೆ ಇಡಲು ಹೊರಟಿದ್ದಾರೆ. ಬಾಗಲಕೋಟೆ ಮತಕ್ಷೇತ್ರದ ಜನರು ಪ್ರಜ್ಞಾವಂತರಿದ್ದಾರೆ ಎಂಬ ಪರಿಕಲ್ಪನೆಯನ್ನಾದರೂ ಅವರು ಇಟ್ಟುಕೊಳ್ಳಲಿ ಎಂದರು.

ನಾನು ಹಿಂದೂ ಎಂದು ಎಲ್ಲಿಯೂ ಮಾತನಾಡಿಲ್ಲ. ಹಿಂದುತ್ವ ಗೆಲ್ಲಬೇಕು ಬಿಜೆಪಿ ಗೆಲ್ಲಬೇಕು ಎಂದು ಹೇಳಿದ್ದೇನೆ. ಅದಕ್ಕೆ ಅವರು ಹಿಂದೂ ಎಂದು ಹೇಳಿಕೊಳ್ಳುತ್ತಿದ್ದಾರೆ. ಬಾಗಲಕೋಟೆಯಲ್ಲಿ ಅವರ ತಂದೆಯೇ ಏನು ಕೆಲಸ ಮಾಡಿಲ್ಲ ಇನ್ನು ಉಮೇಶ ಮೇಟಿ ಏನು ಮಾಡುತ್ತಾರೆ. ಜನತಾ ದಳದ ಜಪ ಮಾಡುತ್ತಿದ್ದ ಸಿದ್ದರಾಮಯ್ಯ ಎಳೆದು ಮಾತನಾಡುವುದನ್ನು ತಮ್ಮ ಶೈಲಿಯಾಗಿಸಿಕೊಂಡು ಇಂದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಂಕಾ ಗಾಂಧಿ ಹೆಸರುಗಳನ್ನು ಜಪ ಮಾಡುತ್ತ ಅಧಿಕಾರ ನಡೆಸುತ್ತಿದ್ದಾರೆ ಎಂದರು.

> **ಬಿಜೆಪಿ ಆಡಳಿತದ ಅವಧಿಯಲ್ಲಿ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಮಾಡಿದ್ದೇವೆ. ಹಿಂದಿನ ಚುನಾವಣೆಯಲ್ಲಿ ಕಾರಣಾಂತರಗಳಿಂದ ಸೋತಿದ್ದು, ಈ ಚುನಾವಣೆಯಲ್ಲಿ ನಾನು ಮತ್ತು ಪಿ.ಎಚ್.ಪೂಜಾರಿ ಸೇರಿದಂತೆ ಎಲ್ಲರೂ ಒಂದಾಗಿ ಕೆಲಸ ಮಾಡುತ್ತಿದ್ದಾರೆ. ಅತಿ ಹೆಚ್ಚು ಲೀಡ್ ಪಡೆದು ಗೆಲ್ಲಲಿದ್ದೇವೆ. ಕಾಂಗ್ರೆಸ್ ಹಣಬಲ, ಅಧಿಕಾರ ಬಲದಿಂದ ಚುನಾವಣೆ ಮಾಡಲು ಹೊರಟಿದ್ದು ಹಣದಿಂದ ಎಲ್ಲವನ್ನು ಮಾಡಲು ಸಾಧ್ಯವಿಲ್ಲ. ಜನರು ಜಾಣರಿದ್ದು ಸಿದ್ದರಾಮಯ್ಯನವರ ನೋಟು ಚರಂತಿಮಠರಿಗೆ ವೋಟ್ ಎಂದು ಹೇಳುತ್ತಿದ್ದಾರೆ**
> ■ **ಮುರಗೇಶ ನಿರಾಣಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ**

ಹಾಲುಮತದ ಪುರಾಣ, ಮುತ್ತಿನ ಸರಮಾಲೆ ಕೃತಿ ಬಿಡುಗಡೆ

◆ **ಬೀಳಗಿ:** ಹೊರಗಡೆ ಮಾಡಿದ ಪಾಪವನ್ನು ದೇವರಸನ್ನಿಧಾನಕ್ಕೆ ಬಂದು ಕಳೆದುಕೊಳ್ಳಬಹುದು. ಆದರೆ ದೇವಸ್ಥಾನದಲ್ಲಿ ಮಾಡಿದ ಪಾಪವನ್ನು ಎಲ್ಲಿ ಕಳೆದುಕೊಳ್ಳಲು ಸಾಧ್ಯವಿಲ್ಲವೆಂದು ಶಿರೂರ ಕನಕ ಬ್ರಹ್ಮವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮಿಗಳು ಹೇಳಿದರು.

ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಸಾಹಿತಿ ಸಿದ್ದಪ್ಪ ಮುಶೆಪ್ಪಗೋಳ ರಚಿತ ಹಾಲುಮತದ ಪುರಾಣ ಮತ್ತು ಮುತ್ತಿನ ಸರಮಾಲೆ ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ದೇಶ ಸುತ್ತಬೇಕು. ಕೋಶ ಓದಬೇಕು. ಇದರಿಂದ ಜ್ಞಾನ ಸಂಪಾದನೆಯಾಗುತ್ತದೆ. ಪ್ರತಿಯೊಬ್ಬರಿಗೂ ಸಮಯ ಪ್ರಜ್ಞೆ ಇರಬೇಕು. ದೇವರನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಶ್ರದ್ದೆ, ಭಕ್ತಿ ಬೇಕು ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಕೃತಿ ಕುರಿತು ಮಾತನಾಡಿ, ಹಾಲುಮತ ಪುರಾಣ ಮತ್ತು ಮುತ್ತಿನ ಸರಮಾಲೆ ಕೃತಿಯಲ್ಲಿ 120 ಪ್ರಶ್ನೆಗಳಿಗೆ ಉತ್ತರವನ್ನು ಲಿಖಿತ ರೂಪದಲ್ಲಿ ಕೊಟ್ಟಿದ್ದು, 25ಕ್ಕೂ ಹೆಚ್ಚು ಗ್ರಾಮಗಳಿಗೆ ಲೇಖಕರು ತೆರಳಿ ಹಾಲುಮತದ ಬೀರದೇವರಿಗೆ ಸಂಬಂಧಿಸಿದ



ಅಪರೂಪದ ಪವಾಡಗಳನ್ನು ಕೃತಿಯಲ್ಲಿ ದಾಖಲಿಸಿರುವರು. ಡೊಳ್ಳಿನ ಪದಗಳನ್ನು ರಚಿಸಿ ಹಾಡುವದರಲ್ಲಿ ಸಿದ್ದಹಸ್ತರಾದ ಸಿದ್ದಪ್ಪ ಮುಶೆಪ್ಪಗೋಳ ಹಾಲುಮತಕ್ಕೆ ಸಂಬಂಧಿಸಿದ ಒಟ್ಟು 5 ಕೃತಿಗಳನ್ನು ರಚಿಸಿ ಸಮಾಜಕ್ಕೆ ಕಾಣಿಕೆ ನೀಡಿದ್ದಾರೆಂದು ಹೇಳಿದರು.

ಹಾಲುಮತದ ಪುರಾಣ ಮತ್ತು ಮುತ್ತಿನ ಸರಮಾಲೆ ಕೃತಿಕಾರ ಸಿದ್ದಪ್ಪ ಮುಶೆಪ್ಪಗೋಳ ಮಾತನಾಡಿ, ಹಾಲುಮತಕ್ಕೆ ಸಂಬಂಧಿಸಿದ 250 ರಿಂದ 300 ಕೃತಿಗಳಲ್ಲಿ ಅಡಕವಾಗದ ವಿಷಯವನ್ನು ಊರೂರಿಗೆ ತೆರಳಿ ಈ ಕೃತಿಯಲ್ಲಿ ದಾಖಲಿಸಿದ್ದೇನೆಂದು ಹೇಳಿದರು.

ಶಿರೂರ ಬ್ರಹ್ಮವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮಿಗಳು ದ್ವಾರ ಬಾಗಿಲು ಉದ್ಘಾಟಿಸಿದರು. ದ್ವಾರ ಬಾಗಿಲಿಗೆ ಪಂಚ ಕಳಸಾರೋಹಣ ನೆರವೇರಿಸಲಾಯಿತು. ದ್ವಾರ ಬಾಗಿಲು ನಿರ್ಮಿಸಿದ ಶಿರಗುಪ್ಪಾದ ಯಲ್ಲಪ್ಪ ದಂಡೀನ ಕುಟುಂಬವನ್ನು ಸನ್ಮಾನಿಸಲಾಯಿತು. ಮಲ್ಲು ಹೋಳಿ ಮಾತನಾಡಿದರು. ಬಿವಿವಿ ಸಂಘದ ಸದಸ್ಯ ರವೀಂದ್ರ ಸಾವಳಗಿಮಠ, ಮರುಳಸಿದ್ದಯ್ಯ ಮಠಪತಿ, ಅರ್ಚಕ ಸಿದ್ದಪ್ಪ ಜಂಗನ್ನವರ, ವೀರೇಶ ಖೋತ, ಮಾರುತಿ ಕೋರಡ್ಡಿ, ಬಸವರಾಜ ಗಿರಿಜನ್ನವರ, ಸಿದ್ದಪ್ಪ ಜೋಗಿ, ಆನಂದ ಖೋತ, ವಾಣಿಶ್ರೀ ಆಲಗುಂಡಿ, ವೆಂಕಟೇಶ ಕೋರಡ್ಡಿ, ಮಾರುತಿ ಪೂಜಾರಿ, ಹನಮಂತ ಜಾನಮಟ್ಟಿ, ಹಸನಸಾಬ ಮುಂಡಗನೂರ, ನರಸಿಂಹ ದಾಸರ, ರಾಜು ಮಾದರ, ಎಚ್.ಎಲ್.ಜೋಗಿ, ಗಿರಿಯಪ್ಪ ಗೂಳಪ್ಪಗೋಳ, ಲಕ್ಷ್ಮಣ ನೆನ್ನೆನ್ನಿ ಮತ್ತಿತರಿದ್ದರು.

ಕಿರುಸುದ್ದಿ

ಶ್ರೀರಾಮನ ಶೋಭಾಯಾತ್ರೆ

◆ **ವಿಜಯಪುರ:** ನಗರದಲ್ಲಿ ಶ್ರೀರಾಮ ನವಮಿ ಉತ್ಸವ ಸಮಿತಿ ನೇತೃತ್ವದಲ್ಲಿ ರಾಮ ನವಮಿ ನಿಮಿತ್ತ ಶ್ರೀರಾಮನ ಅಭೂತಪೂರ್ವ ಭವ್ಯ ಶೋಭಾಯಾತ್ರೆ ನಡೆಯಿತು. ವಿವಿಧ ಪುಷ್ಪಗಳಿಂದ ಅಲಂಕೃತ ವಾಹನದಲ್ಲಿ ರಾಮನ ಭವ್ಯ ಪ್ರತಿಮೆಯನ್ನು ಕಂಡು ದಾರಿಯುದ್ದಕ್ಕೂ ಜನರು ಭಕ್ತಿ ಭಾವದಿಂದ ನಮಿಸಿದರು.



ರಾಮ ಮಂದಿರದಿಂದ ಆರಂಭಗೊಂಡ ಭವ್ಯ ಶೋಭಾಯಾತ್ರೆ ಸಿದ್ದೇಶ್ವರ ದೇವಾಲಯ, ಗಾಂಧಿ ವೃತ್ತ, ಶಿವಾಜಿ ಮಹಾರಾಜ ವೃತ್ತ ಮೂಲಕ ಸಂಚರಿಸಿ ಅಂಬಾಭವಾನಿ ದೇವಾಲಯಕ್ಕೆ ತಲುಪಿ ಸಂಪನ್ನಗೊಂಡಿತು. ಈ ವೇಳೆ ರಾಮನವಮಿ ಉತ್ಸವ ಸಮಿತಿ ಅಧ್ಯಕ್ಷ ಉಮೇಶ ವಂದಾಲ ಮಾತನಾಡಿ, ಭಗವಾನ ರಾಮನ ಆದರ್ಶಗಳು ಉದಾತ್ತ ಜೀವನಕ್ಕೆ ಮಾರ್ಗದರ್ಶಿ, ರಾಮನ ಜೀವನವೇ ಸಕಲರಿಗೂ ಸ್ಫೂರ್ತಿ. ರಾಮನ ಆದರ್ಶಗಳು, ಉದಾತ್ತ ಚಿಂತನೆಗಳನ್ನು ಯುವಜನತೆಯಲ್ಲಿ ಮೂಡಿಸುವ ದೃಷ್ಟಿಯಿಂದ ಈ ಮೆರವಣಿಗೆ ನಡೆಸಲಾಗುತ್ತಿದೆ ಎಂದರು.

ಇಂದಿನಿಂದ ಬಿದರಕುಂದಿ ಸಂಗಮೇಶ್ವರ ಜಾತ್ರೆ

◆ **ಮುದ್ದೇಬಿಹಾಳ:** ಸಮೀಪದ ಬಿದರಕುಂದಿ ಗ್ರಾಮದ ಸಂಗಮೇಶ್ವರ ಹಾಗೂ ಮಾರುತೇಶ್ವರ ಜಾತ್ರಾ ಮಹೋತ್ಸವ ಏ.1 ಮಂಗಳವಾರದಿಂದ ಏ.5ರ ವರೆಗೆ ನಡೆಯಲಿದೆ. ಸೌಹಾರ್ದತೆಯ ಈ ಜಾತ್ರೆಯಲ್ಲಿ ಮಂಗಳವಾರ ಬೆಳಗ್ಗೆ ತೆರಿಗೆ ಗರಡುಪಟ್ಟಿ ಕಟ್ಟುವುದು ಹಾಗೂ ಉಚ್ಚಾಯ ಮಾಡುವ ಮೂಲಕ ರಥೋತ್ಸವದ ಸಿದ್ಧತೆಯನ್ನು ಮಾಡಲಾಗಿದೆ. ಏ.2ರಂದು ಬುಧವಾರ ಭಕ್ತಿ ಗಾಯನ, ಮಹಾ ರಥೋತ್ಸವ ಹಾಗೂ ಇನ್ನಿತರ ಮನರಂಜನ ಕಾರ್ಯಕ್ರಮಗಳು ಜರಗುವವು. ಜಾತ್ರೋತ್ಸವದಲ್ಲಿ ಟಗರಿನ ಕಾಳಗ, ಜನಪದ ಗೀಗಿ ಪದಗಳು, ಹಾಗೂ ಪಟ್ಟಿ ಗಾಡಿ ಓಟದ ಸ್ಪರ್ಧೆ ಇನ್ನಿತರ ಗ್ರಾಮೀಣ ಸ್ಪರ್ಧೆಗಳು ಜರಗುವುದು. ಏ.3ರಂದು ಕುಂಕುಮ ಪೂಜೆ, ಓಕಳಿ ಹಾಗೂ ಸ್ಪರ್ಧೆಗಳು ಜರುಗುವವು. ಏ.4ರಂದು ಶನಿವಾರ ದೇಶದ ಜನಪದ ಮತ್ತು ಗ್ರಾಮೀಣ ಕ್ರೀಡೆಯಾದ ಮಲ್ಲಕಂಬ ಹಾಗೂ ಕಬಡ್ಡಿ ಪಂದ್ಯಾವಳಿ ಏರ್ಪಡಿಸಲಾಗಿದ್ದು ಆಸಕ್ತರು ಭಾಗವಹಿಸಲು ವ್ಯವಸ್ಥಾಪಕರು ಕೋರಿದ್ದಾರೆ. ಏ.5ರಂದು ಕೊನೆಯ ದಿನ ತೇರಿನ ಕಳಸ ಇಳಿಸುವುದು, ಕಡುಬಿನ ಸ್ಪರ್ಧೆ, ಭಕ್ತಿ ಗೀತೆಗಳ ಹಾಗೂ ಪ್ರದರ್ಶನಗಳ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ದೇವಸ್ಥಾನದ ಜಾತ್ರೆಯ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಜಾತ್ರಾ ಮಹೋತ್ಸವ

◆ **ಝಳಕಿ:** ಸಮೀಪದ ಅರ್ಜನಾಳ ಗ್ರಾಮದ ಜೈ ಬಲಭೀಮ ದೇವರ ಜಾತ್ರಾ ಮಹೋತ್ಸವ ಮೂರು ದಿನ ನಡೆಯುವುದು. ಏ.1ರಂದು ಮಂಗಳವಾರ ಸಂಜೆ 7 ಗಂಟೆಗೆ ಡಾಕಪ್ಪಗೌಡ ಬಿರಾದಾರ ಅವರ ಮನೆಯಿಂದ ಸಕಲ ವಾದ್ಯ ವೈಭವಗಳೊಂದಿಗೆ ಎಣ್ಣೆ ಮಜ್ಜಲು ಕಾರ್ಯಕ್ರಮ ಜರಗುವುದು ಅದೇ ರಾತ್ರಿ 9 ಗಂಟೆಗೆ ಬಲಭೀಮ ಭಜನಾ ಮಂಡಳಿಯವರಿಂದ ಭಜನೆ ಜರಗಿದವು. ಏ.2ರಂದು ಬೆಳಗ್ಗೆ 6 ಗಂಟೆಗೆ ತೋಟಲ ಕಾರ್ಯಕ್ರಮ ಜರಗುವುದು. ಏ.3ರಂದು ಬೆಳಗ್ಗೆ 9ಗಂಟೆಗೆ ಸಂಜೆ 6ಗಂಟೆವರಿಗೆ ಧೀರಮಾರುತಿ ಗೀಗೀ ಪದ ಮೇಳ ಸುನ್ನಾಳ ರಾಮದುರ್ಗ ಹಾಗೂ ದುರ್ಗಾದೇವಿ ಗೀಗೀ ಪದ ಮೇಳ ತೆಲಸಂಗ ಅಥಣಿ ಇವರಿಂದ ಸುಪ್ರಸಿದ್ಧ ಹರದೇಶಿ ನಾಗೇಶಿ ಗೀಗೀ ಪದಗಳು ಜರಗಿದವು. ನಂತರ 6 ಗಂಟೆಗೆ ಜಂಗಿ ನಿಕಾಲಿ ಕುಸ್ತಿ ಜರಗಿದವು. ಅದೇ ರಾತ್ರಿ 10 ಗಂಟೆಗೆ ಜೈ ಮಾತೃಭೂಮಿ ಕಲಾ ಸಂಘವಯಿಂದ ರೇವಣ್ಣ ಕಲ್ಮೇಶ್ವರ ಇವರ ಸಾರಥ್ಯದಲ್ಲಿ ಮಾರಿ ಕಣ್ಣು ಹೋರಿ ಮೇಲೆ ಎಂಬ ಸುಂದರ ಸಾಮಾಜಿಕ ನಾಟಕ ಜರಗಿದವು ಎಂದು ಜಾತ್ರಾ ಕಮಿಟಿ ಹಾಗೂ ಸದಸ್ಯರು ತಿಳಿಸಿದ್ದಾರೆ.

39,597 ವಿದ್ಯಾರ್ಥಿಗಳು ಹಾಜರು

◆ **ವಿಜಯಪುರ:** ಜಿಲ್ಲೆಯಲ್ಲಿ ಮಂಗಳವಾರ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಾಯಿತ 40448 ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗೆ 39597 ಹಾಜರಾಗಿದ್ದರು. 851 ವಿದ್ಯಾರ್ಥಿಗಳು ಗೈರು ಉಳಿದಿದ್ದರು. ಯಾವುದೇ ಡಿಬಾರ್ ಆಗಿಲ್ಲ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ ತಿಳಿಸಿದ್ದಾರೆ.

ಬಸವನಬಾಗೇವಾಡಿ: 2025–26ನೇ ಸಾಲಿನ ಮಂಗಳವಾರ ನಡೆದ ಎಸ್ಸೆಸ್ಸೆಲ್ಸಿ ತೃತೀಯ ಭಾಷೆ ಹಿಂದಿ ಪರೀಕ್ಷೆ ತಾಲೂಕಿನಾದ್ಯಂತ 20 ಪರೀಕ್ಷಾ ಕೇಂದ್ರಗಳಲ್ಲಿ ಶಾಂತಯುತವಾಗಿ ನಡೆಯಿತು. ಹೊಸದಾಗಿ ಪರೀಕ್ಷೆ ಬರೆದ ಅಭ್ಯರ್ಥಿಗಳಲ್ಲಿ 2462 ವಿದ್ಯಾರ್ಥಿಗಳು 2835 ವಿದ್ಯಾರ್ಥಿನೀಯರು ಸೇರಿ 5297 ಪರೀಕ್ಷಾರ್ಥಿಗಳಲ್ಲಿ 2406 ವಿದ್ಯಾರ್ಥಿಗಳು, 2808 ವಿದ್ಯಾರ್ಥಿನೀಯರು ಪರೀಕ್ಷೆಗೆ ಒಟ್ಟು 5214 ಪರೀಕ್ಷಾರ್ಥಿಗಳು ಹಾಜರಾಗಿ 56 ವಿದ್ಯಾರ್ಥಿಗಳು 27 ವಿದ್ಯಾರ್ಥಿನೀಯರು ಸೇರಿ ಒಟ್ಟು 83 ವಿದ್ಯಾರ್ಥಿಗಳು ಪರೀಕ್ಷೆಯಿಂದ ದೂರು ಉಳಿದಿದ್ದರು ಎಂದು ಬಸವನಬಾಗೇವಾಡಿ ತಾಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ನೋಡಲ್ ಅಧಿಕಾರಿ ವಿಜಯೀಂದ್ರ ಪುರೋಹಿತ ತಿಳಿಸಿದ್ದಾರೆ.



ವಿಜಯಪುರ: ನಗರದ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲೆ ಇಂಡಿ ತಾಲೂಕಿನ ಅರ್ಥಗಾ ಗ್ರಾಮದ ಆರ್.ಎಂ.ಬಿರಾದಾರ ಮಾಧ್ಯಮಿಕ ವಿಭಾಗ ಹಾಗೂ ಪದವಿ ಪೂರ್ವ ಕಾಲೇಜಿನ 2002ರಿಂದ 2005ನೇ ಸಾಲಿನ ಹೈಸ್ಕೂಲ್ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ ನಡೆಯಿತು. ನಿವೃತ್ತ ಪ್ರಾಂಶುಪಾಲ ಎಸ್.ಎಂ.ಮಿರ್ಜಿ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಮುಖ್ಯೋಪಾಧ್ಯಾಯ ಎ.ಬಿ.ಮಾಳಿ, ಎಸ್.ಎಸ್.ಮೊಟಗಿ, ಜಿ.ಎಸ್.ತುಪ್ಪದ, ಆರ್.ಬಿ. ಪುರೋಹಿತ್, ಬಿ.ಎಸ್. ರೇಬಿನಾಳ, ಎಸ್.ಎಸ್.ಅಂತರಗಂಗೆ, ಡಿ.ಬಿ.ಚನೆಗಾಂವ್, ಆರ್.ವೈ.ತೊರವಿ, ಕೆ.ಜಿ.ಹಿರೇಮಠ, ಬಿ.ಎಲ್.ನಾಟಿಕಾರ್, ಕೆ.ಕೆ.ಹಿಟ್ನಳ್ಳಿ, ಎ.ಬಿ.ಅಥಣಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಹರಿಂದ್ರಾಳ ಬಾಲೇಶ್ವರ ಜಾತ್ರಾ ಮಹೋತ್ಸವ

◆ **ಮುದ್ದೇಬಿಹಾಳ:** ತಾಲೂಕಿನ ಹರಿಂದ್ರಾಳ ಗ್ರಾಮದ ಬಾಲೇಶ್ವರ ದೇವರ ವಾರ್ಷಿಕ ಜಾತ್ರಾ ಮಹೋತ್ಸವವು ಸಡಗರ, ಸಂಭ್ರಮ ಹಾಗೂ ಭಕ್ತಿಭಾವದೊಂದಿಗೆ ನೆರವೇರಿತು.

ಜಾತ್ರೆಯ ಅಂಗವಾಗಿ ಮುಂಜಾನೆ ಬ್ರಾಹ್ಮೀ ಮುಹೂರ್ತದಲ್ಲಿ ಬಾಲೇಶ್ವರ ದೇವರ ಮೂರ್ತಿಗೆ ವಿಶೇಷ ಪಂಚಾಮೃತ ಅಭಿಷೇಕ, ನೈವೇದ್ಯ ಹಾಗೂ ಮಹಾಪೂಜೆಗಳನ್ನು ನೆರವೇರಿಸಲಾಯಿತು. ನಂತರ ಗ್ರಾಮದ ಮಣ್ಣ ಗಂಗಸ್ಥಳದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಭವ್ಯ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ಜಾತ್ರೆಯ ಪ್ರಮುಖ ಆಕರ್ಷಣೆಯಾದ ದೈವ ನುಡಿಯ ಸಂದರ್ಭದಲ್ಲಿ ಪೂಜಾರಿಯ ಮೈ ಮೇಲೆ ದೇವರು ಆವಾಹನೆಯಾದಾಗ ಭಕ್ತಾದಿಗಳು ಸ್ತಬ್ಧರಾದರು. ಗ್ರಾಮದ ಭವಿಷ್ಯದ ಬಗ್ಗೆ ನುಡಿದ ಪೂಜಾರಿಗಳು, ಬರುವ ವರ್ಷದಲ್ಲಿ ಉತ್ತಮ ಮಳೆ-ಬೆಳೆಯಾಗಿ ಗ್ರಾಮವು ಸಕಲ ಸಂಪತ್ತು ಮತ್ತು ಸಮೃದ್ಧಿಯಿಂದ ಬೆಳೆಯಲಿದೆ ಎಂದು ಆಶೀರ್ವದಿಸಿದರು. ಈ ದೈವವಾಣಿ ಕೇಳಿ ಭಕ್ತ ಸಮೂಹ ಹರ್ಷ ವ್ಯಕ್ತಪಡಿಸಿತು. ಗ್ರಾಮದ ಪ್ರಮುಖರಾದ ಪರಶು ನಾಗರಬೆಟ್ಟ, ಲಕ್ಷ್ಮಣ ಒಳಕಲದಿನ್ನಿ, ಯಮನಪ್ಪ ಬಿರಾದಾರ, ನಾಗೇಶ ಬಿರಾದಾರ, ಯಲ್ಲಪ್ಪ ಚಲವಾದಿ, ರಮೇಶ ಬಿರಾದಾರ, ಹಣಮಗೌಡ ಪಾಟೀಲ, ಭೈಲಪ್ಪ ನಾಗರಬೆಟ್ಟ, ಬಸಪ್ಪ ತುರಡಗಿ, ಬಸನಗೌಡ ಪಾಟೀಲ, ಶಿವಪ್ಪ ನಾಗರಬೆಟ್ಟ, ಹಣಮಂತ ಬಿರಾದಾರ, ಶರಣಗೌಡ ಪಾಟೀಲ, ಸಂತೋಷ ಬಿರಾದಾರ, ಬಸನಗೌಡ ಪಾಟೀಲ ಸೇರಿದಂತೆ ಗ್ರಾಮದ ಭಕ್ತರು ಇದ್ದರು.



ವಿಜಯಪುರ: ನಗರದ ಸಿದ್ಧೇಶ್ವರ ಸಂಸ್ಥೆಯ ಸಿದ್ದಸಿರಿ ಕಾನೂನು ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಮಂಗಳವಾರ ಸಂಭ್ರಮದಿಂದ ಆಚರಿಸಲಾಯಿತು. ಸಾರ್ವಜನಿಕ ಅಭಿಯೋಜಕಿ ವನಿತಾ ಇಟಗಿ, ಡಾ.ಎಚ್.ವೆಂಕಟೇಶ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲೆ ಡಾ.ಸುಷ್ಮಾ ದೇಸಾಯಿ ಇತರರು ಇದ್ದರು.

ತಾಳಿಕೋಟೆ ಪ್ರಜಾಸೌಧ ಸ್ಥಳ ವಿವಾದ | 36ನೇ ದಿನವೂ ಮುಂದುವರಿದ ಧರಣಿ

ಪ್ರಜೆಗಳ ಅನುಕೂಲಕ್ಕೆ ಪ್ರಜಾಸೌಧ ನಿರ್ಮಿಸಿ

◆ **ತಾಳಿಕೋಟೆ:** ಪ್ರಜಾಸೌಧ ಇರುವುದು ಪ್ರಜೆಗಳ ಅನುಕೂಲಕ್ಕಾಗಿ, ಯಾರೋ ಕೆಲವರ ಸ್ವಾರ್ಥಕ್ಕಲ್ಲ, ಈ ತೀಕ್ಷ್ಣ ಮಾತುಗಳು ಕೇಳಿಬಂದಿದ್ದು ತಾಳಿಕೋಟೆಯ ಬಸವೇಶ್ವರ ವೃತ್ತದಲ್ಲಿ. ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ಪ್ರಜಾಸೌಧ ನಿರ್ಮಾಣಕ್ಕೆ ತಾಲೂಕು ಆಡಳಿತ ಗುರುತಿಸಿರುವ ಸ್ಥಳದ ವಿರುದ್ಧ ನಡೆಯುತ್ತಿರುವ ಜನಾಂದೋಲನ 36ನೇ ದಿನಕ್ಕೆ ಮುಂದುವರಿದಿದ್ದು, ಧರಣಿ ಸ್ಥಳಕ್ಕೆ ಭೇಟಿ ನೀಡಿದ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೆಂಬಲ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ಅವರು, ಸರ್ಕಾರಿ ಕಚೇರಿಗಳು ಜನರಿಗೆ ಹತ್ತಿರವಿರಬೇಕು. ಕಾಡು–ಮೇಡಿನಲ್ಲಿ ಪ್ರಜಾಸೌಧ ನಿರ್ಮಿಸಿದರೆ ಜನಸಾಮಾನ್ಯರು ಅಲ್ಲಿಗೆ ಹೋಗುವುದು ಹೇಗೆ? ಈ ಕೂಡಲೇ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರನ್ನು ಭೇಟಿ ಮಾಡಿ ಸ್ಥಳಾಂತರಕ್ಕೆ ಆಗ್ರಹಿಸುತ್ತೇನೆ ಎಂದು ಗುಡುಗಿದರು. ಜಿಲ್ಲಾಧಿಕಾರಿಗಳ ಜತೆಗೂ ಮಾತನಾಡುವುದಾಗಿ ಭರವಸೆ ನೀಡಿದರು.

ಕೂಚಬಾಳ ಗ್ರಾಮದ ಹಿರಿಯರಾದ ಚಂದ್ರಶೇಖರ ಹಿರೇಮಠ, ಡಿಎಸ್‌ಎಸ್ ಸಂಚಾಲಕ ದೇವೇಂದ್ರ ಹಾದಿಮನಿ ಮಾತನಾಡಿ, ಈಗ ಗುರುತಿಸಿರುವ ಸ್ಥಳವು ಪಟ್ಟಣದಿಂದ ದೂರವಿದ್ದು, ಅಲ್ಲಿಗೆ ಹೋಗಲು ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಭಯಪಡುವಂತಿದೆ. ಸಾರ್ವಜನಿಕರ ಸುರಕ್ಷತೆಯನ್ನು ಬಲಿಕೊಟ್ಟು ಕಚೇರಿ ಕಟ್ಟುವುದು ಸರಿಯಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈಗಾಗಲೇ ನಿಗದಿಪಡಿಸಿರುವ ಸ್ಥಳದ ಹಿಂದೆ ಕೆಲವರ ವೈಯಕ್ತಿಕ ಲಾಭ ಅಡಗಿದೆ ಎಂಬ ಗಂಭೀರ ಆರೋಪವನ್ನು ಹೋರಾಟ ಸಮಿತಿ ಮಾಡಿದೆ. ಪಟ್ಟಣದೊಳಗೆ ಸರ್ಕಾರಿ ಜಾಗ ಲಭ್ಯವಿದ್ದರೂ ದೂರದ ಪ್ರದೇಶವನ್ನು ಆಯ್ಕೆ ಮಾಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದರು.



ಸಿಎಂಗೆ ಮನವಿ

ಈಗಾಗಲೇ ನಿಗದಿಪಡಿಸಿರುವ ಪ್ರಜಾಸೌಧ ನಿರ್ಮಾಣ ಸ್ಥಳವನ್ನು ವಿರೋಧಿಸಿ, ತಾಳಿಕೋಟೆ ತಾಲೂಕು ಹೋರಾಟ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ಪಟ್ಟಣದೊಳಗಿನ ಸರ್ಕಾರಿ ಜಾಗದಲ್ಲೇ ಪ್ರಜಾಸೌಧ ನಿರ್ಮಿಸಲು ಆಗ್ರಹಿಸಿದೆ. ಹೋರಾಟವು ಕಳೆದ 35 ದಿನಗಳಿಂದ ನಿರಂತರವಾಗಿ ನಡೆಯುತ್ತಿದ್ದರೂ ತಾಲೂಕು ಆಡಳಿತ, ಜಿಲ್ಲಾ ಆಡಳಿತ ಹಾಗೂ ಸಂಬಂಧಪಟ್ಟ ಶಾಸಕರು ಧರಣಿ ಸ್ಥಳಕ್ಕೆ ಭೇಟಿ ನೀಡದೆ ಇರುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಸಮಿತಿ ತಿಳಿಸಿದೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಸ್ತುತ ಉಪಚುನಾವಣೆ ನಡೆಯುತ್ತಿರುವುದರಿಂದ, ಚುನಾವಣೆ ಪೂರ್ಣಗೊಂಡ ಬಳಿಕ ನಿಮ್ಮ ಮನವಿಗೆ ಸ್ಪಂದಿಸಿ ತಾಳಿಕೋಟೆ ಪಟ್ಟಣದಲ್ಲಿಯೇ ಸ್ಥಳ ಬದಲಾವಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ್ದಾರೆ.

ಸಿದ್ದನಗೌಡ ಪಾಟೀಲ, ಚಂದ್ರಶೇಖರ ಹಿರೇಮಠ, ಭೀಮಣ್ಣ ತುಂಬಗಿ, ಮುಪ್ಪಯ್ಯ ಹಿರೇಮಠ, ಬಸಪ್ಪ ಮೇಟಿ, ನಿಂಗಣ್ಣ ಜಲಪುರ, ನಿಂಗಪ್ಪ ಹೊಡೆದ, ಸಿದ್ದಪ್ಪ ಕುಚುಬಾಳ, ನಿಂಗಪ್ಪ ಮಡಕೆಶ್ವರ, ಸಂಗಪ್ಪ ತುಂಬಗಿ, ಬಸವರಾಜ ಹಡಪದ, ಯಮನಪ್ಪ ನಾಯ್ಕೋಡಿ, ಭೀಮಣ್ಣ ಮಸಳಿ, ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಆರ್.ಎಸ್.ಪಾಟೀಲ(ಕುಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ ಇದ್ದರು.

ಏ.1ರಿಂದ ಸ್ವಯಂ ಗಣತಿಯಲ್ಲಿ ಭಾಗವಹಿಸಿ

◆ **ವಿಜಯಪುರ:** ಜನಗಣತಿಯು ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ, ದೇಶದ ಸಾಮಾಜಿಕ–ಆರ್ಥಿಕ ಸ್ಥಿತಿಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು, ಭಾರತದ ಮೊದಲ ಡಿಜಿಟಲ್ ಜನಗಣತಿ ಮತ್ತು 16 ನೇ ಜನಗಣತಿಯು ಏಪ್ರಿಲ್ ನಿಂದ 2 ಹಂತದಲ್ಲಿ ಆರಂಭಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ಜನಗಣತಿಯ ಸುರಕ್ಷಿತ ವೆಬ್ ಪೋರ್ಟಲ್ https://se.census.gov.inಗೆ ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಆಗಿ. ಬಳಿಕ ನಿಮ್ಮ ಸ್ಥಳ ಆಯ್ಕೆ ಮಾಡಿ. ನಕ್ಷೆಯಲ್ಲಿ ನಿಮ್ಮ ಮನೆ ಗುರುತಿಸಿ. ಬಳಿಕ ಮನೆಯ ಇಲ್ಲವೇ ಕುಟುಂಬದ ವಿವರ ಭರ್ತಿ ಮಾಡಿ, ನಿಮ್ಮ ಸೀ ರೆಫರೆನ್ಸ್ ಐಡಿ ಪಡೆಯಿರಿ. ಈಗ ಬಂದಿರುವ ನಿಮ್ಮ ಸೀ ಐಡಿ ಅನ್ನು ಸುರಕ್ಷಿತವಾಗಿ ಇಟ್ಟು, ಇನ್ಯುಮೇಟರ್ ಮನೆಗೆ ಬಂದಾಗ ಅದನ್ನು ಅವರೊಂದಿಗೆ ಹಂಚಿಕೊಳ್ಳಬೇಕು ಎಂದರು.

ಏ. 16ರಿಂದ ಮೇ 15 ರವರೆಗಿನ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ. ಒಂದು ವೇಳೆ ಸ್ವಯಂ ಗಣತಿ ಪೂರ್ಣಗೊಳಿಸದಿದ್ದರೆ, ಅವರು ನಿಮ್ಮಿಂದಲೇ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಈ ಅವಧಿಯಲ್ಲಿ ಶೇ.100 ರಷ್ಟು ಗೌಪ್ಯತೆ ಇಟ್ಟು ನಿಮ್ಮ ಸ್ವಯಂ ಗಣತಿಯನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ಜನತೆ



ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏ.16 ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ಏಪ್ರಿಲ್ 1 ರಿಂದ 15 ವರೆಗೆ ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ ನೀಡಲಾಗಿದೆ ಎಂದರು.

ಏ.1ರಿಂದ ಏ.15 ರ ವರೆಗೆ ಸ್ವಯಂ ಗಣತಿ ವೆಬ್ ಪೋರ್ಟಲ್ ಲಭ್ಯವಿದೆ. ಮೊಬೈಲ್, ಡೆಸ್ಕ್‌ಟಾಪ್, ಲ್ಯಾಪ್ ಟಾಪ್ ಸಾಧನಗಳ ಮೂಲಕ ನಮೂದಿಸಬಹುದು. ಇದರಿಂದ ಸಮಯದ ಉಳಿತಾಯ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿ ಆಗಲಿದೆ ಎಂದರು.

ಸ್ವಯಂ ಗಣತಿಯು ಶೇ. 100 ರಷ್ಟು ಗೌಪ್ಯತೆಯ ಭದ್ರತೆ ನೀಡಲಿದ್ದು, ಪ್ರತಿಯೊಬ್ಬರೂ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ದೇಶದ ಜವಾಬ್ದಾರಿಯುತ ನಾಗರಿಕರಾಗಬೇಕಿದೆ ಎಂದರು.

ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಸಮರ್ಥಳು: ಮನಗೂಳಿ

◆ **ಸಿಂದಗಿ:** ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಸಮರ್ಥವಾಗಿ ಸಾಧನೆ ಗೈದಿದ್ದಾರೆ. ವಿದ್ಯಾವಂತ ಮಹಿಳೆಯರು ಆರ್ಥಿಕವಾಗಿ ಸಬಲೀಕರಣಗೊಳ್ಳುತ್ತಿದ್ದಾರೆ. ಕೃಷಿ ಆಧಾರಿತ ಮಹಿಳೆಯರು ಇಂದಿಗೂ ಮಾನವೀಯ ಹಾಗೂ ನೈತಿಕ ಮೌಲ್ಯ ಕಾಪಾಡಿಕೊಂಡು ಬಂದಿದ್ದಾರೆ. ಮಹಿಳೆಯರನ್ನು ಪೂಜ್ಯನೀಯ ಭಾವದಿಂದ ಭಾರತ ಕಾಣುತ್ತದೆ ಎಂದು ಸಮಾಜ ಸೇವಕಿ. ಶಿಕ್ಷಣ ಪ್ರೇಮಿ ನಾಗರತ್ನ ಅಶೋಕ ಮನಗೂಳಿ ಹೇಳಿದರು.

ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಮದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿ ಜೀವನ ಸಾಗಿಸಬೇಕು. ಮಹಿಳೆ ಎಲ್ಲರಿಗೂ ಮಾದರಿಯಾಗಿ ಬದುಬೇಕೆಂದರು.

ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಶಿಲ್ಪಾ ಭಸ್ಮೆ ಮಾತನಾಡಿ, ಮಹಿಳೆಯರು ಇಂದು ವೃತ್ತಿ ಜೀವನ ಮತ್ತು ವೈಯಕ್ತಿಕ ಜೀವನವನ್ನು ಸಮತೋಲನದಲ್ಲಿ ನಿಭಾಯಿಸುವ ಚಾಕಚಕ್ಯತೆಯನ್ನು ಹೊಂದಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲ ತನ್ನುನ್ನು ತಾವು ಎಲ್ಲ ರಂಗಗಳಲ್ಲಿ ಗುರುತಿಸಿಕೊಂಡಿದ್ದಾರೆ. ಮಹಿಳೆಯು ಸಂಪೂರ್ಣವಾಗಿ ಸಬಲೀಕರಣ ಹೊಂದಬೇಕಿದೆ ಪಾಲಕರು ಪ್ರತಿ ಮಗುವಿಗೆ ಶಿಕ್ಷಣ ನೀಡಬೇಕು. ಶಿಕ್ಷಣ ನೀಡುವುದರ ಮೂಲಕ ಮಹಿಳೆಯರನ್ನು ವಿಶ್ವಕ್ಕೆ ಪರಿಚಯಿಸುವ ಪ್ರಯತ್ನ ಮಾಡುಬೇಕು ಎಂದರು.

ಆಲಮೇಲ ಮಹಿಳಾ ಸಾಹಿತಿ ರೇವತಿ ಉಪ್ಪಿನ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೈ.ಸಿ.ಮಯೂರ, ನ್ಯಾಯವಾದಿ ಭೌರಮ್ಮ ಮಾನವಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಶಿಕ್ಷಕಿ ಶೋಭಾ ಚಿಗರಿ ಮಾತನಾಡಿದರು. ಶೈಲಾ ಸ್ಥಾವರಮಠ, ಅನಸೂಯ ಪಾರಗೊಂಡ, ವರ್ಷಾ ಪಾಟೀಲ, ಜಗದೇವಿ ಬಿರಾದಾರ, ಜಯಶ್ರೀ ಕುಲಕರ್ಣಿ, ಶಶಿಕಲಾ ಅಂಗಡಿ, ಶಾರದಾ ಬೇಟಗೇರಿ, ಪ್ರತಿಭಾ ಚೆಳ್ಳಗಿ, ಜಯಶ್ರೀ ಹದನೂರ, ಶರಣಮ್ಮ ನಾಯಕ, ಶಾಂಭವಿ ಬೋರಗಿ, ಜಯಶ್ರೀ ನಾಟೀಕಾರ, ಶಾಂತು ರಾಣಾಗೋಳ. ಪುರುಷೋತ್ತಮ ಕುಲಕರ್ಣಿ, ವಿಶ್ವನಾಥ ಪಾಟೀಲ, ಇಸ್ಮಾಯಿಲ್ ಶೇಖ, ಜೈಭೀಮ ತಳಕೇರಿ, ರಾಮಕೃಷ್ಣ ಹೆಬ್ಬಾಳ. ಎಸ್.ಎಸ್.ಸಾತಿಹಾಳ ಇದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳಾ ಸಾಧಕರಾದ ಮಹಾದೇವಿ ಅಗಸರ. ಲಕ್ಷ್ಮಿಬಾಯಿ ಕುಂಬಾರ, ರೇಣುಕಾ ಚೌರ, ದಾನಮ್ಮ ಕುಂಬಾರ, ಪ್ರೇಮಾ ನಾಯಕ, ನಾಗಮ್ಮ ಎಮ್ಮಿ, ಶೈಲಾ ನ್ಯಾಮಣ್ಣವರ, ಮಹಾದೇವಿ ಹಿರೇಮಠ, ಇಮಾಂಬಿ ಬೋರಗಿ, ಮೀನಾಕ್ಷಿ ವಾಘಮೋರೆ, ಬೌರಮ್ಮ ಮಾನವಿ, ದಾನಮ್ಮ ಬಿರಾದಾರ, ಸುಚಿತ್ರಾ ಆಕಾಶ. ಶಾಂತಾಬಾಯಿ ಗುಬ್ಬೇವಾಡ ಅವರನ್ನು ಗೌರವಿಸಲಾಯಿತು.



ಕಾಲುವೆಗಳಿಗೆ ನೀರು ಹರಿಸಲು ಆಗ್ರಹ

◆ **ಆಲಮಟ್ಟಿ:** ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ಶೇಂಗಾ, ಮೆಕ್ಕೆಜೋಳ, ಈರುಳ್ಳಿ ಹಾಗೂ ತಡವಾಗಿ ಬಿತ್ತನೆಗೊಂಡ ಗೋಧಿ ಬೆಳೆಗಳು ಸಮರ್ಪಕವಾಗಿ ಬೆಳೆಯಲು ಎಪ್ರಿಲ್ ಅಂತ್ಯದವರೆಗೆ ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ರೈತರು ಮಂಗಳವಾರ ಕೆಬಿಜೆಎನ್ನೆಲ್ ಮುಖ್ಯ ಅಭಿಯಂತರರಿಗೆ ಮನವಿ ಸಲ್ಲಿಸಿದರು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ನೀರಾವರಿ ಉದ್ದೇಶಕ್ಕಾಗಿ ಆಲಮಟ್ಟಿ ಜಲಾಶಯ ವ್ಯಾಪ್ತಿಯ ಕಾಲುವೆಗಳಿಗೆ ಇನ್ನೂ ಕೇವಲ ಮೂರು ದಿನ ಮಾತ್ರ ನೀರು ಹರಿಸಿ ಬಳಿಕ ಬಂದ್ ಮಾಡುವುದಾಗಿ ಅಧಿಕಾರಿಗಳು ತಿಳಿಸಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ನ.14ರಂದು ಬೆಂಗಳೂರಿನಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿಯೇ ಏಪ್ರಿಲ್ ಅಂತ್ಯದವರೆಗೆ ನೀರು ಹರಿಸುವಂತೆ ಮನವಿ ಸಲ್ಲಿಸಲಾಗಿದ್ದರೂ, ಅದನ್ನು ಪರಿಗಣಿಸದೇ ಏ.3ರಂದು ಕಾಲುವೆ ನೀರನ್ನು ಸ್ಥಗಿತಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದ್ದು ತಪ್ಪು ಎಂದುರು

ಒಂದು ವೇಳೆ ಏ.3ರಿಂದ ನೀರು ಬಂದ್ ಮಾಡಿದರೆ ಉರಿಬಿಸಿಲಿನ ಪರಿಣಾಮವಾಗಿ ಹಿಂಗಾರು ಹಂಗಾಮಿನ ಬೆಳೆಗಳು ಬಾಡಿಹೋಗುವ ಸಾಧ್ಯತೆ ಇದೆ. ಮುಂಗಾರು ಹಂಗಾಮಿನ ಬೆಳೆಗಳು ಈಗಾಗಲೇ ಕೈಕೊಟ್ಟಿರುವ ಹಿನ್ನೆಲೆ



ರೈತರು ಸಂಕಷ್ಟದಲ್ಲಿದ್ದು, ಈ ಪರಿಸ್ಥಿತಿಯಲ್ಲಿ ನೀರಾವರಿ ನೀರು ನಿಲ್ಲಿಸಿದರೆ ರೈತರ ಮೇಲೆ ಮತ್ತಷ್ಟು ಹೊರೆ ಬೀಳಲಿದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಆಲಮಟ್ಟಿ ಜಲಾಶಯದಲ್ಲಿ 41.223 ಟಿ.ಎಂ.ಸಿ ನೀರು ಸಂಗ್ರಹವಿದ್ದು, ಅದರಲ್ಲಿ 17 ಟಿ.ಎಂ.ಸಿ ಬಳಕೆಗೆ ಮೀಸಲಾಗಿರುವ ನೀರನ್ನು ಹೊರತುಪಡಿಸಿದರೂ ಸುಮಾರು 23.603 ಟಿ.ಎಂ.ಸಿ ನೀರು ಲಭ್ಯವಿದೆ. ಕಳೆದ ವರ್ಷದಿಗಿಂತಲೂ 7.76 ಟಿ.ಎಂ.ಸಿ ಹೆಚ್ಚು ನೀರು ಇರುವುದರಿಂದ ಹಿಂಗಾರು ಬೆಳೆಗಳಿಗೆ ಎಪ್ರಿಲ್ ಅಂತ್ಯದವರೆಗೆ ನೀರು ಹರಿಸುವುದರಿಂದ ಯಾವುದೇ ತೊಂದರೆ ಇಲ್ಲ ಎಂದು ರೈತರು ಅಭಿಪ್ರಾಯಪಟ್ಟಿದ್ದಾರೆ. ಪಾಂಡು ಹ್ಯಾಟಿ, ಹೊನಕೆರೆಪ್ಪ ತೆಲಗಿ, ರಾಜೇಸಾ ವಾಲಿಕಾರ, ಗುರಲಿಂಗಪ್ಪ ಪಡಸಲಗಿ, ದಾವಲಸಾ ನಧಾಪ್, ಗಿರಿಮಲ್ಲಪ್ಪ ದೊಡಮನಿ, ಸಂಗಪ್ಪ ಸುಂಟ್ಯಾಣ, ಸಂಗಪ್ಪ ಪಡಸಲಗಿ, ಶಿವಪ್ಪ ಸುಂಟ್ಯಾಣ, ಮಲ್ಲಪ್ಪ ಪಡಸಲಗಿ ಸೇರಿದಂತೆ ಮತ್ತಿತರರಿದ್ದರು.

ಸಮಾಜದ ಸುಧಾರಣೆಗೆ ಶ್ರಮಿಸಿದ್ದ ಭಗವಾನ ಮಹಾವೀರ: ಶಿಕ್ಷಕ ಕರಜಗಿ

◆ **ಚಡಚಣ:** ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ–2 ಮರಡಿ ಶಾಲೆಯಲ್ಲಿ ಮಹಾವೀರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಶಿಕ್ಷಕ ಬಸವರಾಜ ಕರಜಗಿ ಮಾತನಾಡಿ, ಕ್ರಿ.ಪೂ ಆರನೇ ಶತಮಾನದಲ್ಲಿ ಬಿಹಾರದ ಕುಂಡಗ್ರಾಮದಲ್ಲಿ ಜನಿಸಿದ ಮಹಾವೀರರು ಸತ್ಯದ ಅನ್ವೇಷಣೆಗೆ ತಮ್ಮ ಮೂವತ್ತನೇ ವಯಸ್ಸಿನಲ್ಲಿ ರಾಜಭೋಗ ತ್ಯಜಿಸಿ, ಹನ್ನೆರಡು ವರ್ಷಗಳ ಕಠಿಣ ತಪಸ್ಸಿನ ನಂತರ ಜ್ಞಾನೋದಯ ಹೊಂದಿದರು ಎಂದು ವಿವರಿಸಿದರು. ವರ್ಧಮಾನ ಮಹಾವೀರರು 24ನೇ ಹಾಗೂ ಕೊನೆಯ ತೀರ್ಥಂಕರರಾಗಿದ್ದು, ಜೈನ ಧರ್ಮದ ಅಹಿಂಸೆ, ಸತ್ಯ, ಅಸ್ತೆಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ತತ್ವಗಳನ್ನು ಬೋಧಿಸಿ ಸಮಾಜದ ಸುಧಾರಣೆಗೆ ಶ್ರಮಿಸಿದ್ದಾರೆ ಎಂದು ಹೇಳಿದರು.



ಶಿಕ್ಷಕ ಜಗದೀಶ ಚಲವಾದಿ ಮಾತನಾಡಿ, ಅಹಿಂಸೋ ಪರಮೋ ಧರ್ಮಃ ಎಂಬುದು ಜೈನ ಧರ್ಮದ ಮೂಲ ತತ್ವವಾಗಿದ್ದು, ಯಾವುದೇ ಜೀವಿಗೆ ಹಿಂಸೆ ಮಾಡಬಾರದು ಎಂಬ ಸಂದೇಶವನ್ನು ಮಹಾವೀರರು ನೀಡಿದ್ದಾರೆ. ಆತ್ಮವು ಶುದ್ಧ ಹಾಗೂ ಅನಂತವಾಗಿದೆ ಎಂಬ ಅವರ ಬೋಧನೆಗಳು ಇಂದಿನ ಯುವ ಪೀಳಿಗೆಗೆ ಅತ್ಯಂತ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಾದ ದೀಕ್ಷಾ ಧೋತ್ರೆ, ಅಂಜನಾ ಕೊಂಚಿಕೊರವರ, ಆದಿತ್ಯ ಧೋತ್ರೆ ಸೇರಿದಂತೆ ಅನೇಕರು ಮಹಾವೀರರ ಜೀವನ ಮತ್ತು ತತ್ವಗಳ ಕುರಿತು ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಬಾಲಾಜಿ ಗಾಡಿವಡ್ಡರ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯ ಶಿಕ್ಷಕ ಮಹಾಂತೇಶ ಉಮರಾಣಿ ಉಪಸ್ಥಿತರಿದ್ದರು. ಶಿಕ್ಷಕರಾದ ಡಿ.ಎಸ್.ಬಗಲಿ, ಎಂ.ಎಸ್.ನಿಂಬಾಳಕರ, ಸುನಂದಾ ಕೋಟಿ, ಪಾಲಕರಾದ ಅರ್ಜುನ ವಡ್ಡರ ಹಾಗೂ ಅಡುಗೆ ಸಹಾಯಕಿಯರಾದ ಮಹಾನಂದಾ ಧೋತ್ರೆ, ಸಪೂರಾ ಲಟೋರಿ, ಸವಿತಾ ವಾಲಿಕಾರ, ರಕಮಾ ವಾಘಮೋರೆ, ಕಸ್ತೂರಿ ಸಾಲಮಂಟಪ ಉಪಸ್ಥಿತರಿದ್ದರು.

ಶ್ರೀರಾಮ ನವಮಿ: ಅದ್ಧೂರಿ ಮೆರವಣಿಗೆ



◆ **ಆಲಮೇಲ:** ಪಟ್ಟಣದ ಮೇನ್ ಬಜಾರ ದೇವಿ ಗುಡಿ ಎದುರಿಗೆ ಮಂಗಳವಾರ ಹಿಂದು ಸಂಘಟನೆಗಳ ಸಹಯೋಗದಲ್ಲಿ ನಡೆದ ರಾಮ ನವಮಿ ಉತ್ಸವ ಮೆರವಣಿಗೆ ಕಾರ್ಯಕ್ರಮದಲ್ಲಿ ರಾಮಚಂದ್ರರ ಭಾವಚಿತ್ರಕ್ಕೆ ವಿಶ್ವ ಹಿಂದು ಪರಿಷತ್ ರಾಜ್ಯ ಸಂಚಾಲಕ ಶ್ರೀಮಂತ ದುದ್ದಗಿ ಪೂಜೆಗೈದು ಮೆರವಣಿಗೆಗೆ ಚಾಲನೆ ನಿಡಿದರು.

ನಂತರ ಮಾತನಾಡಿದ ಅವರು ಭಕ್ತರ ಹೃದಯದಲ್ಲಿ ಭಕ್ತಿ,ಶಾಂತಿ ಮತ್ತು ಧರ್ಮದ ಬೆಳಕನ್ನು ಹಚ್ಚುವ ಪವಿತ್ರ ಹಬ್ಬವೇ ರಾಮನವಮಿ. ಈ ದಿನ ಕೇವಲ ಶ್ರೀ ರಾಮನ ಜನ್ಮ ದಿನವಷ್ಟೇ ಅಲ್ಲ,ಅದು ಮಾನವ ಜೀವನಕ್ಕೆ ದಾರಿದೀಪವಾಗಿರುವ ಸತ್ಯ,ಧರ್ಮ,ಮತ್ತು ನೀತಿಯ ಆಚರಣೆಗೂ ಸಂಕೇತವಾಗಿದೆ. ರಾಮನು ಮರ್ಯಾದಾ ಪುರುಷೋತ್ತಮ ಎಂಬ ಪದವಿಯನ್ನು ಪಡೆದಿದ್ದು, ಅವರ ಜೀವನದ ಪ್ರತಿಯೊಂದು ಕ್ಷಣವೂ ನಿಯಮ,ಶಿಸ್ತು ಮತ್ತು ಧರ್ಮದ ಅನುಸರಣೆ ಎಂಬ ಮೌಲ್ಯಗಳನ್ನು ಪ್ರತಿ ಬಿಂಬಿಸುತ್ತದೆ ಅದಕ್ಕಾಗಿ ಇಂದಿನ ನಮ್ಮ ಹಿಂದು ಯುವಕರು ರಾಮರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಧರ್ಮವನ್ನು ಉಳಿಸಿ ಬೆಳಸಬೇಕು ಎಂದರು. ಮುಖಂಡರಾದ ಬಾಬು ಬಿಜ್ಜರಗಿ, ಶಿವಾನಂದ ಮಾರ್ಸನಳ್ಳಿ. ಗುರುರಾಜ ಕೋಣಶಿರಸಗಿ, ಹೊನ್ನಪ್ಪ ಗುರಕಾರ,ರಾಜೇಂದ್ರ ರಾಠೋಡ, ಸಿದ್ದು ಹವಳಗಿ, ನಿಂಗರಾಜ ಭಂಟನೂರ, ಶಿವಾನಂದ ರಜಪೂತ, ಜಗದೀಶ ಜೋಶಿ, ಕಮಲಾಕರ ಪತ್ತಾರ. ರತನ ಒಣಕುದರಿ, ರಾಕೇಶ ರಾಂಪೂರಮಠ, ಸುನೀಲ ಬಂಡಗರ ಹಾಗೂ ಯುವಕರು ಇದ್ದರು.

ಶಾಂತಿ ಕುಟೀರದಲ್ಲಿ ಶ್ರೀರಾಮನವಮಿ

◆ **ವಿಜಯಪುರ:** ತಾಲೂಕಿನ ಕನ್ನೂರದ ಶಾಂತಿ ಕುಟೀರದಲ್ಲಿ ಸಂಭ್ರಮದ ರಾಮನವಮಿ ಉತ್ಸವ ಹಮ್ಮಿಕೊಳ್ಳಲಾಯಿತು. ಸಮರ್ಥ ಸದ್ಗುರು ಗಣಪತರಾವ ಮಹಾರಾಜರ ಆದೇಶದಂತೆ, ಅರ್ಜನಾಳ, ವಿಜಯಪುರ, ಜತ–ರಾಮತೀರ್ಥ– ಕಕಮರಿ, ಬೊಮ್ಮನಹಳ್ಳಿ, ಗೊಟೇವಾಡಿ ಹಾಗೂ ಬಾರ್ಶಿ ಈ ಆರು ಊರುಗಳಿಂದ ಹೊರಟ ದಿಂಡಿ ಪಾದಯಾತ್ರೆಗಳು ಭಕ್ತಿಭಾವದಿಂದ ಕನ್ನೂರತ್ತ ಹೆಜ್ಜೆ ಹಾಕಿ, ನೀತಿ–ಭಕ್ತಿ–ಆದರ್ಶಗ್ರಾಮ–ಸ್ವದೇಶಿ ಪ್ರಚಾರ ಎಂಬ ಮಹತ್ತರ ಸಂದೇಶವನ್ನು ಹೊತ್ತ ಈ ದಿಂಡಿಗಳು ಸುಮಾರು 200 ಗ್ರಾಮಗಳನ್ನು ಸಂದರ್ಶಿಸಿ, ಜನರಲ್ಲಿ ಜಾಗೃತಿ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಿತ್ತಿದವು.

ರಾಮನವಮಿ ಸಪ್ತಾಹದ ನಿಮಿತ್ತ ಶಾಂತಿಕುಟೀರ ಆಶ್ರಮದಲ್ಲಿ ಜ್ಞಾನಯಜ್ಞ ಆಚರಿಸಲಾಯಿತು. ದಾಸಬೋಧ ಮತ್ತು ಸುಲಭ ಆತ್ಮಜ್ಞಾನ ಗ್ರಂಥಗಳ ವಾಚನ– ಪ್ರವಚನಗಳು ನಡೆದವು. ಸಪ್ತಾಹದ ಕೊನೆಯ ದಿನ ಶಾಂತಿಕುಟೀರ ಟ್ರಸ್ಟಿನ ಅಧ್ಯಕ್ಷ ಗೋವಿಂದ ಬಾಹೇತಿ, ಉಪಾಧ್ಯಕ್ಷ ರವಿ ದಾನಿ, ಸತೀಶ ಕನ್ನೂರ, ಸಂಜಯ ತಿಕೋಟಿ, ಭಾರತೀಯ ಸುರಾಜ್ಯ ಸಂಸ್ಥೆಯ ಅಧ್ಯಕ್ಷ ಬಿ.ಬಿ. ಪೂಜಾರ, ಅಜೀತ ಕನ್ನೂರ ಇದ್ದರು. ರಾಮರಾಜ್ಯ ಕಲಾ ಮೇಳದ ಅಧ್ಯಕ್ಷ ಶ್ರೀಕೃಷ್ಣ ಸಂಪಗಾಂವಕರ ಸೂತ್ರ ಸಂಚಾಲನೆ ಮಾಡಿದರು. ಭಜನೆ, ಸಂಕೀರ್ತನೆಯೊಂದಿಗೆ ಮಹೋತ್ಸವವು ಸಂಭ್ರಮದಿಂದ ಸಮಾಪ್ತಿಗೊಂಡಿತು.



ಮಠಗಳು ಭಾವೈಕ್ಯತೆಯ ತಾಣಗಳು



◆ **ಸಿಂದಗಿ:** ಆರೂಢ ಪರಂಪರೆಯ ಮಠಗಳು ಭಾವೈಕ್ಯತೆಯ ಕೇಂದ್ರಗಳಾಗಿ ಎಲ್ಲ ಧರ್ಮೀಯರ ಒಳಗೊಳ್ಳುವಿಕೆಯನ್ನು ಬಯಸುತ್ತವೆ ಎಂದು ಪ್ರಾಚಾರ್ಯ ಡಾ.ಎಸ್.ಎಸ್.ಹಳೆಮನಿ ಹೇಳಿದರು.

ತಾಲೂಕಿನ ಆರೂಢಮಠದಲ್ಲಿ ಸಿಂದಗಿ ಸರಕಾರಿ ಪ್ರಥಮ ದರ್ಜೆ ಕಾಲೇಜು ರವಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಇಂತಹ ತಾಣದಲ್ಲಿ ನಡೆದ ಕಾರ್ಯಗಳು ವಿದ್ಯಾರ್ಥಿಗಳ ಬದುಕು ಹಸನು ಮಾಡುತ್ತವೆ ಎಂದರು.

ಈ ವೇಳೆ ಸಾನಿಧ್ಯ ವಹಿಸಿ ಮಾತನಾಡಿದ ನಿತ್ಯಾನಂದ ಮಹಾರಾಜರು, ವಿದ್ಯಾರ್ಥಿಗಳಲ್ಲಿ ಒಳಿತನ್ನು ಹೇಗೆ ಮೂಡಿಸಿಕೊಳ್ಳಬೇಕು ಎಂಬುದನ್ನು ಶಿಬಿರದಲ್ಲಿ ಕಲಿತಿದ್ದೀರಿ, ಮುಂದಿನ ದಿನಗಳಲ್ಲೂ ಬದ್ಧತೆಯಿಂದ ಇರುವುದು ಮುಂದುವರೆಸಿ ಎಂದು ಹಾರೈಸಿದರು.

ಪ್ರಾಧ್ಯಾಪಕ ಕೃಷ್ಣಾರೆಡ್ಡಿ ಎಂ., ಡಾ.ರಮೇಶ ಕತ್ತಿ ಮಾತನಾಡಿದರು. ಶಿಬಿರದ ಸಂಯೋಜನಾಧಿಕಾರಿ ಡಾ.ಯಮನಪ್ಪ ಕೆಳಗೇರಿ, ರಾಜೇಸಾಬ, ಡಾ.ಬಿ.ಎನ್.ಪಾಟೀಲ ಇದ್ದರು. ವಿದ್ಯಾರ್ಥಿಗಳು ಶಿಬಿರದ ಅನುಭವಗಳನ್ನು ಹಂಚಿಕೊಂಡರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಶ್ರೀಗಳು ಸತ್ಕರಿಸಿದರು. ಅವಿನಾಶ ತಳಕೇರಿ ಸ್ವಾಗತಿಸಿದರು. ಸುನೀಲಕುಮಾರ ವಂದಿಸಿದರು. ಅನಿಲ ಕುರುಬತಹಳ್ಳಿ ನಿರೂಪಿಸಿದರು.

ಮಹಾವೀರರು ನಮಗೆ ಸ್ಫೂರ್ತಿ: ಪಾಟೀಲ

◆ **ಇಂಡಿ:** ಸತ್ಯ ಅಹಿಂಸೆ ದಯೆಯ ಮೂಲಕ ಸುಂದರ ಸಮಾಜ ಕಟ್ಟಲು ಮಹಾನ ಮಾನವತಾವಾದಿ ಭಗವಾನ ಮಹಾವೀರರು ನಮಗೆ ಸ್ಫೂರ್ತಿಯಾಗಿದ್ದಾರೆ. ಅವರ ಅಹಿಂಸಾ ಮಾರ್ಗದ ಪಂಚಶೀಲ ತತ್ವಗಳು ಇಂದಿಗೂ ನಮಗೆ ಪ್ರೇರಣೆಯಾಗಿವೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು. ನಗರದ 1008 ಆಧಿನಾಥ ದಿಗಂಬರ ಜೈನ ಮಂದಿರದಲ್ಲಿ ಹಮ್ಮಿಕೊಂಡ ಮಹಾವೀರರ



ಜಯಂತಿ ಕಾರ್ಯಕ್ರಮದಲ್ಲಿ ಮಹಾವೀರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಭಗವಾನ ಮಹಾವೀರರ ತತ್ವಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ವಿಶ್ವವೇ ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯ. ನೀನು ಬದುಕಿ ಇತರರನ್ನು ಬದುಕಲು ಬಿಡು ಎಂಬ ಮಹಾವೀರರ ತತ್ವದಡಿಯಲ್ಲಿ ನಾವೆಲ್ಲರು ಒಟ್ಟಾಗಿ ಸಾಗಬೇಕಾಗಿದೆ ಎಂದರು. ಪ್ರತಿಯೊಂದು ಜೀವಿಗೂ ಕೂಡಾ ಜೀವನದ ಮೌಲ್ಯಗಳನ್ನು ಬೋಧಿಸುತ್ತಾ ಪ್ರೀತಿಯ ಸಾಮರಸ್ಯದಿಂದ ಬಾಳಿದಲ್ಲಿ ಸಮಾಜದಲ್ಲಿ ಶಾಂತಿ ನೆಲೆಸತ್ತದೆ. ಸರಳ ವಿನಯಶೀಲತೆಯೇ ಬದುಕಿಗೆ ಶ್ರೀರಕ್ಷೆಯಾಗಿದ್ದು ಅವರ ತತ್ವಾದರ್ಶಗಳನ್ನು ಇಂದು ಅಳವಡಿಸಿಕೊಂಡು ಅರಿತರೆ ಜಗತ್ತು ಶಾಂತಿಯಿಂದ ಜೀವನ ಸಾಗಿಸಲು ಸಹಕಾರಿಯಾಗುತ್ತದೆ ಎಂದರು. ನಗರಾಭಿವೃದ್ಧಿ ಅಧ್ಯಕ್ಷ ಅಜೀತ ಧನಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಯೋಗೆಪ್ಪ ಚನ್ನಗೊಂಡ, ಚಂದನ ಧನಪಾಲ, ಪ್ರಕಾಶ ಧನಶಟ್ಟಿ, ಸಂದೀಪ ಧನಶೆಟ್ಟಿ, ಸನಾಥ ಹಳ್ಳಿ, ಶ್ರೀಕಾಂತ ದುರ್ಗಿ, ಸಂತೋಷ ಕೋಟಿ, ಅಭಿನಂದನ ಕಿರಣಗಿ, ಸಚೀನ ಧನಪಾಲ ಉಪಸ್ಥಿತರಿದ್ದರು.

ಕಿರುಸುದ್ದಿ

71 ದಿನದಲ್ಲಿ 1,079 ಪ್ರಕರಣ ವಿಲೇವಾರಿ

ಕಲಬುರಗಿ: ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದಲ್ಲಿ ಕಳೆದ ಐದು ತಿಂಗಳಲ್ಲಿ 71 ದಿನ ಕಲಾಪ ನಡೆಸಿ1,079 ಪ್ರಕರಣಗಳು ವಿಲೇವಾರಿ ಮಾಡಲಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ ಸಿಂಗ್ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 24 ನವಂಬರ್-2025 ರಿಂದ ಮಾರ್ಚ ಅಂತ್ಯಕ್ಕೆ 2,520 ಪ್ರಕರಣಗಳು ವಿಚಾರಣೆಗೆ ಕೈಗೆತ್ತಿಕೊಂಡು 1,079 ಪ್ರಕರಣಗಳು ವಿಲೇವಾರಿ ಮಾಡಲಾಗಿದೆ. ಅರ್ಜಿದಾರರಿಗೆ ಮಾಹಿತಿ ನೀಡಲು ಕಾಲ ಹರಣ ಮಾಡಿ ಸಮಯ ಮತ್ತು ಆರ್ಥಿಕ ನಷ್ಟ ಉಂಟು ಮಾಡಿದ ಕಾರಣ ನೊಂದ ಅರ್ಜಿದಾರರಿಗೆ 34 ಸಾವಿರ ಪರಿಹಾರ ನೀಡಲು ಆದೇಶ ಮಾಡಲಾಗಿದೆ ಎಂದು ಹೇಳಿದರು. ವಿಶೇಷವಾಗಿ 71 ದಿನದಲ್ಲಿ ಕಳೆದ ಒಂದು ದಶಕದಿಂದ ವಿಲೇವಾರಿಗೆ ಬಾಕಿ ಇದ್ದ ಹಳೇ ಪ್ರಕರಣಗಳನ್ನು ಆದ್ಯತೆ ಮೇಲೆ ವಿಲೇ ಮಾಡಿರುವುದಾಗಿ ತಿಳಿಸಿರುವ ಅವರು, ಬರುವ ದಿನಗಳಲ್ಲಿ ಹೊಸ ಪ್ರಕರಣಗಳು ಕೈಗೆತ್ತಿಕೊಂಡು ವಿಚಾರಣೆ ಶೀಘ್ರವಾಗಿ ಮುಗಿಸಿ ಅರ್ಜಿದಾರರಿಗೆ ಮಾಹಿತಿ ಕೊಡಿಸಲು ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ.

ಎ.3ರಂದು ಟ್ಯಾಲೆಂಟ್ ಅವಾರ್ಡ್ ಸ್ಪರ್ಧೆ



ಕುಷ್ಟಗಿ: ಲಿಂಗಸೂರಿನ ಉಮಾಮಹೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಯಿಂದ 25 ಲಕ್ಷ ರೂ. ವಿದ್ಯಾರ್ಥಿ ವೇತನದ ಅಂಗವಾಗಿ ಎ.3ರಂದು ಟ್ಯಾಲೆಂಟ್ ಅವಾರ್ಡ್ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಶ್ರೀಉಮಾ ಮಹೇಶ್ವರಿ ಪಿಯು ಸೈನ್ಸ್ ಕಾಲೇಜಿನ ಕಾರ್ಯದರ್ಶಿ ವಿನಯಕುಮಾರ ಗಣಾಚಾರಿ ಹೇಳಿದರು.

ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 25 ಲಕ್ಷ ರೂ. ವಿದ್ಯಾರ್ಥಿವೇತನಕ್ಕೆ 25 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಜಾರಿಗೊಳಿಸಲಾಗಿದೆ. 2025ರ ಕೆ-ಸಿಇಟಿ ಪರೀಕ್ಷೆಯಲ್ಲಿ ನಮ್ಮ ಸಂಸ್ಥೆಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಭುವನೇಶ್ವರಿ ಅವರು ಪಶುವೈದ್ಯಕೀಯ ಕ್ಷೇತ್ರದಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ ಮತ್ತು ಬಿಎಸ್‌ಸಿ ಅಗ್ರಿಕಲ್ಚರ್‌ನಲ್ಲಿ ರಾಜ್ಯಕ್ಕೆ 7ನೇ ರಾಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾಳೆ. ಒಟ್ಟು 19 ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರಕ್ಕೆ ಆಯ್ಕೆಯಾಗಿದ್ದಾರೆ. ಕಲ್ಯಾಣ ಕರ್ನಾಟಕದಲ್ಲಿರುವ ಪ್ರತಿಭೆಗಳನ್ನು ಹೊರತೆಗೆದು ಅವರಿಗೆ ವೃತ್ತಿಪರ ಶಿಕ್ಷಣ ದೊರಕುವಂತೆ ನೋಡಿಕೊಳ್ಳುವುದು ಇದರ ಉದ್ದೇಶವಾಗಿದೆ. ಟ್ಯಾಲೆಂಟ್ ಅವಾರ್ಡ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳ-ಪಿಯುಸಿ ವಿಜ್ಞಾನ ವಿಭಾಗಕ್ಕೆ ಎರಡು ವರ್ಷದ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನು ಸಂಸ್ಥೆ ವಹಿಸಿಕೊಳ್ಳಲಿದೆ. ಅದರಂತೆ ಬಹುಮಾನ ಸಹ ನೀಡಲಾಗುವುದು. ಎ.3ರಂದು ಬೆಳಿಗ್ಗೆ 11ಕ್ಕೆ ಲಿಂಗಸುಗೂರಿನ ಉಮಾಮಹೇಶ್ವರಿ ಪಿಯು ಸೈನ್ಸ್ ಕಾಲೇಜಿನಲ್ಲಿ ಪರೀಕ್ಷೆ ಜರುಗಲಿವೆ. ಹೆಚ್ಚಿನ ಮಾಹಿತಿಗಾಗಿ 9611556417 ಸಂಪರ್ಕಿಸಬಹುದು ಎಂದು ತಿಳಿಸಿದರು. ಸಂಯೋಜಕ ಸಂಗಯ್ಯ ಸಿಂದಗಿಮಠ ಇದ್ದರು.

ಎ.2ರಿಂದ ತುಂಗಭದ್ರಾ ಕಾಲುವೆಗೆ ನೀರು: ಬಾದರ್ಲಿ

ಸಿಂಧನೂರು: ಕುಡಿಯುವ ನೀರಿಗಾಗಿ ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರನ್ನು ಹರಿಸಲಾಗಿತ್ತು. ಆದರೆ ಕಾಲುವೆ ಹೊಡೆದಿದ್ದರಿಂದ ದುರಸ್ತೀಕರಣ ಕಾಮಗಾರಿ ಶೀಘ್ರಗತಿಯಲ್ಲಿ ನಡೆದಿದ್ದು, ಎ.2ರಿಂದ ಕಾಲುವೆಗೆ ನೀರು ಹರಿಸುವ ಸಾಧ್ಯತೆಗಳಿವೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು. ಕುಡಿಯುವ ನೀರು ತುಂಬಿಸಿಕೊಳ್ಳುವ ಉದ್ದೇಶದಿಂದ ಕಾಲುವೆಗೆ ನೀರು ಹರಿಸಲಾಗಿತ್ತು.



ಆ ಸಂದರ್ಭದಲ್ಲಿ ಕಾಲುವೆ ಹೊಡೆದು ಅನಾನುಕೂಲತೆ ಉಂಟಾಗಿದ್ದ ಹಿನ್ನಲೆಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ಕಾಲುವೆಗೆ ಶೀಘ್ರವಾಗಿ ನೀರು ಹರಿಸುವ ಉದ್ದೇಶದಿಂದ ತಾತ್ಕಾಲಿಕ ಕಾಮಗಾರಿ ನಡೆಸಲು ಸೂಚಿಸಲಾಗಿತ್ತು. ಆದರೆ, ಅದೇ ಕಾಲಮಿತಿಯಲ್ಲಿ ಶಾಶ್ವತ ದುರಸ್ತಿ ಮಾಡುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದ್ದರಿಂದ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದ್ದು, ಎ. 1ಅಥವಾ 2ರಂದು ಕಾಲುವೆಗೆ ನೀರು ಹರಿಸುವ ಸಾಧ್ಯತೆಗಳಿವೆ. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಶಾಸಕರು ಹೇಳಿದರು.



ಮಾನ್ವಿ: ಪಟ್ಟಣದ ಶ್ರೀವಾಸುಪೂಜ್ಯ ಜೈನ ಮಂದಿರದಲ್ಲಿ ಜೈನ ಧರ್ಮದ 24ನೇ ತೀರ್ಥಂಕರರಾದ ಭಗವಾನ್ ಮಹಾವೀರರ 2625ನೇ ಜಯಂತಿ ಮಹಾವೀರರ ಮೂರ್ತಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜೆ ನೆರವೇರಿಸಲಾಯಿತು. ಜೈನ ಸಮಾಜದ ಮುಖಂಡರಾದ ಬಾಬುಲಾಲ್ ಮಣಿಕ್ ಚಾಂದ್, ಗೌತಮ್ಮ ಕಾಂತಿಲಾಲ್, ಆನಂದ್ ಕಾಂತಿಲಾಲ್, ಸಂತೋಷ, ಮಹಾವೀರ, ಕಿಶೋರ್, ಪ್ರವೀಣ್, ದೀಪಾಕ್ ಸಿರವಾರ, ಸುನೀಲ್ ಸಿರವಾರ, ಅಭಿಷೇಕ, ರೂಪರಾಮಜೀ ಇತರರಿದ್ದರು.

ಸ್ವಯಂ ಗಣತಿಗೆ ಅವಕಾಶ: ಜಿಲ್ಲಾಧಿಕಾರಿ

ರಾಯಚೂರು: ಕೇಂದ್ರ ಗೃಹ ಮಂತ್ರಾಲಯದಿಂದ 2027ರ ಜನಗಣತಿಯು ದೇಶದಲ್ಲಿ ಇದೇ ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯಲಿದೆ. ಅದರಂತೆ ಕರ್ನಾಟಕದಲ್ಲಿ 2027ರ ಜನಗಣತಿಯ (Self-Enumeration) ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆ ಗಣತಿಯ ಸ್ವಯಂ ಗಣತಿಯನ್ನು ಇದೇ ಏ.1ರಿಂದ 15ರವರೆಗೆ ನಡೆಸಲಾಗುತ್ತಿದ್ದು, ರಾಯಚೂರು ಜಿಲ್ಲೆಯ ಎಲ್ಲಾ ನಾಗರಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಮನೆಯ ಸ್ವಯಂ ಗಣತಿ ಮಾಡಿ ಜನಗಣತಿಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲೆಯ ಪ್ರಧಾನ ಜನಗಣತಿ ಅಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ನಿತೀಶ.ಕೆ ಕೋರಿದ್ದಾರೆ.

ಸ್ವಯಂ-ಗಣತಿ (ಎಸ್‌ಇ)ಗೆ ಅವಕಾಶವಿದ್ದು, ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15-20 ನಿಮಿಷಗಳ ಅವಧಿಯಲ್ಲಿ ಸ್ವಯಂ-ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್, ಇ-ಮೇಲ್‌ನಲ್ಲಿ ಸ್ವಯಂ-ಗಣತಿ ಐಡಿ (ಎಸ್‌ಇ ಐಡಿ) ಪಡೆಯಬಹುದಾಗಿದೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಎಸ್‌ಇ ಐಡಿಯನ್ನು ಅವರೊಂದಿಗೆ ಹಂಚಿಕೊಳ್ಳುವ ಮೂಲಕ ಜಿಲ್ಲೆಯ ಎಲ್ಲಾ ನಾಗರಿಕರು ಈ ಅವಕಾಶವನ್ನು ಸದುಪಯೊಗಿಸಿಕೊಂಡು ತಮ್ಮ ಮನೆಯ ಸ್ವಯಂ ಗಣತಿ ಮಾಡಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಷ್ಟಗಿ: ತಾಲೂಕಿನ ತಾವರಗೇರಾ ಹೊರ ವಲಯದ ಬುದ್ಧ ವಿಹಾರದಲ್ಲಿ ಮಾನವ ಬಂಧುತ್ವ ವೇದಿಕೆ ವತಿಯಿಂದ ಗ್ರಾಮ ಸಂಚಾಲಕರಿಗೆ ಒಂದು ದಿನದ ಕಾರ್ಯಾಗಾರ ಭಾನುವಾರ ಜರುಗಿತು. ಡಾ.ಎರಿಸ್ವಾಮಿ ಎಚ್., ಮಾನವ ಬಂಧುತ್ವ ವೇದಿಕೆಯ ತಾಲೂಕು ಸಂಚಾಲಕ ಬೆಟ್ಟಪ್ಪ ಜಿ.ಯತ್ನಟ್ಟಿ, ಅಂಜನೇಯ ಗೌಡ್ರ, ಛತ್ರಪ್ಪ, ಮುದಕಪ್ಪ ಕನ್ನಾಳ, ದುರಗೇಶ ದೇವರಮನಿ, ಸೋಮಶೇಖರ, ಶರಣಪ್ಪ, ಮೋನಾಕ್ಷಿ ಸೇರಿದಂತೆ ಗ್ರಾಮ ಸಂಚಾಲಕರು ಇದ್ದರು.

ಕಲಬುರಗಿ ಪಾಲಿಕೆಯ ತುರ್ತು ಮುಂಗಡ ಪತ್ರದ ಸಭೆ
ಶೀಘ್ರ 500 ಪೌರ ಕಾರ್ಮಿಕರ ನೇಮಕ

ಕಲಬುರಗಿ: ಕಳೆದ ಹಲವು ದಿನಗಳಿಂದ ಬೇಡಿಕೆಯಾಗಿರುವ ಪೌರ ಕಾರ್ಮಿಕರ ನೇರ ನೇಮಕಾತಿ ಕುರಿತಾದ ತೊಡಕುಗಳು ನಿವಾರಣೆಯಾಗಿದ್ದು, ಶೀಘ್ರದಲ್ಲೇ 500 ರಿಂದ 600 ಪೌರ ಕಾರ್ಮಿಕರ ನೇರ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ್ ಶಿಂಧೆ ತಿಳಿಸಿದರು.



ಮಹಾನಗರ ಪಾಲಿಕೆಯ ಇಂದಿರಾ ಸ್ಮಾರಕ (ಟೌನ್ ಹಾಲ್)ದಲ್ಲಿ ಮಂಗಳವಾರ ನಡೆದ ಪಾಲಿಕೆಯ 2025-26ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರ ಹಾಗೂ 2026-27ನೇ ಸಾಲಿನ ಅಂದಾಜು ಮುಂಗಡ ಪತ್ರ ಸಭೆಯಲ್ಲಿ ಮಾತನಾಡಿದ ಅವರು,ಮೊದಲಿದ್ದ ಎಲ್ಲಾ ಸಮಸ್ಯೆ ಕೋರ್ಟ್‌ನಿಂದ ನಿವಾರಣೆಯಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಕ್ಲಿಯರೆನ್ಸ್ ಬಂದ ಕೂಡಲೇ ನೇರ ನೇಮಕಾತಿ ಕುರಿತು ಅಧಿಸೂಚನೆ ಹೊರಡಿಸಲಾಗುವುದು ಎಂದರು.

ಪಾಲಿಕೆ ಸದಸ್ಯ ಶಂಭುಲಿಂಗ ಬಳಬಟ್ಟಿ ಪಾಲಿಕೆಯ ತೆರಿಗೆ ಸಂಗ್ರಹ ಕುರಿತು ಕೇಳಿದ ಪ್ರಶ್ನೆಗೆ ಸಭೆಯಲ್ಲಿ ಉತ್ತರಿಸಿದ ಅಧಿಕಾರಿಗಳು, ಜೋನಲ್ 1ರಲ್ಲಿ ಇಲ್ಲಿಯವರೆಗೆ 20.93 ಕೋಟಿ ತೆರಿಗೆ ಸಂಗ್ರಹವಾಗಿದೆ. 5.44 ಲಕ್ಷ ಬಾಕಿಯಿದ್ದು, 26.38 ಕೋಟಿ ಬಾಕಿ ಉಳಿದಿದೆ. ಅದೇ ರೀತಿ ಜೋನಲ್ 2ರಲ್ಲಿ 9.28 ಕೋಟಿ ಹಣ ತೆರಿಗೆ ಸಂಗ್ರಹವಾಗಿದ್ದು, 2.18 ಲಕ್ಷ ಮಾತ್ರ ಬಾಕಿಯಿದೆ. ಜೋನಲ್ 3ರಲ್ಲಿ 10.49 ಬಾಕಿಯಿದೆ ಎಂದ ಅವರು, ಎಲ್ಲಿ ಕಡಿಮೆ ತೆರಿಗೆ ಸಂಗ್ರಹವಾಗಿದೆ. ಅಲ್ಲಿ ಸಂಗ್ರಹವಾಗಬೇಕು. ಜೊತೆಗೆ ಯಾರು ಡಿ ಫಾಲ್ಟ್ ಇದಾರೆ ಅವರಿಗೆ ದಂಡ ವಿಧಿಸುವ ಕಾರ್ಯ ಆಗಬೇಕು ಎಂದು ಸಲಹೆ ನೀಡಿದರು.

ಪ್ರತಿ ವಾರ್ಡ್‌ಗೆ 10 ಲಕ್ಷ ಅನುದಾನ: ಕಲಬುರಗಿ ನಗರದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ 55 ವಾರ್ಡ್‌ಗಳ ಅಭಿವೃದ್ಧಿಗೆ ತಲಾ 10 ಲಕ್ಷ ರೂಪಾಯಿ ಅನುದಾನವನ್ನು ನೀಡಲಾಗುವುದು ಎಂದು ಮೇಯರ್ ವರ್ಷಾ ರಾಜೀವ್ ಜಾನೆ ಹಾಗೂ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ ಸಭೆಯಲ್ಲಿ ಸರ್ವ ಸದಸ್ಯರ ಸಮ್ಮುಖದಲ್ಲಿ ಮಾಹಿತಿ ನೀಡಿದರು.ಜೊತೆಗೆ ಕಲಬುರಗಿ ನಗರದ ಪ್ರತಿ ವಾರ್ಡ್,ಗೆ ಒಂದು ಪಿಂಕ್ ಎಲೆಕ್ಟ್ರಾನಿಕ್ ಆಟೋ (ವಿಶೇಷವಾಗಿ ಮಹಿಳೆಯರಿಗೆ) ನೀಡಲಾಗುವುದು. ಮಹಿಳೆಯರು ಕೂಡ ಸ್ವಾವಲಂಬಿ ಬದುಕು ನಡೆಸಲು ಅನುಕೂಲವಾಗುವಂತೆ,ಆಟೋ ಕಲಿಸಲು ತರಬೇತಿ ಕೂಡ ನೀಡುವ ಯೋಜನೆ ನಮ್ಮದಾಗಿದೆ ಎಂದು ಮೇಯರ್ ವರ್ಷಾ ಜಾನೆ ಸಭೆಯಲ್ಲಿ ತಿಳಿಸಿದರು.

> ನಗರದ ರಸ್ತೆ ಅಗಲೀಕರಣ ಸೇರಿದಂತೆ ಹಲವು ಯೋಜನೆಗಳಿಗೆ ಕಡಿಮೆ ಹಣ ಇಡಲಾಗಿದೆ. ವಾಣಿಜ್ಯ ಸಂಕೀರ್ಣ, ಶೌಚಾಲಯ, ಹೀಗೆ ಹಲವು ಯೋಜನೆಗೆ ಇನ್ನಷ್ಟು ಹಣ ಮೀಸಲಿಡಬೇಕು. ಎಲ್ಲಿ ಲಾಭ ಬರುತ್ತದೆ ಅದನ್ನು ಕೈಬಿಡಲಾಗಿದೆ. ಇವುಗಳ ಮೇಲೆ ಗಮನ ಹರಿಸಬೇಕು.
> ■ ಯಲ್ಲಪ್ಪ ನಾಯಕೋಡಿ, ಪಾಲಿಕೆ ಸದಸ್ಯ

> 2026-27ನೇ ಸಾಲಿನಲ್ಲಿ ಕಲಬುರಗಿಯನ್ನು ಸುಂದರ ಹಾಗೂ ಹಸರೀಕರಣ ಮಾಡುವ ನಿಟ್ಟಿನಲ್ಲಿ ಜನಪರ ಯೋಜನೆಗೆ ಪಾಲಿಕೆ ಬದ್ಧವಾಗಿದೆ.ಕಲಬುರಗಿ ಸಮಗ್ರ ಅಭಿವೃದ್ಧಿಗೆ ಎಲ್ಲರ ಸಹಕಾರ ಅತ್ಯಗತ್ಯ.
> ■ ಅನುಮಪಾ ಕಮಕನೂರ, ಅಧ್ಯಕ್ಷ, ಸ್ಥಾಯಿ ಸಮಿತಿ

ಈ ಬಾರಿಯ ಬಜೆಟ್‌ನಲ್ಲಿ ಒಟ್ಟು 21,503.69 ಲಕ್ಷ ರೂ. (ಸುಮಾರು 215 ಕೋಟಿ ರೂ.) ಆದಾಯವನ್ನು ನಿರೀಕ್ಷಿಸಲಾಗಿದ್ದು, 22,034.17 ಲಕ್ಷ ರೂ.(ಸುಮಾರು 220 ಕೋಟಿ ರೂ.) ವೆಚ್ಚದ ಅಂದಾಜು ಮಾಡಲಾಗಿದೆ. ಈ ಮೂಲಕ ಸುಮಾರು 530.48 ಲಕ್ಷ ರೂ.ಗಳ ಕೊರತೆ ಬಜೆಟ್ ಮಂಡಿಸಲಾಗಿದೆ.

ವಿಪಕ್ಷಗಳ ಹಾಗೂ ಆಡಳಿತ ಪಕ್ಷದ ನಡುವೆ ಹಲವು ವಿಷಯಗಳ ಕುರಿತು ಮಾತಿನ ಚಕಮಕಿ ನಡೆಯಿತು. ಉಪ ಮಹಾಪೌರ ತೃಪ್ತಿ ಲಾಖೆ, ಸ್ಥಾಯಿ ಸಮಿತಿ ಚೇರ್ಮನ್ ಅನುಮಪಾ ಕಮಕನೂರ, ಮಹಮದ್ ಆಯಾಜ್ ಖಾನ್, ಶೇಖ್ ಹುಸೇನ್, ಪುತಳಿ ಬೇಗಂ, ಶೇಖ್ ಅಜ್ಮಲ್ ಗೋಲಾ, ವಿಪಕ್ಷ ನಾಯಕಿ ಶೋಭಾ ಗುರುರಾಜ ದೇಸಾಯಿ ಇತರರಿದ್ದರು.

ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಯಶಸ್ವಿ

ಹನುಮಸಾಗರ: ಸಮೀಪದ ಕಬ್ಬರಗಿ ಗ್ರಾಮದಲ್ಲಿ ಮಹಾಶಕ್ತಿ ದೇವಿಯ ಜಾತ್ರೆಯ ನಿಮಿತ್ತ ಕಬ್ಬರಗಿ ಸರ್ಕಾರಿ ನೌಕರರ ಆಶ್ರಯದಲ್ಲಿ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕೊಪ್ಪಳ ಗ್ರಾಮೀಣ ಠಾಣೆಯ ಪಿಎಸ್‌ಐ ರೇವಣ್ಣ ಗುರಿಕಾರ ಮಾತನಾಡಿ, 'ಸೋಲು-ಗೆಲುವು ಒಂದು ನಿರ್ಣಯ ಅಷ್ಟೇ. ಆದರೆ ಸ್ಪರ್ಧೆಯಲ್ಲಿ ಭಾಗವಹಿಸುವುದೇ ಪ್ರಮುಖ ಘಟ್ಟ' ಎಂದು ಹೇಳಿದರು.

ಶಿಕ್ಷಣ ಮಾನವ ಸಮಾಜಕ್ಕೆ ದೊಡ್ಡ ಕೊಡುಗೆಯಾಗಿದೆ. ಬಡತನ, ನಿರುದ್ಯೋಗ, ಮೌಢ್ಯತೆ ಹಾಗೂ ಅನಕ್ಷರತೆ ಸೇರಿದಂತೆ ಸಮಾಜದ ಹಲವು ಜ್ವಲಂತ ಸಮಸ್ಯೆಗಳನ್ನು ಶಿಕ್ಷಣದಿಂದ ದೂರ ಮಾಡಬಹುದು ಎಂದು ತಿಳಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಒಟ್ಟು 80 ತಂಡಗಳಿಗೆ ಲಿಖಿತ ಪರೀಕ್ಷೆ ಮಾಡಿ ನಂತರ ಆಯ್ಕಾದ 8 ತಂಡಗಳಿಗೆ ಮೌಖಿಕ ಸ್ಪರ್ಧೆ ಮಾಡಲಾಯಿತು.ಒಂದು ತಂಡದಲ್ಲಿ 2 ಅಭ್ಯರ್ಥಿ ಅವಕಾಶ ಕಲ್ಪಿಸಲಾಗಿತ್ತು.

ಸ್ಪರ್ಧೆಯಲ್ಲಿ ಇತಿಹಾಸ, ಭಾರತ ಸಂವಿಧಾನ, ಸಾಮಾನ್ಯ ಜ್ಞಾನ, ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯ, ಕ್ರೀಡೆ, ಮಾನಸಿಕ ಸಾಮರ್ಥ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ವಿವಿಧ ವಿಷಯಗಳ ಮೇಲೆ ಪ್ರಶ್ನೆಗಳು ಕೇಳಲಾಯಿತು.

ಸ್ಪರ್ಧೆಯಲ್ಲಿ ಯಾದಗಿರಿ ಜಿಲ್ಲೆಯ ಶಿವರಾಮ ಕಾರಂತ ತಂಡ ವು 90 ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನ ಪಡೆದುಕೊಂಡರೆ, ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನ ವಡಗೇರಿ ಗ್ರಾಮ ದ ವಿ.ಕೃ.ಗೋಕಾಕ ತಂಡವು 85 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಗಳಿಸಿತು. ಕನಕಗಿರಿ ಗಿರೀಶ್ ಕಾರ್ನಾಡ್ ತಂಡವು ತೃತೀಯ ಸ್ಥಾನ ಪಡೆದಿದೆ ಹಾಗೂ ಕೊಪ್ಪಳ ಜಿಲ್ಲೆಯ ಕುವೆಂಪು ತಂಡಗಳು ಚತುರ್ಥಿ ಸ್ಥಾನಕ್ಕೆ ಪಡೆದುಕೊಂಡಿವೆ.

ತಾಲೂಕು ದೈಹಿಕ ಶಿಕ್ಷಣಾಧಿಕಾರಿ ನಾಗಪ್ಪ ಬಿಳಿಯಪ್ಪನವರ, ಸಿಆರ್‌ಪಿ ಶೇಖರಪ್ಪ ಕುರಿ, ಮುಖ್ಯಶಿಕ್ಷಕ ಯಲ್ಲನಗೌಡ ಪಾಟೀಲ್, ನಿವೃತ್ತ ಮುಖ್ಯಶಿಕ್ಷಕ ಬಸವಂತಪ್ಪ ಹನುಮಸಾಗರ, ದೈಹಿಕ ಶಿಕ್ಷಕ ಬಸವರಾಜ ಹನುಮಸಾಗರ, ಶಿಕ್ಷಕರಾದ ಯಮನೂರಪ್ಪ ಗುರಿಕಾರ, ಪರಶುರಾಮ ವಣಗೇರಿ, ಪ್ರಕಾಶ ಕಾಟಾಪುರ, ಮಂಜುನಾಥ ಗುರಿಕಾರ ಹಾಗೂ ಗ್ರಾಮದ ಸರ್ಕಾರಿ ನೌಕರರು ಉಪಸ್ಥಿತರಿದ್ದರು.



ಪಟ್ಟಣದ ಅಭಿವೃದ್ಧಿಗೆ 6 ಕೋಟಿ ರೂ. ನಿರೀಕ್ಷೆ

ಕನಕಗಿರಿ: ಪಟ್ಟಣದ ಸಮಗ್ರ ಅಭಿವೃದ್ಧಿಗೆ ವರ್ಷಕ್ಕೆ 6.34 ಕೋಟಿ ರೂ. ಸರ್ಕಾರದಿಂದ ಬರುವ ನಿರೀಕ್ಷೆ ಇದೆ ಎಂದು ಪಟ್ಟಣ ಪಂಚಾಯತಿ ಅಧ್ಯಕ್ಷೆ ತನುಶ್ರೀ ಟಿಜೆ ರಾಮಚಂದ್ರ ಹೇಳಿದರು.

ಇಲ್ಲಿನ ಪಪಂ ಕಾರ್ಯಾಲಯದಲ್ಲಿ ಮಂಗಳವಾರ ನಡೆದ 2026-27ನೇ ಸಾಲಿನ ಮುಂಗಡ ಆಯ-ವ್ಯಯ ಮಂಡನೆ ಮಾಡುವ ಮೂಲಕ ಮಾತನಾಡಿದ ಅವರು, 16ನೇ ಹಣಕಾಸು ಯೋಜನೆಯಲ್ಲಿ 4.37 ಕೋಟಿ ಹಂಚಿಕೆ, ಕುಡಿಯುವ ನೀರಿಗೆ 5 ಲಕ್ಷ ರೂ. ಬೀದಿದೀಪ ವಿದ್ಯುತ್ ಶಕ್ತಿ ಬಿಲ್ ಪಾವತಿಗೆ 50 ಲಕ್ಷ ರೂ. ಎಸ್‌ಎಫ್‌ಸಿ ಮುಕ್ತಾ ನಿಧಿ 10 ಲಕ್ಷ ರೂ., ಸೇರಿದಂತೆ ಪಟ್ಟಣದ ಆಸ್ತಿ ತೆರಿಗೆ ಒಟ್ಟು 70 ಲಕ್ಷ ರೂ., ಉದ್ದಿಮೆ ಪರವಾನಿಗೆ 3 ಲಕ್ಷ ರೂ., ವಿವಿಧ ಕಾಮಾಗಾರಿ ಅಭಿವೃದ್ಧಿಗೆ 15 ಲಕ್ಷ ರೂ., ಒಟ್ಟು 79.30 ಲಕ್ಷ ರೂ. ನಿರೀಕ್ಷೆ ಹೊಂದಿದೆ. 10 ಲಕ್ಷ ರೂ. ಉಳಿತಾಯ ಖಾತೆ ಮಂಡಿಸಲಾಗಿದೆ.

ಪಪಂ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ನೀರಿನ ವ್ಯವಸ್ಥೆ, ಸ್ವಚ್ಛತೆ ಕಾರ್ಯ, ಆರೋಗ್ಯ ಸೇವೆ, ಪರಿಸರ ಸಂಕ್ಷಣೆಗೆ ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಈ ಬಾರಿ ಆಯ-ವ್ಯಯ ಕೇವಲ ಅಂಕಿ-ಅಂಶಗಳಿಗೆ ಸೀಮಿತವಾಗದೆ ಪಟ್ಟಣದ ಪ್ರತಿಯೊಂಬ್ಬ ನಾಗರಿಕನ ಅಗ್ಯತತೆ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಅಭಿವೃದ್ಧಿ ಪಡಿಸಲಾಗುವುದು ಅಧ್ಯಕ್ಷರು, ಉಪಾಧ್ಯಕ್ಷರ, ಸದಸ್ಯರು ಹಾಗೂ ಊರಿನ ಸಹಕಾರಯೊಂದಿಗೆ ಎಲ್ಲಾ ಯೋಜನೆಗಳನ್ನು ಯಶ್ವಿಸಿಯಾಗಿ ಜಾರಿಗೊಳಿಸುವ ಮೂಲಕ ಪಟ್ಟಣವನ್ನು ಅಭಿವೃದ್ಧಿಗೊಳಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಕಿರಿಯ ಅಭಿಯತರ ಮಂಜುನಾಥ ನಾಯಕ, ಪ.ಪಂ ಉಪಾಧ್ಯಾಕ್ಷ ಕಂಠಿರಂಗ ನಾಯಕ, ಸದಸ್ಯ ಸಂಗಪ್ಪ ಸಜ್ಜನ,ಅನಿಲ್ ಬಿಜ್ಜಳ, ಸಿದ್ದೇಶ ಕಲ್ಲಬಾಗಿಲಮಠ, ಶರಣೇಗೌಡ, ರಾಕೇಶ ಕಂಪ್ಲಿ, ಹನುಮಂತ ಬಸರಿಗಿಡದ, ಹುಸೇನಬಿ ಚಳ್ಳಮರದ್, ನಂದಿನಿ ಹಾಗೂ ನಾಮ ನಿರ್ದೇಶನ ಹಾಗೂ ಆಶ್ರಯ ಕಮಿಟಿ ಸದಸ್ಯರು ಇದ್ದರು.



ಮಹಾವೀರರ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತ: ಕರ್ಣಕುಮಾರ

ಕೊಪ್ಪಳ: ಸಂಘರ್ಷಮಯ ವಾತಾವರಣದ ಜಗತ್ತಿಗೆ ಮಹಾವೀರರ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಮಂಗಳವಾರ ಕೊಪ್ಪಳ ನಗರದ ಅಶೋಕ ವೃತ್ತದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಸಹಯೋಗದಲ್ಲಿ ಭಗವಾನ್ ಮಹಾವೀರರ ಜಯಂತಿಯ ಪ್ರಯುಕ್ತ ಹಮ್ಮಿಕೊಂಡಿದ್ದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.



ಸಾಮಾಜಿಕವಾಗಿ ಕಾಡುತ್ತಿರುವ ಅನೇಕ ಸವಾಲುಗಳು ನಿವಾರಣೆಯಾಗಲು ದಾರ್ಶನಿಕರ ಚಿಂತನೆ, ಸಂದೇಶಗಳಿಂದ ಸಾಧ್ಯವಿದೆ. ಭಗವಾನ್ ಮಹಾವೀರರ ಸಂದೇಶ, ಸತ್ಯ ಮತ್ತು ಅಹಿಂಸಾ ಪಾಲನೆಯಿಂದ ಸಾಮರಸ್ಯದ ಸಮಾಜ ಕಟ್ಟುವ ಅಗತ್ಯತೆ ಹಿಂದೆಂದಿಗಿಂತಲೂ ಈಗ ಇದೆ. ಜೈನರ 24ನೇ ತೀರ್ಥಂಕರರಾಗಿದ್ದ ಮಹಾವೀರರ ತತ್ವ ಹಾಗೂ ಶಾಂತಿಯ ಪರಮೋಚ್ಚ ಸಂದೇಶಗಳು ಇಂದಿನ ವಿಶ್ವಕ್ಕೆ ದಾರಿ ದೀಪವಾಗಿವೆ ಎಂದರು.


ಈ ಸಂದರ್ಭದಲ್ಲಿ ಜೈನ ಸಮಾಜದ ಅಧ್ಯಕ್ಷರಾದ ಮಹೀಂದ್ರ ಚೋಪ್ರಾ ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.

ಅರ್ಥಪೂರ್ಣ ಮೆರವಣಿಗೆ: ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರದ ಮೆರವಣಿಗೆ ನಗರದ ಅಶೋಕ ವೃತ್ತದಿಂದ ಪ್ರಾರಂಭಗೊಂಡು ಜವಾಹರ ರಸ್ತೆ, ಗಡಿಯಾರ ಕಂಬದ ಮಾರ್ಗವಾಗಿ ಕೋಟೆ ರಸ್ತೆಯ ಜೈನ್ ಬಸದಿವರೆಗೆ ಸಾಗಿ, ಅಲ್ಲಿ ಪೂಜಾ ಕಾರ್ಯಕ್ರಮ ಜರುಗಿತು ನಂತರ ಅಲ್ಲಿಂದ ಪುನಃ ಗಡಿಯಾರ ಕಂಬದ ಮಾರ್ಗವಾಗಿ ಗೋಶಾಲೆ ರಸ್ತೆಯ ಜೈನ್ ಮಂದಿರದ ವರೆಗೆ ಶಾಂತಿ ಸಂದೇಶಗಳ ಘೋಷಣೆಯೊಂದಿಗೆ ಸಾಗುವ ಮೂಲಕ ಅರ್ಥಪೂರ್ಣವಾಗಿ ಜರುಗಿತು. ಮೆರವಣಿಗೆಯಲ್ಲಿ ಸಮಾಜದ ಮುಖಂಡರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

ಆಕಸ್ಮಿಕ ಬೆಂಕಿ: ಪರಿಹಾರ ವಿತರಣೆ

ಯಲಬುರ್ಗಾ:ತಾಲೂಕಿನ ಕುಡಗುಂಟಿ ಗ್ರಾಮದ ರೈತ ಗವಿಸಿದ್ದಪ್ಪ ಗೆದಗೇರಿ ಅವರಿಗೆ ಸೇರಿದ ಮೇವಿನ ಬಣವೆಗೆ ಆಕಸ್ಮಿಕ ಬೆಂಕಿ ತಗುಲಿ ಮೇವು ಸಂಪೂರ್ಣ ಸುಟ್ಟು ಭಸ್ಮವಾಗಿದ್ದು ಈ ದುರ್ಘಟನೆ ವಿಷಯ ತಿಳಿದು ಜಿಪಂ ಮಾಜಿ ಸದಸ್ಯ ಅರವಿಂದಗೌಡ ಪಾಟೀಲ ಅವರು ಕುಡಗುಂಟಿ ಗ್ರಾಮದ ರೈತನ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ ರೈತನಿಗೆ ಆರ್ಥಿಕ ಧನಸಹಾಯ ನೀಡಿದರು.

ಗ್ರಾಮದ ಹಿರಿಯರು ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರಾದ ವಿರೇಶ ಮ್ಯಾಗಳಮಠ, ಗ್ರಾಮದ ದಳಪತಿಗಳಾದ ಶಂಕರಗೌಡ ಪಾಟೀಲ್, ಶಂಕ್ರಪ್ಪ ಹರಿಜನ ಮಾಜಿ ಗ್ರಾಪಂ ಸದಸ್ಯರಾದ ಶರಣಪ್ಪ ಹಾದಿಮನಿ, ದೇವಪ್ಪ ಗುರಿಕಾರ, ಸಣ್ಣೀರಪ್ಪ ಹಾದಿಮನಿ, ಶಿವ ಬಸಪ್ಪ ಸಣ್ಣಖರಡದ, ಶರಣಪ್ಪ ತಳವಾರ, ಬಸವರಾಜ ಬೊಮ್ಮನಾಳ, ಮುತ್ತಪ್ಪ ತಳವಾರ, ಭರಮಪ್ಪ ಗುರಿಕಾರ, ಹಿರೇಹನಮಪ್ಪ ಬೊಮ್ಮನಾಳ ಸೇರಿದಂತೆ ಗ್ರಾಮದ ಯುವಕರು ಇದ್ದರು.



ಜನರ ಸಹಕಾರದಿಂದ ಮಾತ್ರ ಸಾಹಿತ್ಯ ಸಂರಕ್ಷಣೆ: ಪರಣ್ಣ

ಗಂಗಾವತಿ: ಕನ್ನಡ ಮತ್ತು ಅದರ ಸಾಹಿತ್ಯ ಉಳಿಯಬೇಕು ಎಂದರೆ ಕೇವಲ ಪರಿಷತ್, ಸರ್ಕಾರ ಪ್ರಯತ್ನ ಮಾಡಿದರೆ ಸಾಲದು. ಬದಲಿಗೆ ಜನರ ಸಹಕಾರದಿಂದ ಮಾತ್ರ ಕನ್ನಡ ಉಳಿಯಲು ಸಾಹಿತ್ಯ ಸಂರಕ್ಷಣ ಸಾಧ್ಯ ಎಂದು ಮಾಜಿಶಾಸಕ ಪರಣ್ಣ ಮುನವಳ್ಳಿ ಹೇಳಿದರು.

ತಾಲ್ಲೂಕಿನ ವಡ್ಡರಹಟ್ಟಿಯಲ್ಲಿರುವ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ (ಕೆಎಲ್‌ಇ) ಕಾಲೇಜಿನಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಮ್ಮಿಕೊಳ್ಳಲಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



ಕನ್ನಡ ಸಾಹಿತ್ಯ ಪರಿಷತ್ತಿಗೆ ಸಾರ್ವಜನಿಕರು ಸಹಕಾರ ನೀಡಿದರೆ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳೆಯಲು ಸಾಧ್ಯವಾಗುತ್ತದೆ. ಕಸಾಪವು ಶಾಲಾ-ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡ ಬಗ್ಗೆ ಅಭಿಮಾನ ಮೂಡಿಸುವ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿ ಯಾಗಿ ಭಾಗವಹಿಸಿದ್ದ ಕೆಎಲ್‌ಇ ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಹೊಸ್ಕೇರಿ ಗಿರಿಯಪ್ಪ ಮಾತನಾಡಿ, ಕನ್ನಡ ಉಳಿದರೆ ಮಾತ್ರ ನಮ್ಮ ಅಸ್ಮಿತೆ ಇರಲಿದೆ. ಈ ನಿಟ್ಟಿನಲ್ಲಿ ನಾವು ಪ್ರತಿ ಸಾಹಿತ್ಯದ ಚಟುವಟಿಕೆಗೆ ಪ್ರೋತ್ಸಾಹ ನೀಡುತ್ತಲೆ ಬಂದಿದ್ದೇವೆ. ಇತರೆ ಶಿಕ್ಷಣ ಸಂಸ್ಥೆಗಳು ಮುಂದೆ ಬಂದು ಕನ್ನಡ ಕಾರ್ಯಕ್ರಮಕ್ಕೆ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಸಾಪದ ಜಿಲ್ಲಾ ಅಧ್ಯಕ್ಷ ಶರಣೇಗೌಡ ಪೊಲೀಸ್ ಪಾಟೀಲ್ ಮಾತನಾಡಿ, ವರ್ಷದುದ್ದಕ್ಕೂ ಕನ್ನಡದ ಕಾರ್ಯಕ್ರಮ ಆಯೋಜಿಸುವ ಮೂಲಕ ಜನರಲ್ಲಿ ಕನ್ನಡದ ಪ್ರಜ್ಞೆ ಸಾದಾ ಜಾಗೃತವಾಗಿಡಬೇಕು ಎಂಬುವುದು ಕಸಾಪದ ಆಶಯವಾಗಿದೆ ಎಂದರು.

ಕಾರ್ಯಕ್ರಮ ಉದ್ದೇಶಿಸಿ ಕಸಾಪದ ತಾಲ್ಲೂಕು ಅಧ್ಯಕ್ಷ ರುದ್ರೇಶ ಆರ್ಹಾಳ, ಸನ್ಮಾನಿತರಾದ ಸೋಮನಾಥ ಪಟ್ಟಣಶೆಟ್ಟಿ, ಎಸ್.ಎಂ.ಪಟೇಲ್ ಮಾತನಾಡಿದರು. ಕೆಎಲ್‌ಇ ಕಾಲೇಜಿನ ಪ್ರಾಂಶುಪಾಲೆ ಡಾ.ಮಾನಸ ಡಿ.ಎ. ವೇದಿಕೆಯಲ್ಲಿದ್ದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಕೀಲ ಸೋಮನಾಥ ಪಟ್ಟಣಶೆಟ್ಟಿ, ವೈ.ನಾಗರಾಜ್, ಸುರೇಶ ಸಂಕನೂರು ಅವರನ್ನು ಸನ್ಮಾನಿಸಲಾಯಿತು. ದತ್ತಿದಾನಿಗಳಾದ ಮಹಾಂತೇಶ ಕೋಟೆ, ಪಾಂಡುರಂಗ ದರೋಜಿ ಭಾಗವಹಿಸಿದ್ದರು.

'ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ವಿಷಯದ ಕುರಿತು ಸಾಹಿತಿ ಅರಳಿ ನಾಗಭೂಷಣ, 'ಶೋಷಣೆ ರಹಿತ ಸಮಾಜ ನಿರ್ಮಾಣದಲ್ಲಿ ಬಸವಣ್ಣನ ಪಾತ್ರ' ಎಂಬ ವಿಷಯದ ಬಗ್ಗೆ ಹಿರಿಯ ಉಪನ್ಯಾಸಕ ಎ.ಕೆ. ಮಹೇಶ ಕುಮಾರ ಹಾಗೂ 'ಜಾನಪದ ಸಾಹಿತ್ಯ'ದ ಬಗ್ಗೆ ಜಾನಪದ ಹಾಡುಗಾರ ಸುಖಮುನಿ ಉಪ್ಯನಾಸ ನೀಡಿದರು.

ರಾಜಶೇಖರಪ್ಪ ಹೊಸಕೇರಿ, ಚನ್ನಬಸಮ್ಮ ಈಶ್ವರಪ್ಪ ಮುನವಳ್ಳಿ, ಬಸವರಾಜ ಕೋಟೆ, ಡಿ.ಗೋವರ್ಧನ ರಾಮಚಂದ್ರಪ್ಪ ದರೋಜಿ ಸ್ಮರಣಾರ್ಥ ಹಮ್ಮಿಕೊಳ್ಳಲಾಗಿದ್ದ ದತ್ತಿ ಉಪನ್ಯಾಸಕ್ಕೆ ಮಹನೀಯರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕುಕ್ಕುಟ ಉದ್ಯಮ: ಮಹಿಳಾ ಸಬಲೀಕರಣಕ್ಕೆ ಆರ್ಥಿಕ ಬಲ

▸ ಸಿದ್ದಯ್ಯ ಹೆಸರೂರು

ಮಸ್ಕಿ: ಕೈಹಿಡಿದು ನಡೆಸುವ ಕುಕ್ಕುಟ ಉದ್ಯಮ ಭಾರತದಲ್ಲಿ ಕೋಳಿ ಸಾಕಾಣಿಕೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಸಾವಿರಾರು ರೈತರು ಬೇಸಾಯದ ಜತೆಗೆ ಕೋಳಿಗಳನ್ನು ಸಾಕಿ ಪೂರಕ ಆದಾಯ ಪಡೆಯುತ್ತಿದ್ದಾರೆ. ಒಂದು ಉದ್ಯಮವಾಗಿ ಪರಿವರ್ತನೆಗೊಂಡಿದೆ.ಹಿಂದೆ ದೇಶೀಯ ಕೋಳಿಗಳಿಂದ ಮೊಟ್ಟೆ ಉತ್ಪಾದಿಸಲಾಗುತ್ತಿತ್ತು.



ದಿಗಂತ ವಿಶೇಷ

ಉತ್ತಮ ನಿರ್ವಹಣಾ ವಿಧಾನಗಳು ಹಾಗೂ ಮಾರಾಟ ಸೌಕರ್ಯದಿಂದಾಗಿ,ಈ ಉದ್ಯಮದಿನೇದಿನೇಅಭಿವೃದ್ಧಿಗೊಳ್ಳುತ್ತಾ ಬಂದಿದೆ.ಉತ್ತಮ ಜಾತಿಯ ಕೋಳಿಗಳಿಂದ ಅಧಿಕ ಮೊಟ್ಟೆ ಉತ್ಪಾದಿಸಲಾಗುತ್ತಿದೆ. ಕೋಳಿ ಸಾಕಾಣಿಕೆಗೆ ಬೇಕಾದ ಸ್ಥಳ ಬಹಳ ಕಡಿಮೆ.ಎಲ್ಲ ವರ್ಗದ ರೈತರು ಕೈಗೊಳ್ಳಬಹುದಾದ ಉದ್ಯಮ ಇದಾಗಿದೆ. ಈ ಉದ್ದೇಶದಿಂದ ರಾಯಚೂರು ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ರವರು ಆರಂಭಿಕವಾಗಿ ಜಿಲ್ಲೆಯ ಮಸ್ಕಿ ತಾಲೂಕಿನ ನಾಗರಬೆಂಚಿ 2500 ಹಾಗೂ ಪಾಮನಕಲ್ಲೂರು 500 ಮತ್ತು ಹಂಚಿನಾಳ(ಯು), ಮೆದಕಿನಾಳ, ರತ್ನಾಪೂರು ಹಟ್ಟಿ ಗ್ರಾಮದಲ್ಲಿ ಪ್ರಾಯೋಗಿಕವಾಗಿ ಮೊಟ್ಟೆ ಉತ್ಪಾದನೆ ಹಾಗೂ ಕೋಳಿ ಸಾಕಾಣಿಕೆ ಕೇಂದ್ರವನ್ನು ಪ್ರಾರಂಭ ಮಾಡಲಾಗಿದ್ದು, ಮುಂದೆ ಇದನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 'ಒಂದು ಗ್ರಾಪಂ ಒಂದು ಕುಕ್ಕುಟ' ಯೋಜನೆ ಕಾರ್ಯ ಆರಂಭ ಮಾಡಲಿದ್ದು ಇದಕ್ಕೆ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಗ್ರಾಪಂ ಮಟ್ಟದ ಒಕ್ಕೂಟದ ವ್ಯಾಪ್ತಿಯ ಮಹಿಳಾ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಈ ಉದ್ಯೋಗವು ಆಶಾಭಾವನೆ ಮೂಡಿಸಿದೆ ಏಕೆಂದರೆ ಮಹಿಳೆಯರು ಸ್ವ-ಇಚ್ಛೆಯಿಂದ ಕೆಲಸವನ್ನು ಮಾಡುವ ಮೂಲಕ ಉತ್ತಮ ಜೀವನ ಮಾಡಲು ಇದು ಸಹಕಾರಿಯಾಗುತ್ತದೆ.

> ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಪ್ರೇಸ್ (ನ್ಯೂಟ್ರೇಷನ್) ಇರುವ ಮೊಟ್ಟೆ ನೀಡುವ ಉದ್ದೇಶದಿಂದ ಹಾಗೂ ಗ್ರಾಮೀಣ ಮಹಿಳೆಯರ ಸ್ವಸಹಾಯ ಸಂಘಗಳನ್ನು ಆರ್ಥಿಕವಾಗಿ ಬಲಪಡಿಸಲು ಹಾಗೂ ಅವರ ಸುಸ್ಥಿರ ಜೀವನಕ್ಕೆ ಕುಕ್ಕುಟ ಯೋಜನೆ ಸಹಾಯವಾಗುತ್ತದೆ.
> ■ ಅಮರೇಶ ಯಾದವ್, ತಾಪಂ ಇಒ

ಅಷ್ಟೇ ಅಲ್ಲದೆ ಕುಕ್ಕುಟ ಯೋಜನೆವು ನರೇಗಾ ಯೋಜನೆಯಡಿಯಲ್ಲಿ ಬರುತ್ತಿದ್ದು ಅಧಿಕಾರಿಗಳ ಇಚ್ಛಾಶಕ್ತಿಯಿಂದ ಈ ಯೋಜನೆಯು ಯಶಸ್ವಿಯಾಗಲೆಂದು ಅಧಿಕಾರಿಗಳ ಶ್ರಮ ಅವಶ್ಯವಿದ್ದು ಮುಂದಿನ ದಿನಮಾನಗಳಲ್ಲಿ ಕಾರ್ಯವೈಖರಿ ಹೇಗೆ ಇದೆ ಎಂಬುದನ್ನು ಕಾದುನೋಡಬೇಕಾಗಿದೆ.

ಜ್ಯೋತಿ ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯೆ ವಿಜಯಲಕ್ಷ್ಮೀ ನಾಗರಬೆಂಚಿ, ನಮಗೆ ಕೋಳಿ ಸಾಕಾಣಿಕೆಯ ಮೊಟ್ಟೆಯಿಂದ ಜೀವನ ಮಾಡಿಕೊಂಡ ತಿನ್ನುವುದಕ್ಕೆ ಬಹಳ ಅನುಕೂಲ ಆಗ್ತಾತ್ರಿ ಎಂದರು.

ಕಿರುಸುದ್ದಿ



ಸಿರುಗುಪ್ಪ: ಇಲ್ಲಿನ ತುಂಗಭದ್ರ ರಿಕ್ರಿಯೇಷನ್ ಅಸೋಸಿಯೇಷನ್ (ಟೆನ್ನಿಸ್ ಕ್ಲಬ್) ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಟೆನ್ನಿಸ್ ಪಂದ್ಯಾವಳಿಯಲ್ಲಿ ಡಬಲ್ಸ್‌ನಲ್ಲಿ ತಿಮ್ಮಯ್ಯ ನಾಯಕ ಹಾಗೂ ಸಿರುಗುಪ್ಪ ಕ್ಲಬ್‌ನ ಕಾರ್ಯದರ್ಶಿ ಆರ್.ಸದಾಶಿವ ಮತ್ತು ಸುಧೀರ ರೆಡ್ಡಿ ವಿನ್ನರ ಕಪ್ ಪಡೆದು ಗಮನಸೆಳೆದರು.

ಜನಗಣತಿ ಇಂದಿನಿಂದ ಆರಂಭ

ವಿಜಯನಗರ: ಭಾರತ ಜನಗಣತಿ-2027ರ ಅಂಗವಾಗಿ ಸಾರ್ವಜನಿಕರು ತಾವಾಗಿಯೇ ಮಾಹಿತಿ ನೀಡುವ 'ಸ್ವಯಂ ಗಣತಿ' ಪ್ರಕ್ರಿಯೆಯು 2026ರ ಏ.1ರಿಂದ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದ್ದಾರೆ.

ಸಾರ್ವಜನಿಕರು 2026ರ ಏಪ್ರಿಲ್ 01 ರಿಂದ 15 ರವರೆಗೆ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಿ ತಮ್ಮ ಕುಟುಂಬದ ವಿವರಗಳನ್ನು ಆನ್‌ಲೈನ್ ಪೋರ್ಟಲ್ ಮೂಲಕ ಭರ್ತಿ ಮಾಡಬಹುದು. ಮಾಹಿತಿ ಸಲ್ಲಿಸಿದ ನಂತರ ಲಭ್ಯವಾಗುವ ರೆಫರೆನ್ಸ್ ಐಡಿಯನ್ನು ಸಾರ್ವಜನಿಕರು ಸುರಕ್ಷಿತವಾಗಿಟ್ಟುಕೊಳ್ಳಬೇಕು. ಏ.16 ರಿಂದ ಮೇ 15ರವರೆಗೆ ನಿಗದಿಪಡಿಸಲಾದ ಕ್ಷೇತ್ರ ಮಾಹಿತಿಗಳ ಸಂಗ್ರಹಣೆಗಾಗಿ ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಗಣತಿ ಕಾರ್ಯ ಕೈಗೊಳ್ಳಲಿದ್ದಾರೆ. ಮೊದಲ ಹಂತದ ನಂತರ ಜನಸಂಖ್ಯಾ ಗಣತಿಯ ಪ್ರಕ್ರಿಯೆ ಆರಂಭವಾಗಲಿದೆ. ಜನಗಣತಿಯಿಂದ ದೊರೆಯುವ ದತ್ತಾಂಶವು ಸರ್ಕಾರದ ಜನಕಲ್ಯಾಣ ಯೋಜನೆಗಳ ರೂಪಿಸುವಿಕೆಗೆ ಪೂರಕವಾಗಿರುತ್ತದೆ. ಆದ್ದರಿಂದ, ಎಲ್ಲಾ ನಾಗರಿಕರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ಶ್ರೀಶಂಭುಲಿಂಗೇಶ್ವರ ಮಹಾರಥೋತ್ಸವ ಏ.2ಕ್ಕೆ

ಸಿರುಗುಪ್ಪ: ಶ್ರೀಶಂಭುಲಿಂಗೇಶ್ವರ ಮಹಾರಥೋತ್ಸವ ಏ.2ರಂದು ಅದ್ದೂರಿಯಾಗಿ ನಡೆಯಲಿದ್ದು, ಭಕ್ತರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬಹುದು ಎಂದು ಶ್ರೀಶಂಭುಲಿಂಗೇಶ್ವರ ದೇವಾಲಯದ ಜೀರ್ಣೋದ್ಧಾರ ಸಮಿತಿ ಮತ್ತು ವಿದ್ಯಾವರ್ಧಕ ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳಾದ ಅಂಬರೀಶ್ ಮಿಠಾಯಿ ಹಾಗೂ ವಿಶ್ವನಾಥ್ ಸ್ವಾಮಿ ಅವರು ತಿಳಿಸಿದ್ದಾರೆ.

ಶ್ರೀಶಂಬುಲಿಂಗೇಶ್ವರ ಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ಮಂಗಳವಾರ ಅದ್ದೂರಿಯಾಗಿ ನಡೆಯಿತು. ನಗರದ ಎಸ್‌ಬಿಐ ಬ್ಯಾಂಕ್ ಎದುರಿನ ಬಸವ ಬಳಗ ಕಚೇರಿ ಬಳಿಯ ಎಚ್.ಎಂ.ಮಲ್ಲಿಕಾರ್ಜುನ್ ಸ್ವಾಮಿ ಅವರ ನಿವಾಸದಿಂದ ಸುಮಂಗಲೆಯರಿಂದ ಕಳಸ ಹಾಗೂ ಶ್ಯಾನವಾಸಪುರ ಸೇರಿ ಸುತ್ತಲಿನ ನಾನಾ ಗ್ರಾಮಗಳ ಭಕ್ತರಿಂದ ಭಜನೆ, ಡೊಳ್ಳು ವಾದ್ಯಗಳೊಂದಿಗೆ ಅದ್ದೂರಿ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ದೇಗುಲಕ್ಕೆ ತರಲಾಯಿತು. ನಂತರ ಸುಕ್ಷೇತ್ರದಲ್ಲಿ ಭಗವಧ್ವಜ ಅವರೋಹಣ ಮಾಡಲಾಯಿತು. ನಂತರ ಕಂಕಣ ಕಟ್ಟುವುದು ಸೇರಿದಂತೆ ಕಲ್ಯಾಣೋತ್ಸವ ಕಾರ್ಯಕ್ರಮಗಳು ಅದ್ದೂರಿಯಾಗಿ ಜರುಗಿದವು. ಏ.2ರಂದು ಬೆಳಗಿನ ಜಾವ ಬ್ರಾಹ್ಮೀ ಮುಹೂರ್ತದಲ್ಲಿ ಮಹಾರುದ್ರಾಭಿಷೇಕ, ತಿಮ್ಮಾಪುರ ಬಸಯ್ಯ ಸ್ವಾಮೀ ವೀರಗಾಸೆ ವಡುವು ಹಾಗೂ ತೆಕ್ಕಲಕೋಟೆ ರಾಚಯ್ಯ ಸ್ವಾಮಿ ಇವರ ಸಾಮಾಳದೊಂದಿಗೆ ಅಗ್ನಿಕುಂಡ ಪುಟಾರಾಧನೆ ಕಾರ್ಯಕ್ರಮ ನಡೆಯಲಿದೆ. ನಂತರ ಶಂಭುಲಿಂಗೇಶ್ವರ ದೇವಾಲಯದಿಂದ ವೀರಭದ್ರೇಶ್ವರ ದೇವಾಲಯದ ವರೆಗೆ (ಮರಿ ತೇರು) ಉಚ್ಛಾಯ ಕಾರ್ಯಕ್ರಮ, ಸಂಜೆ 6ಕ್ಕೆ ಶಂಭುಲಿಂಗೇಶ್ವರ ಉತ್ಸವ ಮೂರ್ತಿಯೊಂದಿಗೆ ಮಹಾರಥೋತ್ಸವ ಅದ್ದೂರಿಯಾಗಿ ನಡೆಯಲಿದೆ. ಏ.3ರಂದು ಸಂಜೆ ಬಾಜ ಭಜಂತ್ರಿ ಹಾಗೂ ಪಟಾಕಿ ಬಿರುಸುಗಳಿಂದ ಕಡುವಿನ ಕಾಳಗ ನಡೆಯಲಿದೆ. ಶಂಭುಲಿಂಗೇಶ್ವರ ಸ್ವಾಮಿ ಕಾಣಿಕೆ ಹುಂಡಿಯನ್ನು ಉಚಿತವಾಗಿ ನೀಡಲಾಗುವುದು, ಭಕ್ತರು ತಮ್ಮ ಹೆಸರನ್ನು ಬರೆಸಿ ಪಡೆದ ಹುಂಡಿಯನ್ನು ಮುಂದಿನ ವರ್ಷದ ಜಾತ್ರೆ ವೇಳೆ ದೇಗುಲದ ಟ್ರಸ್ಟ್‌ನವರಿಗೆ ನೀಡಿ ರಶೀದಿ ಪಡೆಯಬೇಕು. ಪ್ರತಿಯೊಬ್ಬ ಭಕ್ತರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.



ಹೂವಿನಹಡಗಲಿ: ಪಟ್ಟಣದಲ್ಲಿ ಸೋಮವಾರ ಕನಕ ಸಮುದಾಯ ಭವನವನ್ನು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಲೋಕಾರ್ಪಣೆ ನೆರವೇರಿಸಿ ಮಾತನಾಡಿದರು.

ಸಮುದಾಯ ಭವನ ಲೋಕಾರ್ಪಣೆ

ಹೂವಿನಹಡಗಲಿ: ಇಲ್ಲಿ ಸ್ವ-ಪ್ರತಿಷ್ಠೆ ನಡೆದಿಲ್ಲ ಬದಲಾಗಿ ಗುರು ಪ್ರತಿಷ್ಠೆ ನಡೆದಿದ್ದು ಎಲ್ಲರೂ ದ್ವೇಷ, ಅಸೂಯೆ ಮೆಟ್ಟಿ ನಿಂತು ಎಲ್ಲರೂ ಸಮಾಜ ಕಟ್ಟುವ ಕೆಲಸದಲ್ಲಿ ತೊಡಗಬೇಕು ಎಂದು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.ಪಟ್ಟಣದಲ್ಲಿ ಸೋಮವಾರ ಕನಕ ಸಮುದಾಯ ಭವನ ಲೋಕಾರ್ಪಣೆ ನೆರವೇರಿಸಿ ಮಾತನಾಡಿದರು.ಕನಕ ಸಮುದಾಯ ಭವನ ಉದ್ಘಾಟನೆಗೆ ರಾಜಕೀಯ ಸ್ವಾರ್ಥ,ಸ್ವ ಪ್ರತಿಷ್ಠೆ ಬಿಟ್ಟು ಮೂರು ದಿನದ ಈ ಬದುಕಿನಲ್ಲಿ ಒಳಿತು ಒಂದೇ ಸಾಧನೆ ಅನಿಸಿಕೊಳ್ಳುತ್ತದೆ. ಪ್ರೀತಿ-ವಿಶ್ವಾಸ, ದಾನ, ಧರ್ಮ ಸಾರ್ಥಕ ಬದುಕಿಗೆ ಅಗತ್ಯ. ಮನುಷ್ಯನು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.ಪ್ರಾಣಿಗಳಿಂದ ನಿಸ್ವಾರ್ಥತೆ, ಸಮಾಧಾನ ಮತ್ತು ಪ್ರಕೃತಿಯೊಂದಿಗಿನ ಸಾಮರಸ್ಯ ವನ್ನು ಮನುಷ್ಯ ಕಲಿಯಬೇಕು ಎಂದರು. ಕುರುಬರ ಸಮಾಜದ ಅಧ್ಯಕ್ಷ ಎಚ್.ಬೀರಪ್ಪ ಅಧ್ಯಕ್ಷತೆ ವಹಿಸಿದ್ದರು. ಡಾ.ರಾಕೇಶಯ್ಯ ರಾಮಸ್ವಾಮಿ, ಮಕರಬ್ಬಿ ರೇವಣ ಸಿದ್ದಯ್ಯ ಮಠದ ವಿವೇಕಾನಂದಯ್ಯ ಗುರುಮೂರ್ತಿ,ಗುರುವಿನ ಕೊಟ್ರೇಶ,ವಕೀಲರಾದ ಎಂ.ಪರಮೇಶ್ವರಪ್ಪ,ಗೊರವಪ್ಪ ರಾಮಣ್ಣ, ಪ್ರಮೋದ ಭಟ್ಟರು, ಈಟಿ.ಹನುಮೇಶ, ಗುರುವಿನ ರಾಜಣ್ಣ, ಪತ್ರಕರ್ತ ಎಚ್.ವಿಶ್ವನಾಥ, ಉಪನ್ಯಾಸಕ ಕೆ.ದ್ಯಾಮಜ್ಜ, ಐನಳ್ಳಿ ಮಲ್ಲಣ್ಣ, ಈಟಿ.ಲಿಂಗರಾಜ, ಈಟಿ ಮಾಲತೇಶ, ಆರ್.ವೆಂಕಣ್ಣ ಇದ್ದರು.ನಿವೃತ್ತ ಪ್ರಾಚಾರ್ಯ ಬಿ.ಪ್ರಕಾಶ ಸ್ವಾಗತಿಸಿದರು. ಶಿಕ್ಷಕ ವಿರುಪಣ್ಣ ನಿರೂಪಿಸಿದರು. ಕುರುಬ ಸಮಾಜದ ರಾಜ್ಯ ನಡುವೆ ನಿರ್ದೇಶಕ ಬಿ.ಹನುಮಂತಪ್ಪ ಪ್ರಾಸ್ತಾವಿಕ. ಮಾತನಾಡಿದರು.



ಕರೂರ: ಸಮೀಪದ ಹೆಚ್ಚು ಹೊಸಳ್ಳಿ ಗ್ರಾಮದಲ್ಲಿ ನಡೆದ ಕಬಡ್ಡಿ ಪಂದ್ಯ ಹೆಚ್ಚು ಹೊಸಹಳ್ಳಿ ಪ್ರಥಮ ಸ್ಥಾನ ಪಡೆದಿದೆ. ಮರಿಸ್ವಾಮಿ ಚಿದಾನಂದ, ಮಾಕೇ ಗೋವಿಂದ, ಎಣ್ಣೆರ ಮಾರಪ್ಪ, ಶ್ರೀಶೈಲಪ್ಪ ಬಂತೇರು, ಹೊನ್ನೂರ ಸಿರಿಗೇರಿ ಫಕೀರ ಬಂಗಾರಪ್ಪನವರ, ನಿಂಗಪ್ಪ ಬೆಣಕಲ್, ಬಸವರಾಜ ಇಜವಳಗೇರಿ, ನಾಗೇಶ ಜಿ.ನಾಗಯ್ಯ, ನಿಂಗಪ್ಪ ತಿಪ್ಪೇಶ, ರಾಮಾಂಜನಿ ಸೋಮೇಶ, ನಾಗೇಂದ್ರ ಶೇಕ್ರಿ, ಚಂದ್ರಶಖಿ, ಸಿದ್ದಬಾಬು ಉಪ್ಪಿಪ್ರತಾಪ ಇತರರಿದ್ದರು.

ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಸಲಹೆ

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ

ಸಿರುಗುಪ್ಪ: ನಗರದ ಭಾರತೀಯ ಜನತಾ ಪಾರ್ಟಿ ಕಚೇರಿಯಲ್ಲಿ ಮಂಗಳವಾರ ಸಿರುಗುಪ್ಪ ಮಂಡಲದ 'ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಪ್ರಶಿಕ್ಷಣ ವರ್ಗದ' ಪೂರ್ವಭಾವಿ ಸಭೆ ಕ್ಷೇತ್ರದ ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಅವರ ನೇತೃತ್ವದಲ್ಲಿ ಹಾಗೂ ಸಿರುಗುಪ್ಪ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ನಂತರ ಮಾಜಿ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪ ಮಾತನಾಡಿ, ಸಿರುಗುಪ್ಪ ಮಂಡಲದ 'ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಪ್ರಶಿಕ್ಷಣ ವರ್ಗದ ಕಾರ್ಯಕ್ರಮದಲ್ಲಿ ಪಕ್ಷದ ಗಣ್ಯರು, ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿ ಯಶಸ್ವಿಗೊಳಿಸಬೇಕು. ಸಂಘಟನೆಯೇ ಶಕ್ತಿ, ನಮ್ಮ ಎಲ್ಲ ಕಾರ್ಯಕರ್ತರು, ಪದಾಧಿಕಾರಿಗಳು, ಗಣ್ಯರು ಈ ಪ್ರಶಿಕ್ಷಣ ವರ್ಗದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ನಾನು ಯಾವತ್ತೂ ನನ್ನ ಕ್ಷೇತ್ರದ ಜನರ ಜೊತೆಗೆ ಇರುವೆ, ಜನರಿಗೆ ನಾನಾ ಸುಳ್ಳು ಭರವಸೆ ನೀಡಿ, ಗೆಲುವು ಸಾಧಿಸಿದ ಬಳಿಕ ಕಾಣೆಯಾಗುವ ವ್ಯಕ್ತಿ ನಾನಲ್ಲ, ನನ್ನ ಕ್ಷೇತ್ರದ ಜನರೇ ನನ್ನ ಉಸಿರು, ನನ್ನ ಜನರೇ ನನ್ನ ಪ್ರಾಣ. ಪ್ರತಿಯೊಬ್ಬ ಕಾರ್ಯಕರ್ತರು ಪಕ್ಷವನ್ನು ಮತ್ತಷ್ಟು ತಳಮಟ್ಟದಿಂದ ಸಂಘಟಿಸಲು ಮುಂದಾಗಬೇಕು. ನಾನು ಯಾವತ್ತೂ ನಿಮ್ಮ ಜೊತೆಗಿರುವೆ, ಸುಳ್ಳು ಹೇಳುವ ಸ್ವಭಾವ ನನ್ನದಲ್ಲ, ಏನೇ ಸಮಸ್ಯೆ ಇರಲಿ ಸಂಪರ್ಕಿಸಿದರೆ ಖಂಡಿತ ಸ್ಪಂದಿಸುವೆ ಎಂದರು.



ಸಿರುಗುಪ್ಪ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಜೆಪಿ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಅಡಿವಿ ಸ್ವಾಮಿ, ರಾಮಕೃಷ್ಣ ಅವರು ಪ್ರಶಿಕ್ಷಣದ ಬಗ್ಗೆ ಮತ್ತು ಪ್ರಬಂಧಕರು ಯಾವ ರೀತಿ ಕೆಲಸ ನಿರ್ವಹಿಸಬೇಕು ಎನ್ನುವ ಕುರಿತು ತಿಳಿಸಿದರು.ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ತೆಕ್ಕಲಕೋಟೆ, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಇಬ್ರಾಪುರ ವೀರನಗೌಡ, ಜಿಲ್ಲಾ ಉಪಾಧ್ಯಕ್ಷ ದೊಡ್ಡವಲಗಪ್ಪ, ಎಸ್.ಟಿ.ಮೋರ್ಚಾ ಜಿಲ್ಲಾಧ್ಯಕ್ಷ ದರಪ್ಪ ನಾಯಕ್, ಲಷ್ಕರ್ ಶೇಖಪ್ಪ, ಸೀತಮ್ಮ, ಮಹಾಲಕ್ಷ್ಮಿ, ಮೆಕಲ ವೀರೇಶ್, ಶಿವರಾಮಗೌಡ, ಶಿವಪ್ಪ , ಪಿಡ್ಡಯ್ಯ ಸೆಕ್ಷನಲ್ಲಿ ಜಬಿಲ್ ಸಾಬ್, ಚಿರಂಜೀವಿ ರೆಡ್ಡಿ, ಗಂಗಾಧರ, ಶರಣಬಸವ, ಸಾವಕಾರ್ ಮುದಿಯಪ್ಪ, ಬಸವರಾಜ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಮತ್ತು ಮುಖಂಡರು ಉಪಸ್ಥಿತರಿದ್ದರು.

ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದ ಶರಣರು

ಕೊಟ್ಟೂರು: 12ನೇ ಶತಮಾನದ ಬಸವಾದಿ ಶರಣರು ನುಡಿದಂತೆ ನಡೆಯುತ್ತಿದ್ದರಲ್ಲದೇ ಸಮಸಮಾಜ ನಿರ್ಮಾಣಕ್ಕೆ ಅಪಾರವಾಗಿ ಶ್ರಮಿಸಿದ್ದರು ಎಂದು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಬಿ.ಶಿವಾನಂದ ಹೇಳಿದರು.

ಪಟ್ಟಣದ ಜ್ಞಾನಸುಧಾ ಶಾಲೆಯಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಲಿಂ.ಕಾಮಶೆಟ್ಟಿ ತಿಪ್ಪೇಸ್ವಾಮಿ ಮತ್ತು ಕಾಮಶೆಟ್ಟಿ ಕಮಲಮ್ಮ ವಚನಗಳಲ್ಲಿ ಸಾಮಾಜಿಕ ಚಿಂತನೆಗಳು ಕುರಿತು ಅವರು ಸೋಮವಾರ ಮಾತನಾಡಿದರು.

12ನೇ ಶತಮಾನದಲ್ಲಿ ನೀರಿನ ಮಹತ್ವ ಅರಿತಿದ್ದ ಶಿವಯೋಗಿ ಸಿದ್ಧರಾಮೇಶ್ವರರು ಸಮಾಜದ ಸಹಕಾರದಲ್ಲಿ ಕೆರೆ ಕಟ್ಟೆಗಳನ್ನು ನಿರ್ಮಿಸಿದ್ದರು. ಸಮಾಜದಲ್ಲಿ ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅಂದಿನ ದಿನಗಳಲ್ಲಿಯೇ ಸಾಮೂಹಿಕ ವಿವಾಹಗಳನ್ನು ಪ್ರಥಮವಾಗಿ ಪರಿಚಯಿಸಿ, ಲೋಕ ಕಲ್ಯಾಣ ಕಾರ್ಯಕ್ರಮ ಮಾಡುವ ಕರ್ಮಯೋಗಿ ಆಗಿದ್ದರು ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷ ಪಿ.ಇಂದುಮತಿ ಮಾತನಾಡಿ, ವಚನ ಮತ್ತು ಅನುಭಾವ ಸಾಹಿತ್ಯವನ್ನು ಇಂದಿನ ಪೀಳಿಗೆಯವರು ಓದಿಕೊಂಡು ಅರ್ಥ ಮಾಡಿಕೊಂಡಲ್ಲಿ ಸಂಸ್ಕಾರವಂತರಾಗಿ, ಆದರ್ಶರಾಗಿ ಬಾಳುತ್ತಾರೆ. ಆಗ ಸಮ ಸಮಾಜ ಮತ್ತು ಸುಸ್ಥಿರ ದೇಶ ನಿರ್ಮಾಣಕ್ಕೆ ಸಹಕಾರವಾಗುತ್ತದೆ ಎಂದು ಹೇಳಿದರು.

ದತ್ತಿ ದಾಸೋಹಿ ಟಿ.ಕೆ.ಸಿದ್ಧರಾಮೇಶ್ವರ ಮಾತನಾಡಿ, ತಂದೆ ತಾಯಿಯವರ ಮಾರ್ಗದರ್ಶನದೊಂದಿಗೆ ಅವರ ಆದರ್ಶಗಳನ್ನು ಅಳವಡಿಸಿಕೊಂಡಲ್ಲಿ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಶಸಾಪ ಪ್ರಧಾನ ಕಾರ್ಯದರ್ಶಿ ಹೊಂಬಾಳೆ ಮಂಜುನಾಥ ಮಾತನಾಡಿ, ಶಸಾಪದಿಂದ ನಡೆವ ದತ್ತಿ ಉಪನ್ಯಾಸ ಕಾರ್ಯಕ್ರಮಗಳ ಮೂಲಕ ಬಸವಾದಿ ಶರಣ ವಚನ ಸಾರವನ್ನು ಮನೆ ಮನೆಗೆ ತಲುಪಿಸುವ ಕಾರ್ಯವಾಗುತ್ತಿದೆ ಎಂದರು. ಮತ್ತೊಬ್ಬ ದತ್ತಿ ದಾಸೋಹಿ ಜಿ.ಟಿ.ಕವಿತಾ, ಪರಿಷತ್ ಖಜಾಂಚಿ ಅಂಗಡಿ ಚಂದ್ರಣ್ಣ, ಕದಳಿ ಮಹಿಳಾ ವೇದಿಕೆ ತಾಲೂಕು ಅಧ್ಯಕ್ಷೆ ಎಂ.ಸುಜಾತ, ಶಸಾಪ ಅಧ್ಯಕ್ಷ ಡಿ.ಕರಿಯಪ್ಪ, ಯುವ ಘಟಕ ಅಧ್ಯಕ್ಷ ಜೆ.ಎಂ.ಸುಧೀಂದ್ರ ಮಾತನಾಡಿದರು.

ಶಸಾಪ ಸದಸ್ಯ ಮತ್ತಿಹಳ್ಳಿ ನಾಗರಾಜ ಪ್ರಾಸ್ತಾವಿಕ ಮಾತನಾಡಿದರು. ಜೆ.ಎಂ.ಧನಂಜಯ, ಚಂದ್ರನಾಯಕ, ದೇವರಮನಿ ಕೊಟ್ರೇಶ, ಡಿ.ಮಂಗಳ, ಮರುಳನಗೌಡ, ಅಣಜಿ ಸಿದ್ದಲಿಂಗಪ್ಪ, ಕೆ.ರಾಮನಗೌಡ ಬಿ. ಎಂ. ಗಿರೀಶ್ ಇತರರಿದ್ದರು.



ಕೊಟ್ಟೂರಿನ 'ಡೆಲ್ಲಿ ವರ್ಲ್ಡ್ ಸ್ಕೂಲ್' ಪರವಾನಗಿ ರದ್ದು

ಕೊಟ್ಟೂರು: ಪಟ್ಟಣದ 'ಡೆಲ್ಲಿ ವರ್ಲ್ಡ್ ಸ್ಕೂಲ್'ನ ಪರವಾನಗಿಯನ್ನು ರದ್ದು ಪಡಿಸಿ ವಿಜಯನಗರ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಆದೇಶಿಸಿದ್ದಾರೆ. ಪರವಾನಗಿ ಪಡೆಯದೆ ಸಿಬಿಎಸ್‌ಸಿ ಪಠ್ಯ ಕ್ರಮ ಬೋಧಿಸುತ್ತಿರುವ ಬಗ್ಗೆ ದಲಿತ ಸಂಘಟನೆಗಳಿಂದ ದೂರು ಬಂದ ಹಿನ್ನೆಲೆ ಕೂಡ್ಲಿಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗೆ ಖುದ್ದು ಭೇಟಿ ನೀಡಿ ಪರೀಶಿಲನೆ ಕೈಗೊಳ್ಳುವಂತೆ ಶಿಕ್ಷಣ ಇಲಾಖೆ ಸೂಚಿಸಿದೆ.ಡಿ.23ರಂದು ಕೂಡ್ಲಿಗಿ ಕ್ಷೇತ್ರ ಶಿಕ್ಷಣಾಧಿಕಾರಿ ಸದರಿ ಶಾಲೆಗೆ ಭೇಟಿ ನೀಡಿದಾಗ ಶಾಲೆಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಹಾಗೂ 8ನೇ ತರಗತಿ ವರೆಗೆ ರಾಜ್ಯ ಪಠ್ಯ ಕ್ರಮ ಆಂಗ್ಲ ಮಾಧ್ಯಮ ಪರವಾನಗಿ ಪಡೆದು ಸಿಬಿಎಸ್‌ಸಿ ಬೋಧನೆ ಮಾಡುತ್ತಿರುವುದು ದೃಢಪಟ್ಟಿದೆ.ಈ ಆಧಾರದ ಮೇರೆಗೆ ಸದರಿ ಶಾಲೆಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಈ ಪ್ರಯುಕ್ತ ಸದರಿ ಶಾಲೆಯ ಎಲ್ಲ ಶೈಕ್ಷಣಿಕ ದಾಖಲೆಗಳನ್ನು ಹತ್ತಿರದ ಸರ್ಕಾರಿ ಶಾಲೆಗೆ ಹಸ್ತಾಂತರಿಸಿ ಜಿಲ್ಲಾ ಕಚೇರಿಗೆ ವರದಿ ಸಲ್ಲಿಸುವಂತೆ ಸಂಬಂಧ ಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗೆ ಉಪ ನಿರ್ದೇಶಕರು ಸೂಚಿಸಿದ್ದಾರೆ.

ಜಿಎಸ್‌ಟಿಯಿಂದ ಸರ್ಕಾರಕ್ಕೆ ಆದಾಯ ಹೆಚ್ಚಳ

ಕಲಬುರಗಿ: ಜಿಎಸ್‌ಟಿ ಸರ್ಕಾರಕ್ಕೆ ಆದಾಯವನ್ನು ಹೆಚ್ಚಿಸುವ ಮೂಲಕ, ವ್ಯಾಪಾರ ಸಂಸ್ಥೆಗಳಿಗೆ ವ್ಯವಹಾರ ಮಾಡುವ ಸುಲಭತೆಯನ್ನು ಸುಧಾರಿಸುವ ಜೊತೆಗೆ ಗ್ರಾಹಕರಿಗೆ ತೆರಿಗೆ ದರವನ್ನು ಕಡಿಮೆ ಮಾಡುವ ಸಹಾಯ ಮಾಡಿದೆ ಎಂದು ನವದೆಹಲಿಯ ಭಾರತ ಸರ್ಕಾರದ ಐಎನ್‌ಡಿಟಿ ಮತ್ತು ಸಿಇಎ ಮಾಜಿ ನಿರ್ದೇಶಕ ಸಿಎಚ್‌ವಿ ಸಾಯಿ ಪ್ರಸಾದ ಹೇಳಿದರು.

ಸೋಮವಾರ ಧಾರವಾಡದ ಬಹುಶಿಸ್ತೀಯ ಸಂಶೋಧನಾ ಕೇಂದ್ರದ (ಸಿಎಂಡಿಆರ್) ಸಹಯೋಗದೊಂದಿಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗ ಮತ್ತು ವಾಣಿಜ್ಯ ವಿಭಾಗವು ಆಯೋಜಿಸಿದ್ದ ಜಿಎಸ್‌ಟಿ ಜನರಿಗೆ, ವ್ಯವಹಾರಕ್ಕೆ ಮತ್ತು ಸರ್ಕಾರಕ್ಕೆ ಪ್ರಯೋಜನ ಮತ್ತು ವಿಕಸಿತ ಭಾರತ-2047ರ ಕಡೆಗೆ ಭಾರತದ ಪ್ರಯಾಣ ಕುರಿತು ಒಂದು ದಿನದ ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಜಿಎಸ್‌ಟಿ ಕ್ಯಾಸ್ಕೇಡಿಂಗ್ ತೆರಿಗೆ ಕಡಿಮೆ ಮಾಡಿದೆ. ಇದು ಬೆಲೆಗಳಲ್ಲಿ ಒಟ್ಟಾರೆ ಕಡಿತಕ್ಕೆ ಕಾರಣವಾಗಿದೆ. ಇದು ಒಂದೇ ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆಯನ್ನು ಸೃಷ್ಟಿಸಿ, ಸಣ್ಣ ತೆರಿಗೆದಾರರಿಗೆ ಪ್ರಯೋಜನವನ್ನು ನೀಡಿದ್ದು, ಮಾನವ ರಹಿತ ಎಲೆಕ್ಟ್ರಾನಿಕ್ ತೆರಿಗೆ ವ್ಯವಸ್ಥೆಯ ಪರಿಚಯಿಸಿದೆ ಎಂದು ಹೇಳಿದರು.

ಸ್ಕೂಲ್ ಆಫ್ ಬಿಸಿನೆಸ್ ಸ್ಟಡೀಸ್‌ನ ಡೀನ್ ಪ್ರೊ.ಪಾಂಡುರಂಗ ಪತ್ತಿ ಮಾತನಾಡಿದರು. ಸಮ್ಮೇಳನದ ನಿರ್ದೇಶಕ ಡಾ.ಬಸವರಾಜ ಎಂ.ಎಸ್.ಸ್ವಾಗತಿಸಿದರು. ಧಾರವಾಡದ ಬಹುಶಿಸ್ತೀಯ ಸಂಶೋಧನಾ ಕೇಂದ್ರ ಪ್ರತಿನಿಧಿ ಡಾ.ಸಿದ್ದು ವಿ.ಹೊನಗೋಡಿಮಠ ಮತ್ತು ಸಿಯುಕೆಯ ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗದ ಮುಖ್ಯಸ್ಥೆ ಡಾ.ಸುಮಾ ಸ್ಕೇರಿಯಾ ಮಾತನಾಡಿದರು.

ಡಾ.ಗಣಪತಿ ಬಿ ಸಿನ್ನೂರ್, ಡಾ.ಎಂ. ಜೊಹೇರ್, ಡಾ.ಎಸ್.ಲಿಂಗಮೂರ್ತಿ, ಡಾ.ಶಿವಕುಮಾರ್ ಬೆಳ್ಳಿ, ಡಾ.ಸುಜಾತ್ ಎಸ್.ಕೆ., ಡಾ.ಜಿ.ಮಹೇಂದ್ರ, ಡಾ.ಶೈಲಜಾ ಕೊನೆಕ್, ಶರಣಬಸವ ವಿಶ್ವವಿದ್ಯಾಲಯ ಮತ್ತು ಸಿಯುಕೆಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



> **ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಶಗಳಾದ ಬೇಡಿಕೆ ಮತ್ತು ಪೂರೈಕೆಯ ನಡುವೆ ಸಮತೋಲನ ಸಾಧಿಸುವುದು ಗ್ರಾಹಕರು ಮತ್ತು ಉತ್ಪಾದಕರ ಹಿತಾಸಕ್ತಿಯನ್ನು ಕಾಪಾಡಲು ಅತ್ಯಂತ ಅಗತ್ಯವಾಗಿದೆ.ಈ ಸಮತೋಲನ ಸುಧಾರಣೆ 2.0 ಮೂಲಕ ಸಾಧಿಸಲಾಗಿದ್ದು, 2047ರೊಳಗೆ ವಿಕಸಿತ ಭಾರತದ ಗುರಿಯನು ಸಾಧಿಸಲು ಇದು ಭದ್ರವಾದ ನೆಲೆಯಾಗಿದೆ.**
> ■ **ಪ್ರೊ.ಆರ್.ಆರ್.ಬಿರಾದಾರ್ ಕುಲಸಚಿವ, ಸಿಯುಕೆ**

ಕಾನಿಪ ಧ್ವನಿ ತಾಲೂಕು ಅಧ್ಯಕ್ಷರಾಗಿ ಎಂ.ರಾಜಪ್ಪ ಅವಿರೋಧ ಆಯ್ಕೆ

ಹೂವಿನಹಡಗಲಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ನೂತನ ತಾಲೂಕು ಅಧ್ಯಕ್ಷರಾಗಿ ಎಂ.ರಾಜಪ್ಪ ಅವಿರೋಧ ಆಯ್ಕೆಯಾದರು.

ಈ ವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ರಾಜ್ಯ ಸಂಸ್ಥಾಪಕ ಅಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಮಾತನಾಡಿ, ಈ ರಾಜ್ಯದ ಪತ್ರಕರ್ತರ ಸ್ಥಿತಿ ಶೋಚನಿಯವಾಗಿದೆ. ಸರ್ಕಾರ ಮಹಿಳೆಯರಿಗೆ ಉಚಿತ ಪಯಣಕ್ಕಾಗಿ ಶಕ್ತಿ ಯೋಜನೆ, ಮಂಗಳಮುಖಿಯರಿಗೆ ಸೌಲಭ್ಯಗಳು, ಎಲ್ಲ ಭಾಗ್ಯಗಳನ್ನು ಜನತೆಗೆ ವ್ಯಯ ಮಾಡಲಿ ತಪ್ಪೇನಿಲ್ಲ. ಆದರೆ, ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಪತ್ರಕರ್ತರಿಗೆ ಮಾಶಾಸನ, ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್, ವಸತಿ ಭಾಗ್ಯ, ಮುಂತಾದ ಅನೇಕ ಯೋಜನೆಗಳನ್ನು ಜಾರಿ ಮಾಡುವಲ್ಲಿ ಅಲಕ್ಷ್ಯ ಮಾಡುತ್ತಿದೆ. ಆದ್ದರಿಂದ ಮುಂದಿನ ದಿನಮಾನಗಳಲ್ಲಿ ನ್ಯಾಯಾಲಯಗಳಲ್ಲಿ ದಾವೆ ಹೂಡುವ ಮೂಲಕ ಸರ್ಕಾರಕ್ಕೆ ಚಾಟಿ ಏಟು ಬೀಸುತ್ತೇನೆ ಎಂದು ಹೇಳಿದರು.



ಕಾನಿಪ ಧ್ವನಿ ಸಂಘದ ನೂತನ ರಾಜ್ಯ ಘಟಕದ ಕಾರ್ಯಕಾರಣಿ ಸದಸ್ಯರಾಗಿ ಶಿವಕುಮಾರ ಪತ್ರಿಮಠ, ಜಿಲ್ಲಾಧ್ಯಕ್ಷರಾಗಿ ಡಿ.ಪರಶುರಾಮಪ್ಪ ಆಯ್ಕೆಯಾದರು.

ಕಾನಿಪಧ್ವನಿ ರಾಜ್ಯ ಕಾರ್ಯದರ್ಶಿ ಎಚ್., ಹನುಮಂತಪ್ಪ, ಜಿಲ್ಲಾ ಸದಸ್ಯರಾದ ಮಡ್ಡಿ ಗೋಣೆಸ್ವಾಮಿ, ಹೂವಿನಹಡಗಲಿ ತಾಲೂಕಿನ ಅಧ್ಯಕ್ಷರಾಗಿ ಎಂ.ರಾಜಪ್ಪ, ಗೌರವಾಧ್ಯಕ್ಷ ವೀರೇಶ್ ಕಲ್ಮಠ, ಉಪಾಧ್ಯಕ್ಷರಾಗಿ ಉತ್ತಂಗಿ ಮಂಜುನಾಥ ಕೆ., ಕಾರ್ಯಾಧ್ಯಕ್ಷರಾಗಿ ಎಚ್.ಕರಿಯಪ್ಪ, ಪ್ರಧಾನ ಕಾರ್ಯದರ್ಶಿ ಎಸ್.ಪಿ.ಹನುಮಂತಪ್ಪ, ಸಹ ಕಾರ್ಯದರ್ಶಿ ಎಲ್.ಚಂದ್ರನಾಯ್ಕ್, ಸಂಘಟನಾ ಕಾರ್ಯದರ್ಶಿ ಬಸವರಾಜ, ಪ್ರಚಾರ ಕಾರ್ಯದರ್ಶಿ ಎಸ್. ಗುರುಶಾಂತಪ್ಪ, ಖಜಾಂಚಿ ವಿನೋದಕುಮಾರ , ಹಾಗೂ ಸದಸ್ಯರಾಗಿ ಎಂ.ಜಾನ್, ಎಂ. ರಮೇಶ್, ಜಿ.ಪ್ರಕಾಶ್, ಕಾಗನೂರು ಶಿವಕುಮಾರ, ಡಿ.ಪಕ್ಕೀರಸಾಬ್ ಕಾಂತೆಬೆನ್ನೂರು,ಕೋಟ್ಯಾಳ ಕೆಂಚಪ್ಪ ಎಚ್., ಶ್ರೀಧರ್ ಸಿ.ಎಚ್., ಇಟ್ಟಿಗಿ ಸಾಬಣ್ಣ ಮಕರಬ್ಬಿ, ಮೆಹಬೂಬ್ ಬಾಷಾ, ಯಮನೂರಸಾಬ್, ಖಾಸಿಂ ಸಾಬ್ ಇತರರಿದ್ದರು.

ಕಳಪೆ ಪಾನೀಯ, ನೀರು ಮಾರಾಟ: ಆರೋಪ

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ ಅವಧಿ ಮೀರಿದ ಕೂಲ್ಡ್ರಿಂಗ್ಸ್ ಮಾರಾಟವಾಗುತ್ತಿದ್ದು, ನಕಲಿ, ಕಳಪೆ ಗುಣಮಟ್ಟದ, ಬಲು ಹುಳು ಇರುವ ಕುಡಿವ ನೀರಿನ ಬಾಟಲ್, ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕು ಅಧ್ಯಕ್ಷ ವಿ.ವಡ್ಡರ ವೀರೇಶ್ ಆರೋಪಿಸಿದರು.

ಗ್ರಾಮದ ರೈತ ಸಂಘದ ಕಚೇರಿಯಲ್ಲಿ ನಡೆದ ರೈತರ ಸಭೆಯಲ್ಲಿ ಸೋಮವಾರ ಮಾತನಾಡಿ, ಕೆಲ ದಿನಗಳ ಹಿಂದೆ ಕಳಪೆ ಕೂಲ್ಡ್ರಿಂಕ್ಸ್ ಕುಡಿದ ಗ್ರಾಮದ ಬಾಲಕನೊಬ್ಬ ಅಸ್ವಸ್ಥನಾಗಿದ್ದು, ಪ್ರಕರಣವನ್ನು ಮುಚ್ಚಿಹಾಕಿದ್ದಾರೆ. ಸ್ಥಳೀಯ ಗ್ರಾಮದಲ್ಲಿ ತಯಾರಾಗುವ ಕುಡಿವ ನೀರಿನಲ್ಲಿ ಹುಳುಗಳು ಕಾಣಿಸುತ್ತಿವೆ. ಅವಧಿ ಮೀರಿದ್ದರೂ ನೀರಿನ ಬಾಟಲ್ ಮಾರಲಾಗುತ್ತಿದೆ. ಜನರ ಆರೋಗ್ಯ ಹಿತ ಕಾಪಾಡುವಲ್ಲಿ ಗ್ರಾಮಾಡಳಿತ, ತಾಲೂಕು ಆಡಳಿತ ನಿಗಾವಹಿಸಬೇಕು. ನಕಲಿ ನೀರಿನ ಬಾಟಲ್, ಕೂಲ್ಡ್ರಿಂಕ್ಸ್, ಕಳಪೆ ಗೊಬ್ಬರ ಮಾರಾಟಗಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಪರವಾನಿಗೆ ನೀಡಿದ್ದಲ್ಲಿ ಪರಿಶೀಲಿಸಿ ರದ್ದುಪಡಿಸಬೇಕು. ತನಿಖೆ ನಡೆಸಿ, ತಪ್ಪಿತಸ್ಥರನ್ನು ಬಂಧಿಸುವಲ್ಲಿ ಜಿಲ್ಲಾಧಿಕಾರಿಗಳು ಮುಂದಾಗಬೇಕು. ವಾರದೊಳಗೆ ತಕ್ಕ ಕ್ರಮ ಕೈಗೊಳ್ಳದಿದ್ದಲ್ಲಿ ಏ.7ರಂದು ಎಮ್ಮಿಗನೂರಿನಿಂದ ಡಿಸಿ ಕಚೇರಿತನಕ ಬೃಹತ್ ಪ್ರತಿಭಟನೆಯ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಮಾಜಿ ತಾಪಂ ಸದಸ್ಯ ಬಿ.ಸದಾಶಿವಪ್ಪ, ಶತಮಾನ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಾರಕೀಯರ ರಾಜಪ್ಪ, ಸಿ.ಬಾಷಸಾಬ್, ಅತಿಥಿ ಶಿಕ್ಷಕ ಎಸ್.ರಾಮಪ್ಪ ಇತರರಿದ್ದರು.



ಮಹಾವೀರರ ತತ್ವಗಳು ಸಮಾಜಕ್ಕೆ ದಾರಿದೀಪ

ಬಳ್ಳಾರಿ: ಭಗವಾನ್ ಮಹಾವೀರರ ತತ್ವಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಆಶ್ರಯದಲ್ಲಿ ನಗರದ ತೇರು ಬೀದಿಯ ಶ್ರೀ ಪಾರ್ಶ್ವನಾಥ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಭಗವಾನ್ ಮಹಾವೀರ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.ಮಹಾವೀರರು ಪಂಚ ತತ್ವಗಳನ್ನು ಬೋಧಿಸಿದವರು. ಅಹಿಂಸೆಯ ಮೂಲಕ ಪ್ರತಿಯೊಂದು ಜೀವಿಯಲ್ಲೂ ಆತ್ಮವಿದ್ದು, ಯಾವುದೇ ಪ್ರಾಣಿ ಅಥವಾ ಮನುಷ್ಯರಿಗೆ ಹಿಂಸೆ ನೀಡಬಾರದು. ಸತ್ಯದ ಮೂಲಕ ಸುಳ್ಳಿನ ಪ್ರಪಂಚದಲ್ಲಿ ಕನಿಷ್ಠ ಪಕ್ಷ ಸತ್ಯವನ್ನಾದರೂ ಮಾತನಾಡಬೇಕು. ಅಸ್ತೇಯ ಎಂದರೆ ನಮಗೆ ಸೇರದ ಯಾವುದೇ ವಸ್ತುವನ್ನು ಅಥವಾ ಆಸ್ತಿಯನ್ನು ಮುಟ್ಟಬಾರದು. ಬ್ರಹ್ಮಚರ್ಯ ಮೂಲಕ ಶಿಸ್ತಿನ ಜೀವನ ನಡೆಸುವುದು ಮತ್ತು ಸಂಯಮವನ್ನು ಪಾಲಿಸುವುದು. ಅಪರಿಗ್ರಹದಿಂದ ಭೌತಿಕ ಆಸೆಗಳನ್ನು ತ್ಯಜಿಸುವುದು ಎಂದು ತಮ್ಮ ಪಂಚ ತತ್ವಗಳನ್ನು ಒತ್ತಿ ತಿಳಿಸಿದ್ದಾರೆ ಎಂದರು.

ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ ಮಾತನಾಡಿ, ಮಹಾವೀರರು ಜಗತ್ತಿಗೆ ನೀಡಿದ ಶಾಂತಿ ಮತ್ತು ಅಹಿಂಸೆಯ ಸಂದೇಶಗಳು ಇಂದಿನ ಸಮಾಜಕ್ಕೆ ಅತ್ಯಗತ್ಯ. ಮಹಾವೀರರ ಬೋಧನೆಯಂತೆ ದಾನ, ಧರ್ಮ ಮತ್ತು ಸತ್ಯದ ಹಾದಿಯಲ್ಲಿ ನಡೆಯುವ ಸಂಕಲ್ಪವನ್ನು ಈ ಸಮಾಜದವರು ಹೊಂದಿದ್ದಾರೆ ಎಂದು ಹೇಳಿದರು. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಮಾತನಾಡಿದರು.



ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂಭಾಷ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಿದರು. ಶಿರಡಿ ಸಾಯಿ ಸೇವಾ ಸತ್ಸಂಗ ಟ್ರಸ್ಟ್ ವತಿಯಿಂದ ಭಕ್ತಿ ಸಂಗೀತ ಪ್ರಸ್ತುತಪಡಿಸಿದರು. ಭಗವಾನ್ ಮಹಾವೀರರ ಜಯಂತಿ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಜೈನ್ ಸಂಘದ ಅಧ್ಯಕ್ಷ ಸುರಜ್ ಮಲ್ ಜೈನ್ ಸೇರಿದಂತೆ ಸಮಾಜದ ಮುಖಂಡರು ಇತರರು ಉಪಸ್ಥಿತರಿದ್ದರು.

ನಾಡೋಜ ಡಾ.ವಿ.ಟಿ.ಕಾಳೆಗೆ ಶ್ರೇಷ್ಠ ಕಲಾ ಸಾಧಕ ಪ್ರಶಸ್ತಿ

ಬಳ್ಳಾರಿ: ಸಂಡೂರಿನ ನಾಡೋಜ ಡಾ.ವಿ.ಟಿ.ಕಾಳೆ ಅವರಿಗೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಇಂಟರ್‌ನ್ಯಾಷನಲ್ ಆರ್ಟಿಸ್ಟ್ ವಿಲೇಜ್ ಚಾರಿಟೇಬಲ್ ಟ್ರಸ್ಟ್ (ಆರ್), ಬೆಂಗಳೂರು ವತಿಯಿಂದ 'ಶ್ರೇಷ್ಠ ಕಲಾ ಸಾಧಕ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು. ನಿವೃತ್ತ ಡಿಸಿ ಡಾ.ಸಿ.ಸೋಮಶೇಖರ್, ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪಾ.ಸಾ.ಕುಮಾರ್, ಕೆಐಎವಿಸಿಟಿ ಅಧ್ಯಕ್ಷ ಡಾ.ಬಿ.ಜಿ.ಅವಟಿ, ಕೆಐಎವಿಸಿಟಿ ಉಪಾಧ್ಯಕ್ಷರಾದ ಡಾ.ಬಿ.ಎಸ್ .ದೇಸಾಯಿ, ಶಂಕರಾಚಾರಿ, ಅಪ್ಪು ಗಣಿಗಾರ್ ಸೇರಿದಂತೆ ಕೆಐಎವಿಸಿಟಿ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಇತರರು ಉಪಸ್ಥಿತರಿದ್ದರು.



ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ

ಹಗರಿಬೊಮ್ಮನಹಳ್ಳಿ: ಡಿಜೆ ನಮ್ಮ ದೇಶದ ಸಂಸ್ಕೃತಿ ಅಲ್ಲ ಇತರರಿಗೆ ಮಾದರಿಯಾಗುವಂತಹ ಮಹನೀಯರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು

ಡಾ.ಅಂಬೇಡ್ಕರ್ ಮತ್ತು ಬಾಬು ಜಗಜೀವನ್‌ರಾಂ ಅವರ ಜಯಂತಿ ಕಾರ್ಯಕ್ರಮ ಅಂಗವಾಗಿ ಮಂಗಳವಾರ ಪಟ್ಟಣದ ತಾಪಂ ಸಭಾಂಗಣದಲ್ಲಿ ಶಾಸಕರ ನೇತೃತ್ವದಲ್ಲಿ ನಡೆದ ಪೂರ್ವಬಾವಿ ಸಭೆಯಲ್ಲಿ ಮಾತನಾಡಿದರು.

ಸರ್ಕಾರಿ ಕಚೇರಿಗಳಲ್ಲಿ ಶಾಲಾ, ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಣೆ ಮಾಡಲು ಪಟ್ಟಣದ ಹಳೇ ತಾಲೂಕು ಕಚೇರಿಯಿಂದ ಡೊಳ್ಳು ಹಲಗೆ ಕಲಾ ತಂಡಗಳೊಂದಿಗೆ ಮೆರವಣಿಗೆ ಜಯಂತಿ ಕಾರ್ಯಕ್ರಮ ಯಶಸ್ವಿಗೆ ಪುರಸಭೆ ಸೇರಿದಂತೆ ವಿವಿಧ ಇಲಾಖೆಗಳು ತಮಗೆ ನೀಡಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚಿಸಿದರು. ದೊಡ್ಡ ಬಸಪ್ಪ ಉಪ ತಹಶೀಲ್ದಾರ್ ಶಿವಕುಮಾರ್‌ಗೌಡ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಜಗದೀಶ್ ದಿಗಡೂರು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶೋಭಾ, ಪುರಸಭೆ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಸಿಡಿಪಿಓ ಬೋರೇಗೌಡ, ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿ ಬಸವರೆಡ್ಡಿ, ಬಿಸಿಎಂ ಅಧಿಕಾರಿ ರಾಮ ಶೇಖರ್, ಲೋಕೋಪಯೋಗಿ ಇಲಾಖೆಯ ಸತೀಶ್ ನಾಯ್ಕ, ತೋಟಗಾರಿಕೆ ಇಲಾಖೆ ಅಧಿಕಾರಿ ವಿಜಯಕುಮಾರ್, ಕೃಷಿ ಇಲಾಖೆಯ ಅಧಿಕಾರಿ, ತಾಲೂಕು ವೈದ್ಯಾಧಿಕಾರಿ ಡಾ.ಪ್ರವೀಣ್‌ಕುಮಾರ್, ಎಪಿಎಂಸಿ ಕಾರ್ಯದರ್ಶಿ ಶೈಲಾ, ಶಿಕ್ಷಣ ಇಲಾಖೆಯ ಸೋಮಪ್ಪ ನಾಯ್ಕ್, ತಾಪಂ ಅಧಿಕಾರಿಗಳಾದ ಬಸವರಾಜ, ಕುಮಾರ್‌ನಾಯ್ಕ್, ನಿಲಯ ಮೇಲ್ವಿಚಾರಕ ನಾಗರಾಜ ಆಶಾ ಹಾಗೂ ಮುಖಂಡರಾದ ಸರೆಗಾರ ಹುಚ್ಚಪ್ಪ, ಹೆಗ್ಡಾಳು ರಾಮಣ್ಣ, ಕಾಳಿ ಬಸವರಾಜಪ್ಪ, ಬುಡ್ಡಿ ಬಸವರಾಜ, ಅಲಬೂರು ಗಣೇಶ್ ಪ್ರಭಾಕರ್, ಲೋಕಪ್ಪ ಕೋಗಳಿ ಉಮೇಶ್, ಮಹೇಶ್, ಹರೇಗೊಂಡನಹಳ್ಳಿ ದುರುಗಪ್ಪ, ಕೆಚ್ಚಿನಬಂಡಿ ದುರುಗಪ್ಪ, ಹನುಮಂತಪ್ಪ ಇತರರಿದ್ದರು.



ಸಾಧಕರಿಗೆ ಸನ್ಮಾನ

ಅಂಬೇಡ್ಕರ್ ವೃತ್ತದಲ್ಲಿಯೇ ವೇದಿಕೆ ಕಾರ್ಯಕ್ರಮ ಮಾಡಲು ಪರಿಶಿಷ್ಟ ಜಾತಿ ಹಾಗೂ ಪಂಗಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮತ್ತು ಸಾಧಕರನ್ನು ಸನ್ಮಾನಿಸಲಾಗುವುದು. ಈ ಹಿಂದೆ ಇದ್ದ ಅಂಬೇಡ್ಕರ್ ವೃತ್ತಕ್ಕೆ ಬಾಬೂಜಿಯವರ ಹೆಸರು ಇಡಬೇಕು ಎಂಬುದನ್ನು ತೀರ್ಮಾನಿಸಲಾಯಿತು.